C.NO 821

॥ ಶ್ರೀಃ ॥

ಮೈಸೂರು ರಾಜಧಾನಿಯಲ್ಲಿ 1930 ನೆಯ ಡಿಸೆಂಬರಿನಲ್ಲಿ ನಡೆದ

21 ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನದ

LBP
33G1

ವರದಿ

ಸ್ವಾಗತಕಾರಿಣೀಸಮಿತಿಯಿಂದ ಪ್ರಕಟಿಸಲ್ಪಟ್ಟಿದೆ

ಮೈಸೂರು

1931

LBP 821
3391
Nikhil bharata
... da maha

LBp
33G1

821

SHRI JAGADGURU VISHWARADHYA JNANAMANDIR
(LIBRARY)
JANGAMAWADIMATH, VARANASI

Please return this volume on or before the date last stamped
Overdue volume will be charged 1/- per day.

ಓಂ

ನಮಃಶ್ರೀಧನ್ವಂತರಯೆ

1930 ನೆಯ ಡಿಸೆಂಬರ್ ತಿಂಗಳಲ್ಲಿ

ಮೈಸೂರು ರಾಜಧಾನಿಯಲ್ಲಿ ನೆರವೇರಿದ

21 ನೆಯ ನಿಖಿಲಭಾರತಾಯುರ್ವೇದ

ಮಹಾಸಮ್ಮೇಳನ ಮತ್ತು ಪ್ರದರ್ಶನದ

ವರದಿ

ಸ್ವಾಗತಕಾರಿಣೀಸಮಿತಿಯಿಂದ ಪ್ರಕಟಸಲ್ಪಟ್ಟದೆ

ಮೈಸೂರು :
ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
1931

LBP(
33G1

ಕ್ಷಮೆಯ ಬೇಡಿಕೆ.

ಈ ವರದಿಯು ಹೊರಹೊರಡುವುದು ಅತಿ ನಿಧಾನವಾದುದಕ್ಕೆ ಮುಖ್ಯವಾದ ಕೆಲವು ಕಾರಣಗಳ ಪೈಕಿ 2 ನೆಯ ವರ್ಗದ ಕೆಲವು ಪ್ರಶಸ್ತಿಗಳನ್ನು ಕೊಡುವ ವಿಚಾರದಲ್ಲಿ ಸಮ್ಮೇಳನಾಧ್ಯಕ್ಷರಿಗೆ ಉಂಟಾದ ಭಿನ್ನಾಭಿಪ್ರಾಯವೇ ಪ್ರಬಲವಾದುದು. ಅವರ ತೀರ್ಮಾನದ ವಿನಹ ನಾವು ಆ ಭಾಗದ ಕೆಲಸವನ್ನು ಮುಗಿಸುವಂತಿರಲಿಲ್ಲ. ಆ ತೀರ್ಮಾನವು ದೊರೆತಲ್ಲದೆ ಈ ವರದಿಯು ಪೂರ್ತಿಯಾಗಲು ಅವಕಾಶವಿರಲಿಲ್ಲ. ಆದುದರಿಂದ ಈ ವಿಚಾರದಲ್ಲಿ ಇದುವರೆಗೂ ಪತ್ರವ್ಯವಹಾರ ನಡೆದುದರ ಮೇಲೆ ತಾ|| 6-11-1931 ರಲ್ಲಿ ಅಧ್ಯಕ್ಷರಿಂದ ದಯಪಾಲಿಸಲ್ಪಟ್ಟ ಪತ್ರದ ಮೇಲೆ ಎಲ್ಲವೂ ನಿರ್ಧರವಾಯಿತು. ಅನಿರ್ವಾಹವಾದ ಈ ತರದ ನಿಧಾನಕ್ಕಾಗಿ ಕ್ಷಮೆ ಬೇಡುತ್ತೇವೆ. ನ್ಯಾಯಶೀಲರಾದ ಅಧ್ಯಕ್ಷರವರು ಬಹು ಸಹನೆಯಿಂದ ತಮ್ಮ ಅಭಿಪ್ರಾಯವನ್ನು ಪುನರ್ವಿಮರ್ಶೆಮಾಡಿ ಅತ್ಯಲ್ಪ ಬದಲಾವಣೆಯೊಡನೆ ಸ್ವಾಗತಸಮಿತಿಯ ತೀರ್ಮಾನಕ್ಕೇ ಮನ್ನಣೆಕೊಟ್ಟುದಕ್ಕಾಗಿ ನಾವು ಅವರಿಗೆ ಸಂಪೂರ್ಣ ಋಣಿಗಳಾಗಿದೇವೆ.

ಒಟ್ಟನಲ್ಲಿ ಈ ಮಹತ್ಕಾರ್ಯವು ಸುಸೂತ್ರವಾಗಿಯೂ ಯಶಸ್ವಿಯಾಗಿಯೂ ನೆರವೇರಲು ಮುಖ್ಯಕಾರಣರಾದ ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೂ ಅವರ ಘನಸರ್ಕಾರಕ್ಕೂ ಅನೇಕ ಶ್ರೀ ಮಠಗಳಿಗೂ, ಮೈಸೂರು ದೇಶದ ಡಿಸ್ಟ್ರಿಕ್ಟ್‌ಬೋರ್ಡುಗಳಿಗೂ, ಮ್ಯುನಿಸಿಪಾಲಿಟಿಗಳಿಗೂ ಕೊ-ಆಪರೇಟಿವ್ ಸಂಸ್ಥೆಗಳಿಗೂ, ಮೇಲಾಗಿ ಸ್ವಾಗತ ಮಂಡಲಿಗೆ ಆಶ್ರಯದಾತರಾಗಿಯೂ, ಪೋಷಕರಾಗಿಯೂ, ಸಾಮಾನ್ಯ ಮೆಂಬರಾಗಿಯೂ ನಿಂತು ಸಹಾಯಮಾಡಿದ ಕರ್ನಾಟಕದ ನಾನಾ ಭಾಗಗಳಿಗೆ ಸೇರಿದ ವೈದ್ಯರುಗಳಿಗೂ ವೈದ್ಯಾಭಿಮಾನಿಗಳಿಗೂ ನಮ್ಮ ಸಂಪೂರ್ಣ ಕೃತಜ್ಞತಾಪೂರ್ವಕ ವಂದನೆಗಳು.

ನಮ್ಮ ಹೃತ್ಪೂರ್ವಕವಾದ ಅಭಿನಂದನಗಳಿಗೆ ಯಶಸ್ವಿಗಳಾದ ಸಮ್ಮೇಳನಾಧ್ಯಕ್ಷರೂ, ಶಾಖಾಧ್ಯಕ್ಷರುಗಳೂ, ಪ್ರತಿನಿಧಿಗಳೂ, ತಮ್ಮ ಅಮೋಘವಾದ ಬುದ್ಧಿಶಕ್ತಿಯಿಂದಲೂ, ಕಾಯಶಕ್ತಿಯಿಂದಲೂ, ಸ್ವಾಗತ ಸಮಿತಿಯ ಕಾರ್ಯದಲ್ಲಿ ಪ್ರವರ್ತಕರಾಗಿದ್ದ ಅಶೇಷಮಹನೀಯರೂ, ಮತ್ತು ಸರ್ವದಾ ಕಾರ್ಯದಕ್ಷರಾಗಿ ಸಹಾಯಮಾಡಿದ ಸ್ವಯಂಸೇವಕದಳವೂ ಸಂಪೂರ್ಣಭಾಗಿಗಳು.

ಮೈಸೂರು,
ತಾ|| 11-11-1931.

ಹೆಚ್. ನಂಜುಂಡರಾಜೇ ಅರಸ್,
ಸ್ವಾಗತಾಧ್ಯಕ್ಷ.

SRI JAGADGURU VISHWARADHYA
JNANA SIMHASAN JNANAMANDIR
LIBRARY
Jangamawadi Math, Varanasi
Acc. No. 821

ಶ್ರೀಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್

ಜಿ.ಸಿ.ಎಸ್.ಐ., ಜಿ.ಬಿ.ಇ.,

ಮೈಸೂರು ಸಂಸ್ಥಾನವನ್ನಾಳುವ ಮಹಾಪ್ರಭುಗಳು

SRI JAGADGURU VISHWARADHYA
JNANA SIMHASAN JNANAMANDIR
LIBRARY,
Jangamwadi Math, VARANASI,
Acc. No. 821

ವಿಷಯಾನುಕ್ರಮಣಿಕೆ.

ನಂ.		ಪುಟ.
1.	ಪೀಠಿಕೆ	1
2.	ಅಧ್ಯಕ್ಷರ ಚುನಾವಣೆ	13
3.	ಸಮ್ಮೇಳನದ ಪ್ರಾರಂಭೋತ್ಸವ	16
4.	,, ಕಾರ್ಯಕ್ರಮದ ಪಟ್ಟಿ	21
5.	ಶ್ರೀಯುತ ರಾಜಕಾರ್ಯಪ್ರವೀಣ ಪಿ. ಜಿ. ಡಿಸೋಜಾ, ಬಿ.ಎ. ಬಿ.ಎಲ್., (ಮೈಸೂರು ಸರ್ಕಾರದ ಉಪಸಚಿವರು) ಇವರ ಭಾಷಣ	23
6.	ಶ್ರೀಯುತ ಲೋಕಹಿತೈಷಿ ಹೆಚ್. ನಂಜುಂಡರಾಜೇಅರಸಿನವರ ಸ್ವಾಗತಭಾಷಣ	28
7.	ಸಮ್ಮೇಳನಾಧ್ಯಕ್ಷರ ಭಾಷಣ	33
8.	ವಿಷಯನಿರ್ಧಾರಣಾಸಮಿತಿಗೆ ಸಭಿಕರ ಚುನಾವಣೆ	59
9.	ಪ್ರದರ್ಶನ ಪ್ರಾರಂಭೋತ್ಸವ—	
	(a) ಉಪೋದ್ಘಾತ ಭಾಷಣ—ಎಗ್ಜಿಬಿಷನ್ ಸೆಕ್ರೆಟೆರಿಯವರಾದ ಶ್ರೀಯುತ ಎಚ್. ನಾಗೇಶರಾಯರು, ಎಂ.ಎ., ರವರಿಂದ	60
	(b) ವೈದ್ಯರತ್ನ ಡಾ॥ ಪಿ. ಸುಬ್ಬರಾವ್, ಬಿ.ಎಸ್‌ಸಿ. (ಆ. ಆ. ವಿಶ್ವವಿದ್ಯಾಲಯ, ಕಾಕನಾಡ) ಇವರ ಭಾಷಣ	65
10.	ರಸಾಯನಸಂಭಾಷಾಪರಿಷತ್ತಿನ ಕಾರ್ಯಕ್ರಮ (ಶ್ರೀ॥ ವೈದ್ಯಶಾಸ್ತ್ರಿ ನಾರಾಯಣಶಂಕರ ದೇವಶಂಕರ ಪ್ರಾಣಾಚಾರ್ಯ, ಅಹಮ್ಮದಾಬಾದ್, ಇವರ ಅಧ್ಯಕ್ಷತೆಯಲ್ಲಿ)	76
11.	ವಿಷಯನಿರ್ಧಾರಣಾಸಮಿತಿಯ ಪ್ರಥಮಾಧಿವೇಶನ	79
12.	ದ್ರವ್ಯಸಂಭಾಷಾಪರಿಷತ್ತಿನ ಕಾರ್ಯಕ್ರಮ— ಡಾ॥ ಕೆ. ಎಸ್. ಮಸ್ಕರ್, ಎಂ.ಡಿ., ಎಂ.ಎ., ಬಿ.ಎಸ್‌ಸಿ. ಡಿ.ಪಿ.ಹೆಚ್. ರವರ ಅಧ್ಯಕ್ಷತೆಯಲ್ಲಿ	80
	(a) ಅಧ್ಯಕ್ಷರ ಭಾಷಣ	85
	(b) ಮೇಲ್ಕಂಡ ಪರಿಷತ್ತಿನಲ್ಲಿ ಚರ್ಚಿಸಲ್ಪಟ್ಟ ಪ್ರಬಂಧಗಳು	99
13.	ಚಿಕಿತ್ಸಾಸಂಭಾಷಾಪರಿಷತ್ತಿನ ಕಾರ್ಯಕ್ರಮ	128
	,, ಪರಿಷತ್ತಿಗೆ ಬರೆದುಬಂದ ಪ್ರಬಂಧಗಳು	129

14. ಆರೋಗ್ಯವಿಚಾರವಾಗಿ ಮದ್ರಾಸಿನ ಡಾ|| ಎ. ಲಕ್ಷ್ಮಿಪತಿ, ಬಿ.ಎ., ಎಂ.ಬಿ.ಸಿ.ಎಂ. ರವರ ಚಲನಚಿತ್ರಮುಖೇಣ ಉಪನ್ಯಾಸ 136

15. ವಿಷಯವಿವೇಚನಾಸಮಿತಿಯ ದ್ವಿತೀಯಾಧಿವೇಶನ 137

16. ಸಾಮಾನ್ಯಸಂಭಾಷಾಪರಿಷತ್ತಿನ ಕಾರ್ಯಕ್ರಮ 138

ಸಾಮಾನ್ಯಸಂಭಾಷಾಪರಿಷತ್ತಿಗೆ ಬರೆದುಬಂದ ಪ್ರಬಂಧಗಳು 139

ಮತ್ತು ತ್ರಿದೋಷತತ್ವದ ಪ್ರಬಂಧಗಳು . 140

17. ವಿಷಯವಿವೇಚನಾಸಮಿತಿಯ ತೃತೀಯಾಧಿವೇಶನ 143

18. ಆರನೆ ನಿಖಿಲಕರ್ನಾಟಕಾಯುರ್ವೇದ ಸಮ್ಮೇಳನ ಕಾರ್ಯಕ್ರಮ 143

(ಬೆಂಗಳೂರಿನ ಡಾ|| ಎಸ್. ವೆಂಕೋಬರಾವ್, ಬಿ.ಎ., ಬಿ.ಎಂ ಡಿ. ರವರ ಅಧ್ಯಕ್ಷತೆಯಲ್ಲಿ)

19. ,, ಅಧ್ಯಕ್ಷರ ಭಾಷಣ 145

20. ,, ತೀರ್ಮಾನವಾದ ಪ್ರಸ್ತಾವಗಳು 150

21. ನಿ. ಭಾ. ಆ. ಸಮ್ಮೇಳನದ ಉಪಸಂಹಾರ 154

(a) ನಿ. ಭಾ. ಆ. ಸಮ್ಮೇಳನದಲ್ಲಿ ಅಂಗೀಕೃತವಾದ ತೀರ್ಮಾನಗಳು 157

(b) ,, ,, ಅಧ್ಯಕ್ಷರ ಉಪಸಂಹಾರ ಭಾಷಣ 163

(c) ,, ,, ಪ್ರಧಾನಮಂತ್ರಿಗಳಾದ ಡಾ|| ವೈ. ಎಲ್. ಶಾಸ್ತ್ರಿಗಳ ಅಭಿನಂದನಗಳು 165

22. ಪ್ರತಿನಿಧಿಗಳಿಂದ ಬಂದ ಅಭಿನಂದನಪತ್ರಗಳು 170

23. ಪರಿಶಿಷ್ಟ I ಧನಸಹಾಯ ವಿವರ 177

24. ,, II ಪ್ರತಿನಿಧಿಗಳ ವಿವರ ,,

25. ,, III A ವಸ್ತುಪ್ರದರ್ಶಕರ ವಿವರ ,,

26. ,, ,, B ನೂತನಗ್ರಂಥಗಳು ಮತ್ತು ದ್ರವ್ಯಸಂಭಾಷಾ ಲೇಖಗಳು ,,

27. ,, IV ಸ್ವಾಗತಸಮಿತಿಯ ಅಧಿಕಾರವರ್ಗ ,,

28. ಸ್ವಾಗತಮಂಡಲದಿಂದ ಕೊಡಲ್ಪಟ್ಟ ಪ್ರಶಸ್ತಿಗಳ ಮತ್ತು ಪದಕಗಳ ವಿವರ 185

29. ಸಮ್ಮೇಳನದ ಆಯವ್ಯಯದ ಪಟ್ಟಿ 186-7

30. ಸಮ್ಮೇಳನದ ಜವಾಬಾಬಿನ ವರದಿ (ಈ ಪುಸ್ತಕದೊಡನೆಯೇ ಸೇರಿಸಿದೆ.)

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦



ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನ್, ಸರಸ್ವತಿ,

(ಕಲ್ಪತರುಪ್ಯಾಲೇಸ್, ಕಲ್ಕತ್ತಾ.) M.A., L.M.S.

ಸಮ್ಮೇಳನ ಮತ್ತು ಪ್ರದರ್ಶನಗಳ ಅಧ್ಯಕ್ಷರು.

॥ ಶ್ರೀಃ ॥

ಧನ್ವಂತರಯೇನಮಃ

1930ನೆಯ ಇಸವಿ ಡಿಸೆಂಬರು ತಿಂಗಳಲ್ಲಿ ಮೈಸೂರು ರಾಜಧಾನಿಯಲ್ಲಿ ನಡೆದ

21 ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನದ ಕಾರ್ಯದ ವರದಿ.

ಶ್ರೀಯುತ ಡಾ|| ಸಿ. ಬಿ. ರಾಮರಾಯರು, ಬಿ.ಎ., ಎಮ್.ಡಿ. ರಿಟೈರ್ಡ್ ಸರ್ಜ್ಜ‌ನರವರ ಅಧ್ಯಕ್ಷತೆಯಲ್ಲಿ ಧಾರ್ವಾಡದಲ್ಲಿ 23-12-29ರಲ್ಲಿ ನೆರೆದ ಕರ್ಣಾಟಕಾಯುರ್ವೇದ ಸಮ್ಮೇಳನದಲ್ಲಿ, ನಿಖಿಲಭಾರತಾಯುರ್ವೇದ ಮಹಾಮಂಡಲದ 21ನೆಯ ವರ್ಷದ ಸಭೆಯನ್ನು ಕರ್ಣಾಟಕಕ್ಕೆ ಕರೆಯಬೇಕೆಂದೂ, ಆ ಸಭೆಯನ್ನು ಕರ್ಣಾಟಕಸಾಮ್ರಾಜ್ಯದ ಕೇಂದ್ರಸ್ಥಾನವಾದ ಮೈಸೂರು ರಾಜಧಾನಿಯಲ್ಲಿ ನಡೆಯಿಸಬೇಕೆಂದೂ, ಅದೇ ಕಾಲದಲ್ಲಿಯೇ ಕರ್ಣಾಟಕಾಯುರ್ವೇದಮಂಡಲದ 6ನೆಯ ವರ್ಷದ ಸಭೆಯನ್ನೂ ಜರುಗಿಸಬೇಕೆಂದೂ ತೀರ್ಮಾನವಾಯಿತು. ಆ ತೀರ್ಮಾನವನ್ನನುಸರಿಸಿ ಮೈಸೂರು ಗೌರ್ನಮೆಂಟು ಆಯುರ್ವೇದಿಕ್ ಆಸ್ಪತ್ರೆಯ ಸೂಪರಿಂಟೆಂಡೆಂಟರೂ ಮತ್ತು ಕರ್ಣಾಟಕಾಯುರ್ವೇದ ಮಂಡಳಿಯ ಸದಸ್ಯರೂ ಆದ ಭಿಷಕ್ಚೂಡಾಮಣಿ ಡಾ|| ವೈ. ಲಕ್ಷ್ಮೀನರಸಿಹ್ಮಶಾಸ್ತ್ರಿಗಳೂ, ಆ ಮಂಡಳಿಯ ಸೆಕ್ರೆಟರಿಗಳಾದ ವಿದ್ವಾನ್ ಕೆ. ಶೇಷಶಾಸ್ತ್ರಿಗಳವರೂ **1929 ನೆಯ ಡಿಸೆಂಬರಿನಲ್ಲಿ ಕರಾಚೀನಗರದಲ್ಲಿ ನಡೆದ ಮಹಾಸಮ್ಮೇಳನದ ಅಧಿವೇಶನದಲ್ಲಿ ಕರ್ಣಾಟಕಾಯುರ್ವೇದಮಂಡಳಿಯ ಪರವಾಗಿ** ಆಹ್ವಾನವನ್ನಿತ್ತರು. ಆದರದಿಂದ ಮಾಡಿದ ಈ ಆಹ್ವಾನವನ್ನು ಮಹಾಮಂಡಳದವರು ಒಪ್ಪಿದ್ದರಿಂದ ಕರ್ಣಾಟಕಕ್ಕೆ ಬಹಳ ಗೌರವವೂ ಸಂತೋಷವೂ ಉಂಟಾದವು.

ಈ ಮಹಾಕಾರ್ಯವನ್ನು ನೆರವೇರಿಸಲು ಸನ್ನಾಹವು ಪ್ರಾರಂಭವಾಯಿತು. ಕರ್ಣಾಟಕಾಯುರ್ವೇದಮಂಡಳದ ಮಂತ್ರಿಗಳಾದ ಶ್ರೀಯುತ ಡಾ|| ಎಚ್. ವಿ. ಸವಣೂರ್ L.M.S. ಬೆಳಗಾಂ, ವಿದ್ವಾನ್ ಕೆ. ಶೇಷಶಾಸ್ತ್ರಿಗಳು ಶೃಂಗೇರಿ, ಮತ್ತು ಶ್ರೀಯುತ ಮಹಿಷಿ ರಾಮರಾಯರು ಬಿ.ಎ., ಧಾರ್ವಾಡ ಇವರುಗಳ ಪ್ರಾರ್ಥನೆಯಂತೆ ಕರ್ಣಾಟಕಪ್ರಾಂತದ ಮುಖ್ಯರಾದ ವೈದ್ಯರ ಮತ್ತು ಅಭಿಮಾನಿಗಳಾದ

ದೊಡ್ಡಮನುಷ್ಯರ ಸಭೆಯೊಂದು ಮೈಸೂರಲ್ಲಿ ತಾ|| 16-3-30ರಲ್ಲಿ ಸೇರಿ ಮಾಡಬೇಕಾದ ಸನ್ನಾಹಗಳ ವಿಷಯವಾಗಿ ಚರ್ಚಿಸಿತು. ನಂತರ ಆಗಿನ ತೀರ್ಮಾನವನ್ನನುಸರಿಸಿ ತಾ|| 4-5-30ರಲ್ಲಿ ಸ್ವಾಗತಕಾರಿಣೀ ಸಮಿತಿಯೊಂದು ಸ್ಥಾಪಿತವಾಯಿತು. ಮೈಸೂರಿನ ಮಾಜಿ ಅಮೃತಮಹಲ್ ಸೂಪರಿಂಟೆಂಡೆಂಟರೂ ಪುರಪ್ರಮುಖರೂ ಆದ ಶ್ರೀಯುತ ಲೋಕಹಿತೈಷಿ ಹೆಚ್. ನಂಜುಂಡರಾಜೇ ಅರಸಿನವರು ಉಪಾಧ್ಯಕ್ಷರಾಗಿಯೂ, ಡಾ|| ವೈ. ಲಕ್ಷ್ಮೀನರಸಿಹ್ಮಶಾಸ್ತ್ರಿಗಳವರು ಪ್ರಧಾನಮಂತ್ರಿಗಳಾಗಿಯೂ, ಡಾ|| ಹೆಚ್. ವಿ. ಸವಣೂರ್ ಮತ್ತು ವಿದ್ವಾನ್ ಕೆ. ಶೇಷಶಾಸ್ತ್ರಿಗಳವರು ಸಹ ಮಂತ್ರಿಗಳಾಗಿಯೂ ಸಭೆಯವರ ಐಕಕಂಠ್ಯದಿಂದ ಚುನಾಯಿಸಲ್ಪಟ್ಟರು. 5 ರೂಪಾಯಿಗಳಿಗೆ ಕಡಿಮೆಯಿಲ್ಲದೆ ಕೊಡುವ ಮಹಸೀಯರೆಲ್ಲರೂ ಸ್ವಾಗತಮಂಡಳಿಯ ಸಾಮಾನ್ಯ ಸದಸ್ಯರೆಂದೂ, 10 ರೂಪಾಯಿಗಳಿಗೆ ಕಡಿಮೆಯಿಲ್ಲದೆ ಕೊಡುವ ಮಹಾಶಯರೆಲ್ಲರೂ **ಪೋಷಕರೆಂದೂ, 50** ರೂಪಾಯಿಗಳಿಗೆ ಕಡಿಮೆಯಿಲ್ಲದೆ ಸಹಾಯಮಾಡುವ ಉದಾರಿಗಳೆಲ್ಲರೂ ಆಶ್ರಯದಾತರೆಂದೂ ತೀರ್ಮಾನವಾಯಿತು. ಆಯುರ್ವೇದವೈದ್ಯರೂ ಪಾಶ್ಚಾತ್ಯ ವೈದ್ಯವಿದ್ವಾಂಸರೂ, ಸ್ತ್ರೀಯರೂ, ಪುರುಷರೂ, ಹಿಂದುಗಳು ಮುಸಲ್ಮಾನರು ಸುತರಾಂ ಭೇದಭಾವವಿಲ್ಲದೆ ಏಕಮನಸ್ಕರಾಗಿ ಸ್ವಾಗತಮಂಡಳಿಯಲ್ಲಿ ಸೇರಿ ತಮ್ಮ ಉದಾರವಾದ ಸಹಾಯವನ್ನು ಮಾಡಿ ಈ ಮಹತ್ಕಾರ್ಯಕ್ಕೆ ಅಣಿಯಾದರು. ಮಹಾಸಮ್ಮೇಳನದ ಕಾಲಕ್ಕೆ 273 ಮಂದಿ ಸಾಮಾನ್ಯ ಸದಸ್ಯರೂ, 103 ಪೋಷಕರೂ, 20 ಮಂದಿ ಆಶ್ರಯದಾತರೂ ಆಗಿದ್ದರು. ಇನ್ನು ಕೆಲವು ದೊಡ್ಡಮನುಷ್ಯರು ಕೇವಲ ದ್ರವ್ಯಕ್ಕಿಂತಲೂ ಹೆಚ್ಚುಬೆಲೆಯುಳ್ಳ ತಮ್ಮ ಸಾಮರ್ಥ್ಯವನ್ನೂ ಬುದ್ಧಿಶಕ್ತಿಯನ್ನೂ ಸ್ವಾಗತಮಂಡಳಿಗೆ ಅರ್ಪಿಸಿ ಅದರ ಗೌರವಸದಸ್ಯತ್ವವನ್ನು ವಹಿಸಿದರು. ಇಂಥವರು 10-15 ಮಂದಿಗಿಂತಲೂ ಹೆಚ್ಚಿದ್ದರು.

ಕರ್ಣಾಟಕದವರೇ ಆಹ್ವಾನಮಾಡಿದಕಾರಣ ಮೇಲ್ಕಂಡಂತೆ ಸಹಾಯಮಾಡಿದ ಆ ದೇಶದ ವೈದ್ಯರೂ, ಅಭಿಮಾನಿಗಳೂ ಸ್ವಾಗತಮಂಡಳಿಯ ಸದಸ್ಯರೆಂದೂ ಹೊರಗಿನಿಂದ ಬರುವ ವೈದ್ಯರೂ ಅಭಿಮಾನಿಗಳೂ 'ಪ್ರತಿನಿಧಿ' ಗಳೆಂದೂ ನಿಶ್ಚಯಿಸಲಾಯಿತು. ಮಹಾಮಂಡಲದ ನಿಯಮವನ್ನನುಸರಿಸಿ ಪ್ರತಿನಿಧಿಶುಲ್ಕವು ಮೂರು ರೂಪಾಯಿಗಳು ಮಾತ್ರವೇ ಎಂದು ನಿರ್ಣಯಿಸಲ್ಪಟ್ಟಿತು. ಈ ರೀತಿಯಾದ ಪ್ರತಿನಿಧಿಗಳು ಕರ್ನಾಟಕವನ್ನುಳಿದು ಮಿಕ್ಕ ಇಂಡಿಯಾ, ಬರ್ಮಾ, ಸಿಲೋನ್ ಮುಂತಾದ ಪ್ರಾಂತ್ಯಗಳಿಂದ 105 ಮಂದಿಗಳು ದಯಮಾಡಿಸಿದ್ದರು.

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦

ರಾಜಕಾರ್ಯಪ್ರವೀಣ ಶ್ರೀಯುತ ಪಿ. ಜಿ. ಡಿಸೋಜಾರವರು, B.A., B.L.

(ಮೈಸೂರು ಶ್ರೀಮನ್ಮಹಾರಾಜರವರ ಘನಸರ್ಕಾರದ ಉಪಸಚಿವರು.)

ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದವರು.

ಕಾರ್ಯನಿರ್ವಾಹಕರು.

ಸಮ್ಮೇಳನದ ಕಾರ್ಯದಲ್ಲಿ ಆರ್ಥಿಕವಿಚಾರ, ಪ್ರದರ್ಶನ, ಪ್ರಚಾರ, ಆತಿಥ್ಯ, ಮಂಟಪಾಲಂಕಾರ ಮತ್ತು ಸಭಾನಿರ್ಮಾಣ, ಸೇವಾ ಮತ್ತು ಶೋಧನ, ಎಂಬ ಅನೇಕ ಬಾಬುಗಳಿದ್ದುವು. ಒಂದೊಂದು ಭಾಗವನ್ನೂ ನೋಡಿಕೊಳ್ಳಲು ಒಂದೊಂದು ಉಪಸಮಿತಿಯಿದ್ದಿತು. ಈ ಉಪಸಮಿತಿಗಳಲ್ಲಿ ಸ್ಥಳೀಯ ವೈದ್ಯರುಗಳೂ, ಅಭಿಮಾನಿಗಳೂ, ವಿಶೇಷತಃ ಮೈಸೂರು ವಿಶ್ವವಿದ್ಯಾಲಯದ ಕಲಾಶಾಲೆಗಳ ಹೈಸ್ಕೂಲುಗಳ ಮತ್ತು ಗೌ|| ಆಯುರ್ವೇದಿಕ್ ಯುನಾನಿ ಕಾಲೇಜ್ ಆಸ್ಪತ್ರೆಯ ವಿದ್ವಾಂಸರುಗಳೂ ವಿದ್ಯಾರ್ಥಿಗಳೂ, ತಮ್ಮ ನಿರ್ವ್ಯಾಜವಾದ ಕೆಲಸಗಳನ್ನು ಮಾಡಲು ಒಪ್ಪಿಕೊಂಡರು. ಅಂಥಮಹನೀಯರುಗಳ ಹೆಸರುಗಳು ಈ ವರದಿಯ ಕೊನೆಯಲ್ಲಿ ಕೊಡಲ್ಪಟ್ಟಿವೆ. ಈ ಉಪಸಮಿತಿಗಳಿಗೆ ಕಾರ್ಯಗಳನ್ನು ಹಂಚಿ ಅವುಗಳಿಗೆ ಪರಸ್ಪರ ವ್ಯಾಹತಿ ಇಲ್ಲದೆ ಬೇಕಾದ ಅನುಕೂಲಗಳನ್ನು ಕಲ್ಪನೆಮಾಡಿಕೊಟ್ಟು ಒಟ್ಟುಕಾರ್ಯದಲ್ಲೂ ಸಾಮರಸ್ಯವನ್ನುಂಟುಮಾಡುವುದೇ ಕಾರ್ಯಕಾರಿಣೀಸಮಿತಿ (Working Committee) ಯ ಕೆಲಸವಾಗಿದ್ದಿತು. ಈ ಸಮಿತಿಯೂ ಅದರ ಮುಖ್ಯನಾಯಕರಾದ ಪ್ರಧಾನಮಂತ್ರಿಗಳೂ ಸಮ್ಮೇಳನದ ಕಾರ್ಯಕಲಾಪಗಳಿಗೆ ಮುಖ್ಯಜವಾಬುದಾರರು. ಈ ಕಾರ್ಯಕಾರಿಣೀ ಸಮಿತಿಗೆ ಮೇಲೆ ಕಾರ್ಯನಿರ್ವಾಹಕಸಮಿತಿ (Managing Committee) ಯೊಂದು. ಇದು ತಿಂಗಳಿಗೊಂದಾವರ್ತಿ ಸೇರಿ ನಡೆದ ಕೆಲಸಗಳನ್ನು ಪರಾಮರ್ಶಿಸಿ ಮುಂದೆ ನಡೆಯಬೇಕಾದ ಕೆಲಸಗಳನ್ನು ಗೊತ್ತುಮಾಡುತ್ತಿತ್ತು. ಕಾರ್ಯವನ್ನು ಮಾಡುವ ಜವಾಬುದಾರಿಯು ಕಾರ್ಯಕಾರಿಣೀ ಸಮಿತಿಯದೂ, ಕಾರ್ಯವನ್ನು ಏರ್ಪಾಡುಮಾಡುವ ಕೆಲಸವು ನಿರ್ವಾಹಕಮಂಡಲಿಯದೂ ಆಗಿದ್ದವು. ಇವುಗಳ ಮೇಲೆಲ್ಲಾ ಒಂದು ಸಂಘ. ಅದೇ ಸ್ವಾಗತ ಕಾರಿಣೀಸಮಿತಿ ಅದರ ಹೆಸರಿನಲ್ಲಿಯೇ ಕಾಗದಪತ್ರಗಳೂ ಜಮಾಖರ್ಚುಗಳೂ ಸಹ ನಡೆಯುತ್ತಿದ್ದುವು. ಇದು 3 ತಿಂಗಳಿಗೊಮ್ಮೆ ಸೇರಿ ನಡೆದ ಮತ್ತು ನಡೆಯಬೇಕಾದ ಕಾರ್ಯಗಳನ್ನು ವಿಮರ್ಶೆಮಾಡುತ್ತಿತ್ತು.

ಸ್ವಾಗತಸಮಿತಿಯ ಪ್ರಾರಂಭದಿಂದಲೂ ಬಹಳ ಮುತವರ್ಜಿಯಿಂದ ಕಾರ್ಯಭಾರವನ್ನೆಲ್ಲಾ ಪೂರ್ತಿವಹಿಸಿ ಸ್ವಾಗತಸಮಿತಿಗೆ ಬಹುಉಪಕಾರಮಾಡಿದ್ದ ಉಪಾಧ್ಯಕ್ಷರಾದ ಶ್ರೀಮಾನ್ ಲೋಕಹಿತೈಷಿ ಹೆಚ್. ನಂಜುಂಡರಾಜೇಅರಸಿನವರನ್ನು ಅಧ್ಯಕ್ಷ ಪದವಿಯನ್ನು ಸ್ವೀಕರಿಸುವಂತೆ ಸ್ವಾಗತಮಂಡಲಿಯವರು ಪ್ರಾರ್ಥಿಸಿದರು. ಅವರೂ ದೊಡ್ಡಮನಸ್ಸುಮಾಡಿ ಒಪ್ಪಿದರು.

ಕೆಲವುಕಾಲದಮೇಲೆ ಪ್ರಧಾನಮಂತ್ರಿಗಳಿಗೆ ಕಾರ್ಯಭಾರವು ಅತಿ ಹೆಚ್ಚಾಗಿ ತೋರಿಬಂದುದರಿಂದ ಮ|| ರಾ|| ವಿದ್ವಾನ್ ಕೆ. ಶ್ರೀಪಾದಾಚಾರ್ಯರು, ಎಂ.ಎ., ಯವರನ್ನೂ ಮತ್ತು ಮ|| ರಾ|| ಎನ್. ನಾಗೇಶರಾಯರು, ಎಂ.ಎ , ಯವರನ್ನೂ ಸಹಾಯಮಂತ್ರಿಗಳಾಗಿರಲು ಪ್ರಾರ್ಥಿಸಲಾಗಿ ಅವರೂ ಉದಾರಮನಸ್ಸಿನಿಂದ ತಮಗೆ ಬಿಡುವಾದ ಕಾಲಗಳಲ್ಲಿ ಪ್ರಧಾನಮಂತ್ರಿಗಳಿಗೆ ಸಹಾಯಮಾಡುತ್ತಿದ್ದರು.

ಮೇಲೆ ಹೇಳಿದ ಉಪಸಮಿತಿಗಳೊಂದಿಗೆ ವಸ್ತುಪ್ರದರ್ಶನ ಶಾಲೆಯಲ್ಲಿ ಪ್ರದರ್ಶಿಸಲ್ಪಟ್ಟ ಮೂಲಿಕೆಗಳ ಮತ್ತು ಔಷಧಿಗಳ ವಿಮರ್ಶೆಗಾಗಿ ಒಂದು ಸಮಿತಿಯೂ, ವಸ್ತುಪ್ರದರ್ಶನಶಾಲೆಯಲ್ಲಿ ಪ್ರದರ್ಶನಕ್ಕಾಗಿಯಾಗಲಿ ಯಾ, ಪರಿಷತ್ತುಗಳಲ್ಲಿ ವಿಚಾರಕ್ಕಾಗಿಯಾಗಲೀ ಕಳುಹಿಸಲ್ಪಟ್ಟ ಪ್ರಬಂಧಗಳನ್ನೂ ಗ್ರಂಥಗಳನ್ನೂ ವಿಮರ್ಶಿಮಾಡಲು ಮತ್ತೊಂದು ಸಮಿತಿಯೂ ಏರ್ಪಾಡಾದವು.

ಸಹಾಯವನ್ನು ಸಂಪಾದಿಸಲು ಮಾಡಿದ ಪ್ರಯತ್ನಗಳು

ಮೊದಲು ಕರ್ನಾಟಕಾಯುರ್ವೇದ ಮಂಡಲದವರು ಮೈಸೂರು ಸರ್ಕಾರದ ಹಜರತ್ ದಿವಾನ್‌ಸಾಹೇಬರವರನ್ನು ಅವರ ಮೈಸೂರು ಮೊಕ್ಕಾಮಿನಲ್ಲಿ ಭೇಟಿ ಮಾಡಿ ಸಮ್ಮೇಳನದ ಕಾರ್ಯಕ್ಕಾಗಿ ಸರಕಾರದವರಿಂದ ಉಚಿತಸಹಾಯವನ್ನು ಕೊಡಿಸಬೇಕೆಂದು ವಿಜ್ಞಾಪಿಸಿಕೊಂಡರು. ಅನಂತರ ವಿಜ್ಞಾಪನಾಪತ್ರಿಕೆಯೊಂದನ್ನೂ ಒಪ್ಪಿಸಿದರು. ಸ್ವಾಗತಮಂಡಲಿಯವರೂ ಕೂಡ ಉದಾರವಾದ ದ್ರವ್ಯಸಹಾಯ ಮಾಡಬೇಕೆಂದೂ, ಮೈಸೂರು ನವರಾತ್ರಿಯ ವಸ್ತುಪ್ರದರ್ಶನಶಾಲೆಯ ಕಟ್ಟಡವನ್ನು ಸಮ್ಮೇಳನದ ಉಪಯೋಗಕ್ಕೆ ಕೊಡಬೇಕೆಂದೂ, ಇಷ್ಟವುಳ್ಳ ಸರ್ಕಾರೀ ಅಧಿಕಾರಿಗಳು ಸಮ್ಮೇಳನದ ಕಾರ್ಯಕ್ಕೆ ಯಥೋಚಿತ ಸಹಾಯ ಮಾಡಲು ಆಜ್ಞೆಯನ್ನು ಕೊಡಬೇಕೆಂದೂ, ಸರ್ಕಾರದವರನ್ನು ಪಾರ್ಥಿಸಿದರು. ತಮ್ಮ ಅಮೋಘವಾದ ಆಶ್ರಯವನ್ನು ದಯಪಾಲಿಸಬೇಕೆಂದು ಶ್ರೀಮಾನ್ ಮೈಸೂರು ಮಹಾರಾಜಾಸಾಹೇಬರವರಿಗೂ, ಅವರ ಪ್ರಿಯಸಹೋದರರಾದ ಶ್ರೀಮದ್ಯುವರಾಜರವರ ಸನ್ನಿಧಾನಕ್ಕೂ, ಪ್ರಾರ್ಥನಾಪತ್ರಿಕೆಗಳು ಒಪ್ಪಿಸಲ್ಪಟ್ಟವು. ಕರ್ನಾಟಕದ ಆಯಾಯಾ ಭಾಗಗಳಲ್ಲಿರುವ ಮಠಾಧಿಪತಿಗಳಿಗೆ ಪ್ರತ್ಯೇಕಪ್ರತ್ಯೇಕವಾಗಿ ವಿಜ್ಞಾಪನಾಪತ್ರಿಕೆಗಳೂ ಕಳುಹಿಸಲ್ಪಟ್ಟವು. ದ್ರವ್ಯಸಹಾಯಾರ್ಥವಾಗಿ ವಿಜ್ಞಾಪನಾಪತ್ರಿಕೆಗಳನ್ನು ಕರ್ನಾಟಕದವರಿಗೆ ಮಾತ್ರವೇ ಕಳುಹಿಸಿದೆವು. ಇಂಗ್ಲೀಷ್, ಕನ್ನಡ, ಸಂಸ್ಕೃತಗಳಲ್ಲಿ ಸುಮಾರು 10000, ಪತ್ರಿಕೆಗಳನ್ನು ಅಚ್ಚು ಹಾಕಿಸಿ ಡಿಸ್ಟ್ರಿಕ್ಟ್‌ಬೋರ್ಡು, ಮುನಿಸಿಪಾಲಿಟಿಗಳು, ಗ್ರಾಮಪಂಚಾಯಿತಿಗಳು, ಅನ್ಯೋನ್ಯ ಸಹಾಯಸಂಘಗಳು, ಮೈಸೂರು ವೈದ್ಯಸಂಘ, ಮುಂತಾದ ಮುಖ್ಯ

ಸಂಸ್ಥೆಗಳಿಗೂ ಇವುಗಳ ಮೆಂಬರುಗಳಿಗೂ, ಒಬ್ಬೊಬ್ಬ ವೈದ್ಯರಿಗೂ, ಅಭಿಮಾನಿಗಳಿಗೂ ಕಳಿಸಿದ್ದಲ್ಲದೆ ದೇಶೀಯಪತ್ರಿಕೆಗಳಲ್ಲಿ ಕೂಡ ಪ್ರಸಿದ್ಧಪಡಿಸಿದ್ದೆವು.

ಇದಲ್ಲದೇ ಕರ್ಣಾಟಕದೇಶದ ಮುಖ್ಯಪ್ರಾಂತ್ಯಗಳಿಗೆ ಹೋಗಿ ಅಲ್ಲಿರುವ ಮುಖ್ಯಸ್ಥರಾದ ದೊಡ್ಡಮನುಷ್ಯರ ಸಹಾಯವನ್ನು ಸಂಪಾದಿಸುವದಕ್ಕೋಸ್ಕರ ಕೆಲವು ಮಹನೀಯರುಗಳನ್ನು ಕಳಿಸಿದೆವು. ಶ್ರೀಯುತರುಗಳಾದ ಎನ್. ನಾಗೇಶರಾಯರೂ ಮತ್ತು ಶ್ರೀಪಾದಾಚಾರ್ಯರೂ ಬೆಂಗಳೂರಿಗೆದಯಮಾಡಿಸಿ ಸ್ಥಳೀಯ ವೈದ್ಯರ ಸಮಿತಿಯೊಂದನ್ನು ಶ್ರೀಯುತ ಡಾ|| ಸಿ. ಬಿ. ರಾಮರಾಯರ ನೇತೃತ್ವದಲ್ಲಿ ಏರ್ಪಡಿಸಿ ಆ ನಗರದಲ್ಲಿ ನಡೆಯಬೇಕಾದ ಕೆಲಸಗಳನ್ನು ಆ ಸಮಿತಿಗೆ ಒಪ್ಪಿಸಿ ಬಂದರು. ವೈದ್ಯವರ ಕೆ. ಶೇಷಯ್ಯರ್‌ರವರು ಮತ್ತು ವೈದ್ಯ ವಿದ್ವಾನ್ ಡಿ. ಎನ್. ನಾರಾಯಣಪಂಡಿತರೂ ಆ ಸಮಿತಿಗೆ ಮಂತ್ರಿಗಳಾಗಿ ನಿಂತರು. ಶ್ರೀಯುತ ವಿದ್ವಾನ್ ಕೆ. ಶ್ರೀಪಾದಾಚಾರ್ಯರು ದಾವಣಗೆರೆ, ಹುಬ್ಬಳ್ಳಿ, ಬೆಳಗಾಂ ಪ್ರಾಂತ್ಯಗಳಿಗೆ ತೆರಳಿದ್ದರು. ಪ್ರಧಾನಮಂತ್ರಿಗಳು ಅವರ ಸಹಾಯಮಂತ್ರಿಗಳೊಡನೆ ನಂಜನಗೂಡಿಗೆ ಹೋಗಿ ಅಲ್ಲಿ ಮ|| ರಾ|| ಭಿಷಗ್ರತ್ನ ಬಿ. ವಿ. ಪಂಡಿತರು ಮತ್ತು ಮ|| ರಾ|| ಕೆ. ವೆಂಕಟಸಾಮಿ ಅಯ್ಯರ್, ಬಿ.ಎ., ಬಿ ಎಲ್. ಇವರುಗಳ ಸಹಾಯದಿಂದ ಸಮ್ಮೇಳನಕ್ಕೆ ಆ ಸ್ಥಳದಮಹನೀಯರ ಅಭಿಮುಖ್ಯವನ್ನು ಸಂಪಾದಿಸಿದರು. ಮೇಲೆ ಹೇಳಿದ ನಂಜನಗೂಡಿನ ಇಬ್ಬರು ದೊಡ್ಡಮನುಷ್ಯರು ಪ್ರಧಾನಮಂತ್ರಿಗಳೊಡನೆ ಚಾಮರಾಜನಗರಕ್ಕೆ ಹೋಗಿ ಅಲ್ಲಿನ ಮ್ಯುನಿಸಿಪಲ್ ಪ್ರೆಸಿಡೆಂಟ್ ಮತ್ತು ವೈಸ್‌ಪ್ರೆಸಿಡೆಂಟರವರ ಸಹಾಯದಿಂದ ದ್ರವ್ಯಸಂಗ್ರಹವನ್ನು ಮಾಡಿದರು. ಶ್ರೀಯುತ ಬಿ. ವಿ. ಪಂಡಿತರೂ, ಎನ್. ನಾಗೇಶರಾಯರೂ ಹಾಸನಕ್ಕೆ ಹೋಗಿದ್ದರು. ಪ್ರಧಾನಮಂತ್ರಿಗಳು ಸೋಸಲೆಗೆ ಹೋಗಿ ಶ್ರೀ ವ್ಯಾಸರಾಯಮಠದ ಮಹಾಸ್ವಾಮಿಗಳವರಿಂದ ಅನುಗ್ರಹಮಾಡಲ್ಪಟ್ಟು ಫಲಮಂತ್ರಾಕ್ಷತಪೂರ್ವಕವಾದ ಸಹಾಯವನ್ನು ಹೊಂದಿ ಹಾಗೆಯೇ ಟಿ. ನರಶೀಪುರದಲ್ಲಿ ಉಂಟಾದ ಸಹಾಯವನ್ನೂ ಸಂಪಾದಿಸಿಕೊಂಡು ಬಂದರು.

ನಂತರ ಭಿಷಗಾಚಾರ್ಯ ಪಂಡಿತ ಕೆ. ಎ. ಚಿಟ್ಟಿಯಣ್ಣನವರ ಜೊತೆಯಲ್ಲಿ ಕೊಡಗು ಪ್ರಾಂತಕ್ಕೆ ಹೋಗಿ ಅಲ್ಲಿನ ಶ್ರೀಮಂತರುಗಳಿಂದ ಧನಾರ್ಜನೆಯನ್ನು ಮಾಡಿದರು. ಸಹಾಯಮಂತ್ರಿಗಳಾದ ಮ|| ರಾ|| ಡಾ|| ಎಚ್. ವಿ. ಸವಣೂರ್, ಎಲ್.ಎಂ.ಎಸ್. ಬೆಳಗಾಂ ರವರು ಬೆಳಗಾಮಿನ ಪ್ರಾಂತ್ಯದಲ್ಲಿ ಸಾಧ್ಯವಾದಷ್ಟು ಕೆಲಸವನ್ನು ಮಾಡಿದರು.

ಮತ್ತೊಬ್ಬ ಸಹ-ಮಂತ್ರಿಗಳಾದ ವಿದ್ವಾನ್ ಬ್ರಂ|| ಕೆ. ಶೇಷಶಾಸ್ತ್ರಿಗಳವರಾದರೋ ಕರ್ಣಾಟಕದ ಇತರ ಕೆಲವು ಪ್ರಾಂತ್ಯಗಳಲ್ಲಿ ಸಂಚಾರಮಾಡಿದರು.

ಶ್ರೀಯುತ ಪಂಡಿತ ತತ್ವವಾದಿ ಚಿಕ್ಕಸುಬ್ಬಣ್ಣಾಚಾರ್ಯರು ಕೋಲಾರದ ಡಿಸ್ಟ್ರಿಕ್ಟಿನಲ್ಲೂ, ಪಂಡಿತ್ ಡಿ. ಎಚ್. ಮಸ್ತಾನ್‌ಸಾಹೇಬರವರು ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲೂ ಪ್ರಾಂತಿಕ ಮಂತ್ರಿಗಳಾಗಿ ಕೆಲಸಗಳನ್ನು ಮೆಹನತ್ತಿನಿಂದ ನಡೆಯಿಸಿ ಸಹಾಯಮಾಡಿಸಿದರು. ಪಂ. ಚಿಕ್ಕಸುಬ್ಬಣ್ಣಾಚಾರ್ಯರು ತಮ್ಮ ಸ್ವಂತ ಖರ್ಚಿನಿಂದಲೇ ಕೆಲಸ ಮಾಡಿದರೆಂಬುದು ತುಂಬಾ ಶ್ಲಾಘ್ಯವಾಗಿದೆ.

ಈ ರೀತಿಯಾದ ಆರ್ಥಿಕ ಸಂಪಾದನಾಕಮಿಟಿಯೊಂದು ಏರ್ಪಾಡಾಗಿ ಅದಕ್ಕೆ ಧರ್ಮಪ್ರಕಾಶ ಸಾಹುಕಾರ್ ಡಿ. ಬಸುಮಯ್ಯನವರು ಅಧ್ಯಕ್ಷರಾಗಿಯೂ, ಆ|| ವಿದ್ವಾನರಾದ ಬಿ. ವಿ. ವೆಂಕಟೇಶಶಾಸ್ತ್ರಿಗಳೂ, ಪಂಡಿತ ಗೋಪಾಲಕೃಷ್ಣಾವಧಾನಿಗಳೂ ಮತ್ತು ಶ್ರೀಯುತ ಎಸ್. ಎನ್. ಪಂಡಿತರವರೂ ಸೆಕ್ರಿಟರಿಗಳಾಗಿಯೂ ಸಹಾಯಮಾಡಿದರು.

ಮೈಸೂರು ರಾಜಧಾನಿಯಲ್ಲಿ ವರ್ತಕರು ಮತ್ತು ಇತರ ಕೆಲವು ದೊಡ್ಡ ಮನುಷ್ಯರುಗಳ ಸಹಾಯವನ್ನು ಪಡೆಯಲು ಶ್ರೀಯುತರುಗಳಾದ, ಸಾಹುಕಾರ್ ಧರ್ಮಪ್ರಕಾಶ ಡಿ|| ಬಸುಮಯ್ಯನವರು, ರಾಜಶಿಲ್ಪಿವಿಶಾರದ ರಿ|| ಚೀಫ್ ಎಂಜನಿಯರ್ ಬಿ. ಸುಬ್ರಾಯರವರು, ಲೋಕಹಿತೈಷಿ ಎಚ್. ನಂಜುಂಡರಾಜೇಅರಸಿನವರೂ, ಮೈಸೂರಿನ ಅಡ್ವೊಕೇಟರಾದ ಸಿ. ನರಸಿಂಹಯ್ಯವರರೂ ಸೇರಿ ಬಹಳ ಸಹಾಯಮಾಡಿದರು. ಆ|| ವಿದ್ವಾನ್ ಬಿ. ವಿ. ವೆಂಕಟೇಶಶಾಸ್ತ್ರಿಗಳು ಈ ಮಹನೀಯರಿಗೆ ಅನುವಾಗಿದ್ದರು. ರಾಜಧಾನಿಯ ಇತರ ಕೆಲವು ಕಡೆಗಳಲೆಲ್ಲಾ ವಿದ್ವಾನ್ ಕೆ. ಶ್ರೀಪಾದಾಚಾರ್ಯರೂ, ಶ್ರೀಯುತ ಎಸ್. ಎನ್. ಪಂಡಿತರೂ, ಆಯುರ್ವೇದವಿದ್ವಾನ್ ಗೋಪಾಲಕೃಷ್ಣಾವಧಾನಿಗಳು, ಮ|| ರಾ|| ಪಂ|| ಪಿ ಎಚ್. ಚಂದ್ರಭಾನುಸಿಂಗ್‌ರವರೂ ಬಹು ಪ್ರಯತ್ನ ನಡೆಸಿದರು. ಇದಲ್ಲದೇ ಅನೇಕ ಸ್ವಾರ್ಥತ್ಯಾಗಿಗಳು ಗ್ರಾಮಾಂತರಗಳಲ್ಲಿ ಕೆಲವುಮಟ್ಟಿಗೆ ದ್ರವ್ಯ ಸಹಾಯವನ್ನು ಸಂಪಾದಿಸಿಕೊಟ್ಟರು.

ನಮ್ಮ ಪ್ರಯತ್ನದ ಫಲ

ಮೊದಲು ಮೊದಲು ನಮ್ಮ ಪ್ರಯತ್ನಗಳು ಸಾಕಾದಷ್ಟು ಫಲಕಾರಿಯಾಗುವಂತೆ ತೋರಲಿಲ್ಲ. ಕರ್ನಾಟಕ ದೇಶವೆಲ್ಲವೂ ನಮ್ಮ ಸಹಾಯಕ್ಕೆ ಬರುವುದೆಂಬ ಭರವಸೆಯು ಕಡಿಮೆಯಾಯಿತು. ರಾಷ್ಟ್ರೀಯ ಛಳವಳಿಯಿಂದಲೂ

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦



ಶ್ರೀಯುತ ಲೋಕಹಿತೈಷಿ ಹೆಚ್. ನಂಜುಂಡರಾಜೇಅರಸಿನವರು,

(ರಿ|| ಅಮೃತಮಹಲ್ ಸೂಪರಿಂಟೆಂಡೆಂಟ್).

ಸ್ವಾಗತಸಮಿತಿಯ ಅಧ್ಯಕ್ಷರವರು.

ಆರ್ಥಿಕವಾದ ನಷ್ಟದಿಂದಲೂ ಭರತಖಂಡದಲ್ಲಿಯೆಲ್ಲಾ ಅಭೂತಪೂರ್ವವಾದ ಕ್ಷೋಭೆಯುಂಟಾಗಲು ಇದರ ಶಖೆಯು ಕರ್ನಾಟಕ ದೇಶವನ್ನು ಹೇಗೆ ತಾನೇ ತಾಕದಿದ್ದೀತು? ಇದರಿಂದ ಭಾರವು ಹೆಚ್ಚಾಗಿ ಮೈಸೂರು ದೇಶದ ಮೇಲೆಯೇ ಬಿದ್ದಿತು. ಈ ಭಾರಕ್ಕೆ ತಲೆಯನ್ನೊಡ್ಡಿ ಸಮ್ಮೇಳನದ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ಕರ್ನಾಟಕದ ಹೆಸರನ್ನುಳಿಸಿ ಇಡೀ ಭರತಖಂಡದ ಅಭಿನಂದನಕ್ಕೆ ಪಾತ್ರರಾದ ಈ ಮೈಸೂರು ಸಂಸ್ಥಾನವು ನಿಜವಾಗಿಯೂ ತನ್ನ **"ಮಾದರೀ"** ತನವನ್ನುಳಿಸಿಕೊಂಡಿತು. ನಮ್ಮ ಪ್ರಾರ್ಥನೆಯನ್ನಂಗೀಕರಿಸಿ ಉದಾರವಾದ ಧನಸಹಾಯವನ್ನೂ ಇದಕ್ಕಿಂತಲೂ ಅಮೋಘವಾದ ಆಶೀರ್ವಚನವನ್ನು ದಯಪಾಲಿಸಿದ ಶ್ರೀ ಶೃಂಗಗಿರಿ ಜಗದ್ಗುರು ಮಹಾಸ್ವಾಮಿಗಳವರೂ ಶ್ರೀ ಶ್ರೀ ಕೃಷ್ಣಬ್ರಹ್ಮತಂತ್ರ ಪರಕಾಲಮಠದದ ಮಹಾಸ್ವಾಮಿಗಳವರೂ, ಶ್ರೀ ಶ್ರೀ ಸೋಸಲೆವ್ಯಾಸರಾಯರ ಮಠದ ಮಹಾಸ್ವಾಮಿಗಳವರೂ ಇದರಂತೆ ತಿರುಪತಿ ಮಹಾಂತಜೀಯರರೂ ಮುರಗಾಲ ಶ್ರೀ ವೀರಶೈವ ಮಠಾಧಿಪತಿಗಳೂ, ಮತ್ತು ಶ್ರವಣಬೆಳಗೊಳದ ಶ್ರೀ ಜೈನಮಠಾಧಿಪತಿಗಳೂ ನಮ್ಮ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ.

ಮೇಲೆ ಸೂಚಿಸಿದ ದೇಶದಲ್ಲಿನ ಕ್ಷೋಭೆಯಿಂದ ಎದೆಗೆಟ್ಟು ಕಾರ್ಯವು ಹೇಗೆ ನಡೆದೀತೆಂಬ ಭಯದಿಂದ ಕಂಗೆಟ್ಟು ಕುಳಿತಿದ್ದ ನಮ್ಮನ್ನು ಮೇಲಕ್ಕೆಬ್ಬಿಸಿ ಮನಸ್ಸಿಗೆ ಧೈರ್ಯವನ್ನೂ ಹುರುಪನ್ನೂ ತಂದುಕೊಟ್ಟ ಮಾತೃಭಿಕ್ಷೆಯು ನಮ್ಮ ಖಾವಂದರವರಾದ ಶ್ರೀಮನ್ಮಹಾರಾಜರವರಿಂದಲೂ ಮತ್ತು ಅವರ ಘನಸರ್ಕಾರದಿಂದಲೂ ಬಂದಿತು. ಆಯುರ್ವೇದಾಭಿವೃದ್ಧಿಯಲ್ಲಿ ಬದ್ಧದೀಕ್ಷರಾದ ಆ ಮಹನೀಯರ ಔದಾರ್ಯವು ಅತ್ಯಂತ ಸ್ತೋತ್ರಾರ್ಹವೇಸರಿ. ನೈರ್ಮಲ್ಯದಲ್ಲಿಯೂ, ಆನುಕೂಲ್ಯದಲ್ಲಿಯೂ, ವೈಶಾಲ್ಯದಲ್ಲಿಯೂ ಇದಕ್ಕೆ ಮಿಂಚದಸ್ಥಳವಿಲ್ಲವೆಂಬಂತೆ ಇದ್ದ ದಸರಾವಸ್ತುಪ್ರದರ್ಶನಶಾಲೆಯನ್ನು ಕೊಟ್ಟುದುದಲ್ಲದೆ ಸರ್ಕಾರದ ಅಧಿಕಾರಿಗಳಾರು ಬೇಕಾದರೂ ಸಮ್ಮೇಳನದ ಕಾರ್ಯಕ್ಕೆ ತಮ್ಮ ತಮ್ಮ ನಿಯತಕಾರ್ಯಗಳಿಗೆ ವಿರೋಧವಿಲ್ಲದೆ ಅನುಕೂಲಮಾಡಬಹುದೆಂದು ಸರ್ಕಾರದವರು ಅಪ್ಪಣೆಕೊಟ್ಟರು. ಇದರಿಂದ ಅನೇಕ ಬುದ್ಧಿವಂತರೂ ವಿದ್ಯಾವಂತರೂ ಆದ ಮೈಸೂರು ರಾಜಧಾನಿಯಲ್ಲಿನ ಅನೇಕ ಸರ್ಕಾರಿ ಉದ್ಯೋಗಸ್ಥರ ಸಹಾಯವನ್ನು ಪಡೆಯಲು ಅವಕಾಶ ದೊರೆಯಿತು. ಇಂಥಾ ಮಹಾಸಹಾಯಕ್ಕೆ ಅವಕಾಶವನ್ನುಂಟುಮಾಡಿದ ಶ್ರೀಮನ್ಮಹಾರಾಜರವರ ಸರ್ಕಾರದವರ ಅನುಗ್ರಹವನ್ನು ಎಷ್ಟೆಂದು ಹೇಳೋಣ! ಇಧ

ಲ್ಲದೆ ಸಮ್ಮೇಳನಾಧ್ಯಕ್ಷರಾದ ಶ್ರೀಮಹಾಮಹೋಪಾಧ್ಯಾಯ ಕವಿರಾಜ್ ಗಣ ನಾಥಸೇನ್ ಶರ್ಮ ಸರಸ್ವತಿಯವರನ್ನು ರಾಜಕೀಯಾತಿಥಿಗಳನ್ನಾಗಿ ಎಣಿಸಿ ಬಹು ಗೌರವವನ್ನು ಕೊಟ್ಟರು.

ಮೈಸೂರು ಸಂಸ್ಥಾನದಲ್ಲಿನ ಸಹಕಾರಸಂಘಗಳಿಗೆ ಮಾದರಿಯಾಗಿರುವ ರಾಜಧಾನಿಯ ಸಿಟಿ-ಕೋ-ಆಪರೇಟಿವ್ ಬ್ಯಾಂಕ್ ಮತ್ತು ಮೈಸೂರು ಕೋ-ಆಪ ರೇಟೀವ್ ಸೊಸೈಟಿ ಎಂಬ ಎರಡು ಸಂಘಗಳು ತೋರಿಸಿದ ಪರಮಔದಾರ್ಯವು ಅತ್ಯಂತ ಪ್ರಶಂಸೆಗೆ ಅರ್ಹವಾಗಿದೆ. ಸಂಸ್ಥಾನದಲ್ಲಿನ ಇತರ ಸಹಕಾರಸಂಘಗಳು ಈ ಮಾದರಿಯನ್ನನುಸರಿಸಿ ತಮಗೆ ಸಾಧ್ಯವಾದಷ್ಟು ಮಟ್ಟಿಗೆ ಉದಾರವಾದ ಸಹಾಯವನ್ನು ಬೀರಿದವು. ಇವುಗಳಲ್ಲಿ ಮುಖ್ಯವಾದವು ಬೆಂಗಳೂರು ಪ್ರೊವಿನ್ ಷಿಯಲ್ ಕೋ-ಆಪರೆ‍ಟಿವ್ ಎಪೆಕ್ಸ್‌ಬ್ಯಾಂಕ್, ಮೈಸೂರು ಶ್ರೀ ಕೃಷ್ಣರಾಜೇಂದ್ರ ಕೋ-ಆಪರೇಟಿವ್ ಸೊಸೈಟಿ ಮುಂತಾದುವು. ಸಂಸ್ಥಾನದಲ್ಲಿನ (ಹಾಸನಡಿಸ್ಟ್ರಿಕ್ಟ್ ವಿನಹ) ಮಿಕ್ಕ ಎಲ್ಲ ಡಿಸ್ಟ್ರಿಕ್ಟ್ ಬೋರ್ಡುಗಳೂ ಕೆಲವು ಮುನಿಸಿಪಾಲಿಟಿಗಳೂ ನಮ್ಮ ಪ್ರಾರ್ಥನೆಗೆ ಅನುರೂಪವಾದ ಗೌರವವನ್ನು ಕೊಟ್ಟವು. ಮೈಸೂರು ರಾಜಧಾನಿಯ ಮುನಿಸಿಪಾಲಿಟಿಯವರೂ ಮತ್ತು ಆಯುರ್ವೇದ ವೈದ್ಯಸಂಘದ ವರೂ ಮಾಡಿದ ಉಪಕಾರವನ್ನು ಚಿರಸ್ಮರಣಮಾಡುವುದು ನಮ್ಮ ಕರ್ತವ್ಯ.

ಆತಿಥ್ಯ.

ಸ್ವಾಗತಮಂಡಳಿಯ ಸದಸ್ಯರಿಗೂ, ಪ್ರತಿನಿಧಿಗಳಿಗೂ, ಸಮ್ಮೇಳನಕ್ಕೆ ಹೊರಗಿನಿಂದ ದಯಮಾಡುವ ಅತಿಥಿಗಳೆಲ್ಲರಿಗೂ ವಾಸಸ್ಥಳವನ್ನೂ, ಊಟ ಉಪ ಚಾರಗಳನ್ನೂ ಉಚಿತವಾಗಿ ಎಂದರೆ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಏರ್ಪಡಿ ಸಲಾಗಿತ್ತು. ಈ ವಿಷಯವನ್ನು ದೇಶದಲ್ಲೆಲ್ಲಾ, ಹಸ್ತಪತ್ರಿಕೆಗಳ ಮೂಲಕವೂ ವಾರ್ತಾಪತ್ರಿಕೆಗಳ ಮೂಲಕವೂ 22-11-30ನೇ ತಾರೀಖಿನಲ್ಲಿ ಪ್ರಸಿದ್ಧಪಡಿಸ ಲಾಯಿತು. ಈ ಕಾರ್ಯವು ನಂಜನಗೂಡು ಶ್ರೀಯುತ ಭಿಷಗ್ರತ್ನ ಬಿ. ವಿ. ಪಂಡಿತ ರೂ ಮತ್ತು ಅವರ ಸಹಕಾರಿಗಳಾದ ಶ್ರೀಯುತ ಪಿ. ಸುಬ್ಬನರಸಿಹ್ಮಯ್ಯ, ಎಂ.ಎ., ಮೆ|| ಜಿ. ಹನುಮಂತರಾವ್, ಎಂ.ಎ. ಮುಂತಾದವರಿಗೆ ಸೇರಿತ್ತು. ದಸರಾ ವಸ್ತುಪ್ರದರ್ಶನಶಾಲೆಯಲ್ಲಿಯೇ ಉತ್ತರದೇಶದ ಪದ್ಧತಿಗೆ ಅನುಸರಿಸಿದ ಅಡಿಗೆಗೂ ದಕ್ಷಿಣದೇಶದ ಪದ್ಧತಿಗೆ ಅನುಸರಿಸಿದ ಅಡಿಗೆಗೂ ಏರ್ಪಾಟಾಗಿತ್ತು. ಕಟ್ಟಡವು ಅತಿ ವಿಶಾಲವಾದುದರಿಂದ ಅತಿಥಿಗಳ ನಿಯಮಾನುಸಾರ ಏರ್ಪಾಡಿಗೆಲ್ಲಾ ಅವ ಕಾಶಮಾಡಲಾಗಿತ್ತು. ಇದೇ ಕಟ್ಟಡದಲ್ಲಿಯೂ, ನಂಜರಾಜಬಹದ್ದೂರ್‌ರವರ ಛತ್ರ

ಶ್ರೀ|| ಲೋಕಸೇವಾನಿರತ
ಅಂಬಳೆ ಅಣ್ಣಯ್ಯಪಂಡಿತರವರು,
(ಮೈಸೂರು ದೇಶದಲ್ಲಿನ ಆಯುರ್ವೇದ ವೈದ್ಯಪ್ರಮುಖರು.)



ಶ್ರೀ|| ವೈದ್ಯರತ್ನ, ಆಸ್ಥಾನವಿದ್ವಾನ್
ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರವರು,
(ಮೈಸೂರು ಆಯುರ್ವೇದಕಾಲೇಜಿನ ಕಟ್ಟಡದ ದಾತೃಗಳು.)

ದಲ್ಲಿಯೂ, ಅಡಿಗೆಮಾಡಿಕೊಳ್ಳಲಿಷ್ಟವುಳ್ಳವರಿಗೆ ಉಚಿತವಾಗಿ ಪದಾರ್ಥಗಳನ್ನು ಒದಗಿಸಲಾಯಿತು. ಮೈಸೂರು ಜೈನರ ವಿದ್ಯಾರ್ಥಿನಿಲಯದಲ್ಲಿ ಜೈನಮತದ ಗೃಹಸ್ಥರಿಗೂ, ಕಬ್ಬಹಳ್ಳಿ ಚನ್ನಬಸಪ್ಪನವರ ವೀರಶೈವಾಶ್ರಮದಲ್ಲಿ ವೀರಶೈವಮತದ ಅತಿಥಿಗಳಿಗೂ ಅನುಕೂಲವನ್ನು ಮಾಡಿದ್ದೆವು. ಸಮ್ಮೇಳನದ ದಿನಗಳಲ್ಲಿ ಹಗಲೂ ರಾತ್ರಿಯೂ ಬಿಡುವಿಲ್ಲದೇ ಸಮ್ಮೇಳನಕಾರ್ಯವು ನಡೆಯುತ್ತಿತ್ತು. ನಿದ್ದೆಗೂ ಕೂಡ ಅವಕಾಶ ಕಡಿಮೆ. ಇಷ್ಟಾದರೂ ಬಂದ ಅತಿಥಿಗಳಿಗೆ ಅನಾರೋಗ್ಯದ ತೊಂದರೆಗೆ ಅವಕಾಶಕೊಡದೇ ಕಾಲಕಾಲಕ್ಕೆ ಊಟಉಪಚಾರಗಳನ್ನು ಒದಗಿಸಿದ ಶ್ರೀವರ್ನ್ ಭಿಷಗ್ರತ್ನ ಬಿ. ವಿ. ಪಂಡಿತರ ಶಕ್ತಿಗೂ ಸಹನೆಗೂ ಅವರ ಸ್ನೇಹಿತರ ಸಹಕಾರಕ್ಕೂ ಜನರು ಅತ್ಯಾಶ್ಚರ್ಯಪಟ್ಟರು.

ವಾಸದ ಏರ್ಪಾಡು.

ಘನಹೊಂದಿದ ಮೈಸೂರು ಸರಕಾರದವರು ದಸರಾ ವಸ್ತುಪ್ರದರ್ಶನ ಶಾಲೆಯನ್ನು ದಯಪಾಲಿಸಿದ್ದರಿಂದ ನಮಗುಂಟಾದ ಅನುಕೂಲಗಳನ್ನು ಕುರಿತು ಮೇಲೆಯೇ ಹೇಳಿದೆ. ದೀಪ, ನೀರು, ಸ್ನಾನ ಮತ್ತು ಶೋಧನ ಇವುಗಳಿಗೆ ಅನುಕೂಲವು ಅಲ್ಲಿ ಬಹಳವಾಗಿದ್ದುದರಿಂದ ನಮ್ಮ ಶ್ರಮವೂ ಖರ್ಚೂ ಬಹಳಮಟ್ಟಿಗೆ ಕಮ್ಮಿಯಾದವು. ಸರಕಾರದವರು "ಪದ್ಮಾಲಯ"ವನ್ನು ಅಧ್ಯಕ್ಷರ ವಾಸಕ್ಕೂ "ನ್ಯೂ ಇಂಡಿಯನ್ ಗೆಸ್ಟ್ ಕ್ವಾರ್ಟರ್ಸ್" ಎಂಬ ಕಟ್ಟಡವನ್ನು ಪರಿಷತ್ತುಗಳ ಅಧ್ಯಕ್ಷರುಗಳ ಉಪಯೋಗಕ್ಕೂ ದಯಮಾಡಿಬಿಟ್ಟಿದ್ದರು. ಮಹಾರಾಜರವರ ಗೌ|| ಹೈಸ್ಕೂಲು, ನಂಜರಾಜಬಹದ್ದೂರ್‌ರವರ ಛತ್ರ, ಮತ್ತು ವೈದ್ಯರತ್ನಂ ಗುಂಡ್ಲು ಪಂಡಿತ್ ಲಕ್ಷ್ಮಣಾಚಾರ್ಯರವರ ಗೌ|| ಆಯುರ್ವೇದಿಕ್ ಯುನಾನೀ ಕಾಲೇಜ್ ಕಟ್ಟಡಗಳು ಆಯಾ ಅಧಿಕಾರಿಗಳ ಔದಾರ್ಯದಿಂದ ನಮ್ಮ ಉಪಯೋಗದಲ್ಲಿದ್ದವು. ಮೈಸೂರು ಪಟ್ಟಣದಲ್ಲಿ ಆ ಕಾಲದಲ್ಲಿ ಪ್ಲೇಗ್ ಉಪದ್ರವದ ಶಂಕೆಯಿತ್ತು. ಆದರೂ ಈ ಕಟ್ಟಡಗಳ ಸನ್ನಿವೇಶ ಮತ್ತು ನೈರ್ಮಲ್ಯದಿಂದ ನಮಗೆ ಯಾವ ವಿಧವಾದ ಭಯವೂ ತೋರಲಿಲ್ಲ. ಈ ಶಾಖೆಗೆ ಮೈಸೂರು ಸಿಟಿ ಮ್ಯುನಿಸಿಪಲ್ ವೈಸ್‌ಪ್ರೆಸಿಡೆಂಟರಾದ ಶ್ರೀಯುತ ಎಂ. ರಾಮಸ್ವಾಮಯ್ಯನವರೂ, ಶ್ರೀಯುತ ಟಿ. ಕೃಷ್ಣಮೂರ್ತಿ ಎಂ.ಎ. ಯವರೂ, ಹೆಚ್. ಕೃಷ್ಣರಾವ್ ಎಂ.ಎ. ಯವರೂ ಮುಖ್ಯ ಅಧಿಕಾರಗಳನ್ನು ವಹಿಸಿ ಬಹು ವಿತರಣೆಯಿಂದ ಕಾರ್ಯಸಾಧನೆ ಮಾಡಿದರು.

ಆರೋಗ್ಯರಕ್ಷಣೆಯ ಏರ್ಪಾಡು

ಮಹಾರಾಜರವರ ಕಾಲೇಜ್ ಅ|| ಪ್ರೊಫೆಸರ್ ಮ|| ರಾ|| ಅನಂತರಾವು ಯ್ಯನವರೂ ಮತ್ತು ಅವರ ಸಹಕಾರಿಗಳಾದ ಮ|| ಸದಾಶಿವಶಾಸ್ತ್ರಿಗಳು ಮುಂ ತಾದವರ ಸಹಾಯದಿಂದ ಆರೋಗ್ಯರಕ್ಷಣಗೆ ಬೇಕಾದ (Health Section) ಶೋಧನಕಾರ್ಯದ ಏರ್ಪಾಡುಗಳು ಬಹು ಸಮರ್ಪಕವಾಗಿ ನಡೆದವು.

ಔಷಧೋಪಚಾರದ ಏರ್ಪಾಡು

ಮೈಸೂರು ಸರ್ಕಾರದ ಆಯುರ್ವೇದ ವೈದ್ಯಶಾಲಾ ಪಂಡಿತರಾದ ಮ|| ರಾ|| ಎಮ್. ಆರ್. ವೆಂಕಟರಾಮಾಪಂಡಿತರ ಕೈಕೆಳಗೆ ಅತಿಥಿಗಳ ಅನು ಕೂಲ್ಯಕ್ಕಾಗಿ ಒಂದು ಆಯುರ್ವೇದ ಆಸ್ಪತ್ರೆಯನ್ನು ನಿರ್ಮಿಸಿದ್ದೆವು. ಪ್ರಧಾನ ಮಂತ್ರಿಗಳೂ ಮತ್ತು ಗೌ|| ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಲ್. ರಾಮಕೃಷ್ಣರಾಯರು ಎಲ್.ಎಂ.ಎಸ್. ರವರೂ ಇದರ ಮೇಲ್ವಿಚಾ ರಣೆಮಾಡಿದರು. ಸುತ್ತಮುತ್ತ ನೋಟನೋಡುವುದಕ್ಕೆ ಹೋಗಿದ್ದ ಒಬ್ಬ ದೊಡ್ಡ ಮನುಷ್ಯರಿಗೆ ಜೇನುಹುಳುಗಳ ಕಡಿತದಿಂದ ಬಹು ತೊಂದರೆಯಾಯಿತು. ಆದರೂ ಆ ಕಾಲದಲ್ಲಿ ಮಾಡಿದ ಚಿಕಿತ್ಸೆ ಮತ್ತು ಉಪಚಾರಗಳಿಂದ ಅವರಿಗೆ ಗುಣವಾಯಿತು. ಈ ತೊಂದರೆ ಯನ್ನು ಬಿಟ್ಟು ಬೇರೆ ಪ್ರಬಲವಾದ ಉಪದ್ರವ ಗಳಿಲ್ಲದೆ ಸಮ್ಮೇಳನವು ಸುಲಲಿತ ವಾಗಿ ನಡೆಯಿತು.

ಸೇವಾಕಾರ್ಯದ ಏರ್ಪಾಡು

ಸಮ್ಮೇಳನದ ಯಾವ ಕಾರ್ಯವಾಗಲೀ ಈ ಸೇವಾಸಂಘದವರ ಸಹಾನು ಭೂತಿಯಿಲ್ಲದೆ ಸಾಧ್ಯವಿರಲಿಲ್ಲ. ಆ ಸಂಘದವರ ಮನಃಪೂರ್ವಕವಾದ ಪ್ರಯ ತ್ನವೇ ನಮ್ಮ ಜಯಕ್ಕೆ ಮುಖ್ಯಕಾರಣ. ಇದರ ನಾಯಕರು ಮೈಸೂರು ಇಂಟರ್‌ಮೀಡಿಯಟ್ ಕಾಲೇಜ್ ಸೂಪರಿಂಟೆಂಡೆಂಟರಾದ ಮ|| ರಾ|| ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್ಯರು, ಎಂ.ಎ., ಬಿ.ಎಲ್., ರವರು ಅವರ ಸಹಕಾರಿಗಳು ಮ|| ರಾ|| ಎಂ. ವಿ. ಜಂಬುನಾಥನ್ ಎಂ.ಎ., ಬಿ.ಎಸ್‌ಸಿ. ಇವರುಗಳ ನೇತೃತ್ವದಲ್ಲಿ ಮಹಾರಾಜಾ ಕಾಲೇಜ್ ಇಂಟರ್‌ಮೀಡಿಯೆಟ್ ಕಾಲೇಜ್ ಮತ್ತು ಗೌ|| ಆಯುರ್ವೇದಿಕ್ ಕಾಲೇಜ್‌ನ ವಿದ್ಯಾರ್ಥಿಗಳು ಸೇವಾ ದಳದ ಭಟರಾಗಿ ಹೆಚ್ಚು ಕಮ್ಮಿ ಎಂಬ ಭಾವನೆಯಿಲ್ಲದೆ ಯಾವ ಕೆಲಸಕ್ಕೆಂದರೂ ಇಳೀಬಿದ್ದು ಸಮ್ಮೇಳನದ ಅತಿಥಿಗಳು ಮತ್ತು ಅಧಿಕಾರಿಗಳ ಪ್ರಶಂಸೆಗೂ ಕೃತಜ್ಞ ತೆಗೂ ಪಾತ್ರರಾದರು.

ಸಭಾಲಂಕಾರ ಮತ್ತು ಸಭಾನಿರ್ಮಾಣ ಮೊದಲಾದ ಕಾರ್ಯಗಳು.

ಮ॥ ರಾ॥ ಎಕ್. ಕಸ್ತೂರಿ, ಎಂ.ಎ., ಬಿ.ಎಲ್., ರವರಿಗೆ ಒಪ್ಪಿಸಲ್ಪಟ್ಟಿತ್ತು. ಅವರಿಗೆ ಸಹಾಯಕರಾಗಿ ಮ॥ ರಾ॥ ಆಯುರ್ವೇದ ವಿದ್ವಾನ್ ಬಿ. ಎಸ್. ರಾಮಕೃಷ್ಣಯ್ಯನವರು ಮುಂತಾದವರು ಇದ್ದರು. ಇವರ ಚಾತುರ್ಯದಿಂದ ಸಭಾಕಾರ್ಯಗಳು ಸುಲಲಿತವಾಗಿ ನಡೆದವು.

ವಸ್ತುಪ್ರದರ್ಶನ.

ವೈದ್ಯಶಾಸ್ತ್ರದ ಅಭಿವೃದ್ಧಿಗೆ ಆಗುವ ಉಪಕಾರದೃಷ್ಟಿಯಿಂದ ನೋಡಿದರೆ ವಸ್ತುಪ್ರದರ್ಶನದ ಬೆಲೆಯನ್ನು ಇಷ್ಟೆಂದು ಹೇಳಲಾಗುವುದಿಲ್ಲ. ಪುರಾತನಗ್ರಂಥಗಳನ್ನು ಶೋಧನಮಾಡಿ ತಮ್ಮ ಅನುಭವವನ್ನೂ ಸೇರಿಸಿ ಒಬ್ಬರಿಗೊಬ್ಬರು ತೋರಿಸಬೇಕೆನ್ನುವ ಅಪೇಕ್ಷೆಯನ್ನುಂಟುಮಾಡಿ ದೇಶದ ನಾನಾಕಡೆಗಳಲ್ಲಡಗಿರುವ ಕೌಶಲ್ಯವನ್ನು ಹೊರಹಾಕಿ ಲೋಕದ ಉಪದ್ರವಗಳನ್ನು ಕಡಿಮೆಮಾಡುವುದೇ ಈ ವಸ್ತುಪ್ರದರ್ಶನದ ಉದ್ದೇಶ್ಯವೆಂದು ಸಂಗ್ರಹವಾಗಿ ಹೇಳಬಹುದು. ಪ್ರದರ್ಶಕರಿಗೆ ಒಬ್ಬೊಬ್ಬರಿಗೂ ಅವರ ಇಷ್ಟಾನುಸಾರ ಸ್ವತಂತ್ರವಾದ ಸ್ಥಳಗಳನ್ನು ಕೊಟ್ಟಿತ್ತು. ಸಂಶಯಾಸ್ಪದವಾದ ಮೂಲಿಕೆಗಳನ್ನೂ ಖನಿಜಗಳನ್ನೂ ಪ್ರಾಣಿಜವಾದ ವಸ್ತುಗಳನ್ನೂ ಪರೀಕ್ಷೆಮಾಡಿ ಅವುಗಳ ತಾರತಮ್ಯವನ್ನು ಕಂಡುಹಿಡಿಯಲು ಅನುಕೂಲವಾಗುವಂತೆ ಮೂಲಿಕಾದಿ ಸಂಗ್ರಹಕ್ಕಾಗಿ ಒಂದು ದೊಡ್ಡ ಹಜಾರವನ್ನು ಏರ್ಪಡಿಸಿದ್ದೆವು. ಆಯುರ್ವೇದ ಚಿಕಿತ್ಸಾಶಾಲೆಗಳಿಂದಲೂ, ಪಾಠಶಾಲೆಗಳಿಂದಲೂ ಬರಬಹುದಾದ ವಸ್ತುಗಳಿಗಾಗಿ ಪ್ರತ್ಯೇಕ ಕೊಠಡಿಯು ಏರ್ಪಾಡಾಗಿತ್ತು. ಮತ್ತೊಂದು ಕೊಟಡಿಯಲ್ಲಿ ಆರೋಗ್ಯಶಾಸ್ತ್ರ ಮತ್ತು ಶಾರೀರಶಾಸ್ತ್ರಗಳಿಗೆ ಸಂಬಂಧಪಟ್ಟ ಚಿತ್ರಗಳು ಖಾತೆಗಳು ಮತ್ತು ಮಾದರಿಗಳು ಇವುಗಳನ್ನಿಡುವದಕ್ಕೆ ಅನುಕೂಲಪಡಿಸಿದ್ದೆವು. ಉತ್ತಮವಾದ ವಸ್ತುಗಳನ್ನು ಪ್ರದರ್ಶಿಸಿದವರಿಗೆ ಬಹುಮಾನಗಳನ್ನೂ ಸ್ವರ್ಣಪದಕಗಳನ್ನೂ ಕೊಡುವದಕ್ಕೆ ಸ್ವಾಗತಮಂಡಲಿಯವರು ಸಿದ್ಧಮಾಡಿದ್ದರು. ವಸ್ತುಪ್ರದರ್ಶನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಸಂಸ್ಕೃತದಲ್ಲಿ ಮತ್ತು ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲ ಅಚ್ಚುಹಾಕಿಸಿ ದೇಶದೇಶಗಳಲ್ಲಿರುವ ವೈದ್ಯರಿಗೂ ಪಾಠಶಾಲೆಗಳಿಗೂ ವೈದ್ಯಶಾಲೆಗಳಿಗೂ ಕಳುಹಿಸಿದೆವು. ಅನೇಕ ವಾರ್ತಾಪತ್ರಿಕೆಗಳಲ್ಲಿ ಪ್ರಸಿದ್ಧಪಡಿಸಿದೆವು. ಪ್ರತಿಯೊಬ್ಬ ಪ್ರದರ್ಶಕನೂ ಒಂದು ರೂಪಾಯಿ ಪ್ರವೇಶಧನವನ್ನು ಕೊಡಬೇಕೆಂದು ನಿರ್ಧರವಾಯಿತು. ಈ ವಸ್ತುಪ್ರದರ್ಶನಶಾಖೆಯು ಯಶಸ್ವಿಯಾಗಲು ಶ್ರೀಯುತ

ಎರ್. ನಾಗೇಶರಾವ್, ಎಂ.ಎ., ಯವರ ಪೂರ್ಣವಾದ ನೇತೃತ್ವವೂ ಮತ್ತು ಅವರ ಸಹಕಾರಿಗಳ ಸಹಾಯವೂ ಮುಖ್ಯವಾದಕಾರಣ.

ಪ್ರಬಂಧಗಳು ಮತ್ತು ಉಪನ್ಯಾಸಗಳು.

ಇವುಗಳಿಗೆ ತಕ್ಕ ಏರ್ಪಾಡುಮಾಡುವುದನ್ನು ಶ್ರೀಮಾನ್ ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರಿಗೂ, ಮಹಾರಾಜರವರ ಕಾಲೇಜು ಉಪಾಧ್ಯಾಯರಾದ ಮ|| ರಾ|| ಲಕ್ಷ್ಮೀನರಸಿಹ್ಮಯ್ಯ ಎಮ್.ಎ., ಯವರು ಇವರನ್ನುಳ್ಳ ಕಮಿಟಿಗೆ ಸೇರಿತ್ತು.

ಪ್ರಬಂಧಗಳೂ ಮತ್ತು ಅವುಗಳ ವಿಚಾರಗಳು

(1) ದ್ರವ್ಯಸಂಭಾಷಾಪರಿಷತ್, (2) ಚಿಕಿತ್ಸಾಸಂಭಾಷಾಪರಿಷತ್, (3) ರಸಾಯನ ಸಂಭಾಷಾಪರಿಷತ್, (4) ಸಾಮಾನ್ಯಸಂಭಾಷಾಪರಿಷತ್ ಎಂಬದಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟದ್ದವು.

(1) "ದ್ರವ್ಯಸಂಭಾಷಾಪರಿಷತ್ತಿನಲ್ಲಿ" ಮೂಲಿಕಾವಿಚಾರ, ಮೂಲಿಕೆಗಳ ಗುಣಗಳು, ಅವುಗಳಿಂದ ಉಪಯೋಗ, ಇವುಗಳ ಉಪಯೋಗದಿಂದ ರೋಗಿಗಳಲ್ಲಿ ಕಾಣಬರುವ ಪರಿಣಾಮಗಳು, ಅವುಗಳ ಪರೀಕ್ಷೆ, ಇತ್ಯಾದಿ ವಿಷಯಗಳು ಆ ಪರಿಷತ್ತಿನಲ್ಲಿ ಚರ್ಚಿಸಲ್ಪಟ್ಟವು.

(2) "ಚಿಕಿತ್ಸಾಸಂಭಾಷಾಪರಿಷತ್ತಿನಲ್ಲಿ" ಕೆಲಕೆಲವು ರೋಗಗಳಲ್ಲಿ ಶರೀರದಲ್ಲಿ ಆಗುವ ಬದಲಾವಣೆಗಳೂ, ಒಂದೊಂದು ದೇಶದಲ್ಲಿಯೂ ಮಾಡುವ ಚಿಕಿತ್ಸೆಗಳೂ, ಅವುಗಳ ಕ್ರಮ, ತ್ರಿದೋಷಸಿದ್ಧಾಂತ ಮೊದಲಾದ ಚಿಕಿತ್ಸೆಗೆ ಉಪಯುಕ್ತವಾದ ತತ್ವಗಳು ಈ ಪರಿಷತ್ತಿನಲ್ಲಿ ಚರ್ಚೆಮಾಡಲ್ಪಟ್ಟವು.

(3) ರಸಾಯನಸಂಭಾಷಾಪರಿಷತ್ತಿನಲ್ಲಾದರೋ ರಸ, ವಿಷ, ಪಾಷಾಣಾದಿ ಓಷಧಿ ದ್ರವ್ಯಗಳನ್ನು ಶುದ್ಧಿಮಾಡುವ ಕ್ರಮ ಅವುಗಳಿಂದ ಔಷಧಗಳನ್ನು ಸಿದ್ಧಪಡಿಸುವ ಕ್ರಮ ದೇಶದೇಶಗಳಲ್ಲಿ ಕಂಡುಬರುವ ಭೇದಗಳು ಇತ್ಯಾದಿಗಳು ಚರ್ಚಿಸಲ್ಪಟ್ಟವು.

(4) ಆಯುರ್ವೇದಶಾಸ್ತ್ರದ ಸಾಮಾನ್ಯ ತತ್ವಗಳ ವಿಷಯವಾಗಿಯೂ ತ್ರಿದೋಷಸಿದ್ಧಾಂತಗಳ ವಿಷಯವಾಗಿಯೂ ಸಾಮಾನ್ಯಸಂಭಾಷಾಪರಿಷತ್ತಿನಲ್ಲಿ ಅನೇಕ ಚರ್ಚೆಗಳು ನಡೆಯಿತು.

ಉತ್ತಮವಾದ ಪ್ರಬಂಧಕರ್ತೃಗಳಿಗೆ ೬ ಸುವರ್ಣ ಪದಕಗಳನ್ನು ಕೊಡಬೇಕೆಂದು ಸಂಕಲ್ಪಮಾಡಿದೆವು. ಕೊನೆಗೆ ಅಂಥ ಪ್ರಬಂಧಗಳು ಹೆಚ್ಚಾಗಿ ಬಂದ ಕಾರಣ ಇನ್ನೆರಡು ಪದಕಗಳನ್ನು ಹೆಚ್ಚುಮಾಡಿದೆವು.

ದ್ರವ್ಯಸಂಭಾಷಾಪರಿಷತ್ತಿನಲ್ಲಿ ೬ ಪ್ರಬಂಧಗಳೂ, ಚಿಕಿತ್ಸಾಸಂಭಾಷಾಪರಿಷತ್ತಿನಲ್ಲಿ ೧೮ ಪ್ರಬಂಧಗಳೂ, ರಸಾಯನ ಮತ್ತು ಸಾಮಾನ್ಯಸಂಭಾಷಾಪರಿಷತ್ತುಗಳಲ್ಲಿ ೧೨ ಪ್ರಬಂಧಗಳೂ ಚರ್ಚಿಸಲ್ಪಟ್ಟವು.

ತ್ರಿದೋಷತತ್ವಕ್ಕೂ ವೇದಾಂತತತ್ವಕ್ಕೂ ಇರುವ ಸಂಬಂಧದ ಮೇಲೆ ಯಾರಾದರೂ ಪ್ರಬಂಧಬರದರೆ, ಹಾಗೆ ಬರುವ ಪ್ರಬಂಧಗಳ ಪೈಕಿ ಉತ್ತಮವಾಗಿ ಕಂಡುಬರುವ ಪ್ರಬಂಧಕ್ಕಾಗಿ ಒಂದುನೂರು ರೂಪಾಯಿಗಳ ಬಹುಮಾನವನ್ನು ಕೊಡುವುದಾಗಿ ಶ್ರೀಮಾನ್ ಭಿಷಗ್ರತ್ನ ಪಾಳ್ಯದ ವೆಂಕಟಾಚಲಪಂಡಿತರು ಪ್ರತಿಜ್ಞೆ ಮಾಡಿದರು.

ಸಮ್ಮೇಳನ ಮತ್ತು ಅಧ್ಯಕ್ಷರ ಚುನಾವಣೆ.

ನಿಖಿಲಭಾರತಾಯುರ್ವೇದ ಮಂಡಲದ ನಿಯಮಾನುಸಾರ ಕಾನ್ಪುರದ ಕಾರ್ಯಕಾರಿಣೀ ಸಭೆಯಿಂದ ನಮಗೆ ಬಂದ ಏಳುಮಂದಿ ದೊಡ್ಡಮನುಷ್ಯರ ಹೆಸರುಗಳ ಪೈಕಿ ಸ್ವಾಗತಮಂಡಲಿಯವರು ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನ್ ಸರಸ್ವತಿ, ಎಂ.ಎ., ಎಲ್.ಎಂ.ಎಸ್., ಇವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಿದರು.

ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸಲು ಮೈಸೂರು ಸರಕಾರದ ಮಂತ್ರಾಲೋಚನಾಸಭೆಯ ಸಚಿವರಾದ ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾಸಾಹೇಬರವರು ದಯಮಾಡಿ ಒಪ್ಪಿದರು.

ವಸ್ತುಪ್ರದರ್ಶನ ಪ್ರಾರಂಭೋತ್ಸವವನ್ನು ನೆರವೇರಿಸಲು ಕಾಕಿನಾಡ ಆಂಧ್ರ ಆಯುರ್ವೇದ ವಿಶ್ವವಿದ್ಯಾಲಯದ ಅಧ್ಯಕ್ಷರಾದ ಭಿಷಗಾಚಾರ್ಯ ಡಾ|| ಪಿ. ಸುಬ್ಬರಾಯರವರನ್ನೂ,

ರಸಾಯನ ಸಂಭಾಷಾಪರಿಷತ್ತಿನ ಅಧ್ಯಕ್ಷಪದವಿಗೆ ಅಹಮ್ಮದಾಬಾದಿನ ಪಂಡಿತ ನಾರಾಯಣಶಂಕರ ದೇವಶಂಕರ ಪ್ರಾಣಾಚಾರ್ಯರವರನ್ನೂ,

ದ್ರವ್ಯಸಂಭಾಷಾಪರಿಷತ್ತಿಗೆ ಅಧ್ಯಕ್ಷರನ್ನಾಗಿ ಬೊಂಬಾಯಿ ಹಾಫ್‌ಕಿನ್ ಶೋಧನಾಲಯದ ಅಧಿಕಾರಿಗಳಾದ ಎಂ. ಎ. ಎಮ್. ಡಿ. ಡಿ. ಪಿ. ಹೆಚ್. ಪದವೀಧರರಾದ ಶ್ರೀಯುತ ಡಾ|| ಕೆ. ಎಸ್. ಮಸ್ಕರ್ ಎಂಬ ದೊಡ್ಡ ಮನುಷ್ಯರನ್ನೂ,

ಚಿಕಿತ್ಸಾಸಂಭಾಷಾಪರಿಷತ್ತಿನ ಅಗ್ರಾಸನಾಧಿಪತಿಗಳನ್ನಾಗಿ ಕೊಲಂಬೋ ಆಯುರ್ವೇದಿಕ್ ಕಾಲೇಜ್ ಪ್ರಿನ್ಸಿಪಾಲರಾದ ಕ್ಯಾಪ್ಟನ್ ಪಣಿಕರ್, ಎಲ್. ಆರ್. ಸಿ. ಪಿ., ಎಂ. ಆರ್. ಸಿ. ಎಸ್. ಎಂಬುವರನ್ನೂ,

ಕರ್ನಾಟಕಾಯುರ್ವೇದ ಸಮ್ಮೇಳನದ ಅಧ್ಯಕ್ಷರನ್ನಾಗಿ ಮೈಸೂರು ಗೌ|| ಆಯುರ್ವೇದಿಕ್ ಕಾಲೇಜಿನ ರಿ|| ಹೆಡ್ಮಾಸ್ಟರಾದ ಬಿ.ಎ.ಬಿ.ಎಂ.ಡಿ. ಪದವೀಧರರಾದ ಡಾ|| **ಎಸ್. ವೆಂಕೋಬರಾಯರವರನ್ನೂ** ಪ್ರಾರ್ಥಿಸಿದರು.

ಅದೃಷ್ಟವಶದಿಂದ ಅವರೆಲ್ಲರೂ ದೊಡ್ಡಮನಸ್ಸು ಮಾಡಿ ನಮ್ಮ ಪ್ರಾರ್ಥನೆಯನ್ನು ಅಂಗೀಕರಿಸಿ ಸಭಾಲಂಕಾರಮಾಡಿದರು.

ಆಹ್ವಾನ.

ಭರತಖಂಡದಲ್ಲಿರುವ ವೈದ್ಯರಿಗೂ, ವೈದ್ಯಾಭಿಮಾನಿಗಳಿಗೂ, ಒಬ್ಬೊಬ್ಬರಿಗೂ ಪ್ರಾರ್ಥನಾಪತ್ರಿಕೆಗಳನ್ನು ಆಗಿಂದಾಗ್ಯೆ ಕಳುಹಿಸಿದ್ದೆವು. ಜನಸಾಮಾನ್ಯವಾದ ಪ್ರಕಟನಪತ್ರಿಕೆಗಳನ್ನು ಹಂಚಿದ್ದೆವು. ವೃತ್ತಾಂತಪತ್ರಿಕೆಗಳಲ್ಲಿ ಸಮ್ಮೇಳನದ ವಿಷಯವನ್ನು ಆಗಿಂದಾಗ್ಯೆ ಪ್ರಸಿದ್ಧಪಡಿಸಿದ್ದೆವು. ಸಮ್ಮೇಳನವು ನಡೆಯಬೇಕಾದ ತಾರೀಖು ಮತ್ತು ಕಾರ್ಯಕ್ರಮಗಳನ್ನೂ ತಿಳಿಸುವುದರೊಂದಿಗೆ ಆಹ್ವಾನಪತ್ರಗಳನ್ನು ಕಳುಹಿಸಬೇಕಾದ್ದು ಒಂದೇ ಉಳಿದಿತ್ತು. ಆಹ್ವಾನಕ್ಕೆ ಅರ್ಹರಾದ ವೈದ್ಯರು ಮತ್ತು ವೈದ್ಯಾಭಿಮಾನಿಗಳ ಹೆಸರುಗಳನ್ನೂ ಕಳುಹಿಸಿಕೊಡಬೇಕೆಂದೂ ನಮಗೆ ಪರಿಚಿತರಾದ ಮಹನೀಯರನ್ನು ಪ್ರಾರ್ಥಿಸಿದ್ದೆವು. ಅದರಂತೆ ಅನೇಕರು ಪಟ್ಟಿಗಳನ್ನು ಕಳಿಸಿದ್ದರು. ಅವರ ಪೈಕಿ ಕರಾಚಿಯ ಪಂಡಿತ್ ಸುಖಾರಾಮದಾಸ್ ಟಿ. ಓಝು ಮಹಾಶಯರು ಮತ್ತು ಕಾನ್ಪುರದ ಆಯುರ್ವೇದ ಮಹಾಮಂಡಲದ ಪ್ರಧಾನಮಂತ್ರಿಗಳೂ ಕಳಿಸಿದ ಪಟ್ಟಿಗಳು ಬಹು ಉಪಕಾರ ಮಾಡಿದವು. ಇಂಡಿಯಾ, ಬರ್ಮಾ ಮತ್ತು ಸಿಲೋನ್ ಪ್ರಾಂತಗಳಲ್ಲಿರುವ ಮುಖ್ಯಸ್ಥರ ಹೆಸರುಗಳು ಎಲ್ಲವೂ ಅದರಲ್ಲಿಯೇ ಸಿಕ್ಕಿದವು. ವಿಳಾಸವನ್ನು ಬರೆಯದೇ ಕೆಲವು ಆಹ್ವಾನಪತ್ರಿಕೆಗಳನ್ನು ವೈದ್ಯಕಲಾ ಶಾಲಾಧಿಕಾರಿಗಳಿಗೆ ಕಳಿಸಿ ಯಾರಿಗಾದರೂ ಆಹ್ವಾನವು ಆಕಸ್ಮಾತ್ ತಪ್ಪಿದ್ದರೆ ಅವರಲ್ಲಿಗೆ ಸೇರಿಸಬೇಕೆಂದು ಪ್ರಾರ್ಥನೆ ಮಾಡಿದ್ದೆವು. ಅನೇಕ ಕಾಗದಗಳು ವಿಳಾಸದ ದೋಷದಿಂದ ಹಿಂದಕ್ಕೆ ಬಂದವು. ನಾವು ಪೂರ್ಣ ದೃಷ್ಟಿ ಕೊಟ್ಟಾಗ್ಯೂ ಅನಿವಾರ್ಯವಾದಕಾರಣಗಳಿಂದ ಕೆಲವರಿಗೆ ಆಹ್ವಾನವು ತಪ್ಪಿರಬಹುದು. ಅವರು ನಮ್ಮನ್ನು ಕ್ಷಮಿಸುವರೆಂದು ಬೇಡುತ್ತೇನೆ.

ಅತಿಥಿಗಳ ಮತ್ತು ಅಧ್ಯಕ್ಷರ ಆಗಮನ.

ಬರಬೇಕಾದ ಪ್ರತಿನಿಧಿಗಳೂ ಮತ್ತು ಹೊರಗಿನ ಸ್ವಾಗತಮಂಡಲಿಯ ಸದಸ್ಯರೂ 26ನೇ ತಾರೀಖು ಸಾಯಂಕಾಲದೊಳಗೆ ಪ್ರಾಯಃ ಮೈಸೂರನ್ನು ಸೇರಿದ್ದರು. ನಮ್ಮ ಸೇವಾದಳವೂ ಮ|| ರಾ|| ಟಿ. ಕೃಷ್ಣಮೂರ್ತಿ ಎಂ.ಎ., ಬಿ.ಎಸ್.ಸಿ.

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

1930.



ಶ್ರೀ|| ಟಿ. ಕೃಷ್ಣಮೂರ್ತಿಗಳು, M.A., B.Sc.,
(ಇಂಟರ್ ಕಾಲೇಜು, ಮೈಸೂರು.)
ವಸತಿಶಾಖೆಯ ಸೆಕ್ರೆಟರಿಗಳು.

ಶ್ರೀ|| ಯಂ. ರಾಮಸ್ವಾಮಿಯವರು,
(ಸಿಟಿ ಮ್ಯು|| ವೈಸ್‌ಪ್ರೆಸಿಡೆಂಟ್, ಮೈಸೂರು.)
ವಸತಿಶಾಖೆಯ ಅಧ್ಯಕ್ಷರು.



ಶ್ರೀ|| ಡಾ|| ಎಲ್. ರಾಮಕೃಷ್ಣರಾವ್, L.M.S.
(ಗೌ|| ಆ|| ಕಾಲೇಜಿನ ಪ್ರಿನ್ಸಿಪಾಲರು.)
ಔಷಧೋಪಚಾರಶಾಖೆಯ ಅಧ್ಯಕ್ಷರು.

ಮತ್ತು ಮೆ|| ಎಂ. ವಿ. ಜಂಬುನಾಥ್, ಎಂ.ಎ., ಬಿ.ಎಸ್.ಸಿ. ರವರೂ 24 ನೇ ತಾರೀಖಿನಿಂದಲೇ ಮೈಸೂರಿಗೆ ಬರುವ ಪ್ರತಿಯೊಂದು ರೈಲುಗಾಡಿಗೂ ಹೋಗಿ ಬಂದಂಥ ಅತಿಥಿಗಳನ್ನು ಕಂಡು ಅವರ ಸಾಮಾನನ್ನೂ ಅವರನ್ನೂ ಸುಖವಾಗಿ ಅವರವರ ಕ್ಲ್ಪಪ್ತವಾಗಿದ್ದ ಸ್ಥಳಕ್ಕೆ ಸೇರಿಸಿದರು.

ಸಭಾಧ್ಯಕ್ಷರು 27 ನೇ ತಾರೀಖು ಪ್ರಾತಃಕಾಲ 6 ಘಂಟೆಗೆ ಮೈಸೂರು ಸೇರುವುದಾಗಿ ಮುಂಚೆ ವ್ಯವಸ್ಥೆಯಾಗಿತ್ತು. ಆದರೆ ಇದ್ದಕ್ಕೆ ಇದ್ದ ಹಾಗೆ 25 ನೇ ತಾರೀಖು ರಾತ್ರಿ 8 ಘಂಟೆಗೆ ಮದರಾಸಿನಿಂದ ಬಂದ ತಂತಿ ವರ್ತಮಾನದಿಂದ ಅವರು ಮಾರನೇ ದಿನ ಮಧ್ಯಾಹ್ನ 10 ಘಂಟೆಗೆ ದಯಮಾಡಿಸುವದಾಗಿ ತಿಳಿಯಿತು. ರಾಜಧಾನಿಯ ದೊಡ್ಡಮನುಷ್ಯರಿಗೂ, ಪ್ರತಿನಿಧಿಗಳಿಗೂ, ಸ್ವಾಗತಮಂಡಳಿಯವರಿಗೂ ಪ್ರತ್ಯೇಕವಾಗಿ ವರ್ತಮಾನ ಕಳಿಸಬೇಕಾಗಿತ್ತು. ಎಷ್ಟು ಸಿದ್ಧಮಾಡಿಕೊಂಡಿದ್ದಾಗ್ಯೂ ಇನ್ನೂ ಸಿದ್ಧಮಾಡಬೇಕಾದ ಅನೇಕ ಅಂಶಗಳು ನಮ್ಮ ದೃಷ್ಟಿಗೆ ಬೀಳುತ್ತಿದ್ದವು; ಮರುದಿನ ಬೆಳಿಗ್ಗೆ 7 ಘಂಟೆಯೊಳಗಾಗಿ ಅಧ್ಯಕ್ಷರ ಆಗಮನಕಾಲದ ಬದಲಾವಣೆಯ ವಿಷಯವನ್ನು ಅಚ್ಚುಹಾಕಿಸಿ ಒಬ್ಬೊಬ್ಬರಿಗೂ ನಮ್ಮ ಸೇವಾದಳದವರ ದ್ವಾರ ಕಳಿಸಿದ್ದಾಯಿತು.

ಮಧ್ಯಾಹ್ನ ಸುಮಾರು 12 ಘಂಟೆಗೆ ಮೈಸೂರು ರೈಲ್ವೆಸ್ಟೇಷನ್ ಅಂಗಳವು ಭರ್ತಿಯಾಯಿತು. ಭರತಖಂಡದ ಪ್ರಸಿದ್ಧರಾದ ಮಹಾಮಹೋಪಾಧ್ಯಾಯ ಗಣನಾಥಸೇನರವರ ಹೆಸರು ಕೇಳದವರ್‍ಯಾರು? ಆದರೂ ಎಷ್ಟೋ ಜನರಿಗೆ ಅದೇ ಪ್ರಥಮದರ್ಶನವಾಗಿತ್ತು. ಆದ್ದರಿಂದ ಜನರು ಕಿಕ್ಕಿರಿದಿದ್ದರು. ಸ್ವಾಗತಸಮಿತಿಯ ಸದಸ್ಯರೂ ಪ್ರತಿನಿಧಿಗಳೂ ಮತ್ತು ರಾಜಧಾನಿಯ ಪ್ರಮುಖರಾದ ದೊಡ್ಡಮನುಷ್ಯರೂ ಆ ಮಹನೀಯರಿಗೆ ಸ್ವಾಗತವನ್ನೀಯಲು ನೆರೆದಿದ್ದರು. ಕೆಲವೆಡೆಗಳಲ್ಲಿ ಒಬ್ಬೊರಿಗೊಬ್ಬರು ಪರಿಚಯಮಾಡಿಸೋಣ, ಇನ್ನು ಕೆಲವೆಡೆಗಳಲ್ಲಿ ಸ್ನೇಹಿತರ ಪರಸ್ಪರ ಸಲ್ಲಾಪ, ಮತ್ತೆ ಕೆಲವು ಕಡೆ ಎಷ್ಟೋ ಕಾಲದಿಂದ ಬೆರೆಯದಿದ್ದ ಸ್ನೇಹಿತರ ಆನಂದೋದ್ರೇಕ, ಎಲ್ಲಿ ನೋಡಿದರೂ ಸಮ್ಮೇಳನದ ಮಾತೇ. ಆಯುರ್ವೇದ ಪ್ರಶಂಸೆಯೇ ಈ ಸಂಭ್ರಮವನ್ನು ನೋಡಬೇಕಾದರೆ ಪುಣ್ಯಬೇಕೋ ಎಂಬಂತೆ ಇತ್ತು. ಸ್ವಾಗತಮಂಡಲಿಯ ಅಧ್ಯಕ್ಷರೂ, ಅವರ ಪ್ರಧಾನಮಂತ್ರಿಗಳೂ, ಸಹಕಾರಿಮಂತ್ರಿಗಳೂ, ಮತ್ತು ಸಹಾಯಕಮಂತ್ರಿಗಳೂ, ಇತರ ಸಮಿತಿಗಳ ಸದಸ್ಯರೂ ಎಲ್ಲರೂ ಸರಿಯಾಗಿ 12 ಗಂಟೆಗೆ ಸ್ಟೇಷನ್ ಅಂಗಳದೊಳಗೆ ಸೇರಿದ್ದರು.

ಮ. 12-15ಕ್ಕೆ ಸರಿಯಾಗಿ ಬೆಂಗಳೂರಿನಿಂದ ಮೆಯಿಲ್‌ಗಾಡಿಯು ಸ್ಟೇಷನ್ನೊಳಗೆ ಬಂದು ನಿಂತಿತು. ಜನರ ಕಣ್ಣುಗಳು ಬಹು ವೇಗದಿಂದ ಗಾಡಿಗಳ ಕಡೆ

ತಿರುಗಲಾರಂಭಿಸಿದವು. ಅಷ್ಟರಲ್ಲಿ ಒಂದು ಮೊದಲನೇ ತರಗತಿಯ ಗಾಡಿಯಿಂದ ಕೆಳಕ್ಕೆ ಇಳಿಯುತ್ತಿದ್ದ ಒಂದು ಗಂಭೀರವಾದ ವಂಗದೇಶದ ಸುಂದರರ್ತಿಯು ಕಣ್ಣಿಗೆ ಬಿತ್ತು. ಪ್ರಥಮದರ್ಶನದಲ್ಲಿಯೇ ಒಂದು ವಿಶೇಷವಾದ ವರ್ಚಸ್ಸು ಪ್ರೇಕ್ಷಕರ ಕಣ್ಣಿಗೆ ಹೊಳಿಯಿತು. ಆರ್ಯಭಾವವೂ, ವಿದ್ಯೆಯೂ, ಪ್ರತಿಭೆಯೂ, ದೇಶಭಕ್ತಿಯೂ, ಮುಖದಲ್ಲಿ ಒಂದೇ ಕಾಲದಲ್ಲಿ ಸುರಿಯುತ್ತಿದ್ದವು. ಸ್ವಾಗತ ಮಂಡಲಿಯ ಅಧ್ಯಕ್ಷರು ಅವರಿಗೆ ಹಾರ ತುರಾಯಿಗಳನ್ನು ಕೊಡಲು ಪರಸ್ಪರ ಪರಿಚಯಗಳಿಗೆ ಪ್ರಾರಂಭವಾಯಿತು. ಅನಂತರ ಹೊರಗೆ ತಂದಿದ್ದ ಮೋಟಾರಿನಲ್ಲಿ ಶ್ರೀ ಗಣನಾಥಸೇನರೂ ಸ್ವಾಗತಮಂಡಲಿಯ ಅಧ್ಯಕ್ಷರೂ, ಪ್ರಧಾನಮಂತ್ರಿಗ ಳೊಡನೆ ಪದ್ಮಾಲಯದಲ್ಲಿ ಮಾಡಿದ್ದ ಬಿಡಾರವನ್ನು ಸೇರಿದರು.

ಅವರು ಮೈಸೂರು ಸೇರುವ ಕಾಲವು ಬದಲಾಯಿಸಿದ್ದರಿಂದ ಅಧ್ಯಕ್ಷರವ ರಿಗೆ ಕೆಲವು ಅನಾನುಕೂಲಗಳಿದ್ದಿರಬಹುದು. ಆದರೆ ಅವರು ಒಂದು ದಿನ ಮುಂಚಿತವಾಗಿಯೇ ದಯಮಾಡಿದ್ದರಿಂದ ಸಮ್ಮೇಳನದ ಕಾರ್ಯದ ವಿಷಯದಲ್ಲಿ ಅವರು ನಮಗೆ ಉತ್ತಮವಾದ ಕೆಲವು ಸಲಹೆಗಳನ್ನು ಕೊಡಲು ಅವಕಾಶವಾಯಿತು.

ಮಿಕ್ಕ ಎಲ್ಲಾ ಶಾಖಾಧ್ಯಕ್ಷರುಗಳೂ, ಪ್ರಮುಖರಾದ ಅತಿಥಿಗಳೂ, ಮಹಾ ಮಂಡಲದ ಮಾಜಿ ಅಧ್ಯಕ್ಷರುಗಳೂ, ಸೆಕ್ರಿಟರಿಗಳೂ, ಪ್ರತಿನಿಧಿಗಳೂ, ನಾನಾ ಭಾಗಗಳಿಂದಲೂ ಸಕಾಲದಲ್ಲಿ ದಯಮಾಡಿಸಿ ನಮ್ಮ ಅತಿಥಿಗಳಾದರು.

ಸಮ್ಮೇಳನದ ಪ್ರಾರಂಭೋತ್ಸವ.

ಮೈಸೂರುಪಟ್ಟಣದ ಪೌರಸಭೆಯವರ ಅನುಮತಿಯಿಂದ ಸಮ್ಮೇಳನದ ಪ್ರಾರಂಭೋತ್ಸವವು ಟೌನ್‌ಹಾಲಿನಲ್ಲಿ ನಡೆಯಿಸಲ್ಪಟ್ಟಿತು. ಆ ಕಟ್ಟಡವು ಸಹಜ ವಾಗಿಯೇ ಬಹಳ ಸುಂದರ. ತಳಿರುತೋರಣವೇ ಮೊದಲಾದ ಅಲಂಕಾರಗಳಿಂದ ಇನ್ನೂ ಸುಂದರವಾಗಿ ಕಾಣಿಸಿತು. ಕರಾಚಿ ನಿವಾಸಿಗಳಾದ ವೈದ್ಯರಾಜ ಸುಖಾ ರಾಮದಾಸ ಟಿ. ಓಝುಪಂಡಿತರು ಕಳಿಸಿಕೊಟ್ಟಿದ್ದ ಆಯುರ್ವೇದ ಮುಖ್ಯತತ್ವಗಳ ನ್ನೊಳಗೊಂಡಿದ್ದ ಬಟ್ಟೆಯ ಬರವಣಿಗೆಗಳನ್ನು ಸಭಾಮಂಟಪದಲ್ಲಿ ಅಲ್ಲಲ್ಲಿ ತಗಲು ಹಾಕಿದ್ದೆವು. ಇದರಿಂದ ಅಲಂಕಾರವು ಇನ್ನೂ ಹೆಚ್ಚಾಯಿತು. ಸಭಾಪ್ರಾರಂ ಭಕ್ಕೆ ಕ್ಲುಪ್ತಕಾಲಕ್ಕೆ ಮುಂಚೆಯೇ ಸ್ವಾಗತಮಂಡಲಿಯ ಸದಸ್ಯರಾದ ಸ್ಥಳಪರ ಸ್ಥಳದವರೆಲ್ಲರೂ, ಪ್ರತಿನಿಧಿಗಳೂ, ಸ್ಥಳೀಯ ಮುಖ್ಯಾಧಿಕಾರಿಗಳೂ ಅನೇಕ ಪುರ ಪ್ರಮುಖರೂ, ಮಹಿಳೆಯರೂ, ವಿದ್ಯಾರ್ಥಿಗಳೂ ನಮ್ಮ ಆಹ್ವಾನವನ್ನು ಮಾನ್ಯ ಮಾಡಿ ದಯಮಾಡಿಸಿದ್ದುದರಿಂದ ಸಭಾಮಂಟಪವು ಕಿಕ್ಕಿರಿಯುತ್ತಿದ್ದಿತು.

27 ನೇ ತಾರೀಖಿನ ಬೆಳಿಗ್ಗೆ ಸುಮಾರು 8 ಘಂಟೆಗೆ ಸಮ್ಮೇಳನಾಧ್ಯಕ್ಷರು ಸ್ವಾಗತಮಂಡಲಿಯ ಅಧ್ಯಕ್ಷರೊಡನೆಯೂ ಶ್ರೀ|| ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾಸಾಹೇಬರವರೊಡನೆಯೂ ಕೂಡಿ ತಮ್ಮ ಬಿಡಾರವಾದ ಪದ್ಮಾಲಯದಿಂದ ಅಲಂಕೃತವಾದ ಮೋಟಾರಿನಲ್ಲಿ ಹೊರಟು ಹಾಲಿಗೆ ದಯಮಾಡಿದರು. ಸಭಾ ದ್ವಾರದಲ್ಲಿ ಸ್ವಾಗತ ಸಭಾಧ್ಯಕ್ಷರೂ, ಮೈಸೂರು ಡೆಪ್ಯುಟಿ ಕಮಿಷನರ್ ಸಾಹೇಬರೂ ಮತ್ತು ಪೌರಸಭಾಧ್ಯಕ್ಷರೂ, ಮಹಾಮಹೋಪಾಧ್ಯಾಯರಿಗೆ ಸ್ವಾಗತವನ್ನು ನೀಡಿ ಸಭೆಯೊಳಗೆ ಪ್ರವೇಶಮಾಡಿಸಿದರು. ಆ ಕಾಲದಲ್ಲಿ ಅರಮನೆಯ ಬ್ಯಾಂಡಿನವರು ಮಂಗಳವಾದ್ಯವನ್ನು ಬಾರಿಸಲು ಪ್ರಾರಂಭಿಸಿದರು.

ಸಭೆಯು ಪ್ರಾ|| 8-30 ಘಂಟೆಗೆ ಸರಿಯಾಗಿ ಪ್ರಾರಂಭವಾಯಿತು. ಮಹಾರಾಣಿಯವರ ಮಿಡಲ್‌ಸ್ಕೂಲ್ ಬಾಲಕಿಯರು ಹಿಂದಿಯಲ್ಲಿ ಸ್ವಾಗತವನ್ನು ಗಾನಮಾಡಿದರು. ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಮಂಗಳಗಳು ಹಾಡಲ್ಪಟ್ಟವು. ಮೈಸೂರಿನ ವೃದ್ಧ ವೈದ್ಯರಾದ **ಶ್ರೀಮಾನ್ ಲೋಕಸೇವಾನಿರತ ಅಂಬಳೇ ಅಣ್ಣಯ್ಯಪಂಡಿತರವರು** ರಾಜಕಾರ್ಯಪ್ರವೀಣ **ಶ್ರೀ|| ಪಿ. ಜಿ. ಡಿಸೌಜಾ ಸಾಹೇಬರವರನ್ನು** ಸಮ್ಮೇಳನದ ಪ್ರಾರಂಭೋತ್ಸವವನ್ನು ನೆರವೇರಿಸುವಂತೆ ಕೋರಿದರು. ಸಭಿಕರ ಆನಂದಸೂಚಕವಾದ ಕರತಳಧ್ವನಿಗಳ ಮಧ್ಯದಲ್ಲಿ **ಶ್ರೀ|| ಡಿಸೌಜಾ ಸಾಹೇಬರವರು** ಎದ್ದು ತಮ್ಮ ಅಮೋಘವಾದ ಭಾಷಣವನ್ನು ಮಾಡಿ ಸಮ್ಮೇಳನದ ಕಾರ್ಯೋದ್ಘಾಟನ ಮಾಡಿದರು.

ಅನಂತರ ಸ್ವಾಗತಮಂಡಳಿಯ ಅಧ್ಯಕ್ಷರಾದ **ಶ್ರೀಮಾನ್ ಲೋಕಹಿತೈಷಿ ಹೆಚ್. ನಂಜುಂಡರಾಜೇಅರಸಿನವರು** ಭಾಷಣಮಾಡಿ ಸಭೆಗೆ ಸ್ವಾಗತವನ್ನು ಬಯಸಿ ಮಹಾಮಹೋಪಾಧ್ಯಾಯ **ಕವಿರಾಜ್ ಗಣನಾಥಸೇನ್ ಶರ್ಮ ಸರಸ್ವತಿ,** ಎಂ.ಎ., ಎಲ್. ಎಂ. ಎಸ್. ಯವರನ್ನು ಅಧ್ಯಕ್ಷಪದವಿಯನ್ನು ಅಲಂಕರಿಸಲು ಪ್ರಾರ್ಥಿಸಿದರು.

ಈ ಪ್ರಾರ್ಥನೆಯನ್ನು ಮದರಾಸಿನ ಭಾರತೀಯ ವೈದ್ಯಕಲಾಶಾಲೆಯ ಅಧ್ಯಕ್ಷರಾದ ಮ|| ರಾ|| **ಕ್ಯಾಪ್ಟನ್ ಜಿ. ಶ್ರೀನಿವಾಸಮೂರ್ತಿ,** ಬಿ.ಎ., ಬಿ.ಎಲ್., ಎಂ. ಬಿ. ಸಿ. ಎಂ. ಯವರು ಕನ್ನಡದಲ್ಲಿಯೂ, ಮದ್ರಾಸ್ ಆಂಧ್ರ ಆಯುರ್ವೇದ ಔಷಧಾಲಯದ ಯಜಮಾನರಾದ ಶ್ರೀಯುತ **ಡಾ|| ಎ. ಲಕ್ಷ್ಮೀಪತಿ,** ಬಿ.ಎ., ಎಂ. ಬಿ. ಸಿ. ಎಂ. ಯವರು ತೆಲಗುನಲ್ಲಿಯೂ, ಆಯುರ್ವೇದ

ಮಹಾಮಂಡಲದ ಕಾರ್ಯದರ್ಶಿಗಳಾಗಿದ್ದ ಶ್ರೀಮಾನ್ ಪಂ|| ದೊರಸಾಮಿ ಅಯ್ಯಂಗಾರ್ಯರವರು ತಮಿಳಿನಲ್ಲಿಯೂ, ಮಾಜಿ ಮಹಾಮಂಡಲದ ಅಧ್ಯಕ್ಷರಾಗಿದ್ದ ಪೂನಾ ನಿವಾಸಿಗಳಾದ ಶ್ರೀಯುತ ವೈದ್ಯಪಂಚಾನನ ಕೃಷ್ಣಶಾಸ್ತ್ರಿ ಕವಡೆ, ಬಿ.ಎ., ಯವರು ಸಂಸ್ಕೃತಭಾಷೆಯಲ್ಲಿಯೂ, ಜಬ್ಬಲ್‌ಪೂರಿನ ನಿವಾಸಿಗಳಾದ ವೈದ್ಯಪಂಚಾನನ ಬಿ. ವಿ. ಡಿಗ್ವೇಕರ್, ಎಂ.ಎ., ಎಲ್‌ಎಲ್.ಬಿ., ಎಂ. ಎಸ್. ಸಿ. ಯವರು ಮರಾಠಿಯಲ್ಲಿಯೂ, ಬರೋಡಾ ನಿವಾಸಿಗಳಾದ ವೈದ್ಯ ಚೂನೀಲಾಲ್ ರೇವಾಶಂಕರ್ ಪಾಂಡ್ಯರವರು ಗುಜರಾತಿಭಾಷೆಯಲ್ಲಿಯೂ, ಲಾಹೋರಿನ ಪಂ|| ಶಿವಶರ್ಮರವರು ಹಿಂದೀಭಾಷೆಯಲ್ಲಿಯೂ, ಸ್ವಾಗತಾಧ್ಯಕ್ಷರ ಆಶಯವನ್ನು ಸಮರ್ಥಿಸಿದರು. ಅನಂತರ ನೆರೆದಿದ್ದ ಸಭಿಕರೆಲ್ಲರೂ ಈ ವಿಷಯದಲ್ಲಿ ಪೂರ್ಣವಾದ ಅನುಮತಿಯನ್ನು ಕೊಡಲು ಶ್ರೀಮಹಾಮಹೋಪಾಧ್ಯಾಯರು ಅಧ್ಯಕ್ಷತ್ವವನ್ನು ವಹಿಸಿದರು.

ಈ ಕೆಳಗೆ ಹೇಳುವ ದೊಡ್ಡಮನುಷ್ಯರುಗಳು ಸಭೆಗೆ ಬರಲು ಸಾಧ್ಯವಿಲ್ಲದೆ ತಮ್ಮ ಅನುತಾಪವನ್ನು ತೋರಿಸುತ್ತಾ ಸಭಾಕಾರ್ಯಕ್ಕೆ ಜಯವನ್ನು ಹಾರೈಸುವ ತಂತೀ ವರ್ತಮಾನಗಳನ್ನೂ, ಪತ್ರಗಳನ್ನೂ ಬರೆದರು.

1. ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್,
ಕೆ.ಟಿ., ಓ. ಬಿ. ಇ., ಸಿ. ಐ. ಇ.
ಮೈಸೂರಿನ ದಿವಾನ್ ಸಾಹೇಬರವರು, (ಕ್ಯಾಂಪ್-ಲಂಡನ್.)
2. ರಾಜಸಭಾಭೂಷಣ ಶ್ರೀಯುತ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರು,
ಎಂ.ಎ., ಬಿ.ಎಲ್.,
ಮಾಜಿ ಉಪಸಚಿವರು, ಬೆಂಗಳೂರು.
3. ಶ್ರೀಯುತ ಲಕ್ಷ್ಮೀಶಂಕರ ರಾಧಾಕೃಷ್ಣಶಾಸ್ತ್ರಿ,
ಪ್ರಿನ್ಸಿಪಾಲ್, ಯು. ಪಿ. ಆಯುರ್ವೇದಿಕ್ ಕಾಲೇಜು, ಪಾಟ್ನ.
4. ,, ಅಮೃತಲಾಲ್‌ದಾಸ್, ಕಾವ್ಯತೀರ್ಥ ಮತ್ತು ಕವಿಭೂಷಣ,
ಪ್ರಿನ್ಸಿಪಾಲ್, ಅಷ್ಟಾಂಗ ಆಯುರ್ವೇದ ವೈದ್ಯಾಲಯ,
ರಾಜಾಧಿ ನರೇಂದ್ರ ಸ್ಟ್ರೀಟ್, ಕಲ್ಕತ್ತಾ.
5. ,, ತಾಹಿಲ್‌ರಾಂ ಗಿರಿಧರ್‌ದಾಸ್,
110, ನಾಗದೇವೀ ಸ್ಟ್ರೀಟ್, ಬೊಂಬಾಯಿ.

6. ಶ್ರೀಯುತ ಕವಿರಾಜ್ ರಾಮೋಲಿ ಮಲ್ಲಿಕ್, ಪ್ರಿನ್ಸಿಪಾಲ್,
ಮಹಾರಾಜಾ ಕಾಶಿಂ ಬಜಾರ್ ಗೋವಿಂದ ಸೌಂದರಿ
ಫ್ರೀ ಆಯುರ್ವೇದ್ ಕಾಲೇಜ್, ಕಲ್ಕತ್ತಾ.

7. „ ನೋರಿ ಸೂರ್ಯನಾರಾಯಣಶಾಸ್ತ್ರಿಗಳು, ಪ್ರಿನ್ಸಿಪಾಲ್,
ಶ್ರೀ ವೆಂಕಟೇಶ್ವರ ಆಯುರ್ವೇದ ಕಲಾಶಾಲಾ, ಬೆಜ್ವಾಡ.

8. „ ಎಂ. ಕೆ. ನಾರಾಯಣಪಿಳ್ಳೆ, ರಿಟೈರ್ಡ್ಡ ಚೀಫ್ ಫಿಸಿಷಿಯನ್,
ಗೌ|| ಆಯುರ್ವೇದಿಕ್ ಹಾಸ್ಪಿಟಲ್, ತ್ರಿವೇಂಡ್ರಂ.

9. „ ಎಸ್. ವೆಂಕಟಕೃಷ್ಣಯ್ಯ, ಬಿ.ಎ., ಬಿ.ಎಲ್.,
ಪ್ರೆಸಿಡೆಂಟ್, ಮೈಸೂರು ಪ್ರೊವಿನ್ಷಿಯಲ್,
ಕೋ-ಆಪರೇಟಿವ್ ಸೊಸೈಟಿ, ಬೆಂಗಳೂರು.

10. „ ವೈದ್ಯರಾಜ ಫತ್ತೇಸಿಂಗ್‌ಜೀ ವಿಭಾಜೀ ಜಾದೇಜಾ, ಕರಾಚಿ.

11. ಡಾಕ್ಟರ್ ಕೆ. ಆರ್. ಕಿಣಿ, ಎಂ. ಬಿ. ಬಿ. ಎಸ್. ಪ್ರೊಪ್ರೈಟರ್,
ಕಿಣಿ ಡಿಸ್ಪೆನ್ಸರಿ, ಮಂಗಳೂರು.

12. ಶ್ರೀಯುತ ಕೆ. ಎ. ರಾಘವನ್‌ಪಿಳ್ಳೆ, ತ್ರಿವೇಂಡ್ರಂ.

13. „ ತ್ರಯಂಬಕ ರಾಮಚಂದ್ರ ಆಪ್ಟೆ, ಪೂನಾ.

14. ಶ್ರೀ ಜಗದ್ಗುರು ರಂಭಾಪುರೀ ಮಹಾಸಂಸ್ಥಾನ, ಬಾಳೆಹೊನ್ನೂರು.

15. ಶ್ರೀಯುತ ವೈದ್ಯ ಈಶ್ವರದಾಸ್ ಚುಲಾರಾಂ ಶರ್ಮ,
ಮೀರ್‌ಪುರ ಕಾಸ್, ಸಿಂದ್.

16. „ ಕವಿರಾಜ್ ಪ್ರತಾಪಸಿಂಹ,
ಹಿಂದೂ ವಿಶ್ವವಿದ್ಯಾಲಯ, ಬನಾರಸ್.

ಈ ಕೆಳಗೆ ಕಂಡ ಮಹನೀಯರು ತಂತೀಮುಖೇಣ ತಮ್ಮ ಸಹಾನುಭೂತಿಯನ್ನು ಸೂಚಿಸಿರುತ್ತಾರೆ.

1. ಶ್ರೀಯುತ ಜ್ಞಾನೇಂದ್ರನಾಥಸೇನ್, ಹರಿದ್ವಾರ.
2. „ ಪಿ. ಎಸ್. ವಾರಿಯರ್, ಕೊಟ್ಟಕಲ್, ಮಲಬಾರ್.
3. „ ರಾಜಿಪಾಂಡ್ಯ ಹೀರ್ಜಿ ಜೀವಾರಾಂ, ಬೊಂಬಾಯಿ.
4. „ ರಾಜವೈದ್ಯ ರಾಮೇಶ್ವರಶಾಸ್ತ್ರಿ, ಗ್ವಾಲಿಯರ್.
5. „ ವಿದ್ವಾನ್ ಕೆ. ಶೇಷಶಾಸ್ತ್ರಿಗಳು, ಶೃಂಗೇರಿ.
6. „ ನರೇಂದ್ರ ಕಾವ್ಯತೀರ್ಥ, ಕೋಮಿಲ, ಅಸ್ಸಾಂ.

7. ಶ್ರೀಯುತ ಹರಿಬಾಬ್ ಶರ್ಮ, ರಂಗೂನ್.
8. „ ಕವಿರಾಜ್ ಪೂರ್ಣಚಂದ್ರಶಾಸ್ತ್ರಿ, ಬಲೋಟ್ರ, ಜೋದ್‌ಪುರ್.
9. „ ವೈದ್ಯರಾಜ್ ಅನಂತಯಜ್ಞೇಶ್ವರ ಜೋಷಿ, ಪೂನಾ.
10. „ ಲಕ್ಷ್ಮೀ ರಾಮಸ್ವಾಮಿ, ಜಯಪುರ.
11. „ ರಘುವೀರ್ ದಯಾಳ್ ಭಟ್, ಪೀಜಾಬಾದ್, ಬಂಗಾಳಾ.
12. „ ವೈದ್ಯಶಾಸ್ತ್ರಿ ಸೋಹನ್‌ಲಾಲ್ ನಂದ ಕಿಸೋರಿ, ಮುಟ್ರ.
13. „ ಕವಿರಾಜ್ ಪೂರ್ಣಚಂದ್ ಭಟ್, ಪೂರಿ.
14. „ ಪಂಡಿತ್ ಎಸ್. ಮಂಜಯ್ಯ, ತೀರ್ಥಹಳ್ಳಿ.
15. ಡಾಕ್ಟರ್ ಪೋಪಟ್ ಪ್ರಭುರಾಂ, ಬೊಂಬಾಯಿ.
16. ಶ್ರೀಯುತ ದಾಮೋದರ್‌ದಾಸ್, ವೈದ್ಯ, ಡೆಲ್ಲಿ.
17. „ ಬನ್ವಾರಿಲಾಲ್, ಡೆಲ್ಲಿ.
18. „ ವೈದ್ಯ ಪ್ರಸಾದ್ಲ ಜೀ, ಕಾನ್ ಪುರ.
19. „ ರಾಜವೈದ್ಯ ಶರ್ಮ, ಅಹಮ್ಮದಾಬಾದ್.
20. „ ಕೆ. ಟಿ. ಸೆಟ್ಟಿ, ಕಡೂರು.
21. „ ವೈದ್ಯ ವಾಸುದೇವ ಮೂಲಶಂಕರ್, ಅಹಮ್ಮದಾಬಾದ್.
22. ದಿ ಸೆಕ್ರೆಟರಿ, ಬಾಂಬೆ ವರ್ಣಾಶ್ರಮಸಂಘ, ಬೊಂಬಾಯಿ.
23. ದಿ ಮಹಾರಾಷ್ಟ್ರ ವೈದ್ಯಸಂಘ, ಬೊಂಬಾಯಿ.
24. ಶ್ರೀಯುತ ವೈದ್ಯರಾಜ್ ಶಿವದಯಾಳ್ ಸಾಹುಗುಪ್ತಮಿಸ್ರಿಕ್, ಬಂಗಾಳ.
25. „ ರಸವೈದ್ಯ ಮಣಿಶಂಕರ್ ಮೋತೀರಾಂ,
ವೈದ್ಯಸಭಾ, ಅಹಮ್ಮದಾಬಾದ್.
26. „ ಸುರೇಂದ್ರಮೋಹನ್, ಲಾಹೋರು.
27. „ ಜಾಗಲ್ ಕಿಸೋರಶಾಸ್ತ್ರಿ, ಕಾನ್‌ಪುರಾ.
28. „ ವೈದ್ಯವಿಶಾರದ ಹಿರ್ಲೇಕರ್, ಅಮರಾವತಿ, ಯು. ಪಿ.
29. „ ಕೆ. ಎ. ವೆಂಕಟಾಚಲಶಾಸ್ತ್ರಿ, ಶಿವಗಂಗ.
30. „ ರಾವಣಾಧ್ಯ, ಧ್ರಂಗಾದ್ರ, ಕಾಥೀವಾರ್.
31. „ ವೈದ್ಯ ಪರಮೇಶ್ವರಪಿಳ್ಳೆ, ತ್ರಿವೆಂಡ್ರಂ.

೨೧ ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦.

ಸ್ಕೌಟ್ ಮತ್ತು ರೋವರುಗಳ ಸ್ವಯಂಸೇವಕರ ಮತ್ತು ಇತರ ಸಹಾಯಕರುಗಳ ಸಮೂಹ.

(ಸಮ್ಮೇಳನದ ಅಧ್ಯಕ್ಷರ ಮತ್ತು ಸ್ವಾಗತಾಧ್ಯಕ್ಷರ ಸಮೇತ.)

೧ನೆಯ ಸಾಲು (ಎಡಭಾಗದಿಂದ ಬಲಕ್ಕೆ)

ನೆಲ.

ಶ್ರೀಯುತರುಗಳಾದ 1. ಎಂ. ಆರ್. ವೆಂಕಟರಾಮಾಪಂಡಿತರು, ಗೌ, ಆಯುರ್ವೇದಿಕ್ ಆಸ್ಪತ್ರೆ, ಮೈಸೂರು. (ಫಿಸಿಷಿಯನ್ ಇನ್ ಚಾರ್ಜ್, ಕಾನ್ ಫರೆನ್ಸಿನ ಔಷಧೋಪಚಾರಶಾಖಾ). 2. ಚನ್ನಕೇಶವಶಾಸ್ತ್ರೀ, ವಿದ್ಯಾರ್ಥಿ, ಆ. ಕಾಲೇಜು. 3. ವಿ. ಆರ್. ಗುರುರಾಜಾಚಾರ್‍ಯ, ಎಂ. ಸಿ. ರೋವರ್. 4. ಹೆಚ್. ಎಸ್, ಸುಬ್ಬರಾವ್, ಎಂ. ಸಿ. ರೋವರ್. 5. ಎಂ. ಸಿ. ಶಂಕರಪಂಡಿತ್, ಆ. ಕಾಲೇಜು 6. ಎ. ವಿ. ಶ್ರೀಕಂಠಪಂಡಿತ್, ಎಂ. ಸಿ. ರೋವರ್. 7. ಬಿ. ಎಸ್. ಲಕ್ಷ್ಮೀಪತಯ್ಯ, ಎಂ. ಸಿ. ರೋವರ್. 8. ಎನ್. ಎಸ್. ಕೃಷ್ಣಮೂರ್ತಿ, ಬಿ.ಎ., ಎಂ ಸಿ ರೋವರ್. 9. ರಾಮಸ್ವಾಮಿ, ಎಂ. ಸಿ. ರೋವರ್. 10. ಎಂ. ಎಸ್. ವಾಸುದೇವರಾವ್. ಎಂ. ಸಿ. ರೋವರ್. 11. ಸೋಮಸುಂದರರಾವ್, ಎಂ. ಸಿ. ರೋವರ್. 12. ನರಸಿಂಹಯ್ಯ, ಎಂ. ಸಿ. ರೋವರ್. 13. ಬಸಪ್ಪಾ, ಎಂ ಸಿ. ರೋವರ್. 14. ಬ್ರಹ್ಮಣ್ಯ, ವಿದ್ಯಾರ್ಥಿ.

೨ನೆಯ ಸಾಲು (ಎಡಭಾಗದಿಂದ ಬಲಕ್ಕೆ)

ಕೂತಿರುವವರು.

ಶ್ರೀಯುತರುಗಳಾದ 1. ಚಂದ್ರಭಾನ್ ಸಿಂಗ್‌ರವರು, (ಪ್ರೊಪ್ರೈಟರ್, ಶ್ರೀ ಸತ್ಯನಾರಾಯಣ ವೈದ್ಯಶಾಲಾ, ಮೈಸೂರು.) 2. ಎಂ. ವಿ. ವೆಂಕಟಸುಬ್ಬರಾವ್, (ಕಾನ್ ಫರೆನ್ಸಿನ ಆಫೀಸ್ ಕ್ಲಾರ್ಕ್.) 3. ಚನ್ನಗಿರಿಯಪ್ಪ, (ಗೌ. ಆ. ಆಸ್ಪತ್ರೆ.) 4. ಆಯುರ್ವೇದವಿದ್ವಾನ್ ವಿ. ಬಿಳಿಗಿರಿ ಅಯ್ಯಂಗಾರ್‍ಯ, (ಗೌ. ಆ. ಆಸ್ಪತ್ರೆ.) 5. ಆ. ವಿದ್ವಾನ್ ಗೋಪಾಲಕೃಷ್ಣಾವಧಾನಿಗಳು, (ಪ್ರೊಪ್ರೈಟರು, ಗಣೇಶವೈದ್ಯಶಾಲಾ). 6. ಟಿ. ಕೃಷ್ಣಮೂರ್ತಿ, M.A.,B.Sc., (ಎಂ. ಸಿ, ರೋವರು ಮತ್ತು ಲೆಕ್ಚರರು). 7. ಬಿ ಎಸ್. ರಾಮಕೃಷ್ಣಯ್ಯ, (ಅ. ಸೆಕ್ರೆಟರಿ, ಸಿಟಿ ಕೋ.ಆ. ಬ್ಯಾಂಕು, ಮೈಸೂರು.) 8. ಪಿ. ಸುಬ್ಬನರಸಿಂಹಯ್ಯನವರು, M.Sc. (ಎಂ.ಸಿ. ರೋವರು ಮತ್ತು ಲೆಕ್ಚರರು.) 9. ಜಿ. ಹನುಮಂತರಾಯರು, M.A. (ಎಂ. ಸಿ ರೋವರು ಮತ್ತು ಲೆಕ್ಚರರು.) 10. ಎಂ. ಲಕ್ಷ್ಮೀನರಸಿಂಹಯ್ಯ, M.A. (ಮಹಾರಾಜಾ ಕಾಲೇಜು ಲೆಕ್ಚರರು.) 11. ಸಾಹುಕಾರ್ ಧರ್ಮಪ್ರಕಾಶ ಡಿ. ಬನುಮಯ್ಯನವರು, (ಆರ್. ಸಿ. ಫೈನಾನ್ಸಿನ ಕಮಿಟಿಯ ಛೇರ್ಮನ್.) 12. ಮಹಾಮಹೋಪಾಧ್ಯಾಯ ಕವಿರಾಜ ಗಣನಾಥಸೇನ್‌ರವರು, M.A., L.M.S. ವಿದ್ಯಾಸರಸ್ವತಿ, ಅಧ್ಯಕ್ಷರು. 13. ಲೋಕಹಿತೈಷಿ **ಹೆಚ್. ನಂಜುಂಡರಾಜೇ ಅರಸಿನವರು,** (ಸ್ವಾಗತಸಮಿತಿಯ ಛೇರ್ಮನ್‌ರವರು.) 14. ಭಿಷಕ್‌ಚೂಡಾಮಣಿ **ಡಾ॥ ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು,** L.M.P. (ಆ. ಜನರಲ್ ಸೆಕ್ರೆಟರಿಯವರು.) 15. ಎನ್. ನಾಗೇಶರಾಯರವರು, M.A. (ಪ್ರದರ್ಶನಶಾಖೆಯ ಸೆಕ್ರೆಟರಿಯವರು.) 16. ಕವಿರಾಜ್ ಕೆ. ಚಿಟ್ಟಯಣ್ಣ, L.A.M.S. (ಗೌ. ಆ. ಆಸ್ಪತ್ರೆ.) 17. ವೈದ್ಯಶಾಸ್ತ್ರಿ ಕೆ. ಎನ್. ರಾಮಯ್ಯರ್‌ರವರು, (ಗೌ. ಆ. ಆಸ್ಪತ್ರೆ.) 18. ಎಸ್. ವಿ. ಕೃಷ್ಣಸ್ವಾಮಿ ಅಯ್ಯಂಗಾರ್‍ರವರು, M.A.,B.L. ಮೈಸೂರು ಇಂಟರ್‌ಮೀಡಿಯೇಟ್ ಕಾಲೇಜಿನ ಸೂಪರಿಂಟೆಂಡೆಂಟರವರು, (ರೋವರುಗಳ ಮುಖ್ಯಾಧಿಕಾರಿಗಳು ಮತ್ತು ವಾಲಂಟಿಯರುಗಳ ಕೋರಿನ ಛೇರ್ಮನ್‌ರವರು.) 19. ಶ್ರೀಪಾದಾಚಾರ್‍ಯರವರು, M.A. ಗೌ. ಹೈಸ್ಕೂಲು (ಅಸಿಸ್ಟೆಂಟ್ ಸೆಕ್ರೆಟರಿಯವರು) 20. ಎಂ. ವಿ. ಜಂಬುನಾಥನ್‌ರವರು, M.A.,B.Sc. ಇಂಟರ್‌ಮೀಡಿಯೇಟ್ ಕಾಲೇಜಿನ ಟ್ಯೂಟರವರು, (ವಾಲಂಟಿಯರುಗಳ ಕ್ಯಾಪ್ಟನ್.) 21. ಸ್ವಾಮಿದೇವಾನಂದರಸವೈದ್ಯ, ಕರಾಚಿ. 22. ಸುಬ್ರಹ್ಮಣ್ಯಯ್ಯನವರು, B.Sc. (ಪ್ರೆಸ್ ಕರೆಸ್ಪಾಂಡೆಂಟ್.) 23. ಬಿ. ಎಸ್. ಸುಬ್ರಾಯರು, (ಪ್ರೆಸ್ ಕರೆಸ್ಪಾಂಡೆಂಟ್.) ಎನ್. ನಾಗೇಶರಾಯರು, ನಂಜನಗೂಡು.

೩ನೆಯ ಸಾಲು (ಎಡಭಾಗದಿಂದ ಬಲಕ್ಕೆ.)
ನಿಂತಿರುವವರು.

ಶ್ರೀಯುತರುಗಳಾದ 1. ಕೆ. ಎಸ್. ವೆಂಕಟಸುಬ್ಬಯ್ B.A., L.T. (ಗೌ. ಟ್ರೆನಿಂಗ್ ಕಾಲೇಜು, ಮೈಸೂರು.) 2. ಎಂ. ಸಿ. ರೋವರ್, 3. ಸದಾಶಿವಶಾಸ್ತ್ರಿಗಳು, ಜಮ್ನಾಷಿಯಂ ಇಕ್ಸ್ಪೆಕ್ಟರ್, (ಸಮ್ಮೇಳನದ ಆರೋಗ್ಯಶಾಖಾ.) 4. ಕೆ. ಅನಂತರಾಮಯ್ಯನವರು M. A. (ಎಂ.ಸಿ. ರೋವರು ಮತ್ತು ಅ. ಪ್ರೊಫೆಸರು.) 5. ಉಪಾಧ್ಯಾಯ, (ಗೌ. ಆ. ಕಾಲೇಜು.) 6. ಶ್ರೀಕಂಠಪಂಡಿತರು. 7. ಶಿವಪ್ಪ, ವಿದ್ಯಾರ್ಥಿ. 8. ನರಸಿಂಹಯ್ಯ, (ಗೌ. ಆ. ಕಾಲೇಜು.) 9. ಕೆ. ನಾಗರಾಜಾಚಾರ್ಯರವರು 10 ಎಂ. ರಾಮಸ್ವಾಮಿ, (ಗೌ. ಆ. ಕಾಲೇಜು.) 11. ಆರ್. ವಿ ಸುಬ್ರಹ್ಮಣ್ಯಂ, (ಗೌ. ಆ. ಕಾಲೇಜು.) 12. ಎಂ ವಿ ನಂಜುಂಡಶಾಸ್ತ್ರಿ, (ಗೌ. ಆ. ಕಾಲೇಜು.) 13. ಗುರುರಾಜರಾವ್, (ಎಂ. ಸಿ. ರೋವರು.) 14. ರಾಜಶೇಖರಸೆಟ್ಟಿ, (ಎಂ. ಸಿ. ರೋವರು.) 15. ಸಿದಪ್ಪ. (ಎಂ. ಸಿ. ರೋವರು.) 16. ಕೃಷ್ಣಶಾಸ್ತ್ರಿ, (ಗೌ. ಆ. ಕಾಲೇಜು.) 17. ಬಿ. ನಾರಾಯಣಸ್ವಾಮಿ. (ಗೌ. ಆ. ಕಾಲೇಜು.) 18. ವೆಂಕಟರಮಣಶರ್ಮ, (ಗೌ. ಆ. ಕಾಲೇಜು.) 19. ನಾಮಕಲ್‌ರಾವ್, (ಗೌ. ಆ. ಕಾಲೇಜು.) 20. ಅಚ್ಯುತಸ್ವಾಮಿ, (ಗೌ. ಆ. ಕಾಲೇಜು.) 21. ಸಂಪತ್ತಯ್ಯಂಗಾರ್, (ಗೌ. ಆ. ಕಾಲೇಜು.) 22. ಎಚ್. ನಾರಾಯಣಸ್ವಾಮಿ.

೪ನೆಯ ಸಾಲು (ಎಡಭಾಗದಿಂದ ಬಲಕ್ಕೆ.)
ನಿಂತಿರುವವರು.

ಶ್ರೀಯುತರುಗಳಾದ 1. ಸ್ವಾಮಿನಾಥಶಾಸ್ತ್ರಿಗಳು, (ಟೈಪಿಸ್ಟ್, ಆ ಕಾನ್ಫರೆನ್ಸಿನ ಆಫೀಸು.) 2. ಕೆ. ಧನಪಾಲಸೆಟ್ಟಿ, (ಎಂ. ಸಿ. ರೋವರು.) 3. ಶ್ರೀಕಂಠಯ್ಯ, (ಎಂ. ಸಿ. ರೋವರು.) 4. ಎಚ್. ನಂಜಪ್ಪ, (ಎಂ. ಸಿ. ರೋವರು.) 5. ಎಲ್. ವೆಂಕಟರಮಣಯ್ಯ, ಎಂ. ಸಿ. ರೋವರು.) 6 ಎಂ. ಸಿ. ಧೀರ್‌ಸಿಂಗ್, (ಗೌ. ಆ. ಕಾಲೇಜು.) 7. ಕೆ. ನಾಗಯ್ಯ, ವಿದ್ಯಾರ್ಥಿ. 8. ಪಾಲಾಕ್ಷಯ್ಯ. (ಗೌ. ಆ ಕಾಲೇಜು.) 9. ಎಂ. ಶೇಷಯ್ಯಂಗಾರ್, (ಗೌ. ಆ. ಕಾಲೇಜು.) 10. ಶ್ರೀನಿವಾಸರಾಘವಾಚಾರ್, (ಗೌ. ಆ. ಕಾಲೇಜು.) 11. ತಿರುಮಲಾಚಾರ್, (ಗೌ. ಆ ಕಾಲೇಜು.) 12. ರುದ್ರಪ್ಪ, (ಎಂ. ಸಿ. ರೋವರು.) 13. ದಸರಾ ಎಗ್ಜಿಬಿಷನ್ನಿನ ಸ್ಟೋರ್‌ಕೀಪರ್‌ರವರು. 14. ರಂಗಸ್ವಾಮ್ಯೆಂಗಾರ್, (ಎಂ. ಸಿ. ರೋವರು.) 15. ರಂಗರಾವ್, (ಗೌ. ಆ. ಕಾಲೇಜು.) 16. ವೆಂಕಟೇಶಯ್ಯ, (ಗೌ. ಆ. ಕಾಲೇಜು.) 17. ವೆಂಕಟನಾರಣಪ್ಪ, (ಎಂ. ಸಿ. ರೋವರು.) 18. ಜಿ. ಪಿ. ಕೃಷ್ಣಸ್ವಾಮಿ, (ಎಂ. ಸಿ. ರೋವರು.)

೫ನೆಯ ಸಾಲು (ಎಡಭಾಗದಿಂದ ಬಲಕ್ಕೆ.)
ನಿಂತಿರುವವರು.

ಶ್ರೀಯುತರುಗಳಾದ 1. ಹೆಚ್. ಕೆ. ಶ್ರೀನಿವಾಸರಾವ್, B.A. (ಎಂ. ಸಿ. ರೋವರು.) 2. ರಾಮಸ್ವಾಮ್ಯಯ್ಯ, (ಗೌ. ಆ. ಕಾಲೇಜು.) 3. ಶ್ರೀನಿವಾಸಮೂರ್ತಿ, (ಗೌ. ಆ. ಕಾಲೇಜು.) 4. ಸ್ವಾಮಿರಾವ್, (ಎಂ. ಸಿ. ರೋವರು.) 5. ಅಣ್ಣಯ್ಯ, (ಗೌ. ಆ. ಕಾಲೇಜು.) 6. ಬಿ. ಶ್ರೀನಿವಾಸಮೂರ್ತಿ, B.A. (ಎಂ. ಸಿ. ರೋವರು.) 7. ಕೆ. ಎಚ್. ನರಸಿಂಹಮೂರ್ತಿ. (ಎಂ. ಸಿ. ರೋವರು ಮತ್ತು ಪ್ರೆಸ್ ಕರೆಸ್ಪಾಂಡೆಂಟ್.) 8. ಎಸ್. ರಾಮಾನುಜಮ್, B.A. (ಎಂ. ಸಿ. ರೋವರು ಮತ್ತು ಟ್ರೂಪ್ ಲೀಡರು.) 9. ಎಸ್. ದಾಸ್, (ಮೆಡಿಕಲ್ ಕಾಲೇಜು.) 10. ಟಿ. ಕೃಷ್ಣಯ್ಯಂಗಾರ್ರು, (ಎಂ. ಸಿ. ರೋವರು.) 11. ಕೆ. ನರಸಿಂಹಯ್ಯ, (ಎಂ. ಸಿ. ರೋವರು.) 12. ಎಂ. ಎಸ್. ರಂಗನಾಥರಾವ್, (ಎಂ. ಸಿ. ರೋವರು.)

ಶ್ರೀಮಹಾಮಹೋಪಾಧ್ಯಾಯರಿಗೆ ಸ್ವಾಗತಾಧ್ಯಕ್ಷರು ಹಾರ ತುರಾಯಿಗಳನ್ನು ಅರ್ಪಿಸಿದ ಮೇಲೆ ಶ್ರೀ ಸೇನರು ಕರತಳಧ್ವನಿಗಳ ಮಧ್ಯದಲ್ಲಿ ಎದ್ದು ತಮ್ಮ ಅಮೋಘವಾದ ಭಾಷಣವನ್ನು ಸಂಸ್ಕೃತ ಭಾಷೆಯಲ್ಲಿ ಓದಿಮುಗಿಸಿದರು. ಈಗಾಗಲೇ ಬಹಳ ಹೊತ್ತಾಗಿದ್ದುದರಿಂದ ವಿಷಯನಿರ್ಧಾರಣ ಸಮಿತಿಗೆ ಸದಸ್ಯರನ್ನು ಚುನಾಯಿಸುವ ತಮ್ಮ ಕೆಲಸವನ್ನು ಮಧ್ಯಾಹ್ನ 2 ಘಂಟೆಗೆ ಪ್ರಧಾನಮಂತ್ರಿಗಳು ನಡೆಯಿಸುವರೆಂದು ಅಧ್ಯಕ್ಷರು ಅಪ್ಪಣೆಕೊಡಿಸಿದರು. ನಂತರ ಶ್ರೀಮನ್ಮಹಾರಾಜರವರಿಗೆ ಮಂಗಳಾಶಾಸನವಾದ ಮೇಲೆ ಶ್ರೀಧನ್ವಂತರಿಮೂರ್ತಿಗೆ ನಮಸ್ಕಾರ ಪೂರ್ವಕವಾಗಿ ಆ ದಿನ ಪ್ರಾತಃಕಾಲದ ಸಭೆಯು ಅಂದಿಗೆ ಮುಕ್ತಾಯವಾಯಿತು.

ಸಮ್ಮೇಳನದಲ್ಲಿ ನಡೆದ ಕಾರ್ಯಕ್ರಮ.

27-12-30	ಸಮ್ಮೇಳನ ಪ್ರಾರಂಭೋತ್ಸವ.
ಬೆಳಿಗ್ಗೆ	ರಾಜಕಾರ್ಯಪ್ರವೀಣ ಪಿ. ಜಿ. ಡಿಸೌಜಾರವರಿಂದ.
8-30—11-30	ಸ್ವಾಗತಾಧ್ಯಕ್ಷರ ಸ್ವಾಗತನಿವೇದನ.
(ಟೌನ್ ಹಾಲ್)	ಅಧ್ಯಕ್ಷರ ಭಾಷಣ.
ಮಧ್ಯಾಹ್ನ 2—30	ವಿಷಯನಿರ್ಧಾರಣಸಮಿತಿಯ ಮೆಂಬರುಗಳ ಚುನಾವಣೆ.
ಮಧ್ಯಾಹ್ನ 3—4	ಪ್ರದರ್ಶನದ ಪ್ರಾರಂಭೋತ್ಸವ. ಡಾ॥ ಪಿ. ಸುಬ್ಬರಾಯರು, Bsc. Etc. (ಪ್ರೆಸಿಡೆಂಟ್, ಆಯುರ್ವೇದ ವಿಶ್ವವಿದ್ಯಾಲಯ ಕಾಕನಾಡ) ಇವರಿಂದ.
ಸಾಯಂಕಾಲ 4—6	ರಸಾಯನಸಂಭಾಷಾಪರಿಷತ್ತು. ಶ್ರೀ॥ ನಾರಾಯಣಶಂಕರ ದೇವಶಂಕರ ಪ್ರಾಣಾಚಾರ್ಯ ಅಹಮ್ಮದಾಬಾದ್ ಇವರ ಅಧ್ಯಕ್ಷತೆಯಲ್ಲಿ.
ರಾತ್ರಿ 8-30—2	ವಿಷಯವಿವೇಚನ ಸಮಿತಿಯ ಕಾರ್ಯಕ್ರಮ.

28-12-30	**ದ್ರವ್ಯಸಂಭಾಷಾಪರಿಷತ್ತು.**
ಬೆಳಗ್ಗೆ 8-30—11	ವೈದ್ಯ ಡಾ|| ಮಸ್ಕರ್, M.A., M.D. ಬೊಂಬಾಯಿನ ಹಾಫ್ಕಿನ್ ರಿಸರ್ಚ್ ಇನ್ಸ್ಟಿಟ್ಯೂಟ್ ರವರ ಅಧ್ಯಕ್ಷತೆಯಲ್ಲಿ.
28-12-30	**ಚಿಕಿತ್ಸಾಸಂಭಾಷಾಪರಿಷತ್ತು.**
ಮಧ್ಯಾಹ್ನ 2-30—5-30	ಆಯುರ್ವೇದಭೂಷಣ ಕ್ಯಾಪ್ಟನ್ ಪನಿಕರ್, L.R.C.P., M.R.C.S., ಕೊಲಂಬೊ ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರು, ಇವರ ಅಧ್ಯಕ್ಷತೆಯಲ್ಲಿ,
6—7	**ಆರೋಗ್ಯಶಾಸ್ತ್ರದ ಮೇಲಿನ ಚಲನಚಿತ್ರದ ಉಪನ್ಯಾಸ.**
ರಾತ್ರಿ	ಮದ್ರಾಸಿನ ಭಿಷಗ್ರತ್ನ ಡಾ|| ಎ. ಲಕ್ಷ್ಮೀಪತಿ, B.A. M.B.C.M. ಇವರಿಂದ.
8—2	**ವಿಷಯ ವಿವೇಚನ ಸಮಿತಿಯ ಕಾರ್ಯಕ್ರಮ.**
29-12-30 ಬೆಳಗ್ಗೆ	(a) **ಸಾಮಾನ್ಯಸಂಭಾಷಾಪರಿಷತ್ತು.**
8-30—11	ಲಾಹೋರಿನ ಆಯುರ್ವೇದಾಚಾರ್ಯ ಪ್ರೊಫೆಸರ್ ಶಿವಶರ್ಮ ಇವರ ಅಧ್ಯಕ್ಷತೆಯಲ್ಲಿ.
ಮಧ್ಯಾಹ್ನ 2—4-30	(b) **ವಿಷಯವಿವೇಚನಸಮಿತಿಯ ಕಾರ್ಯಕ್ರಮ.**
ಸಾಯಂಕಾಲ	(c) **ಕರ್ನಾಟಪ್ರಾಂತಿಕ ಆಯುರ್ವೇದ ಸಮ್ಮೇಳನ.**
5—8	1. ಅಧ್ಯಕ್ಷರು—ಶ್ರೀಯುತ ಡಾ|| ಎಸ್. ವೆಂಕೋಬರಾವ್, ಬಿ.ಎ., ಅಪಾಥಿಕರಿ,ಆಯುರ್ವೇದವೈದ್ಯರು, ಬೆಂಗಳೂರು.
ರಾತ್ರಿ	(d) **ಮಹಾಸಭೆ,**
8—12	**ಮತ್ತು ಸಮಾಪ್ತಿ.**

(1) ಸಮ್ಮೇಳನದ ಪ್ರಾರಂಭೋತ್ಸವವನ್ನು ನಡೆಸಿದ ಮೈಸೂರು ಸರಕಾರದ ಉಪಮಂತ್ರಿಗಳಾದ ರಾಜಕಾರ್ಯಪ್ರವೀಣ ಶ್ರೀಯುತ ಪಿ. ಜಿ. ಡಿಸೌಜಾಸಾಹೇಬರವರ ಭಾಷಣ.

ಈ ನಿಖಿಲ ಭಾರತಾಯು.ರ್ವೇದ ಸಮ್ಮೇಳನದ ಪ್ರಾರಂಭೋತ್ಸವವನ್ನು ಮಾಡಲು ನನ್ನನ್ನು ತಾವು ನೇಮಿಸಿದ್ದು ನನ್ನ ಭಾಗ್ಯವೇ ಸರಿ. ಮೊದಲಿನಿಂದಲೂ ನಾನು ವಿದ್ಯಾಭ್ಯಾಸ ಮಾಡಿದ ಕ್ರಮದಲ್ಲಿ ನನಗೆ ಈಪ್ರಾಚೀನ ಭಾರತೀಯ ವಿದ್ಯೆಯ ಗಂಧವೇ ಇಲ್ಲದಂತಾಯಿತು ಏಂದು ಹೇಳಬಹುದು. ಈ ಮಹಾ ಗೌರವಕ್ಕೆ ನಾನು ಹೇಗೆ ಅರ್ಹನೆಂದು ತಾವು ತಿಳಿದರೋ ಅದೂ ಗೊತ್ತಿಲ್ಲ. ಯಾವ ವೈದ್ಯವಿದ್ಯೆಯು ಅತಿಪ್ರಾಚೀನವಾದರೂ ಅಕುಂದಿತವಾದ ತೇಜಸ್ಸಿನಿಂದ ಈವತ್ತಿಗೂ ಮೆರೆಯುತ್ತರೋಗಾದ್ಯುಪದ್ರವಗಳನ್ನು ಪರಿಹಾರಮಾಡಿ ನಮ್ಮ ಭರತಖಂಡದ ಲಕ್ಷೋಪಲಕ್ಷ ಜನರಿಗೆ ಸೌಖ್ಯವನ್ನುಂಟುಮಾಡುತ್ತಿರುವ ಆದಿತ್ಯ ವೈದ್ಯಜ್ಯೋತಿಯನ್ನು ಬೆಳಗುತ್ತಿರುವ ತಾವುಗಳು ಆದರ ಸಂಬಂಧವೇ ಇಲ್ಲದ ಪಾಮರನಾದ ನನ್ನನ್ನು ಈ ಮಹಾಕಾರ್ಯಕ್ಕೆ ಆಪೇಕ್ಷಿಸಿದುದು ಆಶ್ಚರ್ಯವಾಗುತ್ತದೆ. ಆಯುರ್ವೇದಶಾಸ್ತ್ರದಲ್ಲಿ ಪರಿಣತರಾದ ತಾವುಗಳೂ ಭರತಖಂಡದ ನಾನಾ ದಿಗ್ದೇಶಗಳಿಂದ ದಯಮಾಡಿ ಈ ಸುಸಮಯದಲ್ಲಿ ಇಲ್ಲಿ ನೆರೆದಿದ್ದರಿಂದ ನಮ್ಮ ದೇಶಕ್ಕೆ ಅತ್ಯಂತ ಗೌರವವಾಗಿದೆ. ಆ ವೈದ್ಯಜ್ಯೋತಿಯು ಆದೆ ಬೆಳಗುತ್ತಿರಲು ನಮ್ಮ ದೇಶದಲ್ಲಿ ನಾವು ಮಾಡುತ್ತಿರುವ ಪ್ರಯತ್ನಕ್ಕೆ ತಾವು ಮೆಚ್ಚಿ ಬಂದಿರೆಂದು ನಾನು ತಿಳಿದಿದ್ದೇನೆ. ಈ ಕಾರಣದಿಂದ ತಮ್ಮೆಲ್ಲರಿಗೂ ನಾನು ಸುಖಾಗಮನವನ್ನು ಬಯಸುತ್ತೇನೆ.

ಸ್ವಾನುಭವದಿಂದಲೇ ಈ ಆಯುರ್ವೇದಶಾಸ್ತ್ರದ ಗಾಂಭೀರ್ಯವನ್ನು ಪೂರ್ಣತ್ವವನ್ನೂ ಅರಿತವರಾದ ತಮ್ಮೆದುರಿಗೆ ಆ ಶಾಸ್ತ್ರದಲ್ಲಿ ಅಡಗಿ ಪರಂಪರೆಯಾಗಿ ಪ್ರಾಪ್ತವಾಗಿರುವ ಅಮೋಘವಾದ ಜ್ಞಾನತತ್ವವನ್ನು ವರ್ಣಿಸುವದು ಅನಾವಶ್ಯಕ. ಈ ಶಾಸ್ತ್ರಕ್ಕೆ ಕಾಲಕ್ರಮೇಣ ಪ್ರೋತ್ಸಾಹವು ಕಡಿಮೆಯಾದರೂ ಪಾಶ್ಚಾತ್ಯ ವಿಜ್ಞಾನಶಾಸ್ತ್ರಗಳು ಈಚೆಗೆ ಮಾಡಿರುವ ಅದ್ಭುತವಾದ ಕೆಲಸಗಳನ್ನು ನೋಡಿ ಹೋಲಿಸಿ ನಮ್ಮ ಶಾಸ್ತ್ರವು ಅದಕ್ಕೆ ಸಮವಾಗಲಾರದೆಂದು ಆ ಶಾಸ್ತ್ರವನ್ನು ಮಾತ್ರ ಅಭ್ಯಾಸಮಾಡಿರುವವರು ಅಲಗಳಿಯುವದಲ್ಲದೆ ಸಾಧ್ಯವಾದಮಟ್ಟಿಗೂ ಆ ಪಾಶ್ಚಾತ್ಯವೈದ್ಯದಲ್ಲಿಯೇ ಹೆಚ್ಚಾಗಿ ಅಭಿಮಾನ ಪಡುತ್ತಿರುವರು. ಆದರೂ ದೈವಯೋಗದಿಂದ ಆಯುರ್ವೇದವು ಪುನಃ ತಲೆಯೆತ್ತುವ ಕಾಲವು ಬರುತ್ತಿದೆ.

ಇದಕ್ಕೆ ವಿಶುದ್ಧವಾದ ಇತರ ವೈದ್ಯಶಾಸ್ತ್ರಗಳನ್ನು ವ್ಯಾಸಂಗಮಾಡಿ ಪಾರಾಂಗತ ರಾದವರೂ ಕೂಡ ತಮಗೂ ತಮ್ಮ ಶಾಸ್ತ್ರಕ್ಕೂ ಗೋಚರವಾಗದ ಅನೇಕ ಚಿಕಿತ್ಸೆಗಳೂ ಈ ಆಯುರ್ವೇದ ಶಾಸ್ತ್ರದಲ್ಲಿರುವುದನ್ನು ಕಂಡು ಆಶ್ಚರ್ಯ ಪಡುತ್ತಾರೆ.

ನಮ್ಮಲ್ಲಿ ದೇಶಾಭಿಮಾನವೇನೂ ಕಡಿಮೆಯಿಲ್ಲ. ಪ್ರಪಂಚದಲ್ಲಿ ಯಾವ ಜನಾಂಗದವರೂ ತಮ್ಮ ಪೂರ್ವಜರಿಂದ ಇಂಥ ಅಮೂಲ್ಯವಾದ ಆಸ್ತಿಯನ್ನು ಪಡೆದಿರುವದಿಲ್ಲ. ಆಯುರ್ವೇದಶಾಸ್ತ್ರದ ಮಹಾತ್ಮ್ಯವನ್ನು ಕೇಳಿದರೆ ಮೈಯ್ಯೂ ಉಬ್ಬುತ್ತದೆ. ಆಷ್ಟಾದರೂ ನಮ್ಮಲ್ಲಿ ಅನೇಕರು ಆಯುರ್ವೇದವೆಂದರೆ ಔದಾಸೀನ್ಯವನ್ನು ತೋರಿಸುವದು ಪದ್ಧತಿಯಾಗಿ ಪರಿಣಮಿಸಿದೆ. ಕೆಲವುವೇಳೆ ಅತ್ಯಂತ ದ್ವೇಷವನ್ನೇ ಮಾಡುತ್ತೇವೆ. ಪಾಶ್ಚಾತ್ಯ ವೈದ್ಯವನ್ನೆ ವ್ಯಾಸಂಗಮಾಡುವ ದೀಕ್ಷೆ, ಪಾಶ್ಚಾತ್ಯ ಚಿಕಿತ್ಸೆಯಲ್ಲಿಯೇ ಪೂರ್ಣವಿಶ್ವಾಸ. ಅದೇ ಬೇಕೆಂಬುದಾಗಿ ಹಾಹಾಕಾರ ಇದರಿಂದ ಆಯುರ್ವೇದಕ್ಕೆ ತಕ್ಕಷ್ಟು ಪ್ರೋತ್ಸಾಹ ದೊರೆಯದೆ ಅದು ನಿಂತಲ್ಲಿಯೇ ನಿಂತಿದೆ ಇದರಿಂದ ಪಾಶ್ಚಾತ್ಯವೈದ್ಯದಲ್ಲಿ ಸುಶಿಕ್ಷಿತರಾದ ನಮ್ಮ ಯುವಕರು ಇದನ್ನು ವ್ಯಾಸಂಗಮಾಡಿ ಇದರಲ್ಲಿಯೇ ಪರಿಶೋಧನೆಗಳನ್ನು ನಡೆಯಿಸುವ ಅಪೇಕ್ಷೆಯೇ ಇಲ್ಲದವರಾಗಿದ್ದಾರೆ.

ಆಧುನಿಕ ವೈದ್ಯಶಾಲೆಗಳೂ, ಔಷಧಾಲಯುಗಳೂ, ಎಷ್ಟು ಹೆಚ್ಚಿದಾಗ್ಯೂ ಈವತ್ತಿಗೂ ಮೂರುಪಾಲು ಜನರು ಆಯುರ್ವೇದ ಮತ್ತು ಯುನಾನಿ ಚಿಕಿತ್ಸೆಯಿಂದಲೇ ಬದುಕಿದಾರೆಂಬುದರಲ್ಲಿ ಸಂಶಯವಿಲ್ಲ. ಹೀಗಿರುವಲ್ಲಿ ಈ ಆಯುರ್ವೇದ ಮತ್ತು ಯುನಾನಿ ವೈದ್ಯಶಾಲೆಗಳಿಗೆ ಸುಶಿಕ್ಷಿತರಾದ ವೈದ್ಯರನ್ನು ಗೊತ್ತುಮಾಡಿ ಸಾಧ್ಯವಾದಷ್ಟು ಉದಾರವಾದ ದ್ರವ್ಯಸಹಾಯಮಾಡಿ, ಸರ್ಕಾರದವರ ಸಹಾಯ ಕಮ್ಮಿಯಾದಾಗ್ಯೂ ಆಯುರ್ವೇದವನ್ನು ಮುಂದುವರಿಸುವ ಪ್ರಯತ್ನವನ್ನು ನಮ್ಮ ಜನರು ಯಾಕೆ ಮಾಡಬಾರದು!

ನಮ್ಮ ದೇಶದಲ್ಲಿ ಆಯುರ್ವೇದ ಅಭಿವೃದ್ಧಿಗೆ ಅನೇಕ ಉತ್ತಮವಾದ ಚಿಕಿತ್ಸಕರಿದ್ದಾರೆ. ಅವರ ಚಿಕಿತ್ಸೆಯೂ ಅದ್ಭುತವಾಗಿದೆ. ಆದರೂ ಆ ಶಾಸ್ತ್ರವನ್ನು ಪೂರ್ಣವಾಗಿ ವ್ಯಾಸಂಗಮಾಡಿದವರಾಗಿ ಕಾಣುವುದಿಲ್ಲ. ಪಾಶ್ಚಾತ್ಯ ವೈದ್ಯಶಿಕ್ಷಣಕ್ಕಾಗಿ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತವೆ ಆ ಶಿಕ್ಷಣವನ್ನು ಹೊಂದಿದ ಯುವಕರಿಗೂ ಬೇಕಾದಷ್ಟು ಪ್ರೋತ್ಸಾಹವೂ ದೊರೆಯುತ್ತದೆ. ಇಷ್ಟಾದರೂ ಖರ್ಚಿಗೆ ದುಡ್ಡು ಸಾಲದು. ತಕ್ಕಷ್ಟು ಅನುಕೂಲವಿಲ್ಲ. ಶಿಕ್ಷಣಕ್ರಮವೂ ಉತ್ತಮವಾಗಿಲ್ಲ. ಎಂಬ ಮಾತೇನೋ ತಪ್ಪಲಿಲ್ಲ. ಇನ್ನು ಆಯುರ್ವೇದವನ್ನು ನೋಡಿ

ದರೆ, ಇತ್ತೀಚನವರೆಗೂ, ವೈದ್ಯರ ವ್ಯಾಸಂಗವು ಕೇವಲ ಮನೆಕೆಲಸವಾಗಿತ್ತು. ಸರ್ಕಾರದವರಿಗೂ ಅದಕ್ಕೂ ಸಂಬಂಧವೇ ಇರಲಿಲ್ಲ. ನಮ್ಮ ಯೂನಿವರ್ಸಿಟಿಗಳೂ, ಶೋಧನಾಲಯಗಳೂ ಆಯುರ್ವೇದಶಾಸ್ತ್ರದ ವ್ಯಾಸಂಗದಿಂದ ಉಪಯೋಗವಿದೆ ಯೆಂದು ನಂಬಲೇ ಇಲ್ಲ. ಹೀಗಿರುವಲ್ಲಿ ಇತರ ವೈದ್ಯಗಳಲ್ಲಿ ಪ್ರಸಿದ್ಧಿಪಡೆದ ಜಾಣ ರಹೆಸರು ಹೇಗೆ ಕೇಳಿಬರುವುದೋ ಹಾಗೆ ನಮ್ಮ ಶಾಸ್ತ್ರದಲ್ಲಿ ದೊಡ್ಡ ಹೆಸರು ಗಳು ಕೇಳಿಬರುವುದಿಲ್ಲವೆಂದೂ, ಆಯುರ್ವೇದವು ತನ್ನ ಯೋಗ್ಯತೆಯನ್ನು ಕಾಪಾ ಡಿಕೊಳ್ಳಲಿಲ್ಲವೆಂದೂ ಹೇಳುವುದು ಆಶ್ಚರ್ಯವೇನಿಲ್ಲ. ಸರ್ಕಾರವು ಎಲ್ಲಾ ಕಡೆ ಯಲ್ಲಿಯೂ ಆಯುರ್ವೇದಕ್ಕೆ ಪೂರ್ಣವಾದ ಗೌರವವನ್ನುಕೊಟ್ಟು ಅದರ ಅಭಿವೃ ದ್ಧಿಗೆ ಅಸಾಧಾರಣವಾದ ದೃಷ್ಟಿಯನ್ನುಕೊಟ್ಟಹೊರತು ಆಯುರ್ವೇದವು ಮುಂದೆ ಬರುವ ಆಶೆಯಿಲ್ಲ. ತತ್ವತಃ ವಿಚಾರಮಾಡಿದರೆ, ಪಾಶ್ಚಾತ್ಯಶಾಸ್ತ್ರಕ್ಕೂ ನಮ್ಮ ಶಾಸ್ತ್ರಕ್ಕೂ ಅಷ್ಟು ವ್ಯತ್ಯಾಸವೇನೂ ಕಂಡುಬರುವುದಿಲ್ಲ. ಕೆಲವು ಸಿದ್ಧಾಂತತತ್ವ ಗಳಲ್ಲಿ ಕೆಲವು ವ್ಯತ್ಯಾಸವಿರಬಹುದು. ಆದರೆ ಶಾಸ್ತ್ರವು ಪ್ರಮಾಣವೇ ಅಲ್ಲವೇ ಎಂಬುದು ಫಲದಿಂದ ನಿರ್ಣಯಿಸಬೇಕಾದ್ದು, ಎಲ್ಲಿಯೋ ತಪ್ಪುಮಾಡಿದ್ದನ್ನೇ ದೊಡ್ಡದಾಗಿಮಾಡುವುದೂ, ಸರಿಯಾದ ವೇಳೆಯಲ್ಲಿ ಏನೋ ಕಾಕತಾಳೀಯವೆಂದು ಒತ್ತರಿಸುವುದೂ, ಶಾಸ್ತ್ರೀಯ ದೃಷ್ಟಿಯಿಂದ ಅದರ ಗುಣಗಳನ್ನು ನೋಡದೆ ದುರಾಗ್ರಹದಿಂದ ಅಲಗಳಿಯುವುದೂ, ಇವುಗಳನ್ನೆಲ್ಲಾ ಬಿಡಬೇಕು. ನಮ್ಮ, ಯುವಕರು ಯೂನಿವರ್ಸಿಟಿಗಳಲ್ಲಿ ಶಿಕ್ಷಣಪಡೆದನಂತರ ಈ ಶಾಸ್ತ್ರಕ್ಕೆ ಪ್ರವೇಶ ಮಾಡಿ, ದುರಾಗ್ರಹವನ್ನೂ ಅಶ್ರದ್ಧೆಯನ್ನೂ ದೂರಮಾಡಿ, ನಿರಂತರವಾದ ವ್ಯಾಸಂಗವನ್ನೂ ಶೊಧನೆಗಳನ್ನೂ ಮಾಡಿ, ಹೊಸಹೊಸ ಚಿಕಿತ್ಸಾಕ್ರಮಗಳನ್ನು ಕರ್ಮವೈದ್ಯಶಾಸ್ತ್ರಗಳಲ್ಲಿ ಶೇರಿಸಿಕೊಳ್ಳುವ ಕೆಲಸವನ್ನು ಮಾಡಬೇಕಾಗಿದೆ. ಯೂನಿ ವರ್ಸಿಟಿಗಳು ನಮ್ಮ ಭಾರತೀಯ ವೈದ್ಯಶಾಸ್ತ್ರಗಳ ವ್ಯಾಸಂಗಕ್ಕೆ ತಕ್ಕ ಏರ್ಪಾಟು ಗಳನ್ನುಮಾಡಿ, ಶಾಸ್ತ್ರೀಯವಾದ ಶಿಕ್ಷಣವನ್ನು ಬೇಕಾದವರಿಗೆ ದೊರೆಯುವಂತೆ ಮಾಡುವುದಲ್ಲದೆ, ನಮ್ಮ ವೈದ್ಯಶಾಸ್ತ್ರಗಳಲ್ಲಿ ಸೂಕ್ಷ್ಮವಾದ ಪರಿಶೋಧನೆಗಳನ್ನು ನಡೆಯಿಸಿ, ಅವು ಸ್ವತಂತ್ರವಾಗಿಯೂ ಸವೀರ್ಯವಾಗಿಯೂ ಬಾಳುವಂತೆಮಾಡ ಬೇಕು. ಯೂನಿವರ್ಸಿಟಿಯಲ್ಲಿ ಶಾಸನದಶಾಸ್ತ್ರವೋ ಅಥವಾ ಅಂಥ ಮತ್ತೊಂದು ಶಾಸ್ತ್ರದಲ್ಲಿಯೋ ಶೋಧನಕ್ಕಾಗಿ ಒಬ್ಬ ಪ್ರೊಫೆಸರನ್ನು ನಿಯಮಿಸಬೇಕೆನ್ನುವ ಮಾತು ಬಂದರೆ ನಿಂತು, ಪ್ರತಿಯೊಬ್ಬರೂ ಭಾಷಣಮಾಡತಕ್ಕವರೇ, "ಬೇಡ" ಎನ್ನುವರೇ ಇಲ್ಲ. ಆ ಶಾಸ್ತ್ರಕ್ಕೆ ನಿಜವಾದ ಅಭಿವೃದ್ಧಿ ಎಷ್ಟಾಗುಹುದೋ ಆ ಯೋಚನೆಯೇ ಇಲ್ಲ. ಅದೇ ನೋಡಿ, ನಮ್ಮ ವೈದ್ಯಶಾಸ್ತ್ರಕ್ಕಾಗಿ ಒಂದು ಏರ್ಪಾ

ಟನಡೆಸಬೇಕೆಂದು ಸಲಹೆಬರಲಿ. ಅದಕ್ಕೆ ಅನುಕೂಲವಾಗಿ ಮಾತೇ ಹೊರಡುವು ದಿಲ್ಲ. ಇಷ್ಟೇ ಅಲ್ಲ. ಅಂಥ ವಿಷಯಗಳ ಸಂಬಂಧವೇ ಯೂನಿವರ್ಸಿಟಿಯ ಗೌರ ವಕ್ಕೆ ಕಡಿಮೆ ಎಂಬ ಭಾವನೆ!

ಆಯುರ್ವೇದಕ್ಕೆ ಹೆಚ್ಚು ಪ್ರಾಶಸ್ತ್ಯವು ದೊರೆಯಬೇಕಾದರೆ ತಕ್ಕಷ್ಟು ಶಿಕ್ಷ ಣಪಡೆಯದವರನ್ನು ಆ ವೃತ್ತಿಗೆ ಬರದಂತೆ ಮಾಡಬೇಕು. ಇದರಲ್ಲಿ ಒಂದು ತೊಂದರೆಯೂ ಇದೆ. ನಮ್ಮ ದೇಶದಲ್ಲಿ ಅನೇಕ ಮೂಲಿಕಾದಿ ಚಿಕಿತ್ಸೆಗಳು ರಹ ಸ್ಯವಾಗಿ ಅಡಗಿವೆ. ಕೆಲವರಿಗೆ ಪರಂಪರೆಯಾಗಿ ಉಪದೇಶದಿಂದ ಬಂದಿವೆ. ಆ ಚಿಕಿತ್ಸಕರನ್ನು ನಾನು ಮೇಲೆ ಹೇಳಿದ ನಿರ್ಬಂಧಕ್ಕೆ ಒಳಪಡಿಸಿದರೆ ಜನರಿಗೆ ಅಂಥ ಚಿಕಿತ್ಸೆಯ ಲಾಭವು ತಪ್ಪಿಹೋಗಬಹುದು. ಆದರೆ ಒಟ್ಟಿನಲ್ಲಿ ಚಿಕಿತ್ಸೆ ಯನ್ನು ಅಪ್ರಬುದ್ಧರು ಮತ್ತು ಅಶಿಕ್ಷಿತರ ಕೈಯಲ್ಲಿ ಬಿಡುವುದರಿಂದ ಬಹು ಅಪಾ ಯವುಂಟು. ಸರ್ಕಾರದವರಿಗೆ ಈ ಶಾಸ್ತ್ರದಲ್ಲಿ ನಂಬಿಕೆಯಿಲ್ಲದೆ ಈ ವಿಷಯಕ್ಕೆ ಕೈಹಾಕದಿರುವುದರಿಂದ ಆ ಜನರ ಮೇಲೆ ಯಾವ ವಿಧವಾದ ನಿರ್ಬಂಧವಿಲ್ಲದಂ ತಾಗಿದೆ. ಆದ್ದರಿಂದ ಅಂಥ ನಿರ್ಬಂಧವು ಅತ್ಯವಶ್ಯಕ. ಅಲ್ಲದೆ, ಆಯುರ್ವೇದ ದಲ್ಲಿ ಕೊಡಬೇಕಾದ ಶಿಕ್ಷಣದಲ್ಲಿ ಆಧುನಿಕ ವೈದ್ಯತ್ವಸಂಬಂಧಿಸಿದ ಪಾಶ್ಚಾತ್ಯ ಶಾಸ್ತ್ರದ ವ್ಯಾಸಂಗಗಳನ್ನು ಸ್ವಲ್ಪಮಟ್ಟಿಗೆ ಸೇರಿಸಬೇಕು. ನವೀನಶಾಸ್ತ್ರಗಳ ದೃಷ್ಟಿಯಿಂದ ಆಯುರ್ವೇದ ತತ್ವಗಳನ್ನು ಪರೀಕ್ಷಿಸಬೇಕು. ಆಯುರ್ವೇದದಲ್ಲಿ ಹೊಸಕಳೆಯನ್ನು ತುಂಬಬೇಕು. ಹೀಗೆಮಾಡಿದರೆ ಆಯುರ್ವೇದವು ವಿಕಾಸಹೊಂ ದುವುದರಲ್ಲಿ ಸಂದೇಹವಿಲ್ಲ.

ಇದಕ್ಕೆ ತಕ್ಕಂತೆ ಸರ್ಕಾರದವರು ಅಂಥ ಶಿಕ್ಷಣಹೊಂದಿದವರಿಗೆ ಹೆಚ್ಚಾಗಿ ಪ್ರೋತ್ಸಾಹವನ್ನು ಕೊಡುವ ಸಂಕಲ್ಪಮಾಡಬೇಕು. ಈಗಿನ ಸ್ಥಿತಿಯಲ್ಲಿ ಆಯು ರ್ವೇದವು ಬಡತನದಲ್ಲಿ ಬಳಲುತ್ತಿದೆ. ಅಲ್ಲಲ್ಲಿ ಸ್ಥಳೀಯ ಸಂಸ್ಥೆಗಳ ಅತ್ಯಲ್ಪವಾದ ಖರ್ಚಿನಿಂದ ವೈದ್ಯಶಾಲೆಗಳನ್ನು ನಡೆಸುತ್ತಿದ್ದಾರೆ. ಆ ವೈದ್ಯಶಾಲೆಗಳೋ ಸ್ವತಂ ತ್ರವಾಗಿ ಯಾವ ನಿರ್ಬಂಧಕ್ಕೂ ವಿಮರ್ಶೆಗೂ ಒಳಗಾಗಿರುವುದಿಲ್ಲ. ಪಾಶ್ಚಾತ್ಯ ವೈದ್ಯಶಾಲೆಗಳೂ, ನಮ್ಮ ವೈದ್ಯಶಾಲೆಗಳೂ ಒಂದೇ ಸ್ಥಳದಲ್ಲಿ ಕೂಡಿ ಕೆಲಸ ಮಾಡುತ್ತಿವೆ. ಸರ್ಕಾರದವರು ಈ ವಿಷಯದಲ್ಲಿ ಉದಾಸೀನರಾಗಿದ್ದಾರೆ. ನಮ್ಮ ವೈದ್ಯಶಾಲೆಗಳಲ್ಲಿ ವಿಶ್ವಾಸವಿಲ್ಲದ್ದರಿಂದ ಅವುಗಳನ್ನು ಬೇಡವೆಂದು ನಿಷೇಧಿಸು ವುದೂ ಇಲ್ಲ. ಜನರಿಗೆ ಅದರಲ್ಲಿ ಪೂರ್ಣವಿಶ್ವಾಸವಿದೆ ಎಂಬ ವಿಷಯವು ಅವರ ಮನಸ್ಸಿಗೂ ಬರುವುದಿಲ್ಲ. ಇಂಥ ಔದಾಸೀನ್ಯವನ್ನು ಬಿಟ್ಟು ಉದಾರವಾದ ಸಹಾಯವನ್ನು ಮಾಡಿ ತಕ್ಕಷ್ಟು ಪ್ರೋತ್ಸಾಹವನ್ನು ಕೊಡುವ ಸಂಕಲ್ಪವನ್ನು ಸರ್ಕಾರದವರು ಮಾಡಬೇಕು.

೧೯೩೦.

ಪ್ರತಿನಿಧಿಗಳು ಮತ್ತು ಸ್ವಾಗತಸಮಿತಿಯ ಸದಸ್ಯರುಗಳ ಸಮೂಹ.

(ಸಮ್ಮೇಳನದ ಅಧ್ಯಕ್ಷರ ಮತ್ತು ಸ್ವಾಗತಾಧ್ಯಕ್ಷರ ಸಮೇತ).

ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತಕ್ಕಂಥ ಪುಸ್ತಕಗಳನ್ನು ಬರೆಸಬೇಕಾಗಿದೆ. ಯಾವುದೋ ಯಾರಿಗೂ ಗೋಚರವಾಗದ ಮನೆಯಲ್ಲಿಯೇ ಪುಸ್ತಕಭಂಡಾರದಲ್ಲಿಯೇ ಅಡಗಿರುವ ಪುಸ್ತಕಗಳನ್ನು ಪ್ರಸಿದ್ಧಪಡಿಸಬೇಕು. ಆ ಗ್ರಂಥಗಳಲ್ಲಿರುವ ವೈದ್ಯ ವಿಷಯಗಳನ್ನು ಆಧುನಿಕಶಾಸ್ತ್ರದೃಷ್ಟಿಯಿಂದ ಪರೀಕ್ಷೆಮಾಡಬೇಕು. ದುರಾಗ್ರಹದಿಂದ ಅದರಲ್ಲಿ ತಪ್ಪು ಕಂಡುಹಿಡಿಯುವ ಉದ್ದೇಶ್ಯವನ್ನು ಬಿಟ್ಟು, ಅದರಲ್ಲಿ ಅಡಗಿರುವ ಅಮೂಲ್ಯಜ್ಞಾನರತ್ನಗಳನ್ನು ಹೊರಹಾಕಬೇಕು.

ಆಯುರ್ವೇದಶಾಸ್ತ್ರಕ್ಕೆ ಈಗಲೇ ತಕ್ಕಷ್ಟು ಪ್ರೋತ್ಸಾಹವನ್ನು ತರಿಸುವುದಕ್ಕೆ ಬೇಕಾದಷ್ಟು ಪ್ರತಿಬಂಧಕಗಳಿವೆ. ಪಾಶ್ಚಾತ್ಯ ವಿದ್ಯೆಯಲ್ಲಿ ಪ್ರವೀಣರಾದವರು ವಿಶೇಷತಃ ಅಂಥ ವೈದ್ಯರು ಯಾವುದೋ ಅಂಥ ಪರಂಪರೆಯೆಂಬ ಭಾವನೆಯಿಂದ ತಿರಸ್ಕಾರವನ್ನು ತೋರಿಸುವುದನ್ನು ಎಲ್ಲಿಯವರಿಗೆ ಬಿಡುವುದಿಲ್ಲವೋ ಅದುವರೆಗೂ ಸರ್ಕಾರದವರಿಂದಲಾಗಲಿ, ಸ್ಥಳೀಯ ಸಂಸ್ಥೆಗಳಿಂದಾಗಲಿ ಯಾವ ವಿಧವಾದ ಪ್ರೋತ್ಸಾಹವು ದೊರಕುವುದಿಲ್ಲ. ಈ ಶಾಸ್ತ್ರವು ಅಭಿವೃದ್ಧಿಗೆ ಬರಬೇಕಾದರೆ ಯಥೇಚ್ಛವಾದ ದ್ರವ್ಯವನ್ನು ಮತ್ತು ಅನುಕೂಲ್ಯವನ್ನು ಕಲ್ಪಿಸಬೇಕು. ನಮ್ಮ ದೇಶದಲ್ಲಿ ಅದರ ಅಭಿವೃದ್ಧಿಗೆ ಪ್ರಜೆಗಳು ಬಹಳ ಸಹಾಯಮಾಡಿದ್ದಾರೆ. ಮೈಸೂರು ನಗರದಲ್ಲಿ ನಾವು ನೋಡುವ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಾಸಾದವು ಒಬ್ಬ ವೈದ್ಯರ ಉದಾರವಾದ ದಾನ. ಇವತ್ತು ಆ ಮಹನೀಯರು ನಮ್ಮ ಜೊತೆಗೆ ಇರದಾಯಿತೆಂಬುದು ಪರಮಶೋಚನೀಯ. ಅವರು ಬದುಕಿರುವವರೆಗೂ ನಮ್ಮ ಶಾಸ್ತ್ರವನ್ನು ಈ ದೇಶದಲ್ಲಿ ನೆಲೆಗೊಳಿಸಬೇಕೆಂಬುದೇ ಅವರ ಧ್ಯೇಯವಾಗಿತ್ತು. ಈ ದುಃಖದಲ್ಲಿ ಒಂದು ಸಮಾಧಾನವೇನೆಂದರೆ, ಅವರು ದಾನಮಾಡಿದ ಕಟ್ಟಡದಲ್ಲಿ ಕಾಲೇಜು ಪ್ರಾರಂಭವಾದುದ್ದು ನೋಡಿ ಸಂತೋಷಪಟ್ಟು ಸತ್ತರೆಂಬುದೇ.

ಮಹಾಜನರೇ, ಈ ನಮ್ಮ ನಗರದಲ್ಲಿ ತಮ್ಮ ಸಮ್ಮೇಳನವು ಸೇರುವಂತೆ ಮಾಡಿ ನಮಗೆ ಅಭೂತಪೂರ್ವವಾದ ಗೌರವವನ್ನು ಉಂಟುಮಾಡಿದ್ದಕ್ಕಾಗಿ ಬಹಳ ಕೃತಜ್ಞರಾಗಿದ್ದೇವೆ. ತಾವು ವಿಚಾರಮಾಡಲೆಣಿಸಿರುವ ವಿಷಯಗಳು ಬಹಳ ಗಹನವಾದುವು. ಅಂಥ ವಿಚಾರದಿಂದ ಜ್ಞಾನಾಭಿವೃದ್ಧಿಯಾಗುವುದಲ್ಲದೆ ಇಲ್ಲಿನ ಜನರಿಗೆ ಹೊಸ ಹುರಪನ್ನು ಉಂಟುಮಾಡುತ್ತವೆ. ಎನ್ನುವುದರಲ್ಲಿ ಸಂಶಯವಿಲ್ಲ. ಈ ಪ್ರಾಚೀನಜ್ಯೋತಿಯನ್ನು ಬೆಳಗಿಸುತ್ತಿರುವ ತಮ್ಮಂಥವರ ಜೊತೆಯಲ್ಲಿ ಬೆರೆಯುವುದರಿಂದ ನನಗೆ ಸಂತೋಷವಾಗಿದೆ. ತಮ್ಮ ಅಮೋಘವಾದ ಕಾರ್ಯವು ನೆರವೇರಲೆಂದು ನಾನೂ ನಮ್ಮ ದೇಶೀಯ ಸಹೋದರರೂ ಹಾರೈಸುತ್ತೇವೆ.

(2) ಸ್ವಾಗತಮಂಡಲದ ಅಧ್ಯಕ್ಷರಾದ
ಲೋಕಹಿತೈಷಿ ಶ್ರೀಯುತ ಹೆಚ್. ನಂಜುಂಡರಾಜೇ ಅರಸಿನವರ
ಸ್ವಾಗತ ಭಾಷಣ.

ಸ್ವಾಗತಮಂಡಲದ ಪರವಾಗಿ ಈ ನಿಖಿಲ ಭಾರತಾಯುರ್ವೇದ ಸಮ್ಮೇಳನಕ್ಕೆ ವೈದ್ಯಪ್ರತಿನಿಧಿಗಳಾದ ತಮಗೆ ಸ್ವಾಗತವನ್ನೀಯಲು ನನಗೆ ಬಹಳ ಸಂತೋಷವಾಗುತ್ತದೆ. ತಾವುಗಳು ಆಯುರ್ವೇದಶಾಸ್ತ್ರದಲ್ಲಿ ಪೂರ್ಣಪಂಡಿತರು. ಆಯುರ್ವೇದಾಭಿವೃದ್ಧಿಯಲ್ಲಿ ಬದ್ಧದೀಕ್ಷರು. ದೇಶಕ್ಕೆ ಅಲಂಕಾರಭೂತರು. ಪುರಾತನವಾದರೂ ವಾರ್ಧಕದ ಚಿಹ್ನೆಗಳಿಲ್ಲದೆ ಯಾವಾಗಲೂ ನಲಿಯುತ್ತಿರುವ ಈ ಆಯುರ್ವೇದದಲ್ಲಿ ತಮಗಿರುವ ಭಕ್ತಿಯೆಂಬ ಪಾಶವು ತಮ್ಮೆಲ್ಲರನ್ನು ಕಟ್ಟಿ ಇಲ್ಲಿಗೆ ತಂದಿದೆ. ತಾವುಗಳು ಬಹು ದೂರದೇಶದವರು. ದೂರ ಮಾರ್ಗಾಯಾಸವನ್ನು ಲೆಕ್ಕಿಸದೆ ಇತರ ಸ್ವಂತ ಕಾರ್ಯಗಳನ್ನು ಒತ್ತಟ್ಟಿಗಿಟ್ಟು, ಈ ಸಮ್ಮೇಳನದಲ್ಲಿ ಪರಸ್ಪರ ವಿಚಾರದಿಂದ ಆಯುರ್ವೇದ ಜ್ಞಾನವನ್ನು ಅಭಿವೃದ್ಧಿಮಾಡುವ ಮಹೋದ್ದೇಶ್ಯದಿಂದ ಬಂದ ದೇಶಭಕ್ತರಾದ ತಮಗೆ ಸ್ವಾಗತವನ್ನೀಯುವ ಭಾಗ್ಯವು ನಮಗೆ ದೊರಕಿದ್ದರಿಂದ ನಾವು ಧನ್ಯರು.

ಈ ಸುಂದರವಾದ ಪಟ್ಟಣವು ಶ್ರೀ ಚಾಮುಂಡೇಶ್ವರೀ ದೇವಿಯ ಪರಮಾನುಗ್ರಹಕ್ಕೆ ಪಾತ್ರವಾಗಿ ಶ್ರೀಮನ್ಮಹಾರಾಜರವರ ಕೃಪಾಕಟಾಕ್ಷವನ್ನು ಹೊಂದಿದೆ. ಸಂಗೀತ ಸಾಹಿತ್ಯ ಮೊದಲಾದ ಕುಶಲವಿದ್ಯೆಗಳಿಗೆ ಪ್ರಸಿದ್ಧಿಪಡೆದು ಗಂಗ ಹೊಯಸಳ ಮತ್ತು ವಿಜಯನಗರ ರಾಜರ ಅದ್ಭುತ ಪರಾಕ್ರಮಗಳಿಗೆ ನೆಲೆಯಾಗಿ ಕರ್ಣಾಟಕದಲ್ಲೆಲ್ಲಾ ಚರಿತ್ರೆಯಲ್ಲಿ ಹೆಸರುಗೊಂಡದ್ದು ಈ ಪುರಾತನ ದೇಶ. ಆ ರಾಜರು ಕಟ್ಟಿಸಿದ ದೇವಾಲಯಗಳೂ, ಅರಮನೆಗಳೂ, ಅವರ ವೈಭವಗಳೂ ಇಲ್ಲಿ ಇನ್ನೂ ಸಶೇಷವಾಗಿ ಉಳಿದಿದೆ. ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೂ ಮತತ್ರಯಾಚಾರ್ಯರೂ ಜೈನ ವೀರಶೈವ ಗುರುಗಳೂ ತಮ್ಮ ಘನವಾದ ಉಪದೇಶವನ್ನು ಹೂಡಿ ಸಾವಿರಾರು ಶಿಷ್ಯ ಸಂಪತ್ತನ್ನು ಪಡೆದುದು ಈ ದೇಶದಲ್ಲಿ. ಪುರಾತನ ಜ್ಞಾನಸಂಪತ್ತನ್ನು ಕಾಪಾಡಿಕೊಂಡಿರುವುದಲ್ಲದೆ, ಆಧುನಿಕ ವೈಜ್ಞಾನಿಕ ಶಾಸ್ತ್ರದ ಸಹಾಯದಿಂದ ಪಂಚಭೂತಗಳನ್ನು ಸ್ವಾಧೀನಮಾಡಿಕೊಂಡು ಜನರ ಸುಖಸಂಪತ್ತಿಗೆ ಸಾಧನಗಳನ್ನು ಒದಗಿಸಿರುವುದೂ ತಮ್ಮ ದೃಷ್ಟಿಗೆ ಗೋಚರವಾಗಬಹುದು. ಕಾವೇರಿ ಪ್ರವಾಹಕ್ಕೆ ಅಡ್ಡಹಾಕಿ ಭೂಮಿಗಳ ಮೇಲೆ ನೀರನ್ನು ಹಾಯಿಸಿ ವ್ಯವಸಾಯಕ್ಕೆ ಅನುಕೂಲಮಾಡಿರುವುದೊಂದು,

ಅದೇ ಪ್ರವಾಹದಿಂದ ಶಿವನಸಮುದ್ರದಲ್ಲಿ ವಿದ್ಯುಚ್ಛಕ್ತಿಯನ್ನುಂಟುಮಾಡಿ, ಭೂಗರ್ಭದಿಂದ ಚಿನ್ನವನ್ನು ತೆಗೆದು, ರಾಜ್ಯದಲ್ಲಿನ ನೂರಾರು ಯಂತ್ರಗಳನ್ನು ನಡೆಯಿಸುತ್ತಾ ಕೊನೆಗೆ ಶ್ರೀ ಚಾಮುಂಡೇಶ್ವರಿಯ ಪರ್ವತಕ್ಕೆ ನಕ್ಷತ್ರಮಾಲಿಕೆಯನ್ನು ಹಾಕಿರುವುದು ಮತ್ತೊಂದು ಹೀಗೆ ಈ ದೇಶವು, ಅತಿ ಪುರಾತನವಾದರೂ, ನವೀನ ವಿಜ್ಞಾನ ನಾಗರಿಕತೆಗಳ ವಿಷಯದಲ್ಲಿ ಅಗ್ರಗಣ್ಯವಾಗಿದೆ. ನವೀನ ವಿಜ್ಞಾನದ ಮೋಹದಿಂದ ಪುರಾತನವಿದ್ಯೆಯನ್ನು ಕಳೆಯದೆ, ಎರಡಕ್ಕೂ ಸಮಾನ ಪ್ರಾಶಸ್ತ್ಯವನ್ನು ಕೊಟ್ಟಿರುವ ಇಂಥ ವಿಜ್ಞಾನಸನ್ನಿವೇಶದಲ್ಲಿ ತಮ್ಮ ಸಮ್ಮೇಳನದ ಕಾರ್ಯವನ್ನು ನಡೆಯಿಸಲು ತಮಗೆ ಎಷ್ಟೋ ಉತ್ಸಾಹವುಂಟಾಗಬಹುದು. ಪ್ರಾಚೀನ ನವೀನ ವಿಜ್ಞಾನದ ಸಾಮರಸ್ಯವನ್ನು ಕಲ್ಪನಮಾಡುವುದರಲ್ಲಿ ನಮ್ಮ ಘನಹೊಂದಿದ ಶ್ರೀಮನ್ಮಹಾರಾಜರವರ ಉದಾಹರಣೆಗಿಂತಲೂ ಬೇರೊಂದು ಪ್ರೋತ್ಸಾಹವನಾವಶ್ಯಕ. ತಮ್ಮ ಘನವಾದ ಶಾಸ್ತ್ರವನ್ನು ಅರಿಯದ ಪಾಮರನಾದ್ದರಿಂದ ಶಾಸ್ತ್ರದ ವಿಷಯವನ್ನು ಮುಟ್ಟಲಾರೆನಾದರೂ ನಮ್ಮ ಹಿಂದೂದೇಶದಲ್ಲಿ ಪ್ರಾರಂಭವಾಗುತ್ತಿರುವ ಈ ನವೀನಯುಗಕ್ಕೆ ತಕ್ಕಂತೆ ಆಯುರ್ವೇದಕ್ಕೆ ಪುನಸ್ಸಂಸ್ಕಾರಮಾಡುವುದು ಹೇಗೆಂಬುದೇ ತಮ್ಮ ಸಮಸ್ಯೆಯಾಗಿರಬೇಕೆಂದು ನಾನು ಹೇಳಿದರೆ ತಪ್ಪಾಗಲಾರದು ಬಾಲ್ಯಕೌಮಾರಗಳನ್ನು ದಾಟಿ ಪ್ರೌಢಯೌವನವನ್ನು ಪಡೆದಿರುವ ಈ ತಮ್ಮ ಸಮ್ಮೇಳನದಲ್ಲಿ ನಮ್ಮ ಆಯುರ್ವೇದವು ವೈದ್ಯಸಾಮ್ರಾಜ್ಯದಲ್ಲಿ ತನ್ನ ಸಹಜವಾದ ಸ್ಥಾನವನ್ನು ಹೊಂದಲು ತಕ್ಕ ಪರಿಷ್ಕಾರವನ್ನು ಹೊಂದೀತೆಂದು ನಾನು ಹಾರೈಸುತ್ತೇನೆ.

ಈ ನಮ್ಮ ದಕ್ಷಿಣಭಾರತದಲ್ಲಿ ಪ್ರಚಾರದಲ್ಲಿರುವ ವೈದ್ಯಪದ್ಧತಿಗಳನ್ನು ವಿಮರ್ಶೆಮಾಡಿ ನೋಡಿದರೆ, ಆಯುರ್ವೇದದಲ್ಲಿ ಆಗಿಂದಾಗ್ಯೆ ಕಾಲೋಚಿತವಾದ ಸಂಸ್ಕರಣಗಳು ಆಗಿದೆಯೆಂದು ವ್ಯಕ್ತವಾಗುತ್ತಿದೆ. ಹೊಯ್ಸಳರ ರಾಜ್ಯಭಾರದಲ್ಲಿ ಇದೇ ಮೈಸೂರಿನಲ್ಲಿಯೇ ಮೂರನೆಯ ನರಸಿಂಹರಾಜರ ಆಡಳಿತದಲ್ಲಿ ದೇವರಾಯಪಂಡಿತನೆಂಬ ಒಬ್ಬ ವೈದ್ಯನು ರೋಗಪರೀಕ್ಷೆ ಮತ್ತು ಚಿಕಿತ್ಸಾಕ್ರಮದಲ್ಲಿ ಒಂದು ಹೊಸ ಸಂಪ್ರದಾಯವನ್ನು ಹೂಡಿದನೆಂದು ಪ್ರಸಿದ್ಧಿ ಇದೆ. ಅನೇಕ ಕಾರಣಗಳಿಂದ ನೂತನ ಶೋಧನೆಗಳೂ ಸಂಸ್ಕಾರಗಳೂ ಈ ಮಧ್ಯೆ ಕಡಮೆಯಾದುವು. ಈಗ ಈ ನವಯುಗದಲ್ಲಿ ಭರತಖಂಡದಲ್ಲೆಲ್ಲಾ ವಿಲಕ್ಷಣವಾದ ಜಾಗೃತಿಯೂ, ನವಚೈತನ್ಯವೂ ಮೂಡುತ್ತಿದೆ. ಜನರಲ್ಲಿ ಆತ್ಮಾತ್ಮೀಯ ಗೌರವವು ಹೆಚ್ಚುತ್ತಿದೆ. ಭರತಖಂಡದ ಪ್ರಾಚೀನ ವಿದ್ಯೆಗಳನ್ನು ಪುನಃ ಶೋಧನೆ

ಮಾಡಿ, ಅಭಿವೃದ್ಧಿಪಡಿಸುವ ದೇಶಭಕ್ತಿಯು ತಲೆದೋರಿದೆ. ಆಯುರ್ವೇದವನ್ನು ಅಭಿವೃದ್ಧಿಮಾಡಿ ಸಾರ್ವಜನೀನವಾಗಿ ಮಾಡುವುದರಲ್ಲಿ ತಾವು ಸಾಂಗೋಪಾಂಗವಾಗಿ ವಿಚಾರವಮಾಡಿ ಏನು ನಿರ್ಣಯಗಳನ್ನು ಮಾಡುವಿರೋ ಅವು ನಮ್ಮ ದೇಶೀಯ ಭ್ರಾತೃಗಳೆಲ್ಲರೂ ಅಂಗೀಕರಿಸುವರೆಂಬುದರಲ್ಲಿ ಸಂದೇಹವಿಲ್ಲ.

ಈ ನಮ್ಮ ಮೈಸೂರಿನಲ್ಲಾದರೋ, ನಮ್ಮ ಪ್ರಭುಗಳ ಆಡಳಿತದಲ್ಲಿ ಆಯುರ್ವೇದಕ್ಕೆ ಪ್ರೋತ್ಸಾಹವು ದಿನೇ ದಿನೇ ಹೆಚ್ಚಾಗಿ ದೊರಕುತ್ತಿದೆ. ಸುಮಾರು 50 ವರ್ಷಗಳ ಕೆಳಗೆ ಆಯುರ್ವೇದ ಶಾಸ್ತ್ರಪಾಠವು ಶ್ರೀಮನ್ಮಹಾರಾಜ ಸಂಸ್ಕೃತ ಪಾಠಶಾಲೆಯಲ್ಲಿ ಏಕದೇಶವಾಗಿತ್ತು. 1909 ನೆಯ ಇಸವಿಯಲ್ಲಿ ಸ್ವತಂತ್ರವಾದ ಆಯುರ್ವೇದ ಪಾಠಶಾಲೆಯೊಂದು ಸ್ಥಾಪಿತವಾಯಿತು. 1928 ರಲ್ಲಿ ಸರ್ಕಾರದವರು ಆಯುರ್ವೇದ ಪಾಠಕ್ರಮವನ್ನು ಪರಿಷ್ಕರಿಸಿ, ಪಾಠಶಾಲೆಗೆ ಸಂಬಂಧಪಟ್ಟ ಚಿಕಿತ್ಸಾಲಯದಲ್ಲಿ ಹೊರಗಿನಿಂದ ಬರುವ ರೋಗಿಗಳಿಗೆ ಚಿಕಿತ್ಸೆಯೊಂದಿಗೆ ಅಲ್ಲಿಯೇ ಕೆಲವು ರೋಗಿಗಳನ್ನಿಟ್ಟುಕೊಂಡು ಚಿಕಿತ್ಸೆಮಾಡುವುದಕ್ಕೆ ಏರ್ಪಾಟನ್ನು ಮಾಡಿದುದೂ ಅಲ್ಲದೆ, ಯುನಾನಿ ಶಾಸ್ತ್ರದ ವ್ಯಾಸಂಗಕ್ಕೂ ಅನುಕೂಲವನ್ನು ಕಲ್ಪನೆಮಾಡಿದರು. ವೈದ್ಯರತ್ನಂ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರೆಂಬ ಮಹನೀಯರು ತಮ್ಮ ಘನವಾದ ಔದಾರ್ಯದಿಂದ ಯೂನಿವರ್ಸಿಟಿಯ ಮೆಡಿಕಲ್ ಕಾಲೇಜು ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಯ ನೆರೆಯಲ್ಲಿ ಒಂದು ಘನವಾದ ಪ್ರಾಸಾದವನ್ನು ಆಯುರ್ವೇದ ಯುನಾನಿ ಶಾಲೆಗಳಿಗಾಗಿ ನಿರ್ಮಾಣಮಾಡಿದರು. ಆ ಮಹನೀಯರಿಗೆ ಇಂದು ಅಭಿನಂದನವನ್ನು ಈಯಲು ಆ ಪಾಪಿ ವಿಧಿಯು ಅವಕಾಶವಿಲ್ಲದಂತೆ ಮಾಡಿತು! ಈ ಪುಣ್ಯಾತ್ಮರು ಸುಮಾರು ಮೂರು ಶತಮಾನಗಳಿಂದಲೂ ಆಯುರ್ವೇದ ಜ್ಯೋತಿಯನ್ನು ಜೀವಿಸಿದ ಪುರಾತನ ವೈದ್ಯರ ವಂಶಕ್ಕೆ ಸೇರಿ, ಸ್ವಯಂವೈದ್ಯರಾಗಿ ನೂರಾರು ಜನರಿಗೆ ಚಿಕಿತ್ಸೆಯನ್ನು ಮಾಡುತ್ತಾ ತಮ್ಮ ಜ್ಞಾನದಿಂದಲೂ, ವಿನಯದಿಂದಲೂ, ಜನರ ಅನುರಾಗಕ್ಕೆ ಪಾತ್ರರಾಗಿ, ಆಯುರ್ವೇದದಿಂದ ಸಂಪಾದಿಸಿದ ಧನವನ್ನು ಆಯುರ್ವೇದ ಸೇವೆಗಾಗಿಯೇ ಸಮರ್ಪಿಸುವ ಸಂಕಲ್ಪಮಾಡಿದ, ವೈದ್ಯರತ್ನವೆಂಬ ಬಿರುದಿನಿಂದ ಶ್ರೀಮನ್ಮಹಾರಾಜಮಾನ್ಯರಾದ ಶ್ರೀ ಗುಂಡ್ಲಪಂಡಿತ ಲಕ್ಷ್ಮಣಾಚಾರ್ಯರೆಂಬ ಮೇಲೆ ಹೇಳಿದ ಮಹನೀಯರು ದೈವವಶರಾದುದು ನಮ್ಮ ದೌರ್ಭಾಗ್ಯವೇ ಸರಿ. ತಾವು ಕಟ್ಟಿಸಿದ ಪ್ರಾಸಾದದಲ್ಲಿ ಮಹಾಪಾಠಶಾಲೆಯು ಸ್ಥಾಪಿತವಾದುದನ್ನು ನೋಡಿ

೨೧ ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦.

ಧರ್ಮಪ್ರಕಾಶ ಸಾಹುಕಾರ್ ಡಿ. ಬನುಮಯ್ಯನವರು,

ಆಯವ್ಯಯಶಾಖೆಯ ಅಧ್ಯಕ್ಷರವರು.

ಸಂತೋಷಪಡುವಷ್ಟುಕಾಲಮಾತ್ರ ಅವರನ್ನುಳಿಸಿದುದೇ ಆ ಮೃತ್ಯುದೇವತೆಯ ಪ್ರಸಾದ.

ಆಯುರ್ವೇದವಿಚಾರದಲ್ಲಿ ಔದಾರ್ಯದ ಝರಿಗಳು ಇನ್ನೂ ನಮ್ಮ ದೇಶದಲ್ಲಿ ಅಲ್ಲಲ್ಲಿ ಹರಿಯುತ್ತಿವೆ. ಪರಮೋದಾರ ಶಿರೋಮಣಿಯಾದ ಸಾಹುಕಾರ್ ಧರ್ಮ ಪ್ರಕಾಶ ಬನಮಯ್ಯನವರು ಆಯುರ್ವೇದ ವೈದ್ಯಶಾಲೆಯಲ್ಲಿ ರೋಗಿಗಳ ವಸತಿ ಗೃಹ ನಿರ್ಮಾಣಕ್ಕಾಗಿ ದ್ರವ್ಯದಾನಮಾಡಿರುವರು. ಈ ಆಯುರ್ವೇದ ಶಾಲೆಯು ಪ್ರಾರಂಭವಾದ ೫೦ ವರ್ಷಗಳಲ್ಲಿ ಅನೇಕ ವಿದ್ಯಾರ್ಥಿಗಳು ವಿದೇಶಗಳಿಗೆ ಹೋಗಿ ತಮ್ಮ ಚತುರವಾದ ಚಿಕಿತ್ಸೆಯಿಂದ ಪ್ರಸಿದ್ಧಿಪಡೆದಿರುವರು. ಅವರ ಪೈಕಿ ವೈದ್ಯ ರತ್ನಂ ಪಂಡಿತ ಡಿ. ಗೋಪಾಲಾಚಾರ್ಯರ ಹೆಸರು ತಮಗೆಲ್ಲರಿಗೂ ತಿಳಿದುದೇ. ಅವರು ತಾವು ವ್ಯಾಸಂಗಮಾಡಿದ ಪಾಠಶಾಲೆಗಾಗಿ ದಾನಮಾಡಿದ ೨೦,೦೦೦ ರೂಪಾಯಿಗಳ ಆಧಾರದ ಮೇಲೆ ಅದೇ ಶಾಲೆಯಲ್ಲಿಯೇ ಆಯುರ್ವೇದ ಮಹಾ ವಿದ್ವಾಂಸರ ಸ್ಥಾನವು ಏರ್ಪಡಿಸಲ್ಪಟ್ಟಿದೆ. ನಮ್ಮ ದೇಶದ ಡಿಸ್ಟ್ರಿಕ್ಟ್‌ಬೋರ್ಡು ಗಳೂ ಮ್ಯುನಿಸಿಪಾಲಿಟಿಗಳೂ ಆಯುರ್ವೇದ ವೈದ್ಯಕ್ಕೆ ಸಾಮಾನ್ಯವಾಗಿ ಪ್ರೋತ್ಸಾ ಹಕೊಡುತ್ತಿವೆ. ಅನಂತಶಯನ ಮೊದಲಾದ ಸಂಸ್ಥಾನಗಳಲ್ಲಿರುವಂತೆ ಆಯುರ್ವೇ ದಕ್ಕೆಂದು ಆಡಳಿತಕ್ಕಾಗಿ ಸ್ವತಂತ್ರ ಶಾಖೆಯೊಂದು ಏರ್ಪಡಲಿಲ್ಲವೆಂಬುದೇನೋ ಒಂದು ನ್ಯೂನತೆ. ಅದು ಜಾಗ್ರತೆಯಾಗಿಯೇ ಪರಿಹಾರವಾದೀತು! ಮೈಸೂರು ವೈದ್ಯಸಂಘವೇ ಮೊದಲಾದ ಸಭೆಗಳೂ, 'ಧನ್ವಂತರಿ,' 'ಆಯುರ್ವೇದ' ವೆಂಬ ಮಾಸಪತ್ರಿಕೆಗಳೂ ವೈದ್ಯರಲ್ಲಿ ಸೌಭ್ರಾತ್ರವನ್ನೂ ಆಯುರ್ವೇದದ ಗೌರವವನ್ನೂ ಹೆಚ್ಚುಮಾಡುತ್ತಿವೆ.

ಮಹನೀಯರೇ, ಈಗಾಗಲೇ ತಮ್ಮ ಕಾಲವನ್ನು ಬಹಳವಾಗಿ ತೆಗೆದು ಕೊಂಡಿರುವೆನು. ತಾವು ವಿಚಾರಮಾಡಬೇಕೆಂದಿರುವ ವಿಷಯಗಳು ಗಹನವಾ ದುವು ಮತ್ತು ಘನವಾದುವು. ಶ್ರೀ ಮಹಾಮಹೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ತಮ್ಮ ಸಮ್ಮೇಳನವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ. ಸ್ವಾಗತಮಂಡ ಲಿಯ ಪರವಾಗಿ ಆ ಮಹನೀಯರಿಗೂ, ವೈದ್ಯವಸ್ತುಪ್ರದರ್ಶನ ಪ್ರಾರಂಭಿತರಾದ, ಡಾ|| ಸುಬ್ಬರಾಯರಿಗೂ, ಇತರ ಶಾಖಾಧ್ಯಕ್ಷರಾದ ದೇವಶಂಖರಪ್ರಾಣಾಚಾರ್ಯ ಡಾ|| ಮಸ್ಕರ್, ಕ್ಯಾಪ್ಟನ್ ಪನಿಕರ್ ಮತ್ತು ಕರ್ಣಾಟಕಸಮ್ಮೇಳನಾಧ್ಯಕ್ಷರಾದ ಶ್ರೀಯುತ ಡಾ|| ವೆಂಕೋಬರಾಯರವರಿಗೂ ಸ್ವಾಗತವನ್ನು ಕೊಡುತ್ತೇನೆ.

ಇಂದು ಈ ಸಮ್ಮೇಳನದ ಪ್ರಾರಂಭೋತ್ಸವವನ್ನು ನಡೆಸಿದ ರಾಜಕಾರ್ಯಪ್ರವೀಣ ಡಿಸೌಜಾಸಾಹೇಬರವರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ. ಅವರಿಗೆ ಆಯುರ್ವೇದ ಅಭಿವೃದ್ಧಿಯಲ್ಲಿಯೂ, ಈ ಸಮ್ಮೇಳನದ ಕಾರ್ಯದಲ್ಲಿಯೂ, ಬಹಳ ಉತ್ಸಾಹ.

ಕೊನೆಯದೊಂದು ಮಾತು. ಬಹು ಅನಾನುಕೂಲಗಳನ್ನು ಸಹಿಸಿ ತಾವುಗಳೆಲ್ಲರೂ ನಮ್ಮ ಪಟ್ಟಣಕ್ಕೆ ದಯಮಾಡಿರುವಿರಿ. ತಾವು ನಮ್ಮೊಡನೆ ಇರುವ ಕಾಲವು ಅತ್ಯಲ್ಪ. ಸಮ್ಮೇಳನದ ಕಾರ್ಯಭಾರವೋ ಅತಿದೊಡ್ಡದಾಗಿದೆ. ನಾವು ಎಷ್ಟು ಮುತವರ್ಜಿ ವಹಿಸಿದರೂ ತಮ್ಮ ಸುಖಕ್ಕೆ ಲೋಪವಿರಬಹುದು. ಆದರೂ ತಮ್ಮೆಲ್ಲರಲ್ಲಿಯೂ ಇರುವ ಆಸ್ತಿಕತ್ವವೂ ಉಜ್ಜ್ವಲದೇಶಭಕ್ತಿಯೂ ನಮ್ಮ ನಿರಂತರ ಸ್ನೇಹಕ್ಕೆ ಕಾರಣವಾಗಲಿ ಎಂದು ಹಾರೈಸುತ್ತೇನೆ.

21 ನೇ ನಿಖಿಲಭಾರತಾಯುರ್ವೇದ ಸಮ್ಮೇಳನದ ಸಭಾಧ್ಯಕ್ಷರಾದ

ಮಹಾಮಹೋಪಾಧ್ಯಾಯ ಕವಿರಾಜ ಶ್ರೀ ಗಣನಾಥಸೇನ ಶರ್ಮ, ಸರಸ್ವತಿ, ವಿದ್ಯಾಸಾಗರ, ಪ್ರಾಣಾಚಾರ್ಯ, ಎಂ.ಎ , ಎಲ್. ಎಮ್. ಎಸ್., ಯವರ ಭಾಷಣ.

ಮಿತ್ರವರ್ಯರೇ,

ಆಯುರ್ವೇದಶಾಸ್ತ್ರದಲ್ಲಿ ಪಾರಂಗತರಾದ ತಮ್ಮಂಥ ಮಹನೀಯರ ಸನ್ನಿಧಿಯಲ್ಲಿ ಈ ನಿಖಿಲಭಾರತಾಯುರ್ವೇದಸಮ್ಮೇಳನದ ಅಧ್ಯಕ್ಷತ್ವವನ್ನು ವಹಿಸಲು ಸ್ವಲ್ಪ ನಾಚಿಕೊಳ್ಳುತ್ತೇನೆ. ನಾನು ಈ ಪದವಿಯನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ, ಮತ್ತೊಬ್ಬ ಮಹನೀಯರ ಹೆಸರನ್ನು ಸ್ವಾಗತಮಂಡಲಿಯವರಿಗೆ ತಿಳಿಸಿದ್ದೆನು. ಆದರೂ ಅವರು ಈ ಜೀರ್ಣಸೇವಕನನ್ನೇ ಈ ಮಹಾಕಾರ್ಯದಲ್ಲಿ ನಿಯೋಜಿಸಿದರು. ಅದಕ್ಕೆ ಅನುಸಾರವಾಗಿ ತಾವೂ ಈ ಮಹಾಸಭೆಯಲ್ಲಿ ನನ್ನನ್ನೇ ಈ ಭಾರವನ್ನು ವಹಿಸಲು ಆಜ್ಞಾಪಿಸಿರುವುದರಿಂದ ನಾನು ತಮಗೆ ಬಹಳ ಕೃತಜ್ಞನಾಗಿದ್ದೇನೆ. ಕಳೆದ ವರ್ಷಗಳಿಂದಲೂ ವ್ಯಾಧಿಪೀಡಿತನಾಗಿ, ಅನೇಕ ಸಾಂಸಾರಿಕ ದುಃಖಗಳಿಗೆ ಸಿಕ್ಕಿ ಬೆಂದುಬಳಲಿದ ನನಲ್ಲಿ ತಾವು ದಯಮಾಡಿ ಪೂರ್ಣಸಹಾಯವನ್ನುಮಾಡಿ ನನ್ನನ್ನು ಕೃತಾರ್ಥನನ್ನಾಗಿ ಮಾಡುವಿರೆಂದು ಬೇಡುತ್ತೇನೆ.

ಕಾರ್ಯದ ಪ್ರಾರಂಭದಲ್ಲಿಯೇ ಪರಮವಿಷಾದಕರವಾದುದೊಂದು ವಿಷಯವು ಜ್ಞಾಪಕಕ್ಕೆ ಬರುತ್ತದೆ. ಕಳೆದ ಸಮ್ಮೇಳನದಿಂದೀಚೆಗೆ ನಮ್ಮ ವೈದ್ಯಸಹೋದರರಲ್ಲನೇಕರು ನಮ್ಮನ್ನು ಬಿಟ್ಟು ಪರಲೋಕಕ್ಕೆ ತೆರಳಿದರು. ಇವರ ಪೈಕಿ ಲಾಹೋರಿನ ಶ್ರೀಯುತ ರಾಮಶಂಕರವೈದ್ಯರು, ಸಿಂಧುದೇಶ ನಿವಾಸಿಗಳಾದ ದೇವಕೃಷ್ಣಪಂಡಿತರು, ಆಗ್ರಾ ನಿವಾಸಿಗಳಾದ ಮೋಹನಲಾಲ ಪಂಡಿತರು, ಬಂಗಾಳಾದೇಶದ ಸುಪ್ರಸಿದ್ಧ ಕವಿರಾಜರಾದ ಶೀತಲಚಂದ್ರ ಚಟ್ಟೋಪಾಧ್ಯಾಯರು, ದ್ರವ್ಯಪರಿಚಯ ದ್ರವ್ಯಗುಣಾಭಿಧಾನಾದಿ ಗ್ರಂಥವನ್ನು ರಚಿಸಿ ಆಯುರ್ವೇದ ಶಾಸ್ತ್ರಕ್ಕೆ ಮಹೋಪಕಾರಮಾಡಿದ ಮೇಜರು ವಾಮನದಾಸ ವಸುಗಳು ನಮ್ಮ ನೆನಪಿಗೆ ಈಗ ಬರುತ್ತಿರುವರು. ಇವರನ್ನು ಕಳೆದುಕೊಂಡ ವೈದ್ಯಪ್ರಪಂಚದ ದುರದೃಷ್ಟವನ್ನು ಎಷ್ಟೆಂದು ಹೇಳೋಣ! ಮುಂದೆ ಬರುವ ನಮ್ಮ ವೈದ್ಯಯುವಕರು ಈ ಮಹನೀಯರ ಶೂನ್ಯಸ್ಥಾನಗಳನ್ನು ಜಾಗ್ರತೆಯಾಗಿಯೇ ಪೂರ್ಣಮಾಡುವರೆಂದು ನಂಬುತ್ತೇವೆ.

ಈ ಸಮಯದಲ್ಲಿ ಮತ್ತೊಂದು ವಿಷಾದಕರವಾದ ಸಂಗತಿಯು ಜ್ಞಾಪಕಕ್ಕೆ ಬರುತ್ತದೆ. ಶ್ರೀ ಜಗನ್ನಾಥಪ್ರಸಾದಶುಕ್ಲ ಪಂಡಿತರು, ಶ್ರೀ ಶಿವನಾರಾಯಣಮಿಶ್ರರು, ಶ್ರೀ ರಘುವರದಯಾಳು ಭಟ್ಟರು, ಜಗನ್ನಾಥಪ್ರಸಾದ ವಾಜಪೇಯಿಗಳು ಮೊದಲಾದ ನಮ್ಮ ವೈದ್ಯಭ್ರಾತೃಗಳನೇಕರು ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ ಮಾತೃಭೂಮಿಯನ್ನು ದಾಸ್ಯಶೃಂಖಲೆಯಿಂದ ಬಿಡುಗಡೆಮಾಡಲು ಪ್ರಯತ್ನಪಟ್ಟು, ಸರ್ಕಾರದವರ ಕೋಪಕ್ಕೆ ಪಾತ್ರರಾಗಿ ಕಾರಾಗೃಹದಲ್ಲಿ ಕಠೋರವಾದ ದುಃಖವನ್ನನುಭವಿಸುತ್ತಿರುವರು. ಇಷ್ಟುಮಾತ್ರವೇ ಅಲ್ಲ, ನಿಖಿಲಭಾರತಪೂಜ್ಯರಾದ ಗಾಂಧಿಮಹಾತ್ಮರು, ಪೂರ್ವಸಭಾಪತಿಗಳಾದ ಪಂಡಿತ ಮದನಮೋಹನಮಾಲವ್ಯರು, ಪಟೇಲಸಹೋದರರು, ದೇಶಕ್ಕೋಸ್ಕರವೇ ಪ್ರಾಣವನ್ನಿಟ್ಟುಕೊಂಡಿರುವ ಪಂಡಿತ ಮೋತೀಲಾಲ್ ಮತ್ತು ಜವಾಹರಲಾಲ್ ನೆಹರೂರವರು ಮತ್ತು ಸ್ವದೇಶ ದೀಕ್ಷೆಯನ್ನು ಕೈಕೊಂಡ ಇತರ ದೇಶಭಕ್ತರೂ ಅದೇರೀತಿಯಾಗಿ ಕಷ್ಟಪಡುತ್ತಿರುವರು. ಈ ದುಃಖದಲ್ಲಿ ನಾವು ಭಾಗಿಗಳಾಗಿದ್ದರೂ, ರಾಜ್ಯತಂತ್ರದಲ್ಲಿ ಪರಿಶ್ರಮವಿಲ್ಲದ್ದರಿಂದ, ಆಯುರ್ವೇದಮೂಲಕವೇ ಪ್ರಜಾಸೇವೆಯಲ್ಲಿ ನಿಂತಿರುವೆವಾಗಿ ಶ್ರೀ ಪರಮೇಶ್ವರನು ಈ ನಮ್ಮ ಭಾರತೀಯರ ತಪಸ್ಸನ್ನು ಸಫಲಮಾಡಲೆಂದೂ, ಸರ್ಕಾರದವರಿಗೆ ನ್ಯಾಯವಾದ ಮಾರ್ಗದಲ್ಲಿ ಬುದ್ಧಿಯನ್ನು ಪ್ರೇರಿಸಲೆಂದೂ ಪ್ರಾರ್ಥಿಸುತ್ತೇವೆ.

ಇಂತಹ ಕಠಿನಕಾಲದಲ್ಲಿಯೂ ತಮ್ಮಂಥ ಮಿತ್ರರ ದರ್ಶನವು ನನಗೆ ಸಿಕ್ಕಿದುದೊಂದು ದೊಡ್ಡ ಲಾಭ. ರೋಗಪೀಡಿತನೂ ಜರಾಗ್ರಸ್ತನೂ ಆದ ನನಗೆ ಪುನಃ ತಮ್ಮ ದರ್ಶನವು ಆಗುವುದೋ ಇಲ್ಲವೋ ತಿಳಿಯದು. ಉಳಿದಿರುವ ಆಯುಸ್ಸನ್ನು ಹಿಂದಿನಂತೆಯೇ ಆಯುರ್ವೇದ ಶಾಸ್ತ್ರದ ಸೇವೆಯಲ್ಲಿಯೇ ಕಳೆಯೋಣವೆಂದು ಸಂಕಲ್ಪಮಾಡಿದ್ದೇನೆ. 1913 ನೆಯ ಇಸವಿಯಲ್ಲಿ ಅಲಹಾಬಾದಿನಲ್ಲಿ ನಡೆದ ಮೂರನೇ ನಿಖಿಲಭಾರತಾಯುರ್ವೇದ ಸಮ್ಮೇಳನದಲ್ಲಿ ಅಧ್ಯಕ್ಷಪದವಿಯನ್ನು ವಹಿಸುವ ಭಾಗ್ಯವು ನನಗೆ ದೊರಕಿತ್ತಷ್ಟೆ. ಆ ಕಾಲದಲ್ಲಿ ನಮ್ಮ ವೈದ್ಯಸಹೋದರರಾದ ಜಗನ್ನಾಥಪ್ರಸಾದಶುಕ್ಲ ಪಂಡಿತರೂ ನಾವೂ ಸೇರಿ ಈ ಮಹಾಸಭೆ ಮತ್ತು ಮಹಾಮಂಡಲಗಳ ಎಂದರೆ—ಅವುಗಳ ಉದ್ದೇಶ್ಯ, ಅವುಗಳ ರಚನಾಕ್ರಮ, ಇತ್ಯಾದಿ ವಿಷಯಗಳಲ್ಲಿ ಯಾವ ನಿಯಮಗಳನ್ನು ಗೊತ್ತುಮಾಡಿದ್ದೆವೋ, ಅವುಗಳನ್ನೇ ಮೂಲವಾಗಿಟ್ಟುಕೊಂಡು, ಆದರಿಂದೀಚೆ ನಡೆದ ಸಮ್ಮೇಳನಗಳಲ್ಲಿ ಅನೇಕ ಬದಲಾವಣೆಗಳು ನಡೆದಿವೆ. ಮಹಾಮಂಡಲ ಮತ್ತು ವಿದ್ಯಾಪೀಠಗಳಿಗೆ

ಪ್ರಧಾನಮಂತ್ರಿಗಳಾಗಿ ಕ್ರಮವಾಗಿ ಬಂದ, ಪಂಡಿತ ಜಗನ್ನಾಥಪ್ರಸಾದಶುಕ್ಲ, ಪಂಡಿತ ದೊರೆಸ್ವಾಮೈಯ್ಯಂಗಾರ್ಯ, ಡಾಕ್ಟರ್ ಪ್ರಸಾದಿಲಾಲರು, ಪಂಡಿತ ರಾಮೇಶ್ವರ ಮಿಶ್ರಶಾಸ್ತ್ರಿ, ಪಂಡಿತ ಕಿಶೋರೀದತ್ತಶಾಸ್ತ್ರಿ, ಪಂಡಿತ ಶಿವನಾರಾಯಣಮಿಶ್ರ, ಪಂಡಿತ ರಘುವರ ದಯಾಳುಭಟ್ಟ ಇವರೇ ಮೊದಲಾದ ಸ್ವಾರ್ಥತ್ಯಾಗಿಗಳ ಅಧಿಕಾರದಲ್ಲಿ ಅವುಗಳು ಬಹು ಅಭಿವೃದ್ಧಿಯನ್ನು ಹೊಂದಿದುವು. ಮತ್ತು ಆಯುರ್ವೇದ ವಿದ್ಯಾಪೀಠದ ವ್ಯಾಸಂಗ ಮತ್ತು ಪರೀಕ್ಷಾಕ್ರಮದಲ್ಲಿ ನಮ್ಮ ಸ್ನೇಹಿತರು ಪಂಡಿತ ಯಾದವಜೀ ತ್ರಿಯಂಬಕಜಿ, ಪಂಡಿತ ಕೃಷ್ಣಶಾಸ್ತ್ರಿಕವಡೆ, ಪಂಡಿತ ಲಕ್ಷ್ಮೀರಾಮಸ್ವಾಮಿ, ಪಂಡಿತ ಗೋಪಾಲಾಚಾರ್ಲು, ಕವಿರಾಜಯೋಗೀಂದ್ರನಾಥಸೇನ, ಇತ್ಯಾದಿಗಳೂ ನಾವೂ ಸೇರಿ ಯಾವ ಪದ್ಧತಿಗಳನ್ನು ಹಾಕಿದ್ದೆವೋ ಅವುಗಳೇ ಈಚೆಗೆ ನಡೆದ ಸಮ್ಮೇಳನಗಳಲ್ಲಿ ಉಚಿತವಾದ ಪರಿಷ್ಕಾರವನ್ನು ಹೊಂದಿ ವಿದ್ಯಾರ್ಥಿಗಳ ಅಭಿವೃದ್ಧಿಗೆ ಕಾರಣವಾಗಿವೆ. ಆ ನಿಯಮಾನುಸಾರವಾಗಿ ಇವತ್ತಿಗೂ ಸುಮಾರು ೨೦ ಸ್ಥಳಗಳಲ್ಲಿ ವಿದ್ಯಾಪೀಠಾಧಿಕಾರಿಗಳು ಪರೀಕ್ಷೆಗಳನ್ನು ನಡೆಸುತ್ತಿಧ್ಧಾರೆ.

ನಮ್ಮ ನಿಖಿಲಭಾರತ ವೈದ್ಯಸಮ್ಮೇಳನದಲ್ಲಿ ಯಾವ ಪ್ರಸ್ತಾಪಗಳು ಅಂಗೀಕರಿಸಲ್ಪಟ್ಟಿರುವವೋ, ಅವುಗಳನ್ನು ವೈದ್ಯರೂ, ಸಾಮಾನ್ಯ ಜನರೂ, ಸರ್ಕಾರದವರೂ, ಮೈಸೂರು, ತಿರುವಾಂಕೂರು ಮೊದಲಾದ ಸಂಸ್ಥಾನದ ಅಧಿಪತಿಗಳೂ ಅಂಗೀಕರಿಸಿ ಜಾರಿಗೆ ತಂದಿರುವರು. ಪಾಟಲಿಪುತ್ರ, ಹರಿದ್ವಾರ ಮತ್ತು ಮದ್ರಾಸು ಇವೇ ಮೊದಲಾದ ದೊಡ್ಡ ಸ್ಥಳಗಳಲ್ಲಿ ಸರ್ಕಾರದವರು ಅಥವಾ ಸ್ಥಳೀಯ ಸಂಸ್ಥೆಗಳು ಆಯುರ್ವೇದ ಕಾಲೇಜುಗಳನ್ನೂ, ಸ್ಕೂಲುಗಳನ್ನೂ ಸ್ಥಾಪಿಸಿರುವರು. ಅಲ್ಲಲ್ಲಿ ಸಣ್ಣ ಸಣ್ಣ ಊರುಗಳಲ್ಲಿಯೂ, ದೊಡ್ಡ ಪಟ್ಟಣಗಳಲ್ಲಿಯೂ ಆಯುರ್ವೇದ ವೈದ್ಯಶಾಲೆಗಳು ಕೆಲಸಮಾಡುತ್ತಾ ಜನರಿಗೆ ಸಹಾಯವನ್ನು ಬೀರುತ್ತಿವೆ. ಕಾಶೀಪಟ್ಟಣದಲ್ಲಿ ಹಿಂದೂ ವಿಶ್ವವಿದ್ಯಾನಿಲಯದಲ್ಲಿ ಆಯುರ್ವೇದದ ಶಾಖೆಯೊಂದನ್ನು ಸ್ಥಾಪಿಸಿರುವುದಲ್ಲದೆ, ಅದರ ಅಧಿಕಾರಕ್ಕೆ ಒಳಪಟ್ಟ ಕಾಲೇಜು ಒಂದೂ, ವೈದ್ಯಶಾಲೆಯೊಂದೂ ತೆರೆಯಲ್ಪಟ್ಟಿವೆ. ಅಲ್ಲಿ ಮತ್ತು ಇತರ ಎಷ್ಟೋ ಸ್ಥಳಗಳಲ್ಲಿ ದೇಹತತ್ವವನ್ನೂ ರೋಗಸ್ವಭಾವವನ್ನೂ ತಿಳಿಸುವುದಕ್ಕೋಸ್ಕರ ಶವವ್ಯವಚ್ಛೇದಾಲಯಗಳನ್ನೂ, ಮೃತಕಪರೀಕ್ಷಾಲಯಗಳನ್ನೂ ಸ್ಥಾಪಿಸಿರುವರು. ಬಂಗಾಳದಲ್ಲಿ ಮೂರು ಪ್ರಸಿದ್ಧ ವಿದ್ಯಾಲಯಗಳು ಸ್ಥಾಪಿಸಲ್ಪಟ್ಟಿವೆ. ಅವುಗಳಲ್ಲಿ ಗ್ರಂಥ ಮೂಲಕವಾಗಿಯೂ, ಶರೀರಪರೀಕ್ಷಾ ಮೂಲಕವೂ, ಪಾಠಗಳು ಬಹು ಉತ್ತಮರೀತಿಯಿಂದ ನಡೆಯುತ್ತಿವೆ. ಆದರೆ ಸರ್ಕಾರದವರಿಂದ ಯಾವ ಸಹಾಯ

ವನ್ನೂ ಇವತ್ತಿನವರೆಗೂ ಪಡೆದಿರುವುದಿಲ್ಲವೆಂಬುದು ವಿಷಾದಕರವಾದ ಸಂಗತಿ. ಈ ವಿದ್ಯಾಲಯಗಳಿಗೆ ಸಂಬಂಧಪಟ್ಟ ವೈದ್ಯಾಲಯಗಳಿಗೆ ಕಲ್ಕತ್ತೆಯ ಕಾರ್ಪೋರೇಷನ್ನಿನವರು ಸಹಾಯ ಮಾಡುತ್ತಿದ್ದಾರೆ. ಕಲ್ಕತ್ತೆಯ ಆಯುರ್ವೇದ ಸಭೆಯವರು ಕಾರ್ಪೋರೇಷನ್ನಿನವರ ಸಹಾಯದಿಂದ ಪಟ್ಟಣದಲ್ಲಿಯೇ ಎಂಟು ಧರ್ಮಾರ್ಥವಾದ ಔಷಧಾಲಯಗಳನ್ನು ಸ್ಥಾಪಿಸಿದ್ದಾರೆ. ಬೊಂಬಾಯಿನಲ್ಲಿ ಪ್ರಭುರಾವ್ ಆಯುರ್ವೇದ ವಿದ್ಯಾಲಯವೂ, ಅದಕ್ಕೆ ಸೇರಿದ ವೈದ್ಯಾಲಯವೂ, ಪಂಡಿತ ಯಾದವಜೀಯವರಿಂದ ಸ್ಥಾಪಿತವಾದ ಮತ್ತೊಂದು ವಿದ್ಯಾಲಯವೂ ನಡೆಯುತ್ತಿವೆ. ಮದರಾಸಿನಲ್ಲಿ ಕೀರ್ತಿಶೇಷರಾದ ವೈದ್ಯರತ್ನ ಪಂಡಿತ ಗೋಪಾಲಾಚಾರ್ಯರಿಂದ ಸ್ಥಾಪಿತವಾಗಿ ಬಹು ವರ್ಷಗಳಿಂದ ನಡೆದುಬಂದ ವಿದ್ಯಾಲಯವು ಮದರಾಸು ಸರ್ಕಾರದ ವಿದ್ಯಾಲಯದಿಂದ ಒಂದಾಗಿ, ಆಯುರ್ವೇದ ಮತ್ತು ಯುನಾನಿ ವೈದ್ಯಗಳನ್ನು ವ್ಯಾಸಂಗ ಮಾಡಿಸುತ್ತಾ ಶ್ರೀಯುತ ಕ್ಯಾಪ್ಟನ್ ಶ್ರೀನಿವಾಸಮೂರ್ತಿಗಳವರ ಅಧಿಕಾರದಿಂದ ಅಲಂಕಾರವನ್ನು ಹೊಂದಿದೆ. ದೇಶೀಯ ಸಂಸ್ಥಾನಗಳ ಪೈಕಿ ಮೈಸೂರಿನವರೂ ವಿದ್ಯಾಲಯಗಳನ್ನೂ ವೈದ್ಯಾಲಯಗಳನ್ನೂ, ಧರ್ಮಾರ್ಥವಾದ ಔಷಧಾಲಯಗಳನ್ನೂ ಸ್ಥಾಪಿಸಿರುವರು. ಈ ಮೇಲೆ ಹೇಳಿದ ಶಾಲೆಗಳೆಲ್ಲವೂ ಪರಮೋದಾರವಾದ ಲೋಕೋಪಕಾರವನ್ನು ಮಾಡುತ್ತಾ ಜನರ ಕೃತಜ್ಞತೆಗೂ ಪ್ರಶಂಸೆಗೂ ಪಾತ್ರವಾಗಿವೆ.

ಈ ಮೇಲೆ ಹೇಳಿದ ಕಾರ್ಯವೆಲ್ಲವೂ ಶ್ಲಾಘ್ಯವಾಗಿವೆ. ಇದರಿಂದ ಜನರಿಗೆ ಸ್ವಲ್ಪ ಸಂತೋಷವೂ ಆಗಿದೆ. ಆದರೂ ಆಯುರ್ವೇದವು ತಕ್ಕಷ್ಟು ಮುಂದುವರಿಯಲಿಲ್ಲ. ಸರ್ಕಾರದವರ ಸಹಾಯವೂ ಜನರ ಸ್ವಾಭಿಮಾನವೂ ಈ ಕಡೆ ಇಲ್ಲವೆಂಬುದೊಂದೇ ಇದಕ್ಕೆ ಕಾರಣವಲ್ಲ. ನಮ್ಮ ದೋಷವೂ ಬೇಕಾದಷ್ಟು ಇದೆ. ತಂದೆ ತೋಡಿಸಿದ ಭಾವಿಯೆಂದು ಉಪ್ಪುನೀರನ್ನು ಕುಡಿಯುವಷ್ಟು ಮಾಂದ್ಯವು ನಮ್ಮಲ್ಲಿ ಬೇರೂರಿದೆ. ಹಳೆಯದೆಂದರೆ ದುರಾಗ್ರಹ, ಹೊಸದೆಂದರೆ ಗಾಬರಿ ಇವೆರಡನ್ನು ಬಿಟ್ಟಹೊರತು ನಮಗೆ ಮೋಕ್ಷವಿಲ್ಲ. ಪ್ರಪಂಚದ ಇತರ ಭಾಗಗಳಲ್ಲಿ ಪಾಶ್ಚಾತ್ಯ ವೈದ್ಯಶಾಸ್ತ್ರವು ದಿನೇ ದಿನೇ ಎಷ್ಟು ದೂರ ಹೋಗುತ್ತಿದೆ ಎಂಬುದನ್ನು ನೋಡಲು ಕಣ್ಣು ತೆರೆಯುವುದೇ ಇಲ್ಲ. ನಮ್ಮ ಪ್ರಾಚೀನ ಮಹತ್ವವನ್ನೇ ಪಾರಾಯಣ ಮಾಡುತ್ತಾ, ನಮ್ಮ ಈಗಿನ ಹೀನಸ್ಥಿತಿಯನ್ನು ಅರ್ಥಮಾಡಿಕೊಳ್ಳದೆ ಕಾಲೋಚಿತವಾದ ಹೃದಯ ವೈಶಾಲ್ಯವನ್ನೂ ದೂರದೃಷ್ಟಿಯನ್ನೂ ತೋರಿಸದೆ ಆಯುರ್ವೇದ ಶಾಸ್ತ್ರದ ಅಭಿವೃದ್ಧಿಗೆ ವೈದ್ಯರಾದ ನಾವೇ ಪ್ರತಿಬಂಧಕ

ರಾಗಿಧೇವೆ. ಇದಕ್ಕೆ ತಕ್ಕಂತೆ ಆಯುರ್ವೇದ ವಿದ್ಯಾಲಯಗಳಲ್ಲಿಯೂ, ವೈದ್ಯಾಲಯಗಳಲ್ಲಿಯೂ ಉದಾಸೀನರಾದ ಸಾಮಾನ್ಯ ಜನರ ಪ್ರಾಬಲ್ಯದಿಂದ ಯಾವ ಪರಿಷ್ಕರಣಕ್ಕೂ ಅವಕಾಶವಿಲ್ಲವಾಗಿದೆ. ಆ ಸಂಸ್ಥೆಗಳ ಕಾರ್ಯನಿರ್ವಾಹಕ ಸಮಿತಿಗಳಲ್ಲಿ ನಮ್ಮ ವೈದ್ಯರಲ್ಲಿ ಅಭಿಮಾನವಿಲ್ಲದ ಡಾಕ್ಟರುಗಳೂ, ವೈದ್ಯೇತರರೂ ಸೇರಿಕೊಂಡು, ಆಯುರ್ವೇದ ಶಿಕ್ಷಣದಲ್ಲಿ ಮಾಡಬೇಕಾಗಿರುವ ಪರಿಷ್ಕರಣದ ಆವಶ್ಯಕತೆಯನ್ನೇ ಅರಿಯಲಾರದೆ ನಮ್ಮ ಆಯುರ್ವೇದದ ಅಭಿವೃದ್ಧಿಗೆ ಪ್ರತಿಬಂಧಕರಾಗಿದ್ದಾರೆ. ಇಂಥವರ ಅಧಿಕಾರಕ್ಕೆ ಒಳಪಟ್ಟ ಆಯುರ್ವೇದಿಗಳು ಏನು ತಾನೇ ಮಾಡ್ಯಾರು? ತಮ್ಮ ಹಳೀ ಛಾನಸಗಳನ್ನು ಬಿಟ್ಟು ಆಯುರ್ವೇದವನ್ನು ಪುನಜ್ಜೀವನಮಾಡಿ ಯುಕ್ತವಾದ ಪರಿಷ್ಕರಣದಿಂದ ಅದನ್ನು ಮುಂದುವರಿಸಬೇಕೆಂಬ ಅವಶ್ಯಕತೆಯೇ ನಮ್ಮ ವೈದ್ಯರ ತಲೆಗೆ ಹತ್ತಲಿಲ್ಲ. ಸಾಮಾನ್ಯ ಜನರಿಗಂತೂ ಈ ವಿಷಯ ತಿಳಿಯದೇ ತಿಳಿಯದು. ನಮ್ಮ ವೈದ್ಯವನ್ನು ಉದ್ಧಾರಮಾಡಬೇಕೆಂದು ಎಲ್ಲರೂ ಹೇಳುತ್ತಾರಾಗಲಿ, ಪರಿಷ್ಕರಣದ ಆವಶ್ಯಕತೆಯನ್ನು ಅರ್ಥಮಾಡಿಕೊಂಡವರು ಬಹಳ ಕಡಮೆ. ರೋಗತತ್ವ ಪರೀಕ್ಷೆಯಲ್ಲಿಯೂ, ಚಿಕಿತ್ಸಾಕ್ರಮದಲ್ಲಿಯೂ ಪ್ರತಿದಿನವೂ ಲೋಪಗಳು ಮನಸ್ಸಿಗೆ ಬರುತ್ತಿವೆ. ಪ್ರಸೂತಿ (Midwifery) ಮತ್ತು ಶಲ್ಯತಂತ್ರಗಳ (Surgery) ವಿಷಯದಲ್ಲಿ ಜನರಿಗೆ ನಮ್ಮಲ್ಲಿ ನಂಬಿಕೆಯೇ ಇಲ್ಲ. ನಮ್ಮ ವೈದ್ಯಶಾಸ್ತ್ರವನ್ನು ಅಷ್ಟಾಂಗಪೂರ್ವಕವಾಗಿ ಕಲಿಸಬೇಕೆಂದು ಎಲ್ಲರೂ ಒಪ್ಪುತ್ತಾರೆ ಆದರೂ ಪ್ರಸೂತಿಚಿಕಿತ್ಸೆ ಮತ್ತು ಶಲ್ಯತಂತ್ರಗಳಿಗೆ ತಕ್ಕಷ್ಟು ದೃಷ್ಟಿಕೊಡುತ್ತಿಲ್ಲ. ಪಾಶ್ಚಾತ್ಯರು ದಿನದಿನದಲ್ಲಿಯೂ ಮುಂದುವರಿಯುತ್ತಿದಾರೆ ಎಂಬುದನ್ನು ಕಣ್ಣು ತೆರೆದು ಈಗಲಾದರೂ ನೋಡಬಾರದೇ? ಪಾಶ್ಚಾತ್ಯಖಂಡಗಳಲ್ಲಿ ವೈದ್ಯಶಾಸ್ತ್ರಜ್ಞರು ರೋಗಪರೀಕ್ಷೆಯಲ್ಲಿಯೂ, ಚಿಕಿತ್ಸಾಕ್ರಮದಲ್ಲಿಯೂ ಹೊಸಮಾರ್ಗಗಳನ್ನು ಹುಡುಕುವ ನಿರಂತರ ಪ್ರಯತ್ನದಲ್ಲಿದಾರೆ. ನಮ್ಮ ವೈದ್ಯರಿಗೆ ಇದು ತಿಳಿಯದೇ ತಿಳಿಯದು. ತಿಳಿಯಬೇಕೆನ್ನುವ ಆಶೆಯೂ ಇಲ್ಲ. ಇತರ ದೇಶದಲ್ಲಿಯೂ, ಇತರ ವೈದ್ಯಪದ್ಧತಿಗಳಲ್ಲಿಯೂ ಕಂಡುಬರುವ ವಿಷಯಗಳನ್ನು ಪರೀಕ್ಷೆಮಾಡಿ, ತಮ್ಮ ಪದ್ಧಯಲ್ಲಿ ಸೇರಿಸಿಕೊಳ್ಳುವುದರಲ್ಲಿ ಪಾಶ್ಚಾತ್ಯರು ಹಿಂಜರಿಯುವುದಿಲ್ಲ. 'ಸಿಂಕೋನ' 'ಡಿಜಿಟಾಲಿಸ್'ಗಳನ್ನು ಕಂಡರೆ ನಮ್ಮವರಿಗೆ ಇರುವಷ್ಟು ದ್ವೇಷವು 'ಕುಟಜ' 'ಅರ್ಜುನ' ಗಳನ್ನು ಕಂಡರೆ ಅವರಿಗಿಲ್ಲ. 'ತದೇವಯುಕ್ತಂ ಭೇಷಜ್ಯಂ ಯದಾರೋಗ್ಯಾಯಕಲ್ಪತೆ'ಎಂಬ

ಚರಕಾಚಾರ್ಯರ ಮಾತಿನಲ್ಲಿ ನಮಗಿಂತಲೂ ಅವರಿಗೆ ಹೆಚ್ಚು ಗೌರವ ವಿರುವಂತೆ ಕಾಣುತ್ತದೆ. ಇದೇ ನಮ್ಮ ಪ್ರಾರ್ಥನೆ. ಪರಂಪರೆಯಾಗಿ ಬಂದ ಪದ್ಧತಿಯಲ್ಲಿ ಆಗ್ರಹವನ್ನೂ ಆಲಸ್ಯವನ್ನೂ ನಮ್ಮ ವೈದ್ಯರು ಬಿಡಲಿ. ಕಾಲ ಕ್ರಮೇಣ ಹೋಗುವಷ್ಟು ಹೋಗಿ ಉಳಿದಿರುವ ವೈದ್ಯಜ್ಞಾನದಿಂದ ಶಾಸ್ತ್ರವು ಪೂರ್ಣವಾಗಲಾರದು. ಋಷಿಗಳು ಬರದಿಟ್ಟುದುದೇನೋ ನಿಜ. ಎಷ್ಟೋ ಭಾಗ ಕಳೆದುಹೋಗಿದೆ. ಮಧ್ಯೆ ಬಂದವರು ತಮಗೆ ತೋರಿದಂತೆ ಭರ್ತಿಮಾಡಿದಾರೆ. ಹೀಗಿರುವಲ್ಲಿ ಅಂಥಾ ಪುಸ್ತಕಗಳಿಂದ ಉಂಟಾಗುವ ಜ್ಞಾನವು ಪೂರ್ಣವಾದೀತೆ! ಅದನ್ನು ಪೂರ್ಣಮಾಡುವ ಆವಶ್ಯಕತೆಯಿಲ್ಲವೇ? ಕೆಲವರು ಸುಶಿಕ್ಷಿತರಲ್ಲದ ವೈದ್ಯರೂ ಇತರರೂ ಇಂಥ ಖಿಲವಾದ 'ಶುದ್ಧ-ಆಯುರ್ವೇದ' ದಲ್ಲಿನ ವಿಶ್ವಾಸ ದಿಂದ ಶಾಸ್ತ್ರಾಭಿವೃದ್ಧಿಯ ಬಾಗಿಲನ್ನು ಮುಚ್ಚಿರುವರು. ಅನಂತಪಾರವಾದ ವೈದ್ಯ ಶಾಸ್ತ್ರವು ನಾಲ್ಕು ಐದು ಹಳೇ ಪುಸ್ತಕಗಳಲ್ಲಿ ಅಡಗಿ ಹೋಗಲು ಸಾಧ್ಯವೆ? ಆಯುರ್ವೇದ ಶಾಸ್ತ್ರವೆಂಬುದು ನೂರಾರು ಭಾಗಗಳನ್ನೊಳಗೊಂಡು ಪ್ರಪಂಚದ ಎಲ್ಲಾ ಚಿಕಿತ್ಸಾಕ್ರಮಗಳಿಗೂ ಮಾರ್ಗದರ್ಶಕವಾದ ಅಪಾರ ಶಾಸ್ತ್ರ. ನಮ್ಮ ದೌರ್ಭಾಗ್ಯದಿಂದ ಇದರ ಎಷ್ಟೋ ಭಾಗಗಳು ಕಳೆದುಹೋದವು. ಪ್ರಪಂಚ ಕ್ಕೆಲ್ಲಾ ಉಪದೇಶಕವಾಗಿದ್ದ ನಮ್ಮ ಶಾಸ್ತ್ರವು ಈಗ ಇತರ ಶಾಸ್ತ್ರದಿಂದ ಕಲಿಯು ವುದಕ್ಕೆ ನಾಚಿಕೆಪಡುವುದೇನೋ ಸಹಜವೇ; ಆದರೆ ನಮಗೆ ಮಹಾ ಲಾಭವಿರು ವಲ್ಲಿ ಕಲಿಯಲೇ ಬೇಕು. ನಮ್ಮಲ್ಲಿ ಕಳೆದುಳಿದಿರುವ ಕುಂಟುಕುರುಡಾದ ಆಯುರ್ವೇದದಿಂದ ನಮ್ಮ ಶಾಸ್ತ್ರ ಗೌರವವನ್ನು ಕಾಪಾಡುವುದಕ್ಕೆ ಸಾಧ್ಯವಲ್ಲ. ಪಾಶ್ಚಾತ್ಯರಸಾಯನಶಾಸ್ತ್ರ (Chemistry)- ದೇಹತತ್ವಶಾಸ್ತ್ರ, (Anatomy) ರೋಗವಿಜ್ಞಾನ, (Pathology) ಶಲ್ಯತಂತ್ರ (Surgery) ಮತ್ತು ಅವುಗಳಿಗೆ ಸಂಬಂಧಪಟ್ಟ ಪ್ರಯೋಗಜ್ಞಾನ (Clinics) ಇವುಗಳೆಲ್ಲವನ್ನು ಬಿಟ್ಟು ಆಯು ರ್ವೇದವನ್ನು ಪೂರ್ತಿಮಾಡುವುದು ಅಸಾಧ್ಯ. ಈ ನವೀನಶಾಸ್ತ್ರಗಳ ತತ್ವವನ್ನು ಆಯುರ್ವೇದದೊಳಗೆ ಸೇರಿಸಿಕೊಂಡ ಹೊರತು ಆಯುರ್ವೇದವು ಮುಂದುವರಿಯು ವುದಿಲ್ಲವೆಂದು ಮಾತ್ರವೇ ಅಲ್ಲ. ಪೂರ್ತಿ ಅಳಿಸಿ ಹೋಗುವುದೇ ನಿಜ.

ಇಷ್ಟು ಲುಪ್ತವಾಗಿ ಜೀರ್ಣವಾಗಿರುವ ಆಯುರ್ವೇದವನ್ನು ಉದ್ಧಾರ ಮಾಡದಿದ್ದರೆ ಏನು? ಎಂದು ಕೇಳಬಹುದು. ನಮ್ಮ ಕೈಗೆ ಸಿಕ್ಕಿರುವ ಆಯು ರ್ವೇದವು ಎಷ್ಟು ಅಸಂಪೂರ್ಣವಾಗಿದ್ದರೂ, ಇತರ ವೈದ್ಯಪದ್ಧತಿಯಲ್ಲಿ ಎಲ್ಲಿಯೂ ಇಲ್ಲದಿರುವ 'ತ್ರಿದೋಷತತ್ವ' 'ದ್ರವ್ಯಗುಣಶಾಸ್ತ್ರ' ಇವೇ ಮೊದಲಾದ ಪರಮ

ಉಪಯುಕ್ತವಾದ ಭಾಗಗಳನ್ನು ಒಳಗೊಂಡಿರುವುದರಿಂದ, ಇಂತಹ ಜೀರ್ಣಸ್ಥಿತಿಯಲ್ಲಿಯೂ ಈವತ್ತಿಗೂ ಲಕ್ಷೋಪಲಕ್ಷ ಜನರಿಗೆ ಫಲವನ್ನು ಬೀರುತ್ತಿದೆ. ಸರ್ವಾಂಗದಿಂದ ಕೂಡಿದರೆ ಇನ್ನೆಷ್ಟು ಕೆಲಸ ಮಾಡಲಾರದು!

ಇನ್ನು ಆಯುರ್ವೇದವನ್ನು ಸಂಸ್ಕಾರ ಮಾಡಬೇಕಾದರೆ, ಯಾವ ಭಾಗಗಳಲ್ಲಿ ಅದು ಅಸಂಪೂರ್ಣ, ಅದನ್ನು ಪೂರ್ಣಮಾಡುವುದು ಹೇಗೆ ಎಂಬುದನ್ನು ವಿಚಾರಮಾಡೋಣ. ಋಷಿಗಳು ಸರ್ವಜ್ಞರೆಂಬದಾಗಿ ನಮ್ಮಲ್ಲಿ ಮೋಹವೊಂದಿದೆ. ಅದು ಮೊದಲು ಹೋಗಬೇಕು. ಒಬ್ಬ ಭಗವಂತನನ್ನು ಬಿಟ್ಟು ಸೃಷ್ಟಿಯಲ್ಲಿ ಸರ್ವಜ್ಞರೇ ಇಲ್ಲ. ಈ ಮಾತು ಶೃತಿ ಸ್ಮೃತಿ ಸಮ್ಮತವಾದುದು. ಋಷಿಗಳು ಸರ್ವಜ್ಞರಾಗಿದ್ದರೆ ಮಹಾಭಾರತದಲ್ಲಿ ಹೇಳಿರುವ 'ವೇದಾವಿಭಿನ್ನಾಃ ಸ್ಮೃತಯೊ ವಿಭಿನ್ನಾಃ ನಾಸೌಮುನಿರ್ಯಸ್ಯ ಮತಂ ನ ಭಿನ್ನಂ' ಎಂಬ ಮಾತು ಹೇಗೆ ಕೂಡೀತು! ಎಲ್ಲರೂ ಸರ್ವಜ್ಞರಾದರೆ, ಪ್ರಪಂಚದಲ್ಲಿ ದರ್ಶನಗಳೆಲ್ಲಾ ಒಂದೇ ಆಗಿರಬಾರದೆ! ಆರು ಏಕಿರಬೇಕು! ಅಧಿಕಾರಭೇದದಿಂದ ಬೇರೆ ಬೇರೆ ಸಿದ್ಧಾಂತಗಳು ಏರ್ಪಟ್ಟವೆಯೆಂದರೂ ಕೂಡ ಪರಸ್ಪರ ವಿರೋಧವಿರಬೇಕಾದ್ದಿಲ್ಲವಲ್ಲಾ! ಪೂರ್ವದಲ್ಲಿ ಹಿಮಾಲಯಪರ್ವತದ ಮೇಲೆ ಋಷಿಗಳೆಲ್ಲರೂ ಕೂಡಿ ರೋಗಪೀಡಿತರಾದ ಜನರನ್ನು ರಕ್ಷಿಸುವ ಉದ್ದೇಶ್ಯದಿಂದ ಚಿಕಿತ್ಸೆಯ ಕ್ರಮವನ್ನರಿಯಲು ಮಹರ್ಷಿಗಳಾದ ಭರದ್ವಾಜರನ್ನು ಇಂದ್ರನ ಸಮೀಪಕ್ಕೆ ಕಳಿಸಿದರಂತೆ. ಇದು ಚರಕದ ಪ್ರಥಮಾಧ್ಯಾಯದಲ್ಲಿದೆ. ಅದೇ ಚರಕದಲ್ಲಿ 'ಚಿಕಿತ್ಸಾಸ್ಥಾನ' ದ ಪ್ರಾರಂಭದಲ್ಲಿ ರೋಗಪೀಡಿತರಾದ ಜನರಿಗೆ ಉಪಕಾರಮಾಡುವ ಪ್ರಯತ್ನದಲ್ಲಿ ಋಷಿಗಳೇ ರೋಗಗ್ರಸ್ತರಾದರೆಂತಲೂ, ಆ ರೋಗ ಪರಿಹಾರಾರ್ಥವಾಗಿ ಅವರು ಇಂದ್ರನನ್ನು ಶರಣುಹೊಕ್ಕರೆಂತಲೂ ಇದೆ. ಇದು ಸರ್ವಜ್ಞರ ಕಾರ್ಯವೇ? ಚರಕದಲ್ಲಿ ಇನ್ನೂ ಮುಂದೆ ನೋಡಿದರೆ, ರಸ ದೋಷಾದಿಗಳ ವಿಷಯದಲ್ಲಿ ಋಷಿಗಳು ಪರಸ್ಪರ ವಿರುದ್ಧವಾದ ಮತಗಳನ್ನು ಅವಲಂಬಿಸಿದ್ದಾರೆ. ಇವುಗಳಿಗೆ ಸಾಮರಸ್ಯವನ್ನು **ಆತ್ರೇಯಪುನರ್ವಸು** ಎಂಬ ಋಷಿಗಳು ಉಂಟುಮಾಡಿದ್ದಾರೆ. ಇವುಗಳನ್ನೆಲ್ಲಾ ನೋಡಿದರೆ ಋಷಿಗಳು ಸರ್ವಜ್ಞರೆಂದು ಅವರೇ ತಿಳಿದಿರುವಂತೆ ತೋರುವುದಿಲ್ಲ. 'ಆಪ್ತವಾಕ್ಯ' ವೆಂಬುದೇನೋ ಪ್ರಮಾಣವೇ. ಆದರೆ ಋಷಿವಾಕ್ಯವೇ ಆಪ್ತಾಗಮವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಚರಕದಲ್ಲಿ 'ಆಪ್ತಾಗಮ' ವೆಂದರೆ ಏನು ಎಂದು ಈ ವಾಕ್ಯದಲ್ಲಿ ಹೇಳಿದೆ. **तथाहि चरकः**

आप्तागमस्तावद् वेदो यश्चान्योऽपि कश्चिद्वेदार्थादविपरीतः परीक्षकैः

प्रणीतः शिष्टानुमतो लोकानुग्रहप्रवृत्तः शास्त्रवादः—स चाप्तागमः इति (च० सू० ११ अ०.)

यत्तु चरके

" रजस्तमोभ्यां निर्मुक्तास्तपोज्ञातबलेन ये ।
येषां त्रिकालममलं ज्ञानमव्याहतं सदा ।
आप्ताः शिष्टा विबुद्धास्ते तेषां ज्ञानमसंशयम् ।
सत्यं वक्ष्यंति ते कस्मादसत्यं नीरजस्तमाः । "

ಇಲ್ಲಿ ಋಷಿಗಳು ಆಪ್ತರು, ಶಿಷ್ಟರು, ಬುದ್ಧಿವಂತರು ಎಂದು ಹೇಳಿದೆಯೇ ಹೊರತು ಸರ್ವಜ್ಞರೆಂದು ಹೇಳಿಲ್ಲ. ಅವರವರು ಹೇಳಿರುವ ಸಿದ್ಧಾಂತದಲ್ಲಿ ಜನರಿಗೆ ವಿಶ್ವಾಸವುಂಟುಮಾಡುವುದಕ್ಕೋಸ್ಕರ ಅವರ ಗುಣಗಳನ್ನು ಹೇಳಿದಾರೆಯೇ ಹೊರತು ಸರ್ವಜ್ಞತ್ವವನ್ನು ಸ್ಥಾಪಿಸುವುದಕ್ಕಲ್ಲ. ನಿರವಧಿತವಾದ ಸರ್ವಜ್ಞತ್ವವು ದೇವರಿಗೇ ಹೊರತು ಇನ್ನು ಯಾರಿಗೂ ಇಲ್ಲ. ಪಾತಂಜಲ ಸೂತ್ರವನ್ನು ನೋಡಿರಿ तत्रनिरतिशयं सर्वज्ञताबीजम्. ಎಂಬ ವಿಚಾರವನ್ನು.

ಈಗ ನಮಗೆ ಶಿಕ್ಕಿರುವ ಚರಕಸಂಹಿತೆಯಾಗಲಿ ಸುಶ್ರುತ ಸಂಹಿತೆಯಾಗಲಿ ಅಗ್ನಿವೇಶ ಸುಶ್ರುತರು ಬರದಂತೆಯೇ ಇದೆಯೆಂದು ಹೇಳಲಾಗುವುದಿಲ್ಲ. ಚಕ್ರಪಾಣಿ ಶಿವದಾಸಾದಿ ವ್ಯಾಖ್ಯಾನಕರ್ತೃಗಳು ಹಿಡಿದಿರುವ 'ವೃದ್ಧಸುಶ್ರುತ'ದ ಎಷ್ಟೋ ಪಾಠಗಳು ಈಗಿನ ಸುಶ್ರುತ ಸಂಹಿತೆಯಲ್ಲಿ ಕಾಣಬರುವುದಿಲ್ಲ. ಈಗಿನ ಸುಶ್ರುತ ಸಂಹಿತೆಯಲ್ಲಿರುವ ಎಷ್ಟೋಪಾಠಗಳು ಪ್ರತ್ಯಕ್ಷ ಶರೀರತತ್ವಕ್ಕೂ ಮತ್ತೂ ಆಯುರ್ವೇದ ಸಿದ್ಧಾಂತಕ್ಕೂ ವಿರುದ್ಧವಾಗಿವೆ. ಹಳೇ ಸುಶ್ರುತ ಸಂಹಿತೆಯನ್ನು ನಾಗಾರ್ಜುನನೋ ಅಥವಾ ಮತ್ತಿನ್ನೊಬ್ಬನೋ ತಿದ್ದಿ ಸರಿಮಾಡಿದನೆಂದು ಟೀಕಾಕಾರರೆಲ್ಲರೂ ಒಪ್ಪಿಕೊಂಡ ವಿಷಯವೇ. ಈಗಿನ ಸುಶ್ರುತ ಸಂಹಿತೆಯ ಉತ್ತರಭಾಗವನ್ನು ಪರೀಕ್ಷೆಮಾಡಿ ನೋಡಿದರೆ ವಿದೇಹನೇ ಮೊದಲಾದವರು ರಚಿಸಿದ ಗ್ರಂಥಗಳು ಸಂಗ್ರಹವಾಗಿ ಕಾಣುತ್ತಿವೆಯೇ ಹೊರತು ಸ್ವತಂತ್ರಗ್ರಂಥಗಳಾಗಿ ಕಾಣುವುದಿಲ್ಲ.

ಪುರಾತನ ಗ್ರಂಥವನ್ನು ಪುನಸ್ಸಂಸ್ಕಾರಮಾಡುವುದೆಂದರೆ ಏನು? ಸಂಗ್ರಹವಾಗಿ ಹೇಳಿದುದನ್ನು ವಿಸ್ತರಿಸುವುದು. ಅತಿ ವಿಸ್ತಾರವಾಗಿ ಹೇಳಿದುದನ್ನು ಸಂಗ್ರಹವಾಗಿ ಹೇಳುವುದೆಂದು 'ಚರಕ' ದಲ್ಲಿಯೇ ಹೇಳಿದೆ. ಆದ್ದರಿಂದ ಎಷ್ಟೋ

ಕಡೆಗಳಲ್ಲಿ ವಿಸ್ತಾರಮಾಡುವ ಸಂದರ್ಭದಲ್ಲಿ ಹೊಸಗ್ರಂಥರಚನೆಯೇ ಕಾಣುತ್ತದೆ. ಆದುದರಿಂದ ಈಗ ನಮಗೆ ಸಿಕ್ಕಿರುವ ಚರಕಸುಶ್ರುತಸಂಹಿತೆಗಳು ಎಷ್ಟೋ ಕಡೆ ಬೇಕಾದಷ್ಟು ಬದಲಾವಣೆ ಹೊಂದಿವೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

ಚರಕಸಂಹಿತೆಯಲ್ಲಿ ಎಷ್ಟೋ ಬದಲಾವಣೆಗಳಾಗಿವೆ ಎಂಬುದರಲ್ಲಿ ಬೇಕಾದಷ್ಟು ನಿದರ್ಶನಗಳಿವೆ. ಪ್ರತಿ ಅಧ್ಯಾಯದ ಕೊನೆಯಲ್ಲಿಯೂ '**अग्निवेशकृते तन्त्रेचरकप्रतिसंस्कृते**' ಎಂದು ಬರದಿದೆ. ಚರಕನೆಂಬುವನು **ಸಾಕ್ಷಾತ್ ಪತಂಜಲಿಯೇ** ಎಂದು ನಮ್ಮ '**ಪ್ರತ್ಯಕ್ಷಶಾರೀರ**' ದಲ್ಲಿ ಹೇಳಿದೇವೆ. ಪತಂಜಲಿಯು ಸುಮಾರು 2000 ವರ್ಷಗಳ ಕೆಳಗೆ ಇದ್ದನೆಂದೂ ಅಲ್ಲಿಯೇ ಹೇಳಿದೇವೆ. ಇನ್ನೊಂದು ನಿದರ್ಶನವೇನೆಂದರೆ, ಪಂಚನದ ವಾಸಿಯಾದ ಕಾಶ್ಮೀರ ದೇಶದ ಪಂಡಿತನೊಬ್ಬನು ಧೃಢಬಲನೆಂಬುವನು ಎಷ್ಟೋ ವಿಷಯಗಳಲ್ಲಿ ಅಸಂಪೂರ್ಣವಾಗಿದ್ದ ಚರಕಸಂಹಿತೆಯನ್ನು ಪೂರ್ತಿಮಾಡಿದನೆಂದು ವಿದ್ವಾಂಸರಿಗೆಲ್ಲಾ ಗೊತ್ತಾದವಿಷಯುವನ್ನೇ ಚರಕದಲ್ಲಿ ಹೀಗೆ ಹೇಳಿದೆ.

"**अस्मिन् सप्तदशाध्यायाः कल्पाः सिद्धय एव च ।**
नासाद्यन्तेऽग्निवेशस्य तन्त्रे चरकसंस्कृते ।
तानेतान् कापिलबलिः शेषान् दृढबलोऽकरोत् ।
तन्त्रस्यास्य महार्थस्य पूरणार्थं यथायथम् ।"

ಅಂತೂ ಚರಕಸಂಹಿತೆಯಲ್ಲಿ ಪ್ರಕ್ಷಿಪ್ತವಾದ ಭಾಗಗಳು ಎಷ್ಟೋ ಇವೆ ಎಂದಂತಾಯಿತು. ಮೂರನೆಯ ನಿದರ್ಶನವೇನೆಂದರೆ, ವಿಜಯರಕ್ಷಿತಾಚಾರ್ಯನೂ ಕೂಡ ಚರಕದ ಉತ್ತರಭಾಗದಿಂದ ಉದಹರಿಸುವಾಗಲೆಲ್ಲಾ ದೃಢಬಲನ ಹೆಸರಿನಿಂದಲೇ ಉದಹರಿಸಿಧಾನೆ. ಈ ವಿಷಯವೆಲ್ಲಾ ನಮ್ಮ ಪ್ರತ್ಯಕ್ಷ ಶಾರೀರದ ಉಪೋದ್ಘಾತದಲ್ಲಿ **द्विसहस्रवर्षतः पूर्वमप्यायुर्वेदस्य प्रतिसंस्काराहता समक्षदितिनात्रसंदेहावसरः कोपि** ಇತ್ಯಾದಿ ಗ್ರಂಥದಿಂದ ವಿಸ್ತಾರವಾಗಿ ಹೇಳಿದೆ.

ಇಷ್ಟು ನಿದರ್ಶನಗಳನ್ನು ಕಂಡಾಗ್ಯೂ ವೈದ್ಯದ ಗ್ರಂಥಗಳನ್ನು ಸಂಸ್ಕಾರಮಾಡಬಾರದೆಂದು ಹಠಹಿಡಿಯುವ ಪಂಡಿತರು ಸುಶ್ರುತದಲ್ಲಿ ಕಂಡುಬರುವ ಈ ಕೆಳಗೆ ಹೇಳುವ ಅಪಪಾಠಗಳಿಗೆ ಏನು ಉತ್ತರ ಹೇಳಿಯಾರು? ಆ ಅಪಪಾಠಗಳೂ ಆಪ್ತರಾದ ಋಷಿಗಳದೇ ಎಂದು ಹೇಳುವವರು ಆ ಋಷಿಗಳಿಗೆ ನಿಜವಾದ

ಗೌರವವನ್ನು ತೋರಿಸಿದಂತಾಗುವುದಿಲ್ಲ. ಆ ಅಪಪಾಠಗಳು ಇವತ್ತಿಗೂ ಹಾಗೆಯೇ ಇವೆ. ಇಲ್ಲಿ ನೋಡಿ ಸುಶ್ರುತದ ಅಪಪಾಠಗಳನ್ನು—

१. "अस्मिंस्तु शास्त्रे पंचमहाभूत-शरीरिसमवायः पुरुष इत्युच्यते । तस्मिन् क्रिया सोऽधिष्ठानम् । कस्मात्? लोकस्य द्वैविध्यात्"—इत्यादि— (सूत्र० १म अध्याय)

ಪುರುಷ 'क्रियाधिष्ठन' ವೆಂಬುದಕ್ಕೆ 'लोकस्यद्वैविध्यात्' ಎಂಬುದು ಸರಿಯಾದ ಯುಕ್ತಿಯಲ್ಲ. 'लोकस्यद्वैविध्यात्' ಎಂಬುದಕ್ಕೆ ಬದಲಾಗಿ 'लोकस्यतद्विधेयत्वात्' ಎಂದಿದ್ದರೆ ಚೆನ್ನಾಗಿತ್ತು.

२. प्राणिनां पुनर्मूलमाहारो बलवर्णौजसां च । सषटसु रसेष्वायत्तः । रसाः पुनर्द्रव्याश्रयाः, द्रव्याणि पुनरोषधयः । तास्तु द्विविधाः स्थावरा जङ्गमाश्च । तासां स्थावराश्चतुर्विधाः—वनस्पतयो वृक्षा वीरुध ओषधयश्चेति" (सुश्रत० सूत्र० १म अ०)

ಇಲ್ಲಿ 'ओषधि' ಎಂಬ ಪದವು 'स्थावरजंगम' ವೆಂಬ ಎರಡುವಿಧವಾದ ವಸ್ತುಗಳಲ್ಲಿಯೂ ಉಪಯೋಗಿಸಿದುದು ಇದೇ ಹೊಸದು. ಖಂಡಿತವಾಗಿಯೂ ಇಲ್ಲಿ ತಪ್ಪು ಬಿದ್ದಿರಬೇಕು.' 'स्थावर' ವನ್ನು ನಾಲ್ಕು ಜಾತಿಯಾಗಿ ವಿಂಗಡಿಸುವಲ್ಲಿ 'पार्थिव' ವನ್ನೂ ಶೇರಿಸಬೇಕಾಗಿತ್ತು. 'पार्थिव' ಎಂಬುದು 'सुवर्ण रजत मणिमुक्तामनःशिलामृत्कपालादयः' ಎಂದು ಮುಂದೆ ಹೇಳಿದ್ದರೂ ಇಲ್ಲಿ ಮಾಡಿದ ವಿಭಾಗವೇನೋ ಸರಿಯಲ್ಲ. ಇಲ್ಲಿ ಪಾಠವು ತಪ್ಪು. ಲೇಖಕರ ಹಸ್ತದೋಷವೂ ಇರಬಹುದು. 'तासां आश्रयाः द्विविधाः स्थावर जंगमाश्च तत्र स्थावरा द्विविधाः ओषधयः पार्थिवाश्च तत्र ओषधयश्चतुर्विधाः' ಎಂದಿದ್ದರೆ ಚೆನ್ನಾಗಿತ್ತು.

३. "शोणितकफप्रसादजं हृदयं, यदाश्रया हि धमन्यः प्राणवहाः । तद् विशेषेण चेतनास्थानम्, अतस्तस्मिंस्तमसावृते सर्वे प्राणिनः स्वपंति । भवति चात्र—

'पुण्डरीकेण सदृशं हृदयं स्यादधोमुखम् ।
जाग्रतस्तद्विकसति स्वपतश्च निमीलति ॥'

(सुश्रत० शारीर—४र्थ अध्याय) ।

ಇಲ್ಲಿ ರಕ್ತವಹಗಳಾದ 'ಧಮನೀ' ಗಳಿಗೆ ಆಶ್ರಯವಾಗಿ ಮಾಂಸಮಯ ವಾದ 'ಹೃದಯ'ವು 'ಚೇತನಾಸ್ಥಾನ' ವಾಗುವುದು ಶಾರೀರಶಾಸ್ತ್ರಕ್ಕೆ ಅತಿವಿರುದ್ಧವಾದುದು. ಇದು ಸ್ಫುಟವಾಗಿ ಪ್ರತಿಸಂಸ್ಕಾರ ಮಾಡಿದವರ ದೋಷ.

೪. "आमुखात् सलिले न्यस्तः पार्श्वेभ्यः पूर्य्यते नवः ।
घटो यथा तथा विद्धि वस्तिर्मूत्रेण पूर्य्यते ॥"

(निदानं ३य अध्याय)

ಇಲ್ಲಿ ಹೇಳಿರುವಂತೆ ಮೂತ್ರನಿರ್ಮಾಣವಾಗುವ ಬಗೆಯು ವೇದಕ್ಕೂ ಪ್ರತ್ಯಕ್ಷಕ್ಕೂ ಅತ್ಯಂತ ವಿರುದ್ಧವಾಗಿದೆ. ಈ ಪಾಠವನ್ನು ತಿದ್ದಿದಹೊರತು ಈ ವಿರೋಧ ಪರಿಹಾರವಾಗುವುದಿಲ್ಲ. ಸುಶ್ರುತಕಾರರದೇ ತಪ್ಪೆಂದು ಹೇಳಲಾಗುವುದಿಲ್ಲ. ವೇದ ದಲ್ಲಿ "गवीन्योः" ಎಂದೂ, ಸುಶ್ರುತದಲ್ಲಿ "मूत्रवस्तिमभिप्रपन्ने मूत्रवहे द्वे" ಎಂದೂ ಬರೆದಿಲ್ಲವೆ? ಆದ್ದರಿಂದ 'घटो यथा तथा वृक्कौ ततो वस्तिश्च पूर्य्यते' ಎಂದು ನಾವು ತಿದ್ದಿದೇವೆ.

೫. (सिरा धमनी) ಎಂಬ ಪದಗಳು ಒಂದೊಂದು ಸಲ ಒಂದೊಂದ ಅರ್ಥದಲ್ಲಿ ವ್ಯವಸ್ಥೆಯಿಲ್ಲದೆ ಉಪಯೋಗಿಸಲ್ಪಟ್ಟಿವೆ. ನಮ್ಮ ಪ್ರತ್ಯಕ್ಷ ಶಾರೀರದ ಉಪೋದ್ಘಾತದಲ್ಲಿ—ಆ ಪ್ರಯೋಗಗಳನ್ನು ವಿಶದವಾಗಿ ತಿಳಿಸಿದ್ದೇವೆ. ಅದನ್ನೇ ಇಲ್ಲಿ ಪುನಃ ಹೇಳುವುದು ಅನಾವಶ್ಯಕ. ಈ ಪ್ರಯೋಗಗಳನ್ನು ಪೂರ್ತಿ ಯಾಗಿ ನೋಡದೆ ಎಷ್ಟೋಜನ ಪಂಡಿತರು ಈ ಪ್ರಯೋಗದಲ್ಲಿ ಕಂಡುಬಂದ ಅವ್ಯವಸ್ಥಾದೋಷವನ್ನು ಪರಿಹಾರ ಮಾಡಲು ಪ್ರಯತ್ನಪಟ್ಟಿರುವರು. ಆ ವಿರೋಧವೇನೋ ಪರಿಹಾರವಾಗಲಿಲ್ಲ. ಇಷ್ಟು ಸ್ಫುಟವಾದ ದೋಷಗಳನ್ನು ಕಂಡಾಗ್ಯೂ ಸುಶ್ರುತದಲ್ಲಿ ಹೇಳಿರುವ ಶಾರೀರ ತತ್ವವು ಪೂರ್ತಿಯಾಗಿದೆಯೆಂದಾಗಲಿ, ಸರಿ ಯಾಗಿದೆ ಎಂದು ಹೇಳುವುದಾಗಲಿ ಅತಿಸಾಹಸವೇ ಸರಿ.

೬. ಸುಶ್ರುತದಲ್ಲಿ ಉತ್ತರ ತಂತ್ರದಲ್ಲಿ ಕಾಣಬರುವ ನೇತ್ರವರ್ಣನೆಯು ಅತಿ ಸ್ವಲ್ಪವಾಗಿದೆ. ಸರಿಯಾಗಿಯೂ ಇಲ್ಲ. ಆದ್ದರಿಂದ ಇಷ್ಟರಿಂದಲೇ ನೇತ್ರ ತತ್ವವು ಪೂರ್ತಿ ತಿಳಿಯುವುದೂ ಇಲ್ಲ. ಈ ಭಾಗವು ಹೇಗೋ ಲೋಪವಾಗಿರ ಬೇಕು. ಸುಶ್ರುತದ ಉತ್ತರ ತಂತ್ರವನ್ನು ಯಾರು ಯಾವಾಗ ಬರೆದರೆಂಬುದೇ ದೊಡ್ಡ ಸಂದೇಹವಾಗಿದೆ. ಅಲ್ಲಿ ಅಗ್ನಿವೇಶ,ವಿದೇಹ ಮೊದಲಾದ ಪೂರ್ವಾಚಾರ್ಯರ ಹೆಸರುಗಳು ಇವೆ. ಸುಶ್ರುತೋಪದೇಶಕ್ಕೆ ಮುಂಚೆ ಧನ್ವಂತರಿಗೆ ಇತರ ಶಿಷ್ಯರಿದ್ದರೆಂದು ಲೋಕದಲ್ಲಿಯಾಗಲಿ, ಶಾಸ್ತ್ರದಲ್ಲಿಯಾಗಲಿ ಪ್ರಸಿದ್ಧಿಯಿಲ್ಲ. ಆದ್ದ

ರಿಂದ ಉತ್ತರ ತಂತ್ರವು ಹೊಸದಾಗಿ ಸೇರಿಸಲ್ಪಟ್ಟದ್ದೆಂತಲೂ, ಸುಶ್ರುತ ಸಂಹಿತೆಯು ಅಗ್ನಿವೇಶ ತಂತ್ರಗಳಿಗೆ ಈಚೆ ಬರದುದೆಂತಲೂ ಹೇಳಬೇಕಾಗಿದೆ.

ಸುಶ್ರುತದ ಶಾರೀರ ಸ್ಥಾನವನ್ನೂ ಪ್ರತ್ಯಕ್ಷ ಶಾರೀರಶಾಸ್ತ್ರವನ್ನೂ ಹೋಲಿಸಿನೋಡಿದರೆ ಈಗಿರುವ ಸುಶ್ರುತದಿಂದ ಶಾರೀರಜ್ಞಾನವು ಪೂರ್ಣವಾಗುವುದೆಂದು ಹೇಳಲಾಗುವುದಿಲ್ಲ. ಶರೀರ ಸ್ಥಾನವಲ್ಲಿ ಇರುವ 10 ಅಧ್ಯಾಯಗಳ ಪೈಕಿ ಶರೀರವರ್ಣನೆಯಿರುವ ಭಾಗವು 4-5 ಅಧ್ಯಾಯಗಳೇ. ಅದೂ ಅತಿ ಸಂಕ್ಷಿಪ್ತವಾದ ವರ್ಣನೆ. ಬರೆದವರ ಹಸ್ತ ದೋಷಾದಿಗಳು ಬೇರೆ. **ಡಲ್ಹಣರೆಂಬ** ಒಬ್ಬ ಪ್ರಾಚೀನ ಟೀಕಾಕಾರರು ಒಂದೊಂದು ಪದಕ್ಕೂ **ಗಯದಾಸಾದಿ** ಟೀಕಾಕಾರರಿಂದ ಅಂಗೀಕೃತವಾದ ಪಾಠಾಂತರಗಳನ್ನು ತೋರಿಸಿರುವುದನ್ನು ನೋಡಿದರೆ ಯಾವುದು ಸರಿಯಾದ ಪಾಠವೋ ಯಾವುದು ಸರಿಯಲ್ಲವೋ ಹೇಳುವುದೇ ಅಸಾಧ್ಯವಾಗಿದೆ. 'ಶೋಧಯಿತ್ವಾ ಮೃತಂಸಮ್ಯಗ್‌ದ್ರಷ್ಟವ್ಯೋ ಹಿ ವಿನಿಶ್ಚಯಃ' 'ಪ್ರತ್ಯಕ್ಷತಶ್ಚಯತ್ ದೃಷ್ಟಮ್' ಎಂದು ಸುಶ್ರುತಕಾರರು ದೇಹವನ್ನು ತತ್ತರಿಸಿ ಪ್ರತ್ಯಕ್ಷವಾಗಿ ಶಾರೀರ ತತ್ವವನ್ನು ಕಂಡುಹಿಡಿಯಬೇಕೆಂದು ಹೇಳಿದಾರೆ. ಆದರೂ ಈಗ ಶಿಕ್ಕಿರುವ ಸುಶ್ರುತದಿಂದ ಶಾರೀರಶಾಸ್ತ್ರಜ್ಞಾನವು ಸಂಪೂರ್ಣವಾಗುವುದಿಲ್ಲ. ಸುಶ್ರುತದಲ್ಲಿ ಅತಿಶಯವಾದ ಭಕ್ತಿಯಿಡತಕ್ಕವರು ಈ ಮೇಲೆ ಹೇಳಿದ ದೋಷಗಳಿಗೆ ಹೇಗೆ ಪರಿಹಾರವನ್ನು ಹೇಳಿಯಾರು ? ಶಾರೀರ ತತ್ವವಿಚಾರವು ಅಷ್ಟು ಅಲ್ಪವಾಗಿ ಏಕೆ ಇರಬೇಕು ? ಅಷ್ಟುವ್ಯತ್ಯಾಸವೇಕಿರಬೇಕು ? ಅಲ್ಲಿರುವಷ್ಟೆ 'ಸಾಕು' ಎಂದು ಹೇಳುವುದು ತಾನೆ ಹೇಗೆ? ಇದರಿಂದ ಪ್ರಾಚೀನ ಸುಶ್ರುತ ಸಂಹಿತೆಯಲ್ಲಿ ಎಷ್ಟೋ ಭಾಗಗಳು ಕಾಲಕ್ರಮೇಣ ಲೋಪವಾದವೆಂದೂ, ಈಗಿನ ಸುಶ್ರುತವು ಹಿಂದಿನವರ ಕಳೆದುಳಿದುದೆಂತಲೂ, ಯಾವನೋ ಒಬ್ಬ ಶರೀರ ತತ್ವಜ್ಞಾನವಿಲ್ಲದವನು ಇದ್ದದ್ದನ್ನು ತಿದ್ದಿಯೋ ಇಲ್ಲದ್ದನ್ನು ಶೇರಿಸಿಯೋ ಎಷ್ಟೋ ಬದಲಾವಣೆಗಳನ್ನು ಮಾಡಿರಬಹುದೆಂತಲೂ, ಸಾಲದ್ದಕ್ಕೆ ಲೇಖಕನ ದೋಷವೂ ಸೇರಿದೆಯೆಂತಲೂ ನಿಸ್ಸಂದೇಹವಾಗಿ ಹೇಳಬಹುದಾಗಿದೆ. 'ಪ್ರತ್ಯಕ್ಷ ಶಾರೀರ' ಕಾರರು ಪ್ರಾಚೀನವಾದ ಆರ್ಷವಾದ ಗ್ರಂಥವನ್ನು ದೂಷಿಸದಿದ್ದಾಗ್ಯೂ 'ಶಾರೀರೇ ಸುಶ್ರುತೋನಷ್ಟಃ' ಎಂದು ಹೇಳಿದ ಮಾತ್ರಕ್ಕೆ ಅವರ ಶಿರಶ್ಛೇದವನ್ನು ಮಾಡಬೇಕೆಂದು ಹೇಳುವವರು ಬುದ್ಧಿವಂತರ ವಿಷಯದಲ್ಲಿ ತಮಗೆ ಇರಬೇಕಾದ ಕೃತಜ್ಞತೆಯನ್ನು ತೋರಿಸುವುದಿಲ್ಲ.

ಚರಕದ ಅಪಪಾಠಗಳು :—

ಇನ್ನು ಚರಕದ ಅಪಪಾಠಗಳನ್ನು ನೋಡೋಣ!

ಚರಕಸಂಹಿತೆಯ ಚಿಕಿತ್ಸಾಸ್ಥಾನದ ಕೊನೆಯ 17 ಅಧ್ಯಾಯಗಳು, ಕಲ್ಪಸ್ಥಾನ ಮತ್ತು ಸಿದ್ಧಿಸ್ಥಾನಗಳು ಪೂರ್ತಿಯಾಗಿ ಧೃಡಬಲಾಚಾರ್ಯರಿಂದ ಮಾಡಲ್ಪಟ್ಟವೆಂದು ಚರಕವಾಕ್ಯಗಳ ಸಮ್ಮತಿಯಿಂದಲೇ ತೋರಿಸಿದ್ದೇವೆ. ಪ್ರಾಚೀನ ಟೀಕಾಕಾರರು ಅಗ್ನಿವೇಶತಂತ್ರದಿಂದ ಎತ್ತಿತೋರಿಸಿದ ಕೆಲವು ಪಾಠಗಳು ಈಗಿನ ಚರಕಪ್ರತಿಸಂಸ್ಕೃತವೂ, ಧೃಡಬಲಾಪೂರಿತವೂ ಆದ ಅಗ್ನಿವೇಶತಂತ್ರದಲ್ಲಿ ಕಂಡುಬರುವುದಿಲ್ಲವೆಂದು ನಮ್ಮ ಪ್ರತ್ಯಕ್ಷ ಶಾರೀರೋಪೋದ್ಘಾತದಲ್ಲಿ ಅಲ್ಲಲ್ಲಿನ ಪಾಠಗಳನ್ನು ಎತ್ತಿತೋರಿಸಿದ್ದೇವೆ. ಇನ್ನೊಂದು ವಿಷಯ. ಚರಕದ ವಿಮಾನಸ್ಥಾನದ 'ಜನಪದೋಧ್ವಂಸನೀಯಾಧ್ಯಾಯ'ದ ಕೊನೆಯಭಾಗದಲ್ಲಿ, ಇದ್ದಕ್ಕಿದ್ದ ಹಾಗೆ ಜ್ವರಬಂದವನಿಗೆ ಬಿಸಿನೀರು ಕುಡಿಸಿದರೆ ಒಳ್ಳೆಯದು ಎಂದು ಹೇಳಿದ್ದೆ ಇದಕ್ಕೂ ಪೂರ್ವಪ್ರಕರಣಕ್ಕೂ ಸಂಬಂಧವೇ ಇಲ್ಲ. ಇದರಿಂದ ಈ ಭಾಗದಲ್ಲಿ ಎರಡು ಅಧ್ಯಾಯಗಳು ಲೋಪವಾಗಿದೆಯೆಂದೂ, ಈ ಅಸಂಬಂಧವಾದ ಭಾಗವು ಲುಪ್ತಶೇಷವೆಂದೂ ಸ್ಫುಟವಾಗಿ ಗೊತ್ತಾಗುತ್ತದೆ. ಆದ್ದರಿಂದಲೇ ವಾಗ್ಭಟಾಚಾರ್ಯರು ಚರಕಸುಶ್ರುತಗಳು ಅನಾರ್ಷಗಳೆಂದು ಹೇಳುತ್ತಾ

ಋಷಿಪ್ರಣೀತೆ ಪ್ರೀತಿಶ್ಚೇನ್ಮುಕ್ತ್ವಾಚರಕ ಸುಶ್ರುತೌ ।
ಭೇಡಾದ್ಯಾಃ ಕಿಂ ನ ಪಠ್ಯಂತೆ ತಸ್ಮಾದ್ಗ್ರಾಹ್ಯಂ ಸುಭಾಷಿತಂ ॥

(ಅಷ್ಟಾಂಗ ಹೃದಯ. ಉತ್ತರ 40 ಅಧ್ಯಾಯ)

ಎಂಬುದಾಗಿ ಹೇಳಿದ್ದಾರೆ. ಈ ಶ್ಲೋಕವನ್ನು ವ್ಯಾಖ್ಯಾನಮಾಡುವ ಕಾಲದಲ್ಲಿ ಅರುಣದತ್ತನು ಹೀಗೆ ಬರೆದಿರುವನು. "ಅತಶ್ಚರಕಸುಶ್ರುತವದನಾರ್ಷಮಪಿ ಇದಂಗುಣವತ್ತ್ವಾತ್ ಗ್ರಾಹ್ಯಮೇವ." ವಿಜಯರಕ್ಷಿತಾಚಾರ್ಯನೂ ಕೂಡ ಮಾಧವನಿದಾನದ ವ್ಯಾಖ್ಯಾನಕಾಲದಲ್ಲಿ ಚರಕದಪಾಠಗಳನ್ನು ಉದಹರಿಸುವಾಗ "ಯಥಾಹಧೃಡಬಲಃ" ಎಂದು ಸ್ಪಷ್ಟವಾಗಿ ಹೇಳುವುದರಿಂದ ಆಯಾಭಾಗಗಳು ಅನಾರ್ಷವೆಂಬುದು ಆತನ ಅಭಿಪ್ರಾಯವೆಂದು ವ್ಯಕ್ತವಾಗುವುದಾಗಿ ಆಗಲೇ ಹೇಳಿದ್ದೇವೆ. ಹೀಗೆ ಸುಶ್ರುತದಂತೆ ಚರಕದಲ್ಲಿಯೂ ಪಾಠಾಂತರಗಳು ಕಂಡುಬರುವುದರಿಂದ ಎಷ್ಟೋ ಬದಲಾವಣೆಗಳೂ ಆಗಿವೆ ಎಂಬುದು ಸ್ಪಷ್ಟವಾಯಿತು. ಈ ಕಾರಣಗಳಿಂದ ಈಗಿನ ಚರಕಸುಶ್ರುತಗಳು ಪೂರ್ತಿಯಾಗಿ ಋಷಿಪ್ರಣೀತವೇ ಎಂಬ ಕುರುಡುನಂಬಿಕೆಯು ಸಾಕು. ಆದರೆ ಋಷಿಗಳು ಬರೆದುದಾಗಲಿ ಬೇರೆಯ

ವರು ಬರೆದುದಾಗಲಿ ವಸ್ತು ತತ್ತ್ವವನ್ನು ಅನುಸರಿಸಿದ ಮಾತುಗಳಾಗಿದ್ದಲ್ಲಿ ಮಾತ್ರ ಅಂಗೀಕಾರಾರ್ಹಗಳೆಂದು ಎಲ್ಲರೂ ಒಪ್ಪಿದ ವಿಷಯವೇ.

ಇಂತಹ ವಿಷಮವಾದ ಸ್ಥಿತಿಯಲ್ಲಿಯೂ ಈಗಿನ ಚರಕದಲ್ಲಿಯೂ ಕೂಡ ಎಷ್ಟೋ ಅಮೂಲ್ಯವಾದ ವಿಷಯಗಳಿವೆ. ಮತ್ತು ಈಚೆಗೆ ಪ್ರಸಿದ್ಧಪಡಿಸಲ್ಪಟ್ಟ "ಚತುರಾನನಾಚಾರ್ಯಚಕ್ರಪಾಣಿ" ಯಿಂದ ರಚಿತವಾದ ಟೀಕೆಯಿಂದ, ಪೂರ್ವದಲ್ಲಿ ಅರ್ಥವಾಗದಿದ್ದ ಎಷ್ಟೋ ಚರಕಪಾಠಗಳು ಸುಲಭವಾಗಿ ಅರ್ಥವಾಗುವಂತೆಯೂ, ಸಂಶೋಧನಕ್ಕೆ ಅರ್ಹವೂ ಆದವು. ಈ ವ್ಯಾಖ್ಯಾನವನ್ನು ಪ್ರಸಿದ್ಧಿಪಡಿಸಿದ ಶ್ರೀ ವಾಮನಶಾಸ್ತ್ರೀದಾತಾರರವರಿಗೆ ನಮ್ಮ ವೈದ್ಯಸಹೋದರರು ಋಣಿಗಳಾಗಿರಬೇಕು. ಈ ಗ್ರಂಥವನ್ನು ಪುನಃ ಆವೃತ್ತಿಮಾಡಿ ಇದಕ್ಕಿಂತಲೂ ಶುದ್ಧವಾದ ಪ್ರತಿಯನ್ನು ಪ್ರಸಿದ್ಧಿಪಡಿಸಿ ನಮ್ಮ ಕೃತಜ್ಞತೆಗೆ ಅವರು ಪಾತ್ರರಾಗಲೆಂದು ಹಾರೈಸುತ್ತೇನೆ.

ಈಗ ನಮ್ಮಲ್ಲಿರುವ ಸುಶ್ರುತ ಸಂಹಿತಾವಿಷಯದಲ್ಲಿಯೂ ಇದೇ ನಮ್ಮಭಿಪ್ರಾಯವು. ಸುಶ್ರುತದಲ್ಲಿ ಎಷ್ಟೋ ಭಾಗಗಳು ಲೋಪವಾಗಿದ್ದಾಗ್ಯೂ ಅನೇಕ ತಿದ್ದುಪಾಟುಗಳೂ ಮತ್ತು ಹೊಸಗ್ರಂಥ ರಚನೆಯೂ ಆಗಿದ್ದಾಗ್ಯೂ ಲೇಖಕರ ದೋಷಗಳಿದ್ದಾಗ್ಯೂ ಶರೀರಸ್ಥಾನವೊಂದು ಬಿಟ್ಟು ಉಳಿದ ಅಂಶಗಳಲ್ಲಿ ಪ್ರಾಚೀನ ಶಲ್ಯಶಾಲಾಕ್ಯಾದಿ ತಂತ್ರಗಳ ಅಮೂಲ್ಯವಾದ ವಿಷಯಗಳು ಬೇಕಾದಷ್ಟಿವೆ. ಆದ್ದರಿಂದ ಅದನ್ನು ನಾವು ಅನಾದರಣ ಮಾಡುವುದಕ್ಕೆ ನ್ಯಾಯವಿಲ್ಲ. ಆ ಸುಶ್ರುತವನ್ನು ಗಯದಾಸ, ಚಕ್ರಪಾಣಿ, ಜೆಜ್ಜಟ, ಭಾಸ್ಕರ, ಬ್ರಹ್ಮದೇವಾದಿಗಳು ಮಾಡಿರುವ ಪ್ರಾಚೀನ ಟೀಕೆಗಳೊಡನೆ ಪ್ರಕಾಶಪಡಿಸಿದಲ್ಲಿ ವೈದ್ಯಜ್ಞಾನಕ್ಕೆ ಬಹು ಉಪಕಾರವಾದೀತು. ಅನೇಕ ಅಪಪಾಠಗಳನ್ನು ತಿದ್ದಬಹುದು. ಈಗ ಅರ್ಥವಾಗದ ಪಾಠಗಳು ಅರ್ಥವಾಗಬಹುದು.

ಭೇಲಸಂಹಿತೆಯು ಪೂರ್ವದಲ್ಲಿ ಸಿಕ್ಕುತ್ತಿರಲಿಲ್ಲ. ಕಳೆದುಳಿದಿರುವ ಆ ಗ್ರಂಥದ ಪ್ರತಿಯೊಂದನ್ನು ತಂಜಾವೂರಿನ ಲೈಬ್ರೆರಿಯಿಂದ ತರಿಸಿ, ಇದ್ದ ಗ್ರಂಥವನ್ನು ಹಾಗೆಯಾದರೂ, ಕಲ್ಕತ್ತಾ ವಿಶ್ವವಿದ್ಯಾಲಯದವರು ಪ್ರಸಿದ್ಧಿಪಡಿಸಿ ನಮಗೆ ಬಹಳ ಉಪಕಾರಮಾಡಿದಾರೆ. ಈ ಗ್ರಂಥವನ್ನು ನೋಡಿದರೆ ಎಷ್ಟು ಬದಲಾವಣೆಗಳಾಗಿರಬಹುದೆಂದು ತಿಳಿಯಬಹುದಲ್ಲದೆ ಅದರ ದೃಷ್ಟಾಂತದಿಂದ ಚರಕಸುಶ್ರುತಗಳಿಗೂ ಆಗಿರುವ ದೌರವಸ್ಥ್ಯವನ್ನೂ ತಿಳಿಯಬಹುದು. ಆ ಗ್ರಂಥದಲ್ಲಿ ಮಗ್ಗುಲಲ್ಲಿಯೇ ಅಲ್ಲಲ್ಲಿ ಪಾಠಾಂತರಗಳು ಕೊಡಲ್ಪಟ್ಟವೆ. ಅವುಗಳನ್ನು ನೋಡಿ

ದರೆ ಈ ವೈದ್ಯಶಾಸ್ತ್ರದ ಗಂಧವೇ ಇಲ್ಲದ ಯಾವನೋ ಒಬ್ಬ ವೇದಾಂತಿಯು ತನ್ನ ಇಷ್ಟಬಂದಂತೆ ಬದಲಾಯಿಸಿರುವನೆಂದೂ ಇದರಂತೆಯೇ ಇನ್ನೂ ಬೇಕಾದಷ್ಟು ಬದಲಾವಣೆಗಳನ್ನು ಮಾಡಿರಬಹುದೆಂದೂ ಸ್ಪಷ್ಟವಾಗಿ ತಿಳಿಯುಬರುತ್ತದೆ. ಈ ಮಹಾನುಭಾವನು ಸುಮಾರು ೨೦೦೦ ವರ್ಷಗಳ ಕೆಳಗೆ ಇದ್ದಿದ್ದರೆ ದೃಢಬಲಾದಿಗಳು ಮಾಡಿದಂತೆ ಲುಪ್ತವಾಗಿರುವ ಅಧ್ಯಾಯಗಳನ್ನು ಪೂರ್ತಿಮಾಡಿ ಅವಕ್ಕೂ ಪೂರ್ವ ಗ್ರಂಥಕರ್ತೃವಿನ ಹೆಸರನ್ನೇ ಇಡುತ್ತಿದ್ದನೆಂತ ಹೇಳಬಹುದು.

ಹೀಗೆ ಕಳೆದುಳಿದ ಭೇಲಸಂಹಿತೆಯಲ್ಲಿಯೂ ಈಗಿನ ಚರಕಸುಶ್ರುತದಲ್ಲಿ ದೊರೆಯದ ಶಾರೀರಶಾಸ್ತ್ರದ ತತ್ವಗಳು ಕಂಡುಬರುತ್ತವೆ. ಅದರಿಂದ ನಾಡೀ ತತ್ವದ ವಿಷಯದಲ್ಲಿ ಎಷ್ಟೋ ಹೊಸ ಅಂಶಗಳು ಗೊತ್ತಾಗುತ್ತವೆ.

ಇನ್ನೊಂದು ವಿಷಯ. ಪ್ರಾಚೀನ ಟೀಕಾಕಾರರು ಅಲ್ಲಲ್ಲಿ ಸಮ್ಮತಿಗಾಗಿ ಉದಹರಿಸಿದ ಗ್ರಂಥಭಾಗಗಳು ಈಗ ಎಲ್ಲಿವೆಯೋ ಗೊತ್ತೇಇಲ್ಲ. ನಮ್ಮ ಗ್ರಂಥದ ಉಪೋದ್ಘಾತದಲ್ಲಿ ಈ ವಿಷಯವನ್ನು ವಿಸ್ತಾರವಾಗಿ ಬರೆದಿದೇವೆ. ಇದರಿಂದ ಪೂರ್ವದಲ್ಲಿ ಶಲ್ಯಶಾಲಕ್ಯಾದಿ ತಂತ್ರಗಳ ನೂರಾರು ಸಂಹಿತೆಗಳು ಇದ್ದಿರಬೇಕೆಂದು ಖಂಡಿತವಾಗಿ ಹೇಳಬಹುದು. ಅದನ್ನು ಹುಡುಕುವುದಕ್ಕೆ ಪ್ರಯತ್ನಮಾಡುವುದನ್ನು ಬಿಟ್ಟು ಈಗ ಸಿಕ್ಕಿರುವ ಚರಕಾದಿಗ್ರಂಥಗಳಿಂದ ತೃಪ್ತಿಹೊಂದುವುದು ನ್ಯಾಯವಿಲ್ಲ. ಎಷ್ಟೋ ಲೋಪವಾದ ಭಾಗಗಳು ಸಿಕ್ಕದಿರುವಾಗ ಆಯುರ್ವೇದ ಶಾಸ್ತ್ರದ ಮಹಿಮೆ ತಾನೇ ಹೇಗೆ ತಿಳಿದೀತು?

ಆಯುರ್ವೇದವಿದ್ಯೆಯ ಪ್ರಾಣವನ್ನು ಹೀರುತ್ತಿರುವ ರೋಗಗಳ ವಿಷಯವನ್ನು ಇದುವರೆಗೂ ಹೇಳಿದೆವು. ಈ ಸಮ್ಮೇಳನದ ಪೂರ್ವಸಭಾಪತಿಗಳೂ ಇತರ ವೈದ್ಯರೂ ನಾವೂ ಕೂಡ ಈ ವೈದ್ಯವನ್ನು ಬೇಕಾದಷ್ಟು ಪ್ರಶಂಸೆಮಾಡಿದ್ದೇವೆ. ದೈವವಶಾತ್ ನಮ್ಮ ವೈದ್ಯದಿಂದಾಗುವ ಪ್ರಯೋಜನವು ಜನರ ಮನಸ್ಸಿಗೆ ಬೇಕಾದಷ್ಟು ಬಂದಿದೆ. ಬರೀ ಪ್ರಶಂಸೆಯಿಂದ ಇನ್ನೇನೂ ಉಪಯೋಗವಿಲ್ಲ. ಆದ್ದರಿಂದ ನಮ್ಮ ದೋಷವನ್ನು ತಿಳಿದುಕೊಂಡು ಶಾಸ್ತ್ರವನ್ನು ಸಂಸ್ಕಾರ ಮಾಡಬೇಕೆಂದರೆ ಇದೇ ಸುಸಮಯ. ಈ ವಿಷಯದಲ್ಲಿ ವೈದ್ಯರು ಸಾವಕಾಶ ಮಾಡಬಾರದು. ಈಗ್ಗೆ ಎರಡುಮೂರು ಸಾವಿರ ವರ್ಷಗಳ ಕೆಳಗೆ ನಮ್ಮ ಭಾರತದೇಶದ ಪಂಡಿತರೆ ಗ್ರೀಸ್ ಮೊದಲಾದ ದೇಶಗಳಿಗೆಲ್ಲಾ ಜ್ಞಾನಗುರುಗಳಾಗಿದ್ದರು. ಅದರಂತೆಯೇ ನಮ್ಮ ವೈದ್ಯಶಾಸ್ತ್ರವೂ ಎಲ್ಲಾ ಚಿಕಿತ್ಸಾಶಾಸ್ತ್ರಗಳಿಗೂ ಮಾರ್ಗದರ್ಶಕವಾಗಿತ್ತು. ಆದರೂ ಇಂತಹ ದುರ್ದಶೆ ನಮ್ಮ ಭಾರತೀಯ ವಿದ್ಯೆಗೆಲ್ಲಾ ಬಂದಿರು

ವಂತೆ ನಮ್ಮ ವೈದ್ಯಕ್ಕೂ ಬಂದಿದೆ. ಭಗವಂತನ ಅನುಗ್ರಹದಿಂದ ಪುರಾತನ ಶಾಸ್ತ್ರಗಳು ಹೇಗೋ ಇನ್ನೂ ನಿಂತಿವೆ. ಅದರಲ್ಲಿಯೂ ಉತ್ತಮವಾದ ನಮ್ಮ ವೈದ್ಯವಿದ್ಯೆಯೂ ತ್ರಿದೋಷತತ್ವವೇ ಮೊದಲಾದ ಗಹನವಾದ ವಿಷಯವನ್ನೂ, ಉತ್ತಮವಾದ ಚಿಕಿತ್ಸಾಪದ್ಧತಿಯನ್ನೂ ಒಳಗೊಂಡು ಭಾರತೀಯ ಜನರಿಗೆ ಪರಮೋಪಕಾರಕವಾಗಿ ಈವತ್ತಿಗೂ ಪ್ರಚಾರದಲ್ಲಿ ನಿಂತಿದೆ. ಇಷ್ಟು ಮಾತ್ರದಿಂದ ವೈದ್ಯಶಾಸ್ತ್ರವು ಅಪೂರ್ಣವಾಗಿದೆಯೆಂಬ ಮಾತನ್ನು ಮಾತ್ರ ಮರೆಯಬಾರದು. ಭಾರತೀಯ ಜನರೆಲ್ಲರೂ ಈ ಶಾಸ್ತ್ರದಿಂದ ಪೂರ್ಣಫಲವನ್ನು ಪಡೆಯಲೆಂಬ ಆಶೆಯು ನಮಗೆ ಇದ್ದರೆ ಅದನ್ನು ಅತ್ಯುತ್ತಮಸ್ಥಿತಿಗೆ ತರುವುದಕ್ಕೆ ನಾವು ಪ್ರಯತ್ನಿಸಬೇಕು. ಕೆಲವು ವ್ಯಾಧಿಗಳಿಗೆ ಔಷಧಕೊಡುವುದು ಮಾತ್ರವೇ ಅಲ್ಲ, ಶಲ್ಯಶಾಲಾಕ್ಯಾದಿ ಎಲ್ಲಾ ವಿಷಯಗಳಲ್ಲಿಯೂ ನಮ್ಮ ವೈದ್ಯವು ಆದರ್ಶಪ್ರಾಯವಾಗಿರುವಂತೆ ಮಾಡಬೇಕು.

ನಮ್ಮ ಪ್ರಾಶಸ್ತ್ಯವನ್ನು ಹೆಚ್ಚುಮಾಡಿಕೊಳ್ಳಬೇಕಾದರೆ ಆಯುರ್ವೇದದ ಮಾಹಾತ್ಮ್ಯದ ಸ್ತೋತ್ರಪಾಠದಿಂದ ಆಗುವುದಿಲ್ಲ. ಹೇಗಿದ್ದರೂ ಇರಲೆಂದು ಅಭಿಮಾನಿಗಳು ಕೆಲವರು ತೃಪ್ತಿಪಟ್ಟರೂ ಕೂಡ ಎಲ್ಲರ ಮನಸ್ಸಿನಲ್ಲಿಯೂ ನಮ್ಮ ವೈದ್ಯದಲ್ಲಿ ಪೂರ್ಣ ವಿಶ್ವಾಸವನ್ನುಂಟುಮಾಡಬೇಕಾದರೆ ನಾವೆಲ್ಲರೂ ವೈದ್ಯವಿದ್ಯೆಯನ್ನು ಅತ್ಯುತ್ತಮಸ್ಥಿತಿಗೆ ತರಬೇಕೆಂದು ದೀಕ್ಷೆವಹಿಸಲೇಬೇಕು.

ಹೀಗೆ ವೈದ್ಯಕ್ಕೆ ಸಂಸ್ಕಾರಮಾಡಬೇಕಾದರೆ ನಾವು ಅವಲಂಬಿಸಬೇಕಾದ ಮಾರ್ಗಗಳನ್ನು ಈ ಕೆಳಗೆ ಯೋಚನೆಮಾಡೋಣ.

1. ಮೊದಲು ಚರಕ ಸುಶ್ರುತ, ವಾಗ್ಭಟಾದಿ ಗ್ರಂಥಗಳನ್ನು ಪುನಃ ಶೋಧನೆಮಾಡಿ ವ್ಯಾಖ್ಯಾನಗಳೊಡನೆ ಶುದ್ಧವಾಗಿ ಮುದ್ರಣಮಾಡಿ ಪ್ರಕಾಶಪಡಿಸಬೇಕು. ಈ ಕೆಲಸವನ್ನು 'ನಿಖಿಲಭಾರತಾಯುರ್ವೇದ ವಿದ್ಯಾಪೀಠದ ಅಧಿಕಾರಿಗಳಿಗೂ, ಹಿಂದೂ ಯೂನಿವರ್ಸಿಟಿಯ ಅಧಿಕಾರಿಗಳಿಗೂ ಒಪ್ಪಿಸಬೇಕು. ಚರಕ ಸುಶ್ರುತಾದಿ ಗ್ರಂಥಗಳಲ್ಲಿ ಕಂಡುಬರುವ ಸಂದಿಗ್ಧಪಾಠಗಳನ್ನು ಆಗ್ರಹವಿಲ್ಲದೆ ಪರೀಕ್ಷೆಮಾಡುವುದಲ್ಲದೆ ಪಂಡಿತರು ಉಚಿತವಾದ ಪಾಠಗಳನ್ನು ಸೂಚಿಸಬೇಕು. ಆಯುರ್ವೇದ ವಿದ್ಯಾಪೀಠದವರು ನಿಶ್ಚಯಿಸಿರುವ ವ್ಯಾಸಂಗಕ್ರಮವನ್ನು ಅನುಸರಿಸಿ ಹೊಸಹೊಸ ಗ್ರಂಥಗಳನ್ನು ವ್ಯಾಸಂಗಿಗಳ ಉಪಯೋಗಕ್ಕಾಗಿ ಬರೆಯಬೇಕು. ಅಂಥಾ ಗ್ರಂಥಗಳನ್ನು ಬರೆದ ಮಹನೀಯರಿಗೆ ಉಚಿತವಾದ ಸನ್ಮಾನವನ್ನು ಮಾಡಬೇಕು. ಅಂಥಾ ಗ್ರಂಥಗಳನ್ನು ಮಾಡಲು ಕೆಲವರು ಪ್ರಯತ್ನ

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

1930.

ಶ್ರೀ|| ಎಂ. ವಿ. ಜಂಬುನಾಥ್, M.A., B.Sc.,
(ಇಂಟರ್ ಕಾಲೇಜು, ಮೈಸೂರು.)
ಸೇವಾಶಾಖೆಯ ಸೆಕ್ರೆಟರಿಗಳು.

ಶ್ರೀ|| ವಿದ್ವಾನ್ ಕೆ. ಶ್ರೀಪಾದಾಚಾರ್ಯ, M.A.,
(ಗೌ|| ಹೈಸ್ಕೂಲು, ಮೈಸೂರು.)
ಸಮ್ಮೇಳನಶಾಖೆಯ ಸಹಾಯಸೆಕ್ರೆಟರಿಗಳು.



ಶ್ರೀ|| ಎನ್. ನಾಗೇಶರಾಯರು, M.A.,
(ಇಂಟರ್ ಕಾಲೇಜು, ಮೈಸೂರು.)
ಪ್ರದರ್ಶನಶಾಖೆಯ ಸಹಾಯಸೆಕ್ರೆಟರಿಗಳು.

ಮಾಡಿದರು. ಆದರೂ ಸಫಲವಾದಂತೆ ತೋರಲಿಲ್ಲ. ಹಾಗೆ ಬರೆದ ಗ್ರಂಥಗಳನ್ನು ಪರೀಕ್ಷೆಮಾಡುವುದಕ್ಕೋಸ್ಕರ ನಿಖಿಲಭಾರತಾಯುರ್ವೇದಮಂಡಲದವರು ಒಂದು ಸಮಿತಿಯನ್ನು ಏರ್ಪಾಡು ಮಾಡಬೇಕು. ಗ್ರಂಥಗಳನ್ನು ಸಂಸ್ಕೃತಭಾಷೆಯಲ್ಲಿಯೋ, ಹಿಂದೀಭಾಷೆಯಲ್ಲಿಯೋ ಬರೆಯಬಹುದು. ಆದರೆ ಸಂಸ್ಕೃತದಲ್ಲಿ ಬರೆದರೆ ಭಾರತದೇಶದಲ್ಲಿ ಎಲ್ಲಾ ಕಡೆಯಲ್ಲಿಯೂ ಪ್ರಚಾರಕ್ಕೆ ಅನುಕೂಲವುಂಟು. ಅದು ಸಾಧ್ಯವಿಲ್ಲದಿದ್ದರೆ ಹಿಂದೀಭಾಷೆಯು ರಾಷ್ಟ್ರಭಾಷೆಯಾಗುವುದರಿಂದ ಹಿಂದೀಭಾಷೆಯಲ್ಲಿಯೂ ಬರೆಯಬಹುದು. ನಮ್ಮಲ್ಲಿ ಕಳೆದುಹೋಗಿರುವ ವಿಷಯಗಳನ್ನು ಪೂರ್ಣಮಾಡಬೇಕಾದರೆ ಪಾಶ್ಚಾತ್ಯ ಶಾರೀರಶಾಸ್ತ್ರಗಳನ್ನು ದೇಶಭಾಷೆಗಳಲ್ಲಿಯೋ ಸಂಸ್ಕೃತದಲ್ಲಿಯೋ ಅನುವಾದ ಮಾಡಬೇಕು. ಆದರೆ ಅವುಗಳನ್ನು ಉಪಯೋಗಿಸುವ ಸಾಂಕೇತಿಕಶಬ್ದಗಳನ್ನು ಶಾಸ್ತ್ರಜ್ಞರೆಲ್ಲರೂ ಸೇರಿ ನಿಶ್ಚಯಿಸಬೇಕು.

ನಮ್ಮ ಜೀರ್ಣವಾದ ವೈದ್ಯಶಾಸ್ತ್ರದಲ್ಲಿಯೂ ವಿದೇಶಿಯರಿಗೆ ತಿಳಿಯದ ಅನೇಕ ಅಂತಗಳು ಇವೆ. ಅವನ್ನು ಪ್ರಕಾಶಪಡಿಸಿದರೆ ಪ್ರಪಂಚದ ಪ್ರಸಿದ್ಧ ಪಂಡಿತರೂ ಕೂಡಾ ಎಷ್ಟೋ ಆಶ್ಚರ್ಯಪಡುವರು. ಅಂತಹ ವಿಷಯಗಳನ್ನೂ ಕೂಡ ಮೇಲೆ ಹೇಳಿದ ಅನುವಾದ ಗ್ರಂಥಗಳಲ್ಲಿ ಸೇರಿಸಬೇಕೆಂದು ನಮ್ಮ ಆಪೇಕ್ಷೆ.

೨. ನಿಖಿಲಭಾರತಾಯುರ್ವೇದವಿದ್ಯಾಪೀಠದ ಪರೀಕ್ಷಾಕ್ರಮದಲ್ಲಿಯೂ ಕೆಲವು ಬದಲಾವಣೆಗಳನ್ನು ಜಾಗ್ರತೆಯಾಗಿಯೇ ಮಾಡಬೇಕಾಗಿದೆ. ಪರೀಕ್ಷೆಗೆ ಇಟ್ಟಿರುವ ಪ್ರತಿಯೊಂದು ಭಾಗದಲ್ಲಿಯೂ ಅನುಭವವೆಷ್ಟಿದೆಯೆಂಬುದನ್ನು ನೋಡಲು ಪರೀಕ್ಷೆಗಳನ್ನು (Practical Examination) ಹೆಚ್ಚಿಸುತ್ತಾ ಬರಬೇಕು. ಮುಂದೆ ಬರುವ ವೈದ್ಯರಿಗೆ ಜ್ಞಾನವೂ, ಯೋಗ್ಯತೆಯೂ ಹೆಚ್ಚಾಗುವಂತೆ ಪರೀಕ್ಷಾದರ್ಜೆಯನ್ನು ಹೆಚ್ಚಿಸಬೇಕು. ನಿಷ್ಕಲಂಕವಾಗಿ ಪರೀಕ್ಷೆ ನಡೆಯಬೇಕಾದರೆ ಪರೀಕ್ಷಾಸ್ಥಳಗಳನ್ನು ಹೆಚ್ಚುಮಾಡಬಾರದು. ವಿದ್ಯಾಪೀಠದ ಪರೀಕ್ಷಾಕ್ರಮವನ್ನು ಅನುಸರಿಸಿದ ಶಿಕ್ಷಣವನ್ನು ಕೊಡಲು ಅರ್ಹವಾದ ವೈದ್ಯಶಾಲೆಗಳಾಗಲಿ ಪಾಠಶಾಲೆಗಳಾಗಲಿ ಇಲ್ಲವೆಂಬುದೇನೋ ಕೊರತೆಯೇ. ಈಗಿರುವ ಅನೇಕ ಶಾಲೆಗಳು ಅಂಥ ಉತ್ತಮವಾದ ಶಿಕ್ಷಣವನ್ನು ಕೊಡುತ್ತಿಲ್ಲವೆಂಬುದೂ ನಿಜ. ಅಂಥ ಉತ್ತಮವಾದ ಶಿಕ್ಷಣದ ಪ್ರಯೋಜನವು ಜನರ ಮನಸ್ಸಿಗೆ ಬಂದರೆ ಕ್ರಮೇಣ ಅಂಥ ಶಾಲೆಗಳೂ ಏರ್ಪಡುವುವೆಂಬುದರಲ್ಲಿ ಸಂದೇಹವಿಲ್ಲ.

(3) ನಮ್ಮ ವೈದ್ಯವಿದ್ಯಾಲಯಗಳಲ್ಲಿ ಆಯುರ್ವೇದ ಶಾಸ್ತ್ರದಲ್ಲಿಯೂ ಪಾಶ್ಚಾತ್ಯ ವೈದ್ಯದಲ್ಲಿಯೂ ಸುಶಿಕ್ಷಿತರಾದ ಗುರುಗಳನ್ನು ತಂದಿಡಬೇಕು. ಅಂಥ

ವರು ಸಿಕ್ಕದಿದ್ದರೆ ತಯಾರುಮಾಡುವುದಕ್ಕೆ ಮಹಾವಿದ್ಯಾಲಯಗಳನ್ನು ಸ್ಥಾಪಿಸಿ ಒಂದು ಶಾಸ್ತ್ರದಲ್ಲಿ ಪರಿಣತರಾದವರಿಗೆ ಇತರ ಶಾಸ್ತ್ರದಲ್ಲಿ ಶಿಕ್ಷಣಕೊಡುವಂತೆ (Post Graduate Course) ಮಹಾವಿದ್ವತ್‌ಶಿಕ್ಷಣಕ್ಕೆ ಅನುಕೂಲಗಳನ್ನು ಕಲ್ಪಿಸಬೇಕು.

ಪೂರ್ವದಂತೆ ಗುರುಕುಲವಾಸಮಾಡಿ ವಿದ್ಯೆಯನ್ನು ಅಭ್ಯಾಸಮಾಡುವ ಪದ್ಧತಿಯು ಹೋಯಿತು. ಆದಕ್ಕೆ ಬದಲಾಗಿ ಸ್ಕೂಲು ಮತ್ತು ಕಾಲೇಜುಗಳು ಬಂದಿವೆ. ಗುರುಗಳೊಡನೆ ಸಾಕ್ಷಾತ್ಸಂಸರ್ಗದಿಂದ ವಿದ್ಯೆಯು ಫಲಿಸುವಂತೆ ಈ ಹೊಸ ಪದ್ಧತಿಯಲ್ಲಿ ಫಲಿಸುವುದಿಲ್ಲವೆಂಬುವುದೇನೋ ನಿಜ. ಆದರೆ ಅಂಥ ಗುರು ಕುಲಗಳಲ್ಲಿ ನಿಯಮಾನುಸಾರ ವ್ಯಾಸಂಗ ನಡೆಯುವುದೂ ಇಲ್ಲ. ಹಾಗೆ ವ್ಯಾಸಂಗ ಮಾಡಿದವರ ಯೋಗ್ಯತೆಯನ್ನು ನಿರ್ಣಯಿಸುವುದಕ್ಕೆ ತಕ್ಕ ಸಾಧನೆಯೂ ಇಲ್ಲ. ಆದರೂ ಬರಿವೈದ್ಯನಾಮಧಾರಿಗಳೇನೋ ಹೊರಗೆ ಬರುತ್ತಿರುವರು. ಪುರಾತನ ವ್ಯಾಸಂಗಕ್ರಮವನ್ನೂ ನವೀನಕ್ರಮಗಳನ್ನೂ ಒಳಗೊಂಡ ಮಧ್ಯಸ್ಥವಾದ ಶಿಕ್ಷಣವನ್ನು ಕೊಡುವ ವಿದ್ಯಾಲಯಗಳನ್ನು ಹಿಂದೂ ಯೂನಿವರ್ಸಿಟಿಯಂಥವರು ಮಾಡುವುದಾದರೆ ಆಯುರ್ವೇದಕ್ಕೆ ಬಹು ಉಪಕಾರವಾದೀತು. ಅಂಥ ಏರ್ಪಾಡು ಆಗುವವರೆಗೂ ಈಗಿರುವ ವಿದ್ಯಾಶಾಲೆಗಳಲ್ಲಿಯೇ ಉಚಿತವಾದ ಬದಲಾವಣೆಗಳನ್ನು ಮಾಡಿಕೊಳ್ಳಬೇಕು.

ಇನ್ನೊಂದು ವಿಷಯ ಜ್ಞಾಪಕದಲ್ಲಿರಬೇಕು. ವೈದ್ಯಶಾಸ್ತ್ರವನ್ನು ವ್ಯಾಸಂಗಮಾಡಲಪೇಕ್ಷೆಯುಳ್ಳವರು ಉಪಯುಕ್ತಕಾವ್ಯವ್ಯಾಕರಣಾದಿಗಳನ್ನು ಅಧ್ಯಯನ ಮಾಡಿದ ಹೊರತು ವೈದ್ಯಶಾಸ್ತ್ರವ್ಯಾಸಂಗಕ್ಕೆ ಅರ್ಹರಲ್ಲ.

ವೈದ್ಯಶಾಸ್ತ್ರವನ್ನು ಕಲಿಯುವುದಕ್ಕೂ, ಕಾವ್ಯವನ್ನು ಕಲಿಯುವುದಕ್ಕೂ ಬಹಳ ವ್ಯತ್ಯಾಸವುಂಟು. ಕಾವ್ಯಗಳಂತೆ ಬರಿಯ ಪದಗಳಿಗೆ ಅರ್ಥವಾದರೆ ಸಾಲದು. ಪ್ರತ್ಯಕ್ಷಾನುಭವವು ಬೇಕು. ಅಂತಹ ಪ್ರತ್ಯಕ್ಷಾನುಭವವನ್ನು ವಿದ್ಯಾರ್ಥಿಗಳಿಗೆ ಉಂಟುಮಾಡಬೇಕಾದರೆ ವೈದ್ಯಶಾಲೆಗಳಲ್ಲಿ ಅವರಿಂದ ರೋಗಪರೀಕ್ಷೆಯನ್ನು ನಡೆಸಿ ರೋಗತತ್ವವನ್ನು ಪ್ರತ್ಯಕ್ಷತಃ ಕಂಡು ಹಿಡಿಯುವಂತೆ ಮಾಡಿ ಅವರ ಅನುಭವಕ್ಕೂ ಶಾಸ್ತ್ರಜ್ಞಾನಕ್ಕೂ ಸಾಮರಸ್ಯವನ್ನು ಕಲ್ಪನೆ ಮಾಡಿಕೊಡಬೇಕು. ವಾಗ್ಭಟಾಚಾರ್ಯರು ಹೇಳುವುದನ್ನು ನೋಡಿರಿ.

अज्ञातशास्त्रसद्भावान् शास्त्रमात्रपरायणान् ।
वर्जयेत् तान् भिषक्पाशान् पाशान् वैवस्वतानिव ॥

Jangamawadi Math, Varanasi
Acc. No. ....821.............

ಎಂದು ಚರಕ ಸುಶ್ರುತಗಳಲ್ಲಿ ಹೇಳಿರುವ ಅನೇಕ ರೋಗಗಳು ಈಗ ಇಲ್ಲವೇ ಇಲ್ಲ. ಅಥವಾ ಅನೇಕ ಬದಲಾವಣೆಗಳನ್ನು ಹೊಂದಿವೆ. ಅನೇಕ ಹೊಸ ರೂಪ ಗಳೂ ಉಂಟಾಗಿವೆ. ಅವುಗಳ ವಿಷಯವನ್ನು ಪ್ರಾಚೀನ ಗ್ರಂಥಗಳಿಂದ ಅರಿಯಲು ಸಾಧ್ಯವಿಲ್ಲ. ಅಂತಹ ರೋಗಗಳನ್ನು ಪರೀಕ್ಷೆಮಾಡಿ ಸಂಪಾದಿಸಿದ ಅನುಭವವನ್ನು ನವೀನ ಶಾರೀರಶಾಸ್ತ್ರಶೋಧನೆಗಳ ಕೂಡ ಹೋಲಿಸಬೇಕು. ಪಂಡಿತರಾಗಿ ಪರಿಣತರಾಗಿ ವೃದ್ಧರಾಗಿರುವ ನಮಗೆ ಪುನಃ ವಿದ್ಯಾರ್ಥಿಗಳಾಗಲು ನಾಚಿಕೆಯಾಗುವುದಿಲ್ಲವೆ—ಎನ್ನಬಾರದು. ಭಾರದ್ವಾಜಾದಿ ಮಹರ್ಷಿಗಳು, ಇಂದ್ರದೇವರಲ್ಲಿ ಶಿಷ್ಯತ್ವವನ್ನು ಹೊಂದಲಿಲ್ಲವೆ? ದೊಡ್ಡ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪದವೀಧರರಾದ ಡಾಕ್ಟರುಗಳು ವಿದೇಶಕ್ಕೆ ಹೋಗಿ ಶಿಕ್ಷಣಹೊಂದುವುದಿಲ್ಲವೆ?

ವೈದ್ಯವಿದ್ಯಾಲಯಗಳ ವಿಷಯದಲ್ಲಿ ಇನ್ನೊಂದು ಮಾತು ಹೇಳಬೇಕಾಗಿದೆ. ಈ ವಿದ್ಯಾಲಯಾಧಿಕಾರಿಗಳು ವೈದ್ಯಶಾಸ್ತ್ರದಲ್ಲಿ ನಿಪುಣರಾದವರ ಸಲಹೆಗಳನ್ನೇ ಅನುಸರಿಸಬೇಕು. ಹಾಗಿಲ್ಲದಿದ್ದರೆ ಅಲ್ಲಿ ವ್ಯಾಸಂಗಮಾಡಿದ ವಿದ್ಯಾರ್ಥಿಗಳಿಂದಲೂ ಅಂಧಪರಂಪರೆಗಳಿಂದ ಬಂದ ಅಂತಹ ವಿದ್ಯಾಶಾಲೆಗಳಿಂದಲೂ ಲೋಕಕ್ಕಾಗಲಿ ಆಯುರ್ವೇದಕ್ಕಾಗಲಿ ಏನೂ ಪ್ರಯೋಜನವಾಗಲಾರದು.

ಈಗಿರುವ ಆಯುರ್ವೇದ ವಿದ್ಯಾಲಯಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಒಂದೇ ವಿಧವಾದ ವ್ಯಾಸಂಗವು ನಡೆಯುವಂತಾಗಬೇಕು. ಎಲ್ಲರೂ ಅನುಸರಿಸಲರ್ಹವಾದ ಒಂದೂ ಕ್ರಮವಿಲ್ಲವೆಂತಲ್ಲ. ಏನು ಕಾರಣದಿಂದಲೊ ಅದನ್ನು ವಿದ್ಯಾಶಾಲೆಗಳು ಅನುಸರಿಸುತ್ತಿಲ್ಲ. ಆದ್ದರಿಂದ ನಮ್ಮ ಪ್ರಾರ್ಥನೆಯೇನೆಂದರೆ, ನಿಖಿಲಭಾರತ ವಿದ್ಯಾಪೀಠದವರು ಹಾಕಿರುವ ವ್ಯಾಸಂಗಕ್ರಮುವನ್ನು ದಯಮಾಡಿ ಎಲ್ಲ ಶಾಲೆಗಳೂ ಅನುಸರಿಸಬೇಕು. ಆ ವಿದ್ಯಾಪೀಠದವರು ಮಾಡಿರುವ ಕ್ರಮದಲ್ಲಿ ಏನಾದರೂ ವ್ಯತ್ಯಾಸವಿದ್ದರೆ ಇಂಥ ಸಮ್ಮೇಳನದಲ್ಲಿ ವಿಚಾರಮಾಡಿ ಸರಿಪಡಿಸಲು ಯಾವ ಅಭ್ಯಂತರವೂ ಇಲ್ಲ. ಅಂಥ ನಿರ್ಣಯಗಳನ್ನು ವಿದ್ಯಾಪೀಠದವರು ಅಂಗೀಕರಿಸುವುದಿಲ್ಲವೆಂಬ ಭಯವೂ ಅನಾವಶ್ಯಕ.

ವಿದ್ಯಾರ್ಥಿಗಳಿಗೆ ಕೊಡಬೇಕಾದ ಶಿಕ್ಷಣಕ್ರಮದವಿಷಯದಲ್ಲಿ ಒಂದು ಮಾತುಹೇಳತಕ್ಕದ್ದಿದೆ. ನಮ್ಮ ದೇಶದಲ್ಲಿ ಆಯುರ್ವೇದೌಷಧಶಾಲೆಗಳು ಇರಬೇಕಾದಷ್ಟು ಇಲ್ಲದಿದ್ದರೂ ಸುಮಾರಾಗಿ ಹೆಚ್ಚಾಗಿಯೇ ಇವೆ. ಆದರೆ ಅವುಗಳಲ್ಲಿ ಪ್ರತ್ಯಕ್ಷತಃ ರೋಗತತ್ವದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಣಕೊಡಲು ತಕ್ಕಷ್ಟು ಅನುಕೂಲವಿಲ್ಲ. ರೋಗತತ್ವವನ್ನೂ, ದೇಹತತ್ವವನ್ನೂ ಚೆನ್ನಾಗಿತಿಳಿದ ವೈದ್ಯಶ್ರೇಷ್ಠರು

ಬಹಳಕಡಿಮೆಯಾದುದರಿಂದ ಅಂಥ ಪ್ರತ್ಯಕ್ಷಶಿಕ್ಷಣವನ್ನು ಕೊಡಲು ಸಮರ್ಥರಾದ ಗುರುಗಳೇ ಇಲ್ಲ. ಈ ರೋಗಕ್ಕೆ ಈ ಚಿಹ್ನೆಗಳು, ಇದಕ್ಕೆ ಇಂಥಾದ್ದೇ ತಕ್ಕ ಔಷಧ, ಎಂದು ತಿಳಿದಲ್ಲದೆ ಕೇವಲ ಸ್ಥೂಲವಾದ ಅಂದಾಜಿನಿಂದ ರೋಗವನ್ನು ನಿರ್ಮೂಲಮಾಡುವುದಕ್ಕಾಗುವುದಿಲ್ಲ.

आतुरस्यांतरात्मानं योनाविशतिरोगवित् ।
सानन्बुद्धिप्रबोधेन नसरोगः चिकित्सति ॥

ಎಂದು ಹೇಳಿರುವ ನಮ್ಮ ಪೂರ್ವೀಕರ ಹಿತೋಕ್ತಿಯಂತೆ ಇಂಥ ಪ್ರತ್ಯಕ್ಷಶಿಕ್ಷಣವನ್ನು (Practical Training) ಒದಗಿಸುವುದಕ್ಕೆ ತಕ್ಕಪ್ರಯತ್ನಮಾಡಬೇಕು.

(4) ಹೀಗೆ ಹೊಗಳುವ ಆ ರೋಗಪರೀಕ್ಷಾಕ್ರಮಗಳು ಯಾವುವು ಎಂಬುದನ್ನು ಹೇಳುತ್ತೇವೆ. ರೋಗಿಯನ್ನು ಪರೀಕ್ಷೆಮಾಡಬೇಕಾದರೆ ಪಂಚಜ್ಞಾನೇಂದ್ರಿಯಗಳಿಂದಲೂ, ಪ್ರಶ್ನೆಗಳಿಂದಲೂ ಮಾಡಬೇಕೆಂದು ಧನ್ವಂತರಿಯು ಹೇಳಿದ್ದಾನೆ. ನಾಲಿಗೆಯನ್ನುಬಿಟ್ಟು ಉಳಿದ ಇಂದ್ರಿಯಗಳಿಂದಲೂ, ಪ್ರಶ್ನದಿಂದಲೂ ಮಾಡಬೇಕು, ಎಂದು ಆತ್ರೇಯರು ಹೇಳಿದ್ದಾರೆ. ರೋಗಪರೀಕ್ಷೆಯಲ್ಲಿ ಯಂತ್ರಗಳನ್ನು ಪಯೋಗಿಸಬಾರದೆಂದು ಯಾರೂ ಎಲ್ಲಿಯೂ ಹೇಳಿಲ್ಲ. ಕೈನೋಡಿಬಿಟ್ಟರೆ ಶರೀರ ತತ್ತ್ವದ ಎಲ್ಲಾ ವಿಚಾರಗಳೂ ರೋಗದ ಪೂರ್ವಚರಿತ್ರವೂ ಎಲ್ಲವೂ ಗೊತ್ತಾಗುತ್ತದೆಯೆಂದು ಚರಕಸುಶ್ರುತವಾಗ್ಭಟಾದಿಗಳ್ಯಾರೂ ಎಲ್ಲಿಯೂ ಹೇಳಿರುವುದಿಲ್ಲ. ಈಚಿಗೆ ಬರೆದ ಶಾರ್ಙ್ಗಧರಸಂಹಿತಾದಿ ಗ್ರಂಥಗಳಲ್ಲಿ ನಾಡೀಪರೀಕ್ಷೆಯನ್ನು ಮಾಡಬೇಕೆಂದು ಹೇಳಿರುವುದೇನೋ ನಿಜ. ಆದರೆ ಇತರ ಪರೀಕ್ಷೆ ಮಾಡಬಾರದೆಂದು ಎಲ್ಲಿ ಹೇಳಿದೆ? ರೋಗದ ಸೂಕ್ಷ್ಮವಿಚಾರಗಳನ್ನು ತಿಳಿಯಬೇಕಾದರೆ ಥರ್ಮಾಮಿಟರ್, ಸ್ಟೆತಸ್‌ಕೋಪ್, ಎಕ್ಸರೆ ಮುಂತಾದ ಸಾಮಾಗ್ರಿಗಳನ್ನು ಉಪಯೋಗಿಸುವುದು ವೈದ್ಯಶಾಸ್ತ್ರಕ್ಕೆ ವಿರುದ್ಧವಲ್ಲ. ನಾಡಿಯನ್ನು ಮುಟ್ಟನೋಡುವುದರಿಂದಲೇ ತಿಳಿಯಬೇಕಾದ ಅಂಶಗಳೆಲ್ಲಾ ತಿಳಿಯುವ ಸಂದರ್ಭದಲ್ಲಿ ರೋಗವಿಜ್ಞಾನೋಪಾಯಗಳು 'ಆರುವಿಧ'ವೆಂದು ಪ್ರಾಚೀನರು ಹೇಳುವ ಮಾತು ಹೇಗೆ ಸಲ್ಲುವುದು ? ಕೈಮುಟ್ಟಿದ ಮಾತ್ರದಿಂದಲೇ ರೋಗದ ವಿಷಯವನ್ನು ಪೂರ್ತಿಯಾಗಿ ಹೇಳಬಲ್ಲ ವೈದ್ಯಶ್ರೇಷ್ಠನನ್ನು ಈವತ್ತಿಗೂ ನಾವು ನೋಡಲಿಲ್ಲ. ಇದು ಯಾರೋ ಕೆಲವು ಆಧುನಿಕವಂಚಕವೈದ್ಯಾಭಾಸಕರು ಆಡಿಕೊಳ್ಳುವ ಮಾತೇ ಹೊರತು ವೈದ್ಯರು ಒಪ್ಪತಕ್ಕ ಮಾತಲ್ಲ. ಆದರೆ ನಾಡೀಪರೀಕ್ಷೆಯು ಅನುಪಯುಕ್ತವೆಂದು ನಮ್ಮ ಅಭಿಪ್ರಾಯವಲ್ಲ. ಅನುಭವಶಾಲಿ

ಗಳಾದ ವೈದ್ಯರು ವಾತಾದಿ ತ್ರಿದೋಷಗಳು ಸಮವೇ? ವಿಷಮವೇ? ಯಾವುದು ಪ್ರಕೋಪವಾಗಿದೆ? ಹೃದಯವು ದುರ್ಬಲವೆ? ಎಂಬಿವೇ ಮೊದಲಾದ ಅಂಶಗಳನ್ನು ನಾಡೀಸ್ಪರ್ಶದಿಂದ ತಿಳಿಯಬಲ್ಲರು. ಆದರಿಂದಲೇ ಎಲ್ಲಾ ವಿಷಯಗಳೂ ತಿಳಿಯುತ್ತವೆಯೆಂಬುವುದನ್ನು ಮಾತ್ರ ನಾವು ನಂಬುವುದಿಲ್ಲ. ಆದ್ದರಿಂದ ಸದ್ವೈದ್ಯರು ಉದಾರಬುದ್ಧಿಯಿಂದ ಈ ರೋಗದ ಪರೀಕ್ಷಾಕ್ರಮಗಳೆಲ್ಲವನ್ನೂ ಉಪಯೋಗಿಸುವುದಕ್ಕೆ ಹಿಂಜರಿಯಬಾರದೆಂದು ನಮ್ಮ ಪ್ರಾರ್ಥನೆ. ಆದರೆ ಶಾಸ್ತ್ರಜ್ಞರಾದ ಪಂಡಿತರಲ್ಲಿ ಈ ಪ್ರಾರ್ಥನೆಗೆ ಆವಶ್ಯಕತೆಯೇ ಇಲ್ಲ. ಅವರು ಸ್ವಪ್ನದಲ್ಲಿಯೂ ಅಂಥ ಕೆಲಸವನ್ನು ಮಾಡುವುದಿಲ್ಲ. ಯಾರು ಅಂತಹ ಆಚಾರದಿಂದ ತಮ್ಮ ವೃತ್ತಿಯು ಅಭಿವೃದ್ಧಿಗೆ ಬರುವುದೆಂದು ನಂಬಿಧಾರೆಯೋ ಅವರನ್ನು ಕುರಿತು ಈ ಮಾತು ಹೇಳಿದ್ದಾಗಿದೆ. ರೋಗಿಯನ್ನು ಪರೀಕ್ಷೆಮಾಡುವುದರಲ್ಲಿ ನಾಡೀಪರೀಕ್ಷೆಯನ್ನು ಬಿಡಬೇಡಿರಿ. ಆದರೆ ಅಷ್ಟರಿಂದಲೇ ಎಲ್ಲಾ ತಿಳಿಯಿತೆಂದು ರೋಗಿಗಳೆದುರಿಗೆ ನಟನೆಯನ್ನು ಮಾಡಬೇಡಿರಿ. ನಾಡೀಪರೀಕ್ಷೆಯಿಂದಲೇ ಎಲ್ಲವನ್ನೂ ತಿಳಿದುಕೊಳ್ಳಲಾರೆವೆಂದು ಸ್ಫುಟವಾಗಿ ರೋಗಿಗಳ ಮುಂದೆ ನಾವು ಹೇಳುತ್ತಾ ಇದೇವೆ. ಇದರಿಂದ ನಮ್ಮ ಕೀರ್ತಿಯು ಕಮ್ಮಿಯಾಗಲಿಲ್ಲ. ರೋಗಿಗಳ ವಿಶ್ವಾಸವೂ ಕಮ್ಮಿಯಾಗಲಿಲ್ಲ. ನಿಜವಾದ ಶಾಸ್ತ್ರಜ್ಞರು ಕಪಟದಿಂದ ಸರ್ವಜ್ಞರೆಂಬ ಹೆಸರನ್ನು ಸಂಪಾದಿಸುವುದಕ್ಕೆ ಪ್ರಯತ್ನಮಾಡುವುದಿಲ್ಲ. ಅಹಂಕಾರವೂ ಪಡುವುದಿಲ್ಲ. ಉತ್ತಮವಾದ ಜ್ಞಾನವನ್ನಾರ್ಜಿಸಬೇಕೆಂತಲೇ ಅವರ ಪ್ರಯತ್ನ.

ಪೂರ್ಣಪಂಡಿತರಾದರೂ, ಇನ್ನೂ ಜ್ಞಾನವನ್ನು ಸಂಪಾದಿಸಬೇಕೆಂಬ ಇಚ್ಛೆ ಇದ್ದೇ ಇರುತ್ತದೆ. ಅವರ ಜ್ಞಾನವು ಹೆಚ್ಚಿದ ಹಾಗೆಲ್ಲಾ ಅವರು ಶಾಸ್ತ್ರವನ್ನು ಚೆನ್ನಾಗಿ ವ್ಯಾಸಂಗ ಮಾಡುತ್ತಾರೆ. ಹೊಸಜ್ಞಾನವನ್ನು ಸಂಪಾದಿಸಲೋಸುಗ ಹಾರೈಸುತ್ತಾರೆ. ಶಾಸ್ತ್ರಾರ್ಥಗಳನ್ನು ಮನನಮಾಡುತ್ತಾರೆ. ಚಿಕಿತ್ಸಾಕ್ರಮ ಮತ್ತು ರೋಗಪರಿಕ್ಷಾಕ್ರಮಗಳಲ್ಲಿ ಅತಿಶಯವನ್ನುಂಟುಮಾಡುವುದಕ್ಕೆ ಯಾವಾಗಲೂ ಪ್ರಯತ್ನಮಾಡುತ್ತಿರುವರು. **न चैव ह्यस्ति सुतरामायुर्वेदस्यपारं तस्मादप्रमत्तः शश्वदभियोगमस्मिन् गच्छेत्** ಎಂದು ಪೂರ್ವೀಕರು ಹೇಳಲಿಲ್ಲವೆ? ಈ ಉಪದೇಶವನ್ನು ಅನುಸರಿಸಿದ ಮಹನೀಯರಲ್ಲವೆ ಪ್ರಪಂಚದಲ್ಲಿ ನೂತನ ವಿಷಯಗಳನ್ನು ಕಂಡುಹಿಡಿಯುವವರು! ಉದುಂಬರಸಾರವನ್ನು ಕಂಡು ಹಿಡಿದ ಚಿಕಿತ್ಸಕ ಚೂಡಾಮಣಿಪಂಡಿತ ಚಂದ್ರಶೇಖರಧರಮಿತ್ರರೇ ಈ ಮಾತಿಗೆ ದೃಷ್ಟಾಂತ. 'ಉದುಂಬರ' ಯಾರಿಗೆ ಗೊತ್ತಿಲ್ಲ? ಅದರಲ್ಲಿರುವ ವ್ರಣಶೋಧಕ

ಶಕ್ತಿಯನ್ನು ಕಂಡುಹಿಡಿದವರು ಅವರು. ಅವರ ಗುಣಗಳನ್ನು ನಮ್ಮ ಅಷ್ಟಾಂಗಾಯುರ್ವೇದ ವಿದ್ಯಾಲಯದ ವೈದ್ಯಶಾಲೆಯಲ್ಲಿ ಅನೇಕವಿಧವಾಗಿ ಪರೀಕ್ಷೆಮಾಡಿದ್ದೇವೆ.

(೫) ನಮ್ಮ ಆಯುರ್ವೇದದಲ್ಲಿ ಉಪಯೋಗಿಸುವ ಔಷಧಿಗಳ ಪರಿಚಯವನ್ನು ಚೆನ್ನಾಗಿ ಸಂಪಾದಿಸಬೇಕಾದ್ದು ಒಂದು ಕೆಲಸ. ಇದರಲ್ಲಿ ವನಸ್ಪತಿಶಾಸ್ತ್ರಜ್ಞರು, ಮತ್ತು ರಸಾಯನಶಾಸ್ತ್ರಜ್ಞರು, ಇವರುಗಳ ಸಹಾಯವು ಆವಶ್ಯಕ. ನಿಖಿಲಭಾರತವೈದ್ಯಸಮ್ಮೇಳನದವರು ಸಂದಿಗ್ಧವಾದ ಮೂಲಿಕೆಗಳನ್ನು ಗೊತ್ತುಮಾಡುವುದಕ್ಕೋಸ್ಕರ ಒಂದು ಸಮಿತಿಯನ್ನು ಮಾಡಿರುವಂತೆ ತಿಳಿಯಬರುತ್ತದೆ. ಆ ಸಮಿತಿಯು ಉದ್ದಿಷ್ಟಕಾರ್ಯವನ್ನು ಎಷ್ಟರಮಟ್ಟಿಗೆ ಮಾಡಿದೆ ಎಂಬುದು ತಿಳಿಯಲಿಲ್ಲ. ಆಯುರ್ವೇದಮಾರ್ತಾಂಡಪಂಡಿತ ಯಾದವಜಿ ತ್ರಯಂಬಕಜಿ ಮೊದಲಾದ ಮಹಾಪಂಡಿತರ ಹೆಸರುಗಳು ಆ ಸಮಿತಿಯಲ್ಲಿರುವುದರಿಂದ ಸಮಿತಿಯ ಪ್ರಯತ್ನವು ಸಫಲವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಶ್ರೀಯುತ ಕರ್ನಲ್ ಕೀರ್ತಿಕರ್, ಮೇಜರ್ ವಾಮನದಾಸ್, ಡಾಕ್ಟರ್ ದೇಸಾಯಿ ಇಂದ್ರಜಿಯವರುಗಳು ಆ ಕಾರ್ಯದಲ್ಲಿ ತೊಡಗಿದ್ದರು. ಅಯ್ಯೊ! ಆ ಕಾರ್ಯವನ್ನು ಮುಂದುವರಿಸಲು ಅವರಿಗೆ ಆಯುಸ್ಸಿಲ್ಲವಾಯಿತು, ಈಚೆಗೆ ಕರ್ನಲ್ ಚೋಪ್ರಾ, ಡಾಕ್ಟರ್ ಮಸ್ಕರ್, ಫಾದರ್ ಕೈಯಿಸ್, ಡಾಕ್ಟರ್ ಕಾರ್ತಿಕಚಂದ್ರವಸು ಮೊದಲಾದ ಪಂಡಿತರುಗಳು ಬಲಾ, ಅರ್ಜುನ, ಕುಟಜ, ಶೃಂಗೀ, ಪುನರ್ನವಾ ಇತ್ಯಾದಿ ಮೂಲಿಕೆಗಳ ಮೇಲೆ ಪರೀಕ್ಷೆ ನಡೆಸಿ ನಮ್ಮ ವೈದ್ಯರಿಗೆ ಬಹು ಉಪಕಾರ ಮಾಡಿರುವರು.

ಈ ಕೆಲಸವು ಪೂರ್ತಿಯಾಗಬೇಕಾದರೆ ದ್ರವ್ಯಶಾಸ್ತ್ರವನ್ನು ತಿಳಿದ ವೈದ್ಯರ ಯಾಜಮಾನ್ಯದಿಂದಲೂ, ಆಯುರ್ವೇದವಿದ್ಯಾಪೀಠದ ಸಹಾಯದಿಂದಲೂ ನಡೆಯಬೇಕಾದದ್ದು ಅತ್ಯವಶ್ಯಕ. ಇದರಲ್ಲಿ ನಮ್ಮ ವೈದ್ಯರೂ ವನಸ್ಪತಿಶಾಸ್ತ್ರಜ್ಞರೂ ದ್ರವ್ಯಶಾಸ್ತ್ರಜ್ಞರೂ, ರಸಾಯನಶಾಸ್ತ್ರಜ್ಞರೂ ಎಲ್ಲರೂ ಕೈಹಾಕಿದ ಹೊರತು ಕಾರ್ಯವು ಸಫಲವಾಗಲಾರದು. ಎಂದಿಗೆ ಈ ಮಹಾಕಾರ್ಯವು ಸಫಲವಾಗುವುದೋ ನೋಡಬೇಕು. ಅಂತು ಇಂಥ ಶೋಧನಕಾರ್ಯದಿಂದ ನಮ್ಮ ಆಯುರ್ವೇದಾಚಾರ್ಯರ ಮತವೇ ಧೃಢಪಡುವುದೆಂದು ನಮಗೆ ಪೂರ್ತಿನಂಬಿಕೆಯುಂಟು. ಆದರೂ, ಸಾಧಾರಣ ಜನರಿಗೆ ನಂಬಿಕೆಯುಂಟುಮಾಡುವುದಕ್ಕೋಸ್ಕರ ಈ ಶೋಧನಗಳು ಅತ್ಯಾವಶ್ಯಕ. ನಮಗೂ ವಿಶೇಷ ಜ್ಞಾನವುಂಟಾಗುವುದು. ಈಗ ವೈದ್ಯಶಾಸ್ತ್ರದ ತತ್ತ್ವವನ್ನು ಹೊರಹಾಕಲು ತ್ರಿದೋಷಾದಿ ವಿಷಯವನ್ನೇ ಅರಿಯದೆ ದ್ರವ್ಯಗುಣಪರಿಭಾಷಾಗಂಧವೇ ಇಲ್ಲದ ಪಾಶ್ಚಾತ್ಯವೈದ್ಯರಿಗೆ ಸಾಧ್ಯವಲ್ಲ. ಅವರಿಗೆ ನಮ್ಮ ವೈದ್ಯರ ಸಹಾಯವು ಅತ್ಯಾವಶ್ಯಕ.

ವೈದ್ಯಶಾಸ್ತ್ರದಲ್ಲಿ ಹೇಳಿರುವ ಸಂಧಿಗ್ಧವಾದ ಮೂಲಿಕೆಗಳನ್ನೂ ಮತ್ತು ಸುವರ್ಣಾದಿ ಪಾರ್ಥಿವದ್ರವ್ಯಗಳನ್ನೂ ಗೊತ್ತುಮಾಡುವುದಕ್ಕೆ ಈ ಸಮ್ಮೇಳನವು ಒಂದು ಸಮಿತಿಯನ್ನು ಏರ್ಪಾಡುಮಾಡುವುದು ಅವಶ್ಯಕ. ಆಯಾಯ ದೇಶದಲ್ಲಿ ಪ್ರಸಿದ್ಧವಾದ ಸಂದಿಗ್ಧದ್ರವ್ಯಗಳನ್ನು ಸಂಗ್ರಹಮಾಡಿ ಅವುಗಳನ್ನು ವೈದ್ಯರಿಗೆ ತಿಳಿಸುವುದಕ್ಕೋಸ್ಕರ ಒಂದು ದೊಡ್ಡ ಮೂಲಿಕಾಶಾಲೆಯನ್ನೂ, ಪರೀಕ್ಷಾಲಯ ವನ್ನೂ ಮಾಡುವುದು ಅತ್ಯಾವಶ್ಯಕವೆಂದು ನಮ್ಮಭಿಪ್ರಾಯ.

ನಮ್ಮ ವೈದ್ಯಪ್ರಚಾರವನ್ನು ಹೆಚ್ಚುಮಾಡಬೇಕಾದರೆ ಇನ್ನೊಂದು ಪ್ರಯತ್ನಮಾಡಬೇಕೆಂದು ಕೆಲವರು ದೊಡ್ಡಪಂಡಿತರು ಹೇಳಿದ್ದನ್ನು ಕೇಳಿದೇವೆ. ಅವರ ಅಭಿಪ್ರಾಯವೇನೆಂದರೆ ವಿದೇಶೀಯರಲ್ಲಿ ಪ್ರಚಾರದಲ್ಲಿರುವ ಉತ್ತಮ ಔಷಧಗಳನ್ನು ನಮ್ಮ ಆಯುರ್ವೇದಾಭ್ಯಾಸದಲ್ಲಿ ಸೇರಿಸತಕ್ಕದ್ದೆಂದು. ಕ್ವಿನೈನ್, ಮಾರ್ಫಿನ್, ಡಿಜಾಟಲಿಸ್ ಮುಂತಾದ ನಮ್ಮ ದೇಶೀಯ ಔಷಧಗಳನ್ನೇ ಪಾಶ್ಚಾತ್ಯರು ಉಪಯೋಗಿಸುವುದನ್ನೂ, ಅತ್ಯಾಶ್ಚರ್ಯಕರವಾದ ಗುಣಗಳನ್ನು ರೋಗಿಗಳು ಪಡೆಯುವುದನ್ನೂ ನೋಡಿದೇವೆ. ಅವುಗಳನ್ನು ನಮ್ಮ ವೈದ್ಯಕೋಶದಲ್ಲಿ ಸಂಗ್ರಹಿಸಿದರೆ ಕೋಶವು ಅಭಿವೃದ್ಧಿಯಾಗದೇ? ಅವುಗಳನ್ನು ನಮ್ಮ ವೈದ್ಯದಲ್ಲಿ ಸೇರಿಸಿಕೊಳ್ಳಬಾರದೆ? ಸೇರಿಸಿಕೊಳ್ಳುವುದಾದರೆ ಯಾವುದನ್ನು ಸೇರಿಸಿಕೊಳ್ಳಬೇಕು ಎಂಬ ವಿಷಯವನ್ನು ಇಂಥ ಮಹಾಸಮ್ಮೇಳನದಲ್ಲಿ ವಿಚಾರಮಾಡುವುದು ಆಯುಕ್ತವೆಂದು ತೋರುವುದಿಲ್ಲ. ಇತರ ದೇಶದವರು ನಮ್ಮ ವೈದ್ಯದಿಂದ ಉತ್ತಮವಾದ ಅನೇಕ ಔಷಧಗಳನ್ನು ಸಂಗ್ರಹಿಸುವುದರಲ್ಲಿಯೇ ಇದಾರೆ. ಎಷ್ಟೋ ನೂರಾರು ಔಷಧಗಳನ್ನು ನಮ್ಮಿಂದ-ಅವರು ಸಂಗ್ರಹಿಸಿದಾರೆ. ಅದನ್ನು ತಡೆಯುವುದು ನಮಗೆ ಸಾಧ್ಯವಿಲ್ಲ. ಚರಕದಲ್ಲಿ ಆತ್ರೇಯರು "ತದೇವಯುಕ್ತಂಭೈಷಜ್ಯಂ ಯದಾರೋಗ್ಯಾಯ ಕಲ್ಪತೆ" ಎಂದು ಹೇಳಿದಾರೆ. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ತತ್ಕ್ಷಣದಲ್ಲಿಯೇ ಪ್ರತ್ಯಕ್ಷಫಲವನ್ನು ಕೊಡುವ ಕ್ವಿನೈನ್, ಮಾರ್ಫಿನ್, ಮೊದಲಾದ ಔಷಧಗಳನ್ನು ಅತ್ಯಂತ ಉತ್ಕಟಾವಸ್ಥೆಯಲ್ಲಿ ವೈದ್ಯರು ಉಪಯೋಗಿಸಿದರೆ ನಮ್ಮ ವೈದ್ಯದ ಮರ್ಯಾದೆಯು ಕಡಮೆಯಾಗಲಾರದು. ಈ ವಿಷಯದಲ್ಲಿ ಉಭಯವಿಧವಾದ ಅಭಿಪ್ರಾಯಗಳೂ ವಾದಗಳೂ ಇವೆ. ಈ ವಿಷಯವನ್ನು ಜಾಗ್ರತೆಯಾಗಿಯೇ ವಿಚಾರಮಾಡಿ ವ್ಯವಸ್ಥೆಮಾಡುವುದಕ್ಕೆ ಈಗ ಕಾಲವಾಗಿದೆ. ಕೆಲವರು ಪ್ರಾಚೀನಮಾರ್ಗದೀಕ್ಷಿತರಾದ ವೈದ್ಯರು ವಿದೇಶೀಯ ಔಷಧಿಗಳನ್ನು ಬೇರೆ ಹೆಸರಿನಿಂದ ಚಿಕಿತ್ಸೆಯಲ್ಲಿ ಉಪಯೋಗಿಸುತ್ತಿದಾರೆಂಬ ವಿಷಯವು ಎಲ್ಲ

ರಿಗೂ ಗೊತ್ತೇ ಇದೆ. ಆ ಔಷಧಗಳ ರಸವೀರ್ಯ ವಿಪಾಕಾದಿಗಳನ್ನು ವಿಚಾರ ಮಾಡದೆ ಗುಣದೋಷಗಳನ್ನು ಚೆನ್ನಾಗಿ ತಿಳಿಯದೆ ಅವುಗಳನ್ನುಪಯೋಗಿಸುವುದು ಬಹಳ ತಪ್ಪು. ಅಂಥ ವೈದ್ಯರ ಕೈಯಲ್ಲಿ ಔಷಧವನ್ನು ತೆಗೆದುಕೊಳ್ಳುವುದೂ ಅಪಾಯವೇ. ಆದ್ದರಿಂದ ಆಯುರ್ವೇದಶಾಸ್ತ್ರವನ್ನೂ ಪಾಶ್ಚಾತ್ಯಶಾಸ್ತ್ರವನ್ನೂ ನೋಡಿ ದ್ರವ್ಯಗಳ ರಸವೀರ್ಯವಿಪಾಕಗಳನ್ನು ಚೆನ್ನಾಗಿ ಅರಿತು ಅದನ್ನುಪಯೋಗಿಸುವ ಕ್ರಮವನ್ನು ಚೆನ್ನಾಗಿ ಅನುಭವಕ್ಕೆ ತಂದುಕೊಂಡು ಅನಂತರ ರೋಗಿಗಳಿಗೆ ಉಪಯೋಗಿಸಬೇಕು. ಪ್ರಯೋಜನವಿದ್ದರೆ ವೈದ್ಯಸಮ್ಮೇಳನಾನುಮತಿಯಿಂದ ಅಂಥ ಔಷಧವನ್ನುಪಯೋಗಿಸುತ್ತೇವೆಂದು ಹೇಳಿದರೂ ಬಾಧಕವಿಲ್ಲ. ವೈದ್ಯರು ನಿಸ್ಸಂದೇಹವಾಗಿ ನಿರಾತಂಕವಾಗಿ ಈ ಮಾರ್ಗದಲ್ಲಿ ಪ್ರವರ್ತಿಸಲೆಂದು, ನಮ್ಮ ಯಶಸ್ಸಿಗೆ ಕುಂದುಬಂದರೂ ಚಿಂತೆಯಿಲ್ಲವೆಂದೆಣಿಸಿ ಧಾರಾಳವಾಗಿ ಹೇಳುತ್ತೇವೆ. ನಿಖಿಲಭಾರತವೈದ್ಯಸಮ್ಮೇಳನದ ಅನುಮತಿಯಿಂದ ಮಾಡುವ ಕೆಲಸದಿಂದ ಹೆಸರುಕೆಡಲು ಕಾರಣವೇನು? ಪೂರ್ವದಲ್ಲಿ ಭಾವಮಿಶ್ರಾದಿಪಂಡಿತರು ಅಹಿಫೇನ, ರೇವಲ್‌ಚೀನಿ, ಮೊದಲಾದ ಯುನಾನಿ ಔಷಧಗಳನ್ನು ನಮ್ಮ ವೈದ್ಯದಲ್ಲಿ ಸೇರಿಸಿಲ್ಲವೆ? ಈಗ ವೈದ್ಯರು ಅನೇಕವೇಳೆ ಉಪಯೋಗಿಸುತ್ತಿದಾರೆ. ಆ ಔಷಧಗಳನ್ನೊಳಗೊಂಡ ಯೋಗಗಳನ್ನು ಶಾರ್ಙ್ಗಧರ, ಗೋವಿಂದದಾಸರೇ ಮೊದಲಾದ ನವೀನಗ್ರಂಥಕರ್ತೃಗಳು ತಮ್ಮ ಗ್ರಂಥಗಳಲ್ಲಿ ಹೇಳಿದಾರೆ. ಮತ್ತು ವಿಜಯ, ಗಾಂಜ, ತಂಬಾಕು ಮೊದಲಾದ ಔಷಧಗಳನ್ನು ಪ್ರಾಚೀನಗ್ರಂಥಗಳಲ್ಲಿ ಹೇಳದಿದ್ದಾಗ್ಯೂ ನಮ್ಮ ವೈದ್ಯರು ಉಪಯೋಗಿಸುತ್ತಾ ಇಧಾರೆ. ಹೀಗಿರುವಲ್ಲಿ ಪಾಶ್ಚಾತ್ಯವೈದ್ಯರ ಉಪಯೋಗದಲ್ಲಿರುವ ಕೆಲವು ಔಷಧಗಳನ್ನು ನಮ್ಮ ವೈದ್ಯದಲ್ಲಿ ಸೇರಿಸಿಕೊಂಡರೆ ತಪ್ಪೇನೂ ಕಾಣುವುದಿಲ್ಲ.

ಕೈಜೋಡಿಸಿಕೊಂಡು ಇನ್ನೊಂದು ಮಾತು ಕೇಳಿಕೊಳ್ಳುತ್ತೇನೆ. ವೈದ್ಯರೂ ತಮ್ಮ ಸದ್ವರ್ತನವನ್ನು ಬಿಡಬಾರದು. ವೈದ್ಯವನ್ನು ಬ್ರಾಹ್ಮಣರು ಮತ್ತು ಕ್ಷತ್ರಿಯರು ತಮ್ಮ ಜೀವನಕ್ಕಾಗಿ ಉಪಯೋಗಿಸಲೇ ಬಾರದು. ಹಾಗೆ ಉಪಯೋಗಿಸಿದಲ್ಲಿ ಬ್ರಾಹ್ಮಣರ ಪಂಕ್ತಿಗೆ ಅರ್ಹರಲ್ಲವೆಂದು ಧರ್ಮಶಾಸ್ತ್ರಕಾರರು ಹೇಳಿದಾರೆ. ಆ ನಿಯಮವನ್ನು ಬಿಟ್ಟು ನಾವು ಆಯುರ್ವೇದವನ್ನೇ ಜೀವಿಕೆಯನ್ನಾಗಿ ಮಾಡಿಕೊಂಡಿದೇವೆ. ಸಾಮಾನ್ಯವಾಗಿ ನಮ್ಮ ಬ್ರಾಹ್ಮಣವೈದ್ಯರೆಲ್ಲರೂ ಈಗ ಸುಮಾರು ೨೫ ವರ್ಷಗಳವರಿವಿಗೂ ಈ ನಿಯಮವನ್ನು ಪಾಲನೆಮಾಡಿಕೊಂಡು ಬಂದರು. ಈಗಲೂ ಅಂಥ ಮಹನೀಯರು ಅಲ್ಲಲ್ಲಿದಾರೆ. ಈಗಿನ ಲೋಕಸ್ಥಿತಿಯಲ್ಲಿ ಆ ವ್ರತವನ್ನು

ಪಾಲನೆಮಾಡುವುದೇನೋ ಸಾಧ್ಯವಿಲ್ಲವಾದರೂ ಋಷಿಗಳ ಉಪದೇಶವನ್ನು ಮಾತ್ರ ಮರೆಯಬಾರದು. ವೃತ್ತಿಗೋಸ್ಕರ ವೈದ್ಯವನ್ನು ಉಪಯೋಗಿಸುವವರೂ ಕೂಡ ದ್ರವ್ಯವು ಅಪ್ರಧಾನವೆಂದು ತಿಳಿದು ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಲೆಂದು ಹಾರೈಸುತ್ತೇವೆ.

ಪುನಃ ಪುನಃ ತಮ್ಮನ್ನು ಕುರಿತು ಪ್ರಾರ್ಥನೆ ಮಾಡಬೇಕಾದ ವಿಷಯ ಮತ್ತೊಂದಿದೆ. ಬರಬರುತ್ತಾ ವೈದ್ಯರೂ ವ್ಯಾಪಾರಿಗಳಂತೆ ತಮ್ಮ ಔಷಧಿಗಳನ್ನು ಪ್ರಕಟನ ಪತ್ರಿಕೆಗಳಲ್ಲಿ ಹೊಗಳಿಕೊಳ್ಳುವ ವಾಡಿಕೆಬಂದಿದೆ. ತಮ್ಮ ಪದಾರ್ಥವನ್ನು ತಾವೇ ಹೊಗಳಿಕೊಂಡರೆ ಜನರು ನಂಬುವುದಿಲ್ಲ. ಇದರಿಂದ ವೈದ್ಯರಿಗೆ ಅಪಯಶಸ್ಸು ಬರುವುದಲ್ಲದೆ ಆಯುರ್ವೇದದ ಗೌರವವೂ ಕೆಡುವುದು. ಪಾಶ್ಚಾತ್ಯರೂ ಕೂಡ ಇಂತಹ ಅಡ್ವರ್‌ಟೈಸ್‌ಮೆಂಟುಗಳಲ್ಲಿ ಪ್ರವರ್ತಿಸುವುದಿಲ್ಲ. ಅಂಥ ಅಮೋಘವಾದ ಔಷಧವೂ ಇಲ್ಲ. ಸಾಕ್ಷಾತ್ ಧನ್ವಂತರಿಯಾದರೂ ತನ್ನ ಗುಣವನ್ನು ತಾನೇ ಹೊಗಳಿಕೊಂಡರೆ ಜನರು ಕೇಳುವುದಿಲ್ಲ. ಇದಕ್ಕೆ ಬದಲಾಗಿ ಸದ್ವೈದ್ಯರು ಸೇರಿ ದೊಡ್ಡ ಔಷಧಶಾಲೆಗಳನ್ನು ನಿರ್ಮಾಣಮಾಡಿದರೆ ಔಷಧವು ಸುಲಭವಾಗಿ ಸಿಕ್ಕುವುದಲ್ಲದೆ ವೈದ್ಯರಿಗೆ ಶ್ರಮವೂ ಕಡಿಮೆಯಾದೀತು. ರೋಗಿಗಳಿಗೂ ಉಪಕಾರವಾಗುತ್ತದೆ. ಈಗಿನ ಸ್ಥಿತಿಯಲ್ಲಿ ವೈದ್ಯರು ಎಲ್ಲಾ ಖರ್ಚನ್ನೂ ತಾವೇ ಕೈಯಿಂದ ಹಾಕಿಕೊಂಡು ಎಲ್ಲಾ ಔಷಧಗಳನ್ನು ತಯಾರ್ಮಾಡುವುದಕ್ಕೆ ಸಾಧ್ಯವಿಲ್ಲ. ಬಂಗಾಳ, ಗುಜರಾತು, ಮುಂಬಯಿ, ಮದ್ರಾಸ್ ಮುಂತಾದ ಕೆಲವು ಸ್ಥಳಗಳಲ್ಲಿ ಅಂಥ ದೊಡ್ಡ ಔಷಧಶಾಲೆಗಳೇರ್ಪಟ್ಟಿವೆ. ಅವುಗಳಲ್ಲಿ ತಯಾರ್ಮಾಡಿದ ಔಷಧಗಳನ್ನು ತಮ್ಮ ವೃತ್ತಿಗೆ ಎಲ್ಲಿ ಲೋಪ ಬರುವುದೋ ಎಂಬ ಭಯದಿಂದ ವೈದ್ಯರು ಉಪಯೋಗಿಸಲು ಹಿಂಜರಿಯುತ್ತಾರೆ. ವೈದ್ಯರು ತಾವೇ ಔಷಧವನ್ನು ಮಾಡುವ ಪದ್ಧತಿಯನ್ನು ಬಿಟ್ಟು ಅಂಥ ದೊಡ್ಡ ಔಷಧಶಾಲೆಗಳಿಂದ ಔಷಧವನ್ನು ಕೊಂಡು ಉಪಯೋಗಿಸುವುದಾದರೆ ಸಿದ್ಧವಾದ ಔಷಧಗಳು ಸುಲಭವಾದ ಖರೀದಿಗೆ ದೊರೆಯುವುವು. ವೈದ್ಯರು ಕಪಟವನ್ನು ಬಿಟ್ಟು ಶಾಸ್ತ್ರೋಕ್ತವಾದ ಹೆಸರುಗಳಿಂದಲೇ ಆ ಔಷಧವನ್ನು ಉಪಯೋಗಿಸಬೇಕು. ಹಾಗೆ ಮಾಡಿದಲ್ಲಿ ಲೋಕೋಪಕಾರವೂ ವೈದ್ಯರ ವೃತ್ತಿಗೆ ಒಂದು ಅನುಕೂಲವೂ ಆಗುವುದು.

ಇನ್ನೊಂದು ಪ್ರಾರ್ಥನೆಯಿದೆ. ವೈದ್ಯರು ಪರಸ್ಪರ ಮಾತ್ಸರ್ಯವನ್ನು ಬಿಟ್ಟು ಸಹೃದಯರಾಗಿ ಪರಸ್ಪರ ಸಹಾಯಕ್ಕಾಗಿ ವರ್ತಿಸಬೇಕು. ಒಂದೇ ವೃತ್ತಿಯನ್ನು ಅವಲಂಬಿಸಿರುವವರು ಪರಸ್ಪರ ಅಲ್ಲಗಳೆಯಬಾರದು. ಇದರಿಂದ ವೈದ್ಯರಿಗೆ

ಯಾರಿಗೂ ಗೌರವವು ಹೆಚ್ಚಾಗುವುದಿಲ್ಲ. ವೈದ್ಯರ ಗೌರವವನ್ನು ವೈದ್ಯರೆ ಸಂರಕ್ಷಣಮಾಡದಿದ್ದರೆ ಇನ್ನು ಯಾರು ಮಾಡುವವರು? ಮಾತ್ಸರ್ಯವನ್ನು ಬಿಡಬೇಕೆಂದು ಶಾಸ್ತ್ರವೂ ಸಾರುತ್ತಿದೆ. ಅಂಥ ನಿರ್ಮತ್ಸರವಾದ ಸದ್ವೈದ್ಯರೂ ಎಷ್ಟೋ ಜನರಿದಾರೆ. ಅವರನ್ನು ನೋಡಿ ನಾವು ನಮ್ಮ ನಡವಳಿಕೆಗಳನ್ನು ತಿದ್ದಿಕೊಳ್ಳೋಣ.

ಮಹನೀಯರೇ ನಾನು ಹೇಳಬೇಕಾದ್ದು ಹೇಳಿದ್ದಾಯಿತು. ನನ್ನ ಸ್ಪಷ್ಟ ಭಾಷಣದಿಂದ ಕೆಲವರ ಮನಸ್ಸು ನೊಂದಿರಬಹುದು. ಕೆಲವರಿಗೆ ಕೋಪವೂ ಬಂದಿರಬಹುದು, ನಾನು ಅವರ ಕೋಪಕ್ಕೆ ಪಾತ್ರನಾದರೂ ಚಿಂತೆಯಿಲ್ಲ, ನಮ್ಮ ಪ್ರಾರ್ಥನೆಗಳನ್ನು ಅವರು ನಡೆಸಲಿ, ವೈದ್ಯರೆಲ್ಲರೂ ಸೇರಿ ಈ ಕೆಳಗಿನ ಶ್ರುತಿವಚನವನ್ನು ಜ್ಞಾಪಲ್ಲಿಟ್ಟುಕೊಳ್ಳಲಿ.

"संगच्छध्वं संवदध्वं संवो मनांसि जानताम्"

ಕೊನೆಗೆ ಒಂದು ಮಾತು ಹೇಳಿ ನನ್ನ ಭಾಷಣದಿಂದ ವಿರಮಿಸುತ್ತೇನೆ. ನಮ್ಮ ವೈದ್ಯದಲ್ಲಿ ಕಾಣಬರುವ ಲೋಪಗಳನ್ನೆತ್ತಿ ಹೇಳಿ ಪರಿಷ್ಕರಣಮಾಡುವುದಕ್ಕೆ ಯಾವ ಆವಶ್ಯಕತೆಗಳನ್ನು ತೋರಿಸಿದೆವೊ ಅವು ವೈದ್ಯದಲ್ಲಿನ ಹುಳುಕನ್ನು ಹೊರಹಾಕಬೇಕೆಂಬ ಉದ್ದೇಶದಿಂದಲ್ಲ. ಮತ್ತೇನೆಂದರೆ, ಆಯುರ್ವೇದದಲ್ಲಿ ನಮಗಿರುವ ಪರಮಗೌರವದಿಂದ ಪುನಃ ಪೂರ್ವದ ಗೌರವವನ್ನು ವೈದ್ಯಕ್ಕೆ ಉಂಟುಮಾಡಬೇಕೆಂಬ ಸದುದ್ದೇಶದಿಂದಲೇ ಎಂದು ತಾವು ಭಾವಿಸಬೇಕು. ಈವತ್ತು ನಾವು ಆಯುರ್ವೇದದಲ್ಲಿ ಆದರಮಾಡಬೇಕಾದರೆ ಪೂರ್ವದಲ್ಲಿ ಅದಕ್ಕಿದ್ದ ಗೌರವವನ್ನು ಕೇಳಿದಮಾತ್ರದಿಂದಲ್ಲ; ಪ್ರಪಂಚವನ್ನು ಬೆಳಗಿಸುವ ಮಹಾತೇಜಸ್ಸಿನಿಂದ ಉಂಟಾದ ತತ್ತ್ವರತ್ನಗಳು ಈವತ್ತಿಗೂ ಅದರಲ್ಲಿವೆ ಎಂಬುದೇ ನಾವು ಗೌರವಮಾಡುವುದಕ್ಕೆ ಕಾರಣ. ಆದರೆ ಆ ರತ್ನಗಳ ಮೇಲೆ ಮುಚ್ಚಿರುವ ಕೊಳೆಯನ್ನು ತೊಳೆಯಬೇಕಾದುದೊಂದೇ ನಮ್ಮ ಕರ್ತವ್ಯ. ದೇಹತತ್ತ್ವವನ್ನೂ, ರೋಗತತ್ತ್ವವನ್ನೂ ಪೂರ್ಣವಾಗಿ ತಿಳಿಯಬೇಕಾದರೆ ತ್ರಿದೋಷತತ್ತ್ವಕ್ಕೆ ಸಮಾನವಾದ ತತ್ತ್ವವು ಪಾಶ್ಚಾತ್ಯ ವೈದ್ಯಶಾಸ್ತ್ರದಲ್ಲಿ ಎಲ್ಲಿಯೂ ಸಿಕ್ಕುವುದಿಲ್ಲ. ದೋಷದೂಷ್ಯಗಳನ್ನು ಚೆನ್ನಾಗಿ ಪರಿಶೋಧನೆಮಾಡಿ ಅವುಗಳ ಸ್ವಭಾವವನ್ನೂ ಕಾರ್ಯವನ್ನೂ ಚೆನ್ನಾಗಿ ಅರಿತು ನಮ್ಮ ಪ್ರತ್ಯಕ್ಷಶಾರೀರದೊಡನೆ ಜೊತೆಸೇರಿಸಿದಲ್ಲಿ ನಮ್ಮ ಚಿಕಿತ್ಸೆಯಲ್ಲಿ ಬಹಳ ಗುಣವುಂಟಾಗುವುದು. ಲೋಕಕ್ಕೂ ಪರಮೋಪಕಾರವಾಗುವುದು. ತ್ರಿದೋಷತತ್ತ್ವಕ್ಕೂ ರಸವೀರ್ಯವಿಪಾಕಪ್ರಭಾವಗಳಿಗೂ ಇರುವ ಅತ್ಯಂತಿಕ

ಸಂಬಂಧವನ್ನು ನಾವು ಹೊರಹಾಕಿದರೆ ಆಯುರ್ವೇದದ ವಿಷಯದಲ್ಲಿ ಅತಿಗೌರವವುಂಟಾಗುವುದು. ಆದ್ದರಿಂದ ಆಯುರ್ವೇದಕ್ಕೆ ಪೂರ್ವದಲ್ಲಿದ್ದ ಗೌರವವನ್ನು ಪುನಃ ತಂದುಕೊಡಬೇಕೆಂಬುದೇ ನಮ್ಮ ವೈದ್ಯರ ಧ್ಯೇಯವಾಗಿರಬೇಕು. ಯಾವುದೋ ಕೆಲವು ಉತ್ತಮವಾದ ಔಷಧಗಳಿವೆಯೆಂಬ ಮಾತ್ರದಿಂದಲೇ ಶಾಸ್ತ್ರವು ಆದರಣೀಯವಲ್ಲ. ಮತ್ತೇನಂದರೆ, ನಮ್ಮ ಪ್ರಾಚೀನ ಋಷಿಗಳು ತಮ್ಮ ಯೋಗಬಲದಿಂದ ತಂದ ವಿಜ್ಞಾನದ ಅಸ್ತಿಭಾರವೇ ಈ ಆಯುರ್ವೇದದ ಮೂಲವೆಂಬ ಕಾರಣದಿಂದ ಆಯುರ್ವೇದವು ಸರ್ವರ ಪುರಸ್ಕಾರಕ್ಕೆ ಅರ್ಹವಾಗಿದೆ. ನಾವು ಮೇಲೆ ಹೇಳಿದ ಪರಿಷ್ಕರಣೋಪಾಯಗಳಿಂದ ಆಯುರ್ವೇದವನ್ನು ಪುನರುಜ್ಜೀವನ ಮಾಡದೆ ಹೋದರೆ ಆ ರತ್ನಗಳು ಹೊರಬೀಳುವ ಸಂಭವವೇ ಕಾಣುವುದಿಲ್ಲ. ಇದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ನವೀನವಾದ ಯಂತ್ರಗಳ ಸಹಾಯದಿಂದ ಪ್ರಾಚೀನನಿಧಿಯನ್ನು ಅಗೆದು ತೆಗೆಯೋಣವೆಂದು ನಾನು ಹೇಳಿದುದು. ಆ ಶ್ರೀಮನ್ನಾರಾಯಣಾವತಾರಭೂತನಾದ ಸಾಕ್ಷಾದ್ಧನ್ವಂತರಿಯು ನಮ್ಮೆಲ್ಲರ ಮನೋರಥವನ್ನು ಪೂರೈಸಲಿ. ಆಯುರ್ವೇದ ಸೂರ್ಯನು ಪುನಃ ಉದಯಿಸಿ ಜಗತ್ತನ್ನು ಬೆಳಕುಮಾಡಲಿ.

सहनाववतु । सहनौभुनक्तु । सहवीर्यंकरवावहै ।

तेजस्विनावधीतमस्तुमाविद्विषावहै

ॐ शांति श्शांति श्शांतिः.

27—12—30 ರಲ್ಲಿ ಮಧ್ಯಾಹ್ನ 2 ಗಂಟೆಗೆ

ವಿಷಯವಿವೇಚನಾಸಮಿತಿಗೆ ಸದಸ್ಯರನ್ನು ಚುನಾಯಿಸುವುದಕ್ಕಾಗಿ ನಡೆದ ವೈದ್ಯಪ್ರತಿನಿಧಿಗಳ ಮತ್ತು ಸ್ವಾಗತಮಂಡಲಿಯವರ ಸಭೆಯ ಕಾರ್ಯಕ್ರಮ.

ಈ ಸಭೆಯು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರತಿನಿಧಿಗಳೆಲ್ಲರೂ ಮತ್ತು ಸ್ವಾಗತಮಂಡಲಿಯಲ್ಲಿ ಸದಸ್ಯರಾಗಿರುವ ವೈದ್ಯರೂ ಸಹ ವಿಷಯವಿವೇಚನಾಸಮಿತಿಗೆ ಸದಸ್ಯರಾಗಿರಬೇಕೆಂದು ವ್ಯವಸ್ಥೆಯಾಯಿತು.

ವೈದ್ಯವಸ್ತುಪ್ರದರ್ಶನದ ಪ್ರಾರಂಭೋತ್ಸವ.

27—12—30 ನೇ ಮಧ್ಯಾಹ್ನ 3 ಗಂಟೆ.

ಮೈಸೂರು ಇಂಟರ್‌ಮೀಡಿಯಟ್ ಕಾಲೇಜಿನ ಉಪನ್ಯಾಸಕರೂ ವೈದ್ಯವಸ್ತುಪ್ರದರ್ಶನಶಾಖೆಯ ಮಂತ್ರಿಗಳೂ ಆದ ಮೆ|| ಎಸ್. ನಾಗೇಶರಾವ್, ಎಂ.ಎ., ಯವರು, ಕಾಕನಾಡದ ಡಾ|| ಪಿ. ಸುಬ್ಬರಾಯರನ್ನು ವಸ್ತುಪ್ರದರ್ಶನದ ಪ್ರಾರಂಭೋತ್ಸವ ಮಾಡಲು ಪ್ರಾರ್ಥಿಸುವ ಸಂದರ್ಭದಲ್ಲಿ ಮಾಡಿದ ಭಾಷಣ.

ಮಹಾಶಯರೆ,

ಈ ನಿಖಿಲಭಾರತಾಯುರ್ವೇದವಸ್ತುಪ್ರದರ್ಶನಕ್ಕೆ ತಮ್ಮೆಲ್ಲರಿಗೂ ಸ್ವಾಗತಮಂಡಲದವರು ಪರಮಸಂತೋಷದಿಂದ ಸ್ವಾಗತವನ್ನು ಬಯಸುತ್ತಾರೆ. ತಮ್ಮಲ್ಲಿ ಅನೇಕರು ವೈದ್ಯವಿದ್ಯಾನಿಪುಣರು, ಚಿಕಿತ್ಸಾಕುಶಲರು. ತಮ್ಮ ಚಿಕಿತ್ಸೆಯಿಂದ ನೂರಾರು ರೋಗಿಗಳಿಗೆ ಕಷ್ಟವನ್ನು ನೀಗುತ್ತಿರುವಿರಿ. ಇಂಥ ನಿಮ್ಮ ಚಿಕಿತ್ಸೆಯನ್ನು ಸ್ವಲ್ಪಕಾಲ ನಿಲ್ಲಿಸಿ ನಿಮಗೆ ಅತಿಪ್ರಿಯವಾದ ಆಯುರ್ವೇದವನ್ನು ಮುಂದುವರಿಸುವ ಸದುದ್ದೇಶದಿಂದ ದಯಮಾಡಿಸಿದ ತಮಗೆ ನಾವು ಮನಃಪೂರ್ವಕವಾದ ಸ್ವಾಗತವನ್ನು ನೀಡುತ್ತೇವೆ. ಇಂಥ ಪುರಾತನವಾದ ಆಯುರ್ವೇದವು ತನ್ನ ಯೋಗ್ಯತೆಯನ್ನು ಪುನಃ ಸ್ಥಾಪಿಸಿಕೊಳ್ಳಬೇಕೆಂಬುವ ಕಾಲ ಬಂದಿದೆ ಎಂಬುದು ಶೋಚನೀಯಾಂಶ. ನಮ್ಮ ವೈದ್ಯವಿದ್ವಾಂಸರು ನಡೆಸಿರುವ ಚಿಕಿತ್ಸಾಪ್ರಯೋಗ ವಿಷಯವನ್ನು ದೊರೆಗಳೂ ಸಾಹುಕಾರರೂ ಸಹಾ ಬಲ್ಲರು. ಇಂಗ್ಲಿಷ್ ಆಸ್ಪತ್ರೆಗಳಲ್ಲಿ ವಾಸಿಯಾಗದ ರೋಗಗಳನ್ನು ಸಾಮಾನ್ಯ ಮೂಲಿಕೆಗಳಿಂದ ಗುಣಪಡಿಸಿದ ಹಳ್ಳಿಜನರ ಕಥೆಗಳನ್ನು ಕೇಳಿದ್ದೇವೆ.

ಈ ಪ್ರದರ್ಶನಕ್ಕಾಗಿ ವೈದ್ಯವಸ್ತುಗಳನ್ನು ಸಂಗ್ರಹಿಸುವುದಕ್ಕೋಸ್ಕರ ನಾವು ಹೋಗಿದ್ದಾಗ ಅನೇಕ ಕಥೆಗಳನ್ನು ಕೇಳಿದೆವು. ಒಬ್ಬ ನಾಯಿಂದನು ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿದರೂ ವಾಸಿಯಾಗದ ಬೆನ್ನುಪಣಿರೋಗವನ್ನು 3 ದಿನಗಳಲ್ಲಿ ವಾಸಿಮಾಡಿದನಂತೆ. ತೊಡೆಯ ಎಲುಬುಗಳು ಮುರಿದುಹೋದದ್ದನ್ನು ಆಸ್ಪತ್ರೆಯಲ್ಲಿ ಅಸಾಧ್ಯವೆಂದು ಹೇಳಿದಾಗ್ಯೂ ಒಂದು ವಾರದಲ್ಲಿ ಮತ್ತೊಬ್ಬನು ಸರಿಮಾಡಿದನಂತೆ. ಈ ಕಥೆಗಳಲ್ಲಿ ಸ್ವಲ್ಪ ಅತಿಶಯೋಕ್ತಿ ಇರಬಹುದಾದರೂ ನಿಜಾಂಶವಿದೆಯೆಂಬುದರಲ್ಲಿ ಸಂದೇಹವಿಲ್ಲ. ಮೂಲೆಯಲ್ಲಿ ಬಿದ್ದಿರುವ

ಅಂತಹ ಅಪೂರ್ವಜ್ಞಾನವನ್ನು ಅನಾದರವಮಾಡಿದರೆ, ತಿರಸ್ಕಾರಮಾಡಿ ಕಳೆದರೆ, ಆ ಅಪರಾಧಕ್ಕೆ ದೇಶದಲ್ಲಿನ ವಿದ್ಯಾವಂತರೇ ಭಾಗಿಗಳೆಂಬುವುದರಲ್ಲಿ ಸಂದೇಹ ವಿಲ್ಲ. ಅಂಥ ಹಳ್ಳಿವೈದ್ಯರ ಭಾವಚಿತ್ರಗಳನ್ನು ಈ ಪ್ರದರ್ಶನದಲ್ಲಿಡಲು ಸಂಗ್ರಹಿ ಸಬೇಕೆಂದು ಪ್ರಯತ್ನಮಾಡಿದೆವು. ಆದರೆ ಸಫಲವಾಗಲಿಲ್ಲ. ಈ ವಿಷಯದಲ್ಲಿ ತಕ್ಕ ವ್ಯವಸ್ಥೆಮಾಡುವುದು ತಮ್ಮಂಥ ವಿದ್ವಾಂಸರ ಕೆಲಸವಾಗಿದೆ.

ಸ್ವಾಗತಮಂಡಲಿಯವರು ಆಯುರ್ವೇದದಭಿವೃದ್ಧಿಗೆ ಇಂಥ ಸಮ್ಮೇಲನ ದಿಂದ ಆಗುವ ಪ್ರಯೋಜನವನ್ನು ಅರಿತವರಾದ ಕಾರಣ ಸಂದಿಗ್ಧವಾದ ಹೆಸರು ಗಳುಳ್ಳ ಅಪೂರ್ವ ಮೂಲಿಕೆಗಳನ್ನು ಸಂಗ್ರಹಿಸಿ ಒಂದು ಪ್ರತ್ಯೇಕ ಕೊಠಡಿಯಲ್ಲಿ ತಮ್ಮೆಲ್ಲರ ಅವಗಾಹನೆಗಾಗಿ ಪ್ರದರ್ಶಿಸಿರುವರು. ಅವುಗಳ ಹೆಸರುಗಳ ವ್ಯವಸ್ಥೆ ಮಾಡುವುದು ಅನುಭವಶಾಲಿಗಳಾದ ತಮ್ಮಂಥ ಪಂಡಿತರ ಕಾರ್ಯ.

ಸಿದ್ಧೌಷಧಗಳಿಗಾಗಿ ಮತ್ತೊಂದು ಕೊಠಡಿಯಲ್ಲಿ ಏರ್ಪಾಟುಮಾಡಿದೇವೆ. ಔಷಧಗಳಲ್ಲಿ ಸೇರಿರುವ ಮುಖ್ಯಮೂಲಿಕೆಗಳು, ಅವುಗಳ ಗುಣಗಳು. ಆಯೋಗದ ವಿಷಯದಲ್ಲಿ ಪ್ರಮಾಣೋದಾಹರಣೆ, ಔಷಧಗಳನ್ನು ತಯಾರ್ಮಾಡುವ ಕಾಲದಲ್ಲಿ ಕಂಡ ವಿಶೇಷಗುಣಗಳು, ಅವುಗಳಿಂದ ಚಿಕಿತ್ಸೆಮಾಡುವ ಕಾಲದಲ್ಲಿ ಕಂಡು ಬಂದ ಗುಣಗಳು, ಈ ಅಂಶಗಳಲ್ಲಿ ಯಾವ ಔಷಧಗಳ ವಿಷಯವಾಗಿ ನಮಗೆ ಪೂರ್ತಿ ಸಮಾಚಾರದೊರಕಿತೊ ಅಂಥ ಔಷಧಿಗಳನ್ನೇ ನಾವು ಪ್ರದರ್ಶಿಸಿದೇವೆ. ಈ ಅಂಶ ಗಳನ್ನೆಲ್ಲಾ ತಿಳಿಸಿದರೆ ವ್ಯಾಪಾರವು ಕೆಟ್ಟುಹೋಗುವುದು, ಎಂಬ ಭಯವು ವೈದ್ಯ ರಲ್ಲಿ ಕೆಲವರಿಗೆ ಇರುವಂತೆ ಕಾಣುತ್ತದೆ. ನಮಗೆ ಔಷಧಗಳು ಹೆಚ್ಚಾಗಿ ಬರದೇ ಇರುವುದಕ್ಕೆ ಇದೇ ಕಾರಣವಿರಬಹುದು. ಆಯಾಯ ಯೋಗಗಳನ್ನು ಸಿದ್ಧಮಾ ಡುವ ಶಾಸ್ತ್ರೀಯ ಕ್ರಮಗಳಿಗೆ ತಕ್ಕಷ್ಟು ಬೆಲೆಕೊಡದಿರುವುದೊಂದು, ದೂರದೃಷ್ಟಿ ಇಲ್ಲದಿರುವುದು ಮತ್ತೊಂದು ಈ ಭಯಕ್ಕೆ ಕಾರಣ. ಬೇರೆ ಬೇರೆ ವೈದ್ಯಶಾಲೆ ಗಳಲ್ಲಿ ಮಾಡಿದ್ದ ಒಂದೇ ಜೀರಕಾದಿ ಲೇಹ್ಯದಲ್ಲಿ ಗುಣವ್ಯತ್ಯಾಸ ಕಂಡುಬರುವು ದುಂಟು. ಔಷಧಿಗಳ ಪ್ರಮಾಣ ವ್ಯತ್ಯಾಸವಾಗಲಿ ತಯಾರ್ಮಾಡುವ ಕ್ರಮದಲ್ಲಿ ವ್ಯತ್ಯಾಸವಾಗಲಿ ಈ ಗುಣಭೇದಕ್ಕೆ ಕಾರಣ ವಿರಬಹುದು. ಒಬ್ಬ ವೈದ್ಯರು ಒಬ್ಬ ರೋಗಿಗೆ ಪ್ರತ್ಯೇಕವಾಗಿ ಮಾಡಿಕೊಡುವ ಲೇಹ್ಯಾದಿಗಳು ಹಾಗಿರಲಿ, ಒಟ್ಟೊ ಟ್ಟಿಗೆ ಔಷಧಗಳನ್ನು ತಯಾರ್ಮಾಡುವ ದೊಡ್ಡ ಔಷಧಶಾಲೆಗಳಿಂದ ಲೇಹ್ಯಾದಿ ಗಳನ್ನು ತರಿಸುವಾಗ, ರೋಗಿಯು ಏನು ಬಾಯಲ್ಲಿ ಹಾಕಿಕೊಂಡೆನೆಂದು ಅವನಿಗೆ ಗೊತ್ತಾದರೆ ತಪ್ಪೇನು? ಒಂದೇ ಔಷಧಶಾಲೆಯಲ್ಲಿಯೇ ಬೇರೆ ಕಾಲಗಳಲ್ಲಿ

ಮಾಡಿದ ಒಂದೇ ಔಷಧದಲ್ಲಿಯೂ ವ್ಯತ್ಯಾಸವಿರಬಹುದು. ಮಾಡುವ ಕ್ರಮದಲ್ಲಿ ಸ್ವಲ್ಪ ಹೆಚ್ಚುಕಮ್ಮಿಯಿಂದಲೋ ಅನುಭವವಿಲ್ಲದ ಆಳುಗಳ ದೋಷದಿಂದಲೋ ಔಷಧವು ಕೆಡಬಹುದು. ಇಂಥ ಸಂದರ್ಭದಲ್ಲಿ ಆಯುರ್ವೇದ ಸಮ್ಮೇಳನದವರು ಔಷಧವನ್ನು ಮಾಡಿದ ಕ್ರಮವನ್ನು ತಿಳಿಯಲಪೇಕ್ಷಿಸಿದರೆ ಅನ್ಯಾಯವೇನು? ಆದ್ದರಿಂದಲೇ ಈ ಅಂಶಗಳನ್ನೆಲ್ಲಾ ಪೂರ್ತಿ ತಿಳಿಸಬೇಕೆಂದು ಪ್ರದರ್ಶಕರಿಗೆ ಬರೆದೆವು. ನಮ್ಮ ಉದಾರವಾದ ಉದ್ದೇಶ್ಯವನ್ನು ಅನೇಕರು ತಿಳಿದುಕೊಳ್ಳಲಿಲ್ಲ. ಔಷಧಗಳು ಕೆಲವು ಕಾಲಾನಂತರ ಕೆಡುತ್ತವೆ. ಮತ್ತೆ ಕೆಲವು ಕಾಲಕ್ರಮೇಣ ಹೆಚ್ಚು ಗುಣವನ್ನು ಹೊಂದುತ್ತವೆಯೆಂದು ಆಯುರ್ವೇದದ ಯೋಗದಲ್ಲಿಯೇ ಇದೆ. ಹೀಗಿದ್ದರೂ ಒಟ್ಟೊಟ್ಟಿಗೆ ಔಷಧಗಳನ್ನು ತಯಾರಿಸುವ ಭಾರೀ ಔಷಧಶಾಲೆಗಳು ಡಬ್ಬಿಗಳಮೇಲೂ ಸೀಸೆಗಳಮೇಲೂ ತಯಾರಿಸಿದ ತಾರೀಖನ್ನು ಹಾಕುವುದಿಲ್ಲ. ತಮ್ಮ ಗಿರಾಕಿಗಳ ಎದುರಿಗೆ ಡಬ್ಬಿಗಳನ್ನು ಒಡೆದು ತೋರಿಸಿ ಕೆಟ್ಟುಹೋದ ಔಷಧಗಳನ್ನು ಬಿಸಾಡುವುದಕ್ಕೆ ಅಂಗಡಿಯವರಿಗೆ ಅವಕಾಶವನ್ನು ಔಷಧದ ಮಾಲೀಕರು ಕೊಡುವುದಿಲ್ಲ. ಡಬ್ಬಿಗಳಲ್ಲಿ ಸರಿಯಾಗಿ ಭದ್ರಮಾಡದ ದೋಷದಿಂದಲೋ ಕೇವಲ ಆಶಾಪರನಾದ ಅಂಗಡಿಯವನ ವಂಚನಾಬುದ್ಧಿಯಿಂದಲೋ, ಔಷಧಶಾಲೆಯ ಹೆಸರು ಕೆಡುವ ಸಂಭವವೂ ಉಂಟು. ಇಂಥ ಸಣ್ಣ ವಿಷಯಗಳಿಗೆ ದೃಷ್ಟಿ ಕೊಡದಿದ್ದರೆ ಔಷಧಿಗಳಲ್ಲಿ ಜನರಿಗೆ ನಂಬಿಕೆಯೇ ಕೆಡುತ್ತದೆ.

ನಮ್ಮ ಪಂಡಿತರಿಗೂ, ಆಯುರ್ವೇದಕ್ಕೂ ತಕ್ಕಷ್ಟು ಗೌರವ ಸಿಕ್ಕದುದಕ್ಕೆ ಇದೂ ಒಂದು ಕಾರಣವಿರಬಹುದು. ಇನ್ನೂ ಏನು ಕಾರಣವಿರಬಹುದೋ ಇಲ್ಲಿ ನಾನು ವಿಚಾರಮಾಡಬೇಕಾದ ಆವಶ್ಯಕತೆಯಿಲ್ಲ. ಅದು ಏನಾದರೂ ಇರಲಿ. ಸಂಗೀತಕಲೆಯು ವೇಶ್ಯಾಸ್ತ್ರೀಯರ ಕೈಸೇರಿದಂತೆ, ಶಲ್ಯತಂತ್ರವು ನಾಯಿಂದರ ಕೈಗೆ ಹೇಗೆ ಬಂದಿತೋ ತಿಳಿಯದು. ಶಲ್ಯಶಾಲಾಕ್ಯತಂತ್ರದ ವಿಷಯದಲ್ಲಿ ನಮ್ಮ ಪ್ರಾಚೀನಾಯುರ್ವೇದಿಗಳನ್ನು ಡಾಕ್ಟರುಗಳು ಅಪಹಾಸ್ಯಮಾಡುತ್ತಿರುವಲ್ಲಿ ಪ್ರಾಚೀನಜ್ಞಾನಸಂಪತ್ತಿನ ಗುರುತುಗಳು ಇನ್ನೂ ಅಲ್ಲಲ್ಲಿ ಕಾಣಬರುತ್ತವೆ ಎಂಬುದೊಂದು ಸಂತೋಷಕರವಾದ ಸಂಗತಿ. ನಾವು ಪ್ರದರ್ಶಿಸಿರುವ ಶಸ್ತ್ರಾಯುಧಗಳ ಪಟಗಳಿಂದಲೂ ಚಿತ್ರಗಳಿಂದಲೂ ಶಲ್ಯತಂತ್ರವು ಆಯುರ್ವೇದದಲ್ಲಿ ಎಷ್ಟೋ ದೂರ ಪ್ರಸರಿಸಿರುತ್ತದೆಂದು ಸುಲಭವಾಗಿ ಗೊತ್ತಾಗುತ್ತದೆ. ಆರೋಗ್ಯಕ್ಕೆ ತೊಂದರೆಯಿಲ್ಲದೆ ಕಶ್ಮಲವನ್ನು ಹೀರಿಸುವುದಕ್ಕಾಗಲಿ ತೆಗೆಯುವುದಕ್ಕಾಗಲಿ ಯಾವ ಔಷಧದ್ರವ್ಯಗಳನ್ನುಪಯೋಗಿಸುತ್ತಿದ್ದರೆಂಬುದನ್ನು ಕಂಡುಹಿಡಿಯಬೇಕಾ

ಗಿದೆ. ಈ ವಿಷಯದಲ್ಲಿ ಶೋಧನಕಾರ್ಯವನ್ನು ನಡೆಸಲು ಬೇಕಾದಷ್ಟು ಅವಕಾಶ ವಿದೆ. ಪ್ರಕೃತಿಪರೀಕ್ಷಣಾರ್ಥವಾಗಿ ಹೊರಸಂಚಾರಮಾಡುವ ನಮ್ಮ ಉಪಾಧ್ಯಾಯರುಗಳು ನಮ್ಮ ಆಯುರ್ವೇದಕ್ಕೆ ಸ್ವಲ್ಪಮಟ್ಟಿಗೆ ಸಹಾಯಮಾಡಬಲ್ಲರೆಂದು ತೋರುತ್ತದೆ. ಈ ವ್ರಣಚಿಕಿತ್ಸೆಗೆ ಸಂಬಂಧಪಟ್ಟ ಕೆಲವು ಔಷಧಿಗಳನ್ನು ಪ್ರದರ್ಶಿಸಿದ್ದೇವೆ.

ದೇಹದ ಸಕಲ ರೋಗಗಳಿಗೂ ಪರಿಹಾರಕವಾದ ಒಂದು ಔಷಧವನ್ನು ಕಂಡುಹಿಡಿಯಬೇಕೆಂದು ಬಹುಕಾಲದಿಂದಲೂ ಪ್ರಯತ್ನಗಳು ನಡೆದು ಬರುತ್ತಿವೆ. ಕೆಲವರಿಗೆ ಇತರ ಲೋಹಗಳಿಂದ ಚಿನ್ನವನ್ನು ಮಾಡುವ ಹುಚ್ಚು ಕೂಡ ಹಿಡಿದಿರಲಿಲ್ಲವೇ ? ನಮ್ಮ ಪೂರ್ವೀಕರೇನೋ ಲೋಹವನ್ನು ಶುದ್ಧಿಮಾಡುವ ಕ್ರಮವನ್ನೂ ಮತ್ತು ಭಸ್ಮಗಳನ್ನು ಮಾಡುವ ಕ್ರಮವನ್ನೂ, ಚಿನ್ನ ಮಾಡುವುದಕ್ಕಿಂತಲೂ ಮುಖ್ಯವೆಂದು ತಿಳಿದಿದ್ದರು. ಭಸ್ಮಗಳನ್ನು ಮಾಡಬಲ್ಲವನಿಗೆ ಹಣವು ಅಪೂರ್ವವೇ? ಇಂಥ ಔಷಧಗಳನ್ನು ಪರೀಕ್ಷೆಮಾಡಿ ಗುಣಗಳನ್ನು ನಿರ್ಣಯಿಸುವುದಕ್ಕೆ ಈ ಸಮ್ಮೇಳನದ ಪಂಡಿತರು ಪ್ರಯತ್ನಮಾಡ್ಯಾರೆಂದು ನಂಬುತ್ತೇವೆ.

ಈ ಲೇಹ್ಯ ಭಸ್ಮಗಳಿಗಿಂತಲೂ ಆರೋಗ್ಯನಿಯಮಗಳು ಅತಿಮುಖ್ಯ. ಈ ನಿಯಮಗಳನ್ನು ಅನುಸರಿಸಿದರೆ ಔಷಧಗಳೇ ಬೇಕಾದ್ದಿಲ್ಲ. **प्रक्षालनाद्धि पंकस्य दूरादस्पर्शनं वरम्** ಎಂಬುದನ್ನು ನಮ್ಮ ಆಯುರ್ವೇದಿಗಳು ಚೆನ್ನಾಗಿ ಅನುಷ್ಠಾನಕ್ಕೆ ತಂದಿದ್ದರು. ದೇಶಕಾಲಬದಲಾವಣೆಗಳಿಂದ ತೊಂದರೆಪಡದಂತೆ ಜನರು ಸುಖವಾಗಿ ದೀರ್ಘವಾದ ಆಯುಸ್ಸನ್ನು ಹೊಂದಲು ಬೇಕಾದ ಆರೋಗ್ಯನಿಯಮಗಳನ್ನು ಕಂಡುಹಿಡಿಯುವುದಕ್ಕೆ ಅವರು ಬಹಳ ಶ್ರಮಪಟ್ಟಿದಾರೆ. ಇಂಥ ಆರೋಗ್ಯನಿಯಮಗಳನ್ನು ಸಂಗ್ರಹಿಸಿ ಪಟಗಳರೂಪದಲ್ಲಿ ಪ್ರದರ್ಶಿಸಿದ್ದೇವೆ. ಈ ಪ್ರದರ್ಶನದ ಮುಖ್ಯ ಪ್ರಯೋಜನವೇನಂದರೆ ವಿದೇಶಿಯರ ಸಂಬಂಧದಿಂದ ನಮ್ಮಲ್ಲಿ ನೆಲೆಗೊಂಡು ನಮ್ಮ ಜೀವರಕ್ತವನ್ನು ಹೀರುತ್ತಿರುವ ಕೆಲವು ದುರಾಚಾರಗಳು ಕಡಿಮೆಯಾಗಬೇಕೆಂಬುದೇ.

ಸರ್ವಸಾಮಾನ್ಯವಾದ ಕೆಲವು ದ್ರವ್ಯಗಳನ್ನೂ ಪ್ರದರ್ಶಿಸಿದ್ದಕ್ಕೆ ಕಾರಣ ಹೇಳಬೇಕಾಗಿದೆ ಪೂರ್ವದಲ್ಲಿ ಮನೆಮನೆಯಲ್ಲಿಯೂ ಅಜ್ಜಮ್ಮಂದಿರು ಮೂಲಿಕೆಗಳನ್ನು ಗುರ್ತಿಸುತ್ತಿದ್ದರಲ್ಲದೆ ಅನೇಕವೇಳೆ ಮನೆಮಕ್ಕಳಿಗೆ ಚಾತುರ್ಯದಿಂದ ಉಪಯೋಗಿಸುತ್ತಿದ್ದ ಸ್ಥಿತಿಯು ಹೋಗಿ ಜನರಿಗೆ ಆ ಮೂಲಿಕೆಗಳ ಗುರ್ತೇ ಇಲ್ಲದೆ ಹೋಗಿದೆ. ಅಂಥ ಜನರ ಉಪಯೋಗಕ್ಕೋಸ್ಕರ ಸರ್ವಸಾಮಾನ್ಯವಾದ ಮೂಲಿಕೆ

ಮೊದಲಾದ ದ್ರವ್ಯಗಳನ್ನು ಪ್ರದರ್ಶನದಲ್ಲಿಡಬೇಕಾಯಿತು. ಈ ಸ್ಥಿತಿಯೇನು ಆಶ್ಚರ್ಯವಲ್ಲ. ಇದಕ್ಕಿಂತಲೂ ಮತ್ತೊಂದು ಆಶ್ಚರ್ಯವುಂಟು. ನಮ್ಮ ವನಸ್ಪತಿ ಶಾಸ್ತ್ರವಿದ್ಯಾರ್ಥಿಗಳು (Botany Students) ಗಿಡಮೂಲಿಕೆಗಳ ಲ್ಯಾಟಿನ್ ಹೆಸರುಗಳನ್ನು ಕಂಠಪಾಠ ಮಾಡಿರುತ್ತಾರೆ. ಆದರೆ ಅವನ್ನೇ ಕನ್ನಡದಲ್ಲಿ ಹೇಳಿದರೆ ಅವರ ಮನೆಯ ಸುತ್ತಲಿರುವ ಮೂಲಿಕೆಗಳಾದರೂ ಅವನ್ನು ಗುರ್ತಿಸಲಾರರು.

ಇನ್ನೊಂದು ವಿಷಯ ಹೇಳಿ ಮುಗಿಸುತ್ತೇನೆ. ನಮ್ಮ ಭರತಖಂಡದಲ್ಲಿರುವ ಆಯುರ್ವೇದ ವಿದ್ಯಾಶಾಲೆಗಳಿಂದ ಬರುವ ವಸ್ತುಗಳಿಗಾಗಿ ಪ್ರತ್ಯೇಕ ಪ್ರದರ್ಶನ ಶಾಲೆಯನ್ನು ಏರ್ಪಡಿಸಿದ್ದೆವು. ನಮ್ಮ ಪ್ರಾರ್ಥನೆಗೆ ಉತ್ತರಕೊಟ್ಟವರು ತಿಲಕ ವಿದ್ಯಾಲಯದವರು. ಪ್ರದರ್ಶನ ಕಳಿಸಿದವರು—ಮದ್ರಾಸಿನ ಮತ್ತು ಮೈಸೂರಿನ ಗೌ|| ಆಯುರ್ವೇದ ಯೂನಾನಿ ವಿದ್ಯಾಶಾಲೆಯವರುಮಾತ್ರ. ನಮ್ಮ ಸಂಕಲ್ಪವು ಈಗ ಸಿದ್ಧಿಸದಿದ್ದರೂ ಇನ್ನು ಮುಂದೆ ಬರುವ ಸಮ್ಮೇಳನಗಳಲ್ಲಿಯಾದರೂ ಸಿದ್ಧಿಸಲಿ, ಆಗಲಾದರೂ ಆ ವಿದ್ಯಾಶಾಲೆಯವರು ಕಾಲವಿಲ್ಲೆಂಬ ನೆಪ ಹೇಳದೆ ಪ್ರದರ್ಶನಗಳನ್ನು ಕಳಿಸಿಯಾರು ಎಂದು ನಂಬುತ್ತೇನೆ.

ಇನ್ನೊಂದು ಮಾತು ಮಾತ್ರ. ಈ ಮಹಾ ಸಮ್ಮೇಳನದ ಜ್ಞಾಪಕವು ಶಾಶ್ವತವಾಗಿ ಮೈಸೂರಿನಲ್ಲಿ ನಿಲ್ಲುವಂತೆ ಒಂದು ವೈದ್ಯಶೋಧನಾಲಯವನ್ನು ಮೈಸೂರಿನಲ್ಲಿ ಏರ್ಪಡಿಸಬೇಕು. ಅದು ಮಹಾಮಂಡಲದ ಶಾಖೆಯಾಗಿರಬೇಕು. ನಮ್ಮ ಭರತಖಂಡದಲ್ಲಿ ಆಯುರ್ವೇದಕ್ಕೆ ಸಂಬಂಧಪಟ್ಟ ಮುಖ್ಯ ಸಮಾಚಾರಗಳನ್ನೆಲ್ಲಾ ಅಲ್ಲಿ ಸಂಗ್ರಹಿಸಿಡಬೇಕು. ಇದು ನನ್ನ ಆಶೆ. ಇದನ್ನು ವಿದ್ವಾಂಸರಾದ ತಾವು ಮನಸ್ಸಿನಲ್ಲಿಟ್ಟು ಸಮ್ಮೇಳನದಿಂದ ಆಗಮಾಡಿಸುವಿರಿ ಎಂದು ನಂಬಿದೇನೆ.

ಮೈಸೂರಿನಲ್ಲಿ ಸಿಕ್ಕುವ ಮೂಲಿಕೆಗಳ ನಕ್ಷೆಯೊಂದನ್ನು ಈ ಪ್ರದರ್ಶನದಲ್ಲಿಡಬೇಕೆಂದು ಬಹಳ ಆಶೆ ಇತ್ತು. ಆದಕ್ಕೆ ಕಾಲವಿರಲಿಲ್ಲ. ನಮ್ಮ ಸಂಕಲ್ಪವೇನಿತ್ತು, ಎಷ್ಟರಮಟ್ಟಿಗೆ ಅದು ಸಫಲವಾಯಿತು, ಎಷ್ಟರಮಟ್ಟಿಗೆ ಆಗಲಿಲ್ಲವೆಂಬ ವಿಷಯುವನ್ನು ಅರಿಕೆಮಾಡಿದೆ. ಸ್ವಾಗತಮಂಡಲಿಯ ಪರವಾಗಿ ಆಂಧ್ರ ಆಯುರ್ವೇದ ವಿಶ್ವವಿದ್ಯಾಲಯದ ಅಧ್ಯಕ್ಷರಾದ ವೈದ್ಯರತ್ನ, ಭಿಷಗಾಚಾರ್ಯ, ಡಾ|| ಪಿ. ಸುಬ್ಬರಾಯರು, ಬಿ.ಎಸ್‌ಸಿ. ಯವರನ್ನು ವಸ್ತುಪ್ರದರ್ಶನವನ್ನು ತೆರೆಯಲೆಂದು ಪ್ರಾರ್ಥಿಸುತ್ತೇನೆ.

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.
೧೯೩೦

ವೈದ್ಯರತ್ನ ಡಾ|| ವಿ. ಸುಬ್ಬರಾಯರು, B.Sc.
(ಪ್ರೆಸಿಡೆಂಟ್, ಆಯುರ್ವೇದ ವಿಶ್ವವಿದ್ಯಾಲಯ, ಕಾಕನಾಡ.)
ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿದವರು.

ವಸ್ತುಪ್ರದರ್ಶನದ ಪ್ರಾರಂಭೋತ್ಸವದಲ್ಲಿ

ವೈದ್ಯರತ್ನ ಡಾ|| ಪಿ. ಸುಬ್ಬರಾಯರವರು, B.Sc. ಕಾಕನಾಡ ಇವರು ಮಾಡಿದ ಭಾಷಣ.

ಸಹೋದರರೇ, ಅಕ್ಕತಂಗಿಯರೇ ಮತ್ತು ಆಯುರ್ವೇದ ವೈದ್ಯಶ್ರೇಷ್ಠರೇ,

ಮೊದಲು ತಮಗೆ ನನ್ನ ವಂದನೆಗಳನ್ನು ಅರ್ಪಿಸುವುದು ನನ್ನ ಕರ್ತವ್ಯವಾಗಿದೆ. ಈ ವರ್ಷದ ನಿಖಿಲಭಾರತಾಯುರ್ವೇದ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ಮಾಡಲು ನನಗೆ ಒಪ್ಪಿಸಿ ಅಪೂರ್ವವಾದ ಗೌರವವನ್ನು ನನಗೆ ಕೊಟ್ಟರಿ. ಇದರಿಂದ ದೇಶದೇಶದಿಂದ ದಯಮಾಡಿಸಿರುವ ಅನೇಕ ಪಂಡಿತರನ್ನೂ ಸ್ನೇಹಿತರನ್ನೂ ಕಂಡು ಸರಸಸಲ್ಲಾಪಗಳನ್ನು ಮಾಡಿ ಸುಖವನ್ನು ಅನುಭವಿಸಲು ನನಗೆ ಅವಕಾಶ ಉಂಟಾದುದಲ್ಲದೆ ಬಹುಕಾಲದಿಂದಲೂ ಆಯುರ್ವೇದಶಾಸ್ತ್ರದಲ್ಲಿ ಶ್ರಮಪಟ್ಟು ನಾನು ಮಾಡಿರುವ ಪರಿಶೋಧನೆಗಳ ಸಾರಾಂಶವನ್ನು ತಮ್ಮೆದುರಿಗೆ ವಿಜ್ಞಾಪಿಸುವ ಭಾಗ್ಯವು ನನಗೆ ದೊರಕುವಂತೆ ಮಾಡಿದ ತಮಗೆ ನಾನು ಬಹಳ ಕೃತಜ್ಞನಾಗಿದ್ದೇನೆ.

ಈ ವಸ್ತುಪ್ರದರ್ಶನದ ಪ್ರಾರಂಭೋತ್ಸವದಲ್ಲಿ ಗಿಡಮೂಲಿಕೆಗಳಲ್ಲೂ ಔಷಧಿಗಳನ್ನು ತಯಾರುಮಾಡುವ ಕ್ರಮಗಳಲ್ಲೂ ಆಧುನಿಕಪ್ರಪಂಚದಲ್ಲಿ ಬಳಿಕೆಯಲ್ಲಿರುವ ವೈದ್ಯಪದ್ಧತಿಗಳಲ್ಲೆಲ್ಲಾ ನಮ್ಮ ಆಯುರ್ವೇದ ಶಾಸ್ತ್ರವೇ ಹೇಗೆ ಅತ್ಯುತ್ತಮವು ಎಂಬ ವಿಷಯವನ್ನು ಕುರಿತು ಮಾತನಾಡುವುದು ನ್ಯಾಯವಾಗಿದೆ. ಆದರೂ ಇದಕ್ಕಿಂತಲೂ ಮುಖ್ಯವಾಗಿಯೂ, ಆಯುರ್ವೇದಶಾಸ್ತ್ರದ ಮೂಲತತ್ವಕ್ಕೇನೆ ಸಂಬಂಧಪಟ್ಟ ಕೆಲವು ಗಹನವಾದ ವಿಷಯಗಳನ್ನು ತಮ್ಮೆದುರಿಗೆ ವಿಜ್ಞಾಪಿಸುವ ಉದ್ದೇಶ್ಯದಿಂದ ಇಲ್ಲಿ ನಿಂತಿಧೇನೆ.

ಪಾಶ್ಚಾತ್ಯ ವೈದ್ಯಶಾಸ್ತ್ರದಲ್ಲಿ ಪಂಡಿತರಾದವರೂ, ಪಾಶ್ಚಾತ್ಯ ಮತ್ತು ಆಯುರ್ವೇದಶಾಸ್ತ್ರಗಳನ್ನು ವ್ಯಾಸಂಗಮಾಡಿದವರಲ್ಲನೇಕರೂ ಸಹ ಆಯುರ್ವೇದ ವಿಷಯದಲ್ಲಿ ಎಷ್ಟು ದುರಭಿಪ್ರಾಯಗಳನ್ನಿಟ್ಟುಕೊಂಡಿದ್ದಾರೆನ್ನುವದು ನಿಮಗೆ ತಿಳಿಯದಮಾತಲ್ಲ. ಈ ದುರಭಿಪ್ರಾಯಗಳು ಬಹುಕಾಲದಿಂದಲೂ ನಮ್ಮ ದೇಶದಲ್ಲಿಯೇ ಪ್ರಬಲವಾಗಿ ಕೇಳಬರುತ್ತಿವೆ. ಸಮಾಧಾನ ಹೇಳುವುದಕ್ಕೆ ಬಾರದಂತೆ ತೋರುವ

ಆಕ್ಷೇಪಗಳನ್ನು ಇತರ ವೈದ್ಯಶಾಸ್ತ್ರಜ್ಞರು ಪದೇ ಪದೇ ಮಾಡುತ್ತಿರುವುದನ್ನು ಕೇಳಿ ನಮ್ಮಲ್ಲಿ ಅನೇಕರಿಗೆ ಅನೇಕವೇಳೆ ಆಯುರ್ವೇದದ ಮಹತ್ವದ ವಿಷಯದಲ್ಲಿ ಸಂದೇಹವುಂಟಾಗುತ್ತದೆ. ಸುಮಾರು 10 ವರ್ಷಗಳ ಕೆಳಗೆ ಪಾಶ್ಚಾತ್ಯ ವೈದ್ಯವ್ಯಾಸಂಗಮಾಡಿ ನಾನು ಕಾಲೇಜಿನಿಂದ ಬಂದಕೂಡಲೆ ಇಂಥ ದುರಭಿಪ್ರಾಯಗಳು ನನಗೂ ಹುಟ್ಟಲಾರಂಬಿಸಿದುವು. ಈ ದುರಭಿಪ್ರಾಯಗಳಿಗೆ ನಾನು ಒಳಪಟ್ಟು ಆಯುರ್ವೇದವನ್ನು ತಿರಸ್ಕಾರ ಮಾಡತೊಡಗಿದೆನು. ಕೆಲವು ಕಾಲದ ಮೇಲೆ ನಮ್ಮ ಪುರಾತನವಾದ ಅಪೌರುಷೇಯವಾದ ವೇದಮಂತ್ರಗಳಲ್ಲಿ ಅಡಗಿದ್ದ ಎಷ್ಟೋ ತತ್ವರತ್ನಗಳು ನನ್ನ ಕಣ್ಣನ್ನು ತೆರೆದುವು. ನಾವು ಪ್ರತಿದಿನವೂ ಮಾಡುವ ನಿತ್ಯಕರ್ಮಗಳು ಕೇವಲ ಮೂಢಭಕ್ತಿಯ ಮೂಲಕವಲ್ಲವೆಂದೂ, ಸಹೇತುಕವೂ ಮತ್ತು ಸಪ್ರಮಾಣವೂ ಆದುದೆಂದು ತಿಳಿಯಬಂತು. ಅನಂತರ ಆಯುರ್ವೇದಶಾಸ್ತ್ರದ ಮೂಲಗ್ರಂಥಗಳನ್ನೂ ವೇದವನ್ನೂ ಓದಲಾರಂಭಿಸಿದೆನು. ಕೇವಲ ಸಾಮಾನ್ಯದೃಷ್ಟಿಯಿಂದ ಓದಿದಾಗ್ಯೂ

(1) ವೇದಗಳೇ ವೈದ್ಯಶಾಸ್ತ್ರಕ್ಕೆ ಮೂಲಾಧಾರ. ಋಗ್ವೇದದಲ್ಲಿ ಔಷಧ ಚಿಕಿತ್ಸೆಯೂ, ಯಜುರ್ವೇದ ಮತ್ತು ಅಥರ್ವಣವೇದಗಳಲ್ಲಿ ಶಸ್ತ್ರ ಚಿಕಿತ್ಸಾಕ್ರಮವೂ ಹೇಳಿದೆ.

(2) ವೃದ್ಧತ್ರಯವೆಂದು ವಾಡಿಕೆಯಿರುವ ಚರಕ, ಸುಶ್ರುತ, ವಾಗ್ಭಟವೆಂಬ ಗ್ರಂಥಗಳು ವೇದಪ್ರಮಾಣವನ್ನನುಸರಿಸಿಯೇ ಬರೆದುವು. (ದೇಶ ಕಾಲಗಳಿಗೆ ಅನುಗುಣವಾದ ಕೆಲವು ಬದಲಾವಣೆಗಳ ವಿನಹ) ಎಂಬ ವಿಷಯಗಳು ಸ್ಪಷ್ಟವಾದವು. ಈ ಮೇಲೆ ಹೇಳಿದ ಸಿದ್ಧಾಂತಗಳನ್ನು ಸಮರ್ಥನೆಮಾಡುವುದಕ್ಕೆ ನಾನು ಮಾಡಿದ ಪರಿಶೋಧನೆಗಳೆಲ್ಲವನ್ನು ಹೇಳಿ ತಮ್ಮ ಬುದ್ಧಿಗೆ ಶ್ರಮಕೊಡಲೆಣಿಸಲಿಲ್ಲ. ಅವುಗಳ ಪೈಕಿ ಸ್ಥಾಲೀಪುಲಾಕನ್ಯಾಯದಿಂದ ಒಂದೆರಡು ವಿಷಯಗಳನ್ನು ಮಾತ್ರ ತಮ್ಮ ಮುಂದಿಡುತ್ತೇನೆ. ಅವುಗಳನ್ನು ನಿಷ್ಪಕ್ಷಪಾತಿಗಳಾಗಿ ವಿಮರ್ಶೆಮಾಡಿದಲ್ಲಿ ಆಯುರ್ವೇದಕ್ಕೂ ವೇದಗಳಿಗೂ ಇರುವ ಸಂಬಂಧವೂ, ಆಯುರ್ವೇದ ಪ್ರಾಶಸ್ತ್ಯವೂ ವ್ಯಕ್ತವಾಗುವುದು.

(1) ನಾಡೀ ನಿರ್ಣಯ ಸಿದ್ಧಾಂತ. (2) ಕ್ರಿಮಿಸಿದ್ಧಾಂತ. (3) ಸಜೀವ ಶಾರೀರ ಪರಿಶೋಧನ.

ಈಗ ಒಂದೊಂದು ವಿಷಯವನ್ನೂ ಸಂಗ್ರಹವಾಗಿ ವಿಚಾರಮಾಡೋಣ.

1. ನಾಡೀನಿರ್ಣಯ ಸಿದ್ಧಾಂತ.

ಈ ವಿಷಯದಲ್ಲಿ ಎಷ್ಟೋ ವಿವಾದಗಳೂ ಅಭಿಪ್ರಾಯಭೇದಗಳೂ ಇವೆ. ಕೆಲವು ಸುಪ್ರಸಿದ್ಧ ಆಯುರ್ವೇದ ಪಂಡಿತರು ನಾಡೀ ಸಿದ್ಧಾಂತವು ಆಯುರ್ವೇದಕ್ಕೆ ಶಾಸ್ತ್ರದಲ್ಲಿ ಮೊದಲಿರಲಿಲ್ಲವೆಂದೂ, ಆರ್ಯರು ದಕ್ಷಿಣದೇಶಕ್ಕೆ ದಂಡೆತ್ತಿ ಬಂದಾಗ ಧ್ರಾವಿಡರಿಂದ ಈ ವಿಷಯವನ್ನುಮಾತ್ರವೇ ಅಲ್ಲದೆ ರೋಗನಿದಾನವನ್ನು ಕಂಡುಹಿಡಿಯುವುದರಲ್ಲಿಯೂ, ಚಿಕಿತ್ಸೆಮಾಡುವುದರಲ್ಲಿಯೂ ಅನೇಕ ಹೊಸ ಮಾರ್ಗಗಳನ್ನುಕೂಡ ಕಲಿತರು ಎಂದೂ ಅಭಿಪ್ರಾಯಪಡುತ್ತಾರೆ.

ಈ ಪಂಡಿತರೆಲ್ಲರಲ್ಲಿಯೂ ನನಗೆ ಬಹಳ ಗೌರವವಿದೆ. ಆದರೂ ಇವರ ಅಭಿಪ್ರಾಯವು ವಿಚಾರಮಾಡಿದರೆ ನಿಲ್ಲಲಾರದೆಂದು ನನ್ನ ನಂಬಿಕೆ.

ಏತಕ್ಕೆಂದರೆ, ನಾಡೀ ಸಿದ್ಧಾಂತವು ಆಯುರ್ವೇದ ಶಾಸ್ತ್ರದ ಒಂದು ಭಾಗ. ಅಷ್ಟೇ ಅಲ್ಲ. ಆಯುರ್ವೇದಶಾಸ್ತ್ರವೆಲ್ಲಕ್ಕೂ ನಾಡೀ ಸಿದ್ಧಾಂತವೇ ಮೂಲಾಧಾರವೆಂದೂ ಹೇಳಲು ಬೇಕಾದಷ್ಟು ನಿದರ್ಶನಗಳಿವೆ.

ಹೆಚ್ಚು ಮಾತೇ ಇಲ್ಲದೆ ಕೆಲವು ಶ್ರುತಿವಾಕ್ಯಗಳನ್ನೇ ಹೇಳುತ್ತೇನೆ. ಕೇಳಿ. ಅವು ವೇದದ ಅನೇಕ ಭಾಗಗಳಿಂದ ಆರಿಸಿದುವು.

ಶ್ರುತಿ॥ ಅಗ್ನಿರ್ಮೇ ವಾಚಿ ಶ್ರಿತಃ ವಾಗ್ಘೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ವಾಗ್ಪ್ರವರ್ತಕಸಿರಾ ಧಮನೀಃ ಪ್ರಜ್ವಲಯತಿ ಸ್ಪಂದತಿ ॥

ವಾಯುರ್ಮೇ ಪ್ರಾಣೇ ಶ್ರಿತಃ ಪ್ರಾಣೋಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಅಗ್ನಿರ್ವಾ ಆದಿತ್ಯಃ ಸಾಯಂಪ್ರವಿಶತಿ ತಸ್ಮಾದಗ್ನಿರ್ದೂರಾನ್ನದೃಶೇ ಸೂರ್ಯಶ್ಚಕ್ಷುರ್ಗ್ಗಮಯತು ಸೂರ್ಯೋ ಮೇ ಚಕ್ಷುಷಿ ತೌ ಚಕ್ಷುರ್ಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಚಂದ್ರಮಾ ಮನಸಿ ಶ್ರಿತಃ ಮನೋಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ರೇತೋವಾ ಆಪಃ ಆಪೋ ಮೇ ರೇತಸಿ ಶ್ರಿತಃ ರೇತೋ ಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಪೃಥಿವೀ ಮೇ ಶರೀರೇ ಶ್ರಿತಃ ಶರೀರಂ ಹೃದಯಂ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಓಷಧಯಃ ಸೋಮೋರಾಜ್ಞಿ ಪ್ರವಿಷ್ಟಾಃ ಪೃಥಿವೀತನುಂ ಓಷಧಿ ವನಸ್ಪತಯೋ ಮೇ ಲೋಮಸು ಶ್ರಿತಾಃ ಲೋಮಾನಿ ಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಇಂದ್ರೋ ಮೇ ಬಲೇ ಶ್ರಿತಃ ಬಲಂ ಹೃದಯಂ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಯಾವತ್ತನೂರುಹಸ್ತಾವತ್ತನೂಂಷಿ ಬಿಭ್ರತಿ ಪರ್ಜನ್ಯೇನೋಷಧಿ ವನಸ್ಪತಯಃ ಪ್ರಜಾಯನ್ತೇ ಪರ್ಜನ್ಯೋಮೇ ಮೂರ್ಧ್ನಿಶ್ರಿತಃ ಮೂರ್ಧಾಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ವನಸ್ಪತಿ ಪ್ರೇರಿತೋ ಮನ್ಯುರ್ಭವತಿ ಈಶಾನೋ ಮೇ ಮನ್ಯೌ ಶ್ರಿತಃ ಮನ್ಯುರ್ಹೃದಯೇ ಹೃದಯಂ ಮಯಿ ಅಹಮಮೃತೇ ಅಮೃತಂ ಬ್ರಹ್ಮಣಿ ॥

ಈಶ್ವರಪ್ರೇರಿತ ಚೇಷ್ಟಾಶ್ರಯಂ ಹಿತಾಹಿತಕಾರ್ಯೋದ್ದೇಶ್ಯ ವಿಷಯಪ್ರವರ್ತಕ ಚೇಷ್ಟಾಶ್ರಯಂ ಶರೀರಂ ॥

ಈಶ್ವರಪ್ರೇರಿತ ಚೇಷ್ಟಾಶ್ರಯಂ ಕೀದೃಶಂ ಚೈತನ್ಯಂ ಚಕ್ಷುರ್ವದ್ರೂಪಗ್ರಾಹಕತ್ವಾಭಾವಾತ್ ಶ್ರೋತ್ರೇಂದ್ರಿಯವಚ್ಛಬ್ದಗ್ರಾಹಕತ್ವಾತ್ ಚೈತನ್ಯಸ್ವರೂಪಂ ಶಬ್ದ ಸ್ಪಂದನ ರೂಪೇಣ ಗೃಹೀತುಂ ಶಕ್ಯಮಿತಿ ॥

ಈ ಮೇಲೆ ಹೇಳಿದ ವಾಕ್ಯಗಳಲ್ಲಿ ಆಯುರ್ವೇದಶಾಸ್ತ್ರ ಸಮ್ಮತವಾದ ನಾಡೀ ಸಿದ್ಧಾಂತವು ಸ್ಫುಟವಾಗಿಯೂ ಪೂರ್ತಿಯಾಗಿಯೂ ಹೇಳಲ್ಪಟ್ಟಿದೆ ಎಂದು ನನ್ನ ವಿಜ್ಞಾಪನೆ.

ಈ ವಾಕ್ಯಗಳ ಅಭಿಪ್ರಾಯವು ಸಂಗ್ರಹವಾಗಿ ಹೇಳಿದರೆ ಇಷ್ಟೇ—ಶರೀರದ ಸಂಬಂಧವಾದುದಾಗಲಿ, ರೋಗಸಂಬಂಧವಾದುದಾಗಲಿ, ಮಾನಸಿಕವಾಗಿಯಾಗಲಿ, ಆಗುವ ಬದಲಾವಣೆಗಳೆಲ್ಲವೂ ಹೃದಯಸ್ಪಂದನದಿಂದಲೇ ಆಗತಕ್ಕವು. ಈ ಸ್ಪಂದನವು ರಕ್ತ ದ್ವಾರಾ ನಾಡೀಸ್ಥಾನಕ್ಕೆ ಸೇರುವುದು ಎಂದು—

ಇದೇ ಸಿದ್ಧಾಂತವನ್ನೆ ಕೆಲವು ಕಾಲವಾದಮೇಲೆ ಬಂದ ಮೂವರು ಆಯು ರ್ವೇದಾಚಾರ್ಯರೂ ತ್ರಿದೋಷ ಅಥವಾ ತ್ರಿಧಾತು ಸಿದ್ಧಾಂತವೆಂಬ ಹೆಸರಿನಿಂದ ಹೇಳಿದರು.

ಕೆಲವು ಆಧುನಿಕ ಶಾಸ್ತ್ರಜ್ಞರು ಈ ತ್ರಿದೋಷ ಸಿದ್ಧಾಂತಕ್ಕೂ ನಾಡೀ ವಿಜ್ಞಾನಕ್ಕೂ ಏನೂಸಂಬಂಧವಿಲ್ಲವೆಂದು ಅಭಿಪ್ರಾಯಪಡುತ್ತಾರೆ. ಇದು ಸರಿ ಯಾಗಿ ತೋರುವುದಿಲ್ಲ.

ಈ ವಿಷಯದಲ್ಲಿ ವಾಗ್ಭಟನವಾಕ್ಯಗಳನ್ನೂ ಶ್ರುತಿವಾಕ್ಯಗಳನ್ನೂ ಒಂದ ನ್ನೊಂದಕ್ಕೆ ಹೋಲಿಸಿ ನೋಡಿದರೆ ವೇದದಲ್ಲಿ ಹೇಳಿರುವ 'ಹೃದಯಸ್ಪಂದನ' ವೂ, ವಾಗ್ಭಟನ 'ತ್ರಿದೋಷ' ಸಿದ್ಧಾಂತವೂ ಒಂದೇ ಎಂದು ಸ್ಪಷ್ಟಪಡುತ್ತದೆ. ವೇದ ಭಾಷೆಯಲ್ಲಿ ಅಮೃತವೆಂಬ ಹೆಸರುಳ್ಳ ರಕ್ತವು ಹುಟ್ಟುವ ಕ್ರಮದಲ್ಲಿಯೇ ತ್ರಿದೋ ಷವೂ, ಸ್ಪಂದನವೂ ಉಂಟಾಗುತ್ತಿವೆ ಎಂದು ವೇದವೂ ಹೇಳುತ್ತದೆ. ವಾಗ್ಭಟನೂ ಹೇಳುತ್ತಾನೆ—ನನಗೇನೋ ಇದಕ್ಕಿಂತ ಬೇರೆ ಪ್ರಮಾಣವೇ ಬೇಕಾಗಿಲ್ಲ. ಈ ವಿಷಯವನ್ನು ಸರಿಪಡಿಸಲು ವಾಗ್ಭಟದಿಂದ ಕೆಲವು ವಾಕ್ಯಗಳನ್ನೆತ್ತಿ ಹೇಳುತ್ತೇನೆ.

ಶ್ಲೋ|| ಆದೌಷಡ್ರಸಮುತ್ಪನ್ನಂ ಮಧುರೀಭೂತಮೀರಯೇತ್ ಫೇನೀಭೂತಂ ಕಫಂ ಯಾತಂ ವಿದಾಹಾದಾಮ್ಲತಾಂ ತತಃ । ಪಿತ್ತಮಾ ಮಾಶಯಾತ್ಕುರ್ಯಾಚ್ಚ್ಯವಮಾನಂ ಚ್ಯುತಂ ಪುನಃ । ಅಗ್ನಿನಾಶೋಷಿತಂ ಪಕ್ವಂ ಪಿಂಡಿತಂ ಕಟುಮಾರುತಂ ||

ಸೂ|| ಸರ್ವೇರಸಾಃ ಪಾಕೇನ ಸ್ವಾದ್ವಾಮ್ಲ ಕಟುಕಾ ಭೂತ್ವಾ ಯಥಾ ರ್ಥಸ್ಥಿತಾ ರಸಾನೇವ ತತ್ತತ್ಫಲದಾಯಕಾ ಇತಿ ||

ಸೂ|| ಸ್ವಾದ್ವಾಮ್ಲಕಟುಕಾಃ ಪಾಕ್ಯಾರಸಾ ಯಥಾಕಫಪಿತ್ತಾನಿಲಾಃ ಸಮದೋಷಾ ಯಥಾ ಯಥಾ ಯೋಗ ಫಲದಾಯಕಾಃ ||

ಸೂ|| ಸುಖದುಃಖ ಮೋಹಾತ್ಮಿಕಾಃ ಸತ್ವರಜಸ್ತಮೋಗುಣಾಸ್ತ್ರಯಃ ಪ್ರಾದುರ್ಭವಂತಿ ||

ನಾಡೀ ಸಿದ್ಧಾಂತ ವಿಷಯವಾಗಿ ದೊಡ್ಡ ಗ್ರಂಥಗಳನ್ನು ಬರೆದ ವ್ಯಾಸ, ವಸಿಷ್ಠ ಮತ್ತು ಅಗಸ್ತ್ಯಮಹರ್ಷಿಗಳು ದ್ರಾವಿಡರಲ್ಲ. ಅವರು ವೇದದ ಕಾಲದಲ್ಲಿ ದ್ದವರು. ಹೀಗಿರುವಲ್ಲಿ ನಾಡೀ ಸಿದ್ಧಾಂತವು ಆರ್ಯಮತವೇ ಎಂದೂ ದ್ರಾವಿಡ ರಿಂದ ಕಲಿತುದಲ್ಲವೆಂದೂ ಹೇಳುವುದಕ್ಕೆ ಅಡ್ಡಿಯೇನು?

2. ಕ್ರಿಮಿ ಸಿದ್ಧಾಂತ.

ಇನ್ನು ಕ್ರಿಮಿಗಳ ವಿಷಯದಲ್ಲಿ ಆಯುರ್ವೇದ ಶಾಸ್ತ್ರದ ಅಭಿಪ್ರಾಯವನ್ನು ತಿಳಿಯೋಣ. ಪುರಾತನಾಯುರ್ವೇದ ಶಾಸ್ತ್ರಜ್ಞರು ಈ ಶಾಸ್ತ್ರದ ತತ್ವವನ್ನು ಹೇಗೆ ಕಂಡುಹಿಡಿದರೋ ಆಶ್ಚರ್ಯವಾಗಿದೆ. ಈ ವಿಷಯದಲ್ಲಿ ಕೆಲವು ನವೀನ ಪಂಡಿತರಿಗೂ ನನಗೂ ಭೇದವಿದೆಯೆಂಬುದನ್ನು ಬಲ್ಲೆ. ಆದರೂ ಅತಿ ಪ್ರಾಚೀನರಾದ ಬೋಧಾಯನ, ಕೌಶಿಕ ಮೊದಲಾದ ಆಯುರ್ವೇದಾಚಾರ್ಯರು ಬರೆದಿರುವ ವಾಕ್ಯಗಳನ್ನೂ, ವೇದದ ಬ್ರಾಹ್ಮಣವಾಕ್ಯಗಳನ್ನೂ ನೋಡಿದಷ್ಟೂ ಈ ಕ್ರಿಮಿಸಿದ್ಧಾಂತವು ಅವರಿಗೆ ತಿಳಿದಿತ್ತು ಎಂದು ಮಾತ್ರವೇ ಅಲ್ಲ. ಇದರಲ್ಲಿ ಬಹುದೂರ ವಿಚಾರಮಾಡಿ ಶಾಸ್ತ್ರವನ್ನು ಬಹಳ ಉನ್ನತಸ್ಥಿತಿಗೆ ತಂದಿದ್ದರೆಂದೂ ನನಗೆ ನಂಬಿಕೆ ಹುಟ್ಟುತ್ತದೆ. ಕ್ರಿಮಿಗಳಲ್ಲಿ ಎಷ್ಟು ವಿಧ, ಅವು ರೋಗಗಳನ್ನುಂಟುಮಾಡುವುದು ಹೇಗೆ, ಆ ರೋಗಗಳನ್ನು ವಾಸಿಮಾಡುವುದು ಹೇಗೆ, ಎಂಬ ವಿಷಯಗಳು ಕೂಡ ಚೆನ್ನಾಗಿ ಹೊರಬೀಳುತ್ತವೆ. ಇನ್ನೂ ಆಶ್ಚರ್ಯವೇನೆಂದರೆ, ಅವರು ಈ ಸಿದ್ಧಾಂತವನ್ನು ಪ್ರಾರಂಭಮಾಡಿದರೆಂದು ಮಾತ್ರವಲ್ಲ, ಈವತ್ತಿಗೂ ಪಾಶ್ಚಾತ್ಯ ಶಾಸ್ತ್ರಜ್ಞರಿಗೆ ಗೋಚರವಾಗದ ಗಹನವಾದ ಅತಿಸೂಕ್ಷ್ಮವಿಷಯಗಳನ್ನು ಕೂಡ ತಿಳಿದಿದ್ದರು. ಇದನ್ನು ಸಮರ್ಥನಮಾಡುವುದಕ್ಕೆ ಎಷ್ಟೋ ಪ್ರಮಾಣಗಳು ನನ್ನ ಜ್ಞಾಪಕಕ್ಕೆ ಬರುತ್ತವೆ. ಅವುಗಳಲ್ಲಿ ಕೆಲವನ್ನು ಮಾತ್ರ ವಿಮರ್ಶೆಗಾಗಿ ಹೇಳುವೆನು. ಅತಿ ಸ್ಥೂಲದೃಷ್ಟಿಯಿಂದ ನೋಡಿದಾಗ್ಯೂ ನಾನು ಹೇಳುವ ವಿಷಯದ ತತ್ವವು ತಿಳಿಯಬರುವುದು.

1 ಪ್ರಾಚೀನಾಯುರ್ವೇದಿಗಳಿಗೆ ಕ್ರಿಮಿಗಳ ಪ್ರಭೇದಗಳೂ ಅವುಗಳಿಂದುಂಟಾಗುವ ವಿವಿಧ ರೋಗಗಳೂ ಯಾವುವೆಂಬುವು ತಿಳಿದಿದ್ದುವೆನ್ನುವ ವಿಷಯದಲ್ಲಿ ಬೋಧಾಯಖುಷಿಯಿಂದ ಬರೆಯಲ್ಪಟ್ಟ ಈ ಕೆಳಗಿನ ವಾಕ್ಯವೇ ಪ್ರಮಾಣ.

ನಕ್ತಂಚಾರಿಣ ಉರಸ್ಪೇಶಾ೯ ಶೂಲಹಸ್ತಾ೯ ಕಪಾಲಪಾ೯ ಪೂರ್ವವಿಷಾಂ ಪಿತೇತ್ಯುಚ್ಚೈಃ ಸ್ರಾವ್ಯ ಕರ್ಣಕಃ । ಮಾತಾಜಘನ್ಯಾ ಸ್ಸರ್ಪತಿಗ್ರಾಮೇ ವಿಧುರ ಮಿಚ್ಛನ್ತೀ ॥

2 ಕ್ರಿಮಿಗಳ ಬೆಳುವಳಿಕೆ ಮೊದಲಾದ ವಿಷಯವನ್ನು ಚೆನ್ನಾಗಿ ಅವರು ಅರಿತಿದ್ದರೆಂಬುದಕ್ಕೆ ಅದೇ ಬೋಧಾಯನರ ಈ ಕೆಳಗಿನ ಮಾತೇ ಪ್ರಮಾಣ.

ಆಯಶ್ಯಂಡೋ ಮರ್ಕ ಉಪವೀರ ಉಲೂಖಲಃ ಚ್ಯವನೋ ನಸ್ಯತಾದಿತ ॥ ಖೇಳನೀಶ್ಪಲೋಮಿನೀ ಖಜಾಪೋ ಜ್ಯೋಪಕಾಶನೀ ಅಪೇತ ನಸ್ಯತಾದಿತ ॥

3 ಆಕ್ರಿಮಿಗಳು ಯಾವ ರೀತಿಯಲ್ಲಿ ರೋಗವನ್ನುಂಟುಮಾಡುತ್ತವೆ ಎಂಬುದು ಈ ಕೆಳಗಿನ ವಾಕ್ಯದಲ್ಲಿ ಹೇಳಿದೆ.

ಮಿಶ್ರವಾಸಸ ಕಾಬೇರಕಾ ರಕ್ಷೋರಾಜೇನ ಪ್ರೇಕ್ಷಿತಾ ಗ್ರಾಮಗುಂ ಸಜಾನತೋ ಗಚ್ಛನ್ತೀ ಇಚ್ಛನ್ತೀ ಪರಿಥಾಕೃತರ್ಾ ||

4 ಕ್ರಿಮಿಗಳಿಂದುಂಟಾಗುವ ಸೋಂಕನ್ನು ಹೇಗೆ ತಪ್ಪಿಸುವುದು, ಅಷ್ಟಕ್ಕೂ ರೋಗಬಂದರೆ ಹೇಗೆ ಪರಿಹಾರಮಾಡಬಹುದೆನ್ನುವುದು ಅದೇ ಬೋಧಾಯನರೇ ಈ ಕೆಳಗೆ ಹೇಳುತ್ತಾರೆ.

ಶಂಡೋರಥಶ್ಶಂಡಿಕೇರ ಉಲೂಖಲಃ ಚ್ಯವನೋನಸ್ಯತಾದಿತ ||

ಈ ಮೇಲೆ ಉದಾಹರಿಸಿದ ಪ್ರಮಾಣಗಳಿಂದ ಕ್ರಿಮಿವಿಷಗಳನ್ನು ದೇಹದಿಂದ ಹೇಗೆ ಹೊರಡಿಸಬಹುದೆನ್ನುವುದನ್ನು ಬೋಧಾಯನರು ಹೇಳಿದಾರೆ.

ಏತಾನಗ್ನತೈರ್ತಾ ಗೃಣೀತೇ ತ್ಯಯಂ ಬ್ರಾಹ್ಮಣಸ್ಪುತ್ರಃ ತಾನಗ್ನಿಃ ಪರ್ಯಸರತು ತಾನಹಂವೇದಾ ಬ್ರಹ್ಮಣಃ ಪ್ರಮೃಶತಃ ಕೂಟದನ್ತಾ ವಿಕೇಶಾ ಲಂಬನಸ್ತಾ ಸ್ವಾಹಾ ||

ಈ ಮೇಲೆ ಹೇಳಿದ ವಾಕ್ಯಗಳನ್ನು ವಿಮರ್ಶೆಮಾಡಿದರೆ ಹಿಂದೂಕ್ರಿಮಿಶಾಸ್ತ್ರವು ಕೇವಲ ಕಟ್ಟುಕಥೆಯಲ್ಲವೆಂದೂ, ನಿಜವಾಗಿ ಇದ್ದಿತೆಂದೂ ವ್ಯಕ್ತವಾಗುತ್ತದೆ. ಈ ಕ್ರಿಮಿಶಾಸ್ತ್ರವು ಆಯುರ್ವೇದಶಾಸ್ತ್ರದ ಮೂಲಾಧಾರವೆಂದೂ, ಅದಕ್ಕೂ ಆಯುರ್ವೇದತ್ರಿದೋಷಸಿದ್ಧಾಂತಕ್ಕೂ ಯಾವ ವ್ಯಾಹತಿಯೂ ಇಲ್ಲವೆಂದೂ, ಪಾಶ್ಚಾತ್ಯಶಾಸ್ತ್ರಜ್ಞರು ಎಷ್ಟೋ ಶತಮಾನಗಳ ಅನಂತರ ಕಂಡುಹಿಡಿದ ಕ್ರಿಮಿತತ್ವವನ್ನು ಮಹರ್ಷಿಗಳು ಬಹಳ ಹಿಂದಿನ ಕಾಲದಲ್ಲಿಯೇ ಕಂಡಿದ್ದರೆಂತಲೂ ಇದರಿಂದ ವ್ಯಕ್ತವಾಗುತ್ತದೆ.

ನಿಷೇಧಚಾರಿಣೀ ಸ್ವಸಾಸನ್ನಿನಾಪೇಕ್ಷಿತೇ ಕುಲಂ ಯಾಸ್ವಪಂತಂ ಬೋಧಯತಿ ಯಸ್ಯೈ ವಿಜಾತಾಯಾಂ ಮನಃ ತಾಸಾಂ ತ್ವಂ ಕೃಷ್ಣವರ್ತ್ಮನೇ ಕ್ಲೋಮಾನಗುಂ ಹೃದಯಂ ಯಕೃತ್ ಅಗ್ನೇ ಅಕ್ಷೀಣೇ ನಿರ್ದಹಸ್ವಾಹಾ ||

ಇಷ್ಟು ಪ್ರಮಾಣಗಳಿದ್ದಾಗ್ಯೂ ಆಯುರ್ವೇದದಲ್ಲಿ ಕ್ರಿಮಿಶಾಸ್ತ್ರವಿಲ್ಲವೆಂದು ಹೇಳುವುದು ಅತಿಸಾಹಸದ ಮಾತು. ಹಾಗೆ ಹೇಳುವವರಿಗೆ ಒಂದೇ ಉತ್ತರ. ಅದು ಏನಂದರೆ—ದಯಮಾಡಿ ಪಾಲುಮಾರಿಕೆಯನ್ನುಬಿಟ್ಟು ಸಮುದ್ರದಂತೆ ಅಪಾ

ರವಾಗಿರುವ ಆಯುರ್ವೇದಶಾಸ್ತ್ರವನ್ನು ಚೆನ್ನಾಗಿ ಪರಿಶೀಲಿಸಿ ಎಂದು. ವೃದ್ಧತ್ರಯ ದಲ್ಲಿಯೇ ಆಯುರ್ವೇದಶಾಸ್ತ್ರವೆಲ್ಲಾ ಮುಗಿದುಹೋಯಿತೆನ್ನುವ ಅಜ್ಞಾನವೇ ಈ ತಪ್ಪುತಿಳುವಳಿಕೆಗೆ ಕಾರಣ. ಶಸ್ತ್ರಚಿಕಿತ್ಸೆಗೆ ಮೊದಲೂ ಆ ಮೇಲೆಯೂ ಶಸ್ತ್ರಗ ಳನ್ನು ಶುದ್ಧಿಮಾಡುವ ಬಗ್ಗೆ ಸುಶ್ರುತ ಋಷಿಯು ಹೇಳಿರುವುದನ್ನು ಗಮನಿಸ ಬೇಕು. ಅವರೂ ಏನನ್ನೂ ಹೊಸದಾಗಿ ಹೇಳಿದುದಲ್ಲ. ಯಜುರ್ವೇದಪಶುಪಸ್ನದ ಲ್ಲಿಯೂ ಋಗ್ವೇದದ ಶೈವಶೃತಿಯಲ್ಲಿಯೂ ಹೇಳಿರುವುದಲ್ಲದೆ ಬೇರೆ ಏನೂ ಇಲ್ಲ.

ಸುಶ್ರುತಾಚಾರ್ಯರು ಇಷ್ಟೇ ಹೇಳಿಬಿಟ್ಟದ್ದರೆ ಅವರಿಗೆ ಗೊತ್ತಿದ್ದುದು (Parasitology) ಪ್ಯಾರಸೈಟೊಲಜಿಯೇ ಹೊರತು ಬ್ಯಾಕ್ಟೀರಿಯಾಲಜಿಯಲ್ಲ ವೆಂದು ಹೇಳಲು ಅವಕಾಶವಿರುತ್ತಿತ್ತು. ಆದರೆ ಸುಶ್ರುತರು 6 ವಿಧದ ರಕ್ತಕ್ರಿಮಿ ಗಳ ವಿಷಯವಾಗಿಯೂ 6 ವಿಧ ಕಫಕ್ರಿಮಿವಿಷಯವಾಗಿ ಹೇಳಿದಾರೆ. ಆದ್ದರಿಂದ ಅವರಿಗೆ ತಿಳಿದಿದ್ದುದು ಬ್ಯಾಕ್ಟೀರಿಯಾಲಜಿ ಎಂದು ಹೇಳುವುದಕ್ಕೆ ಸಂಶಯವೇನೂ ಇಲ್ಲ. ಸಂಗ್ರಹವಾಗಿ ಬರೆದಿರುವ ಮಾತ್ರಕ್ಕೆ ಆ ಶಾಸ್ತ್ರವೇ ಇಲ್ಲವೆಂದು ಹೇಳುವ ವರು. ವೃದ್ಧತ್ರಯವನ್ನು ಆಯುರ್ವೇದಶಾಸ್ತ್ರಕ್ಕೆ ಸಂಬಂಧಪಟ್ಟದ್ದಲ್ಲವೆಂದು ಹೇಳ ಬೇಕಾಗಿ ಬರುತ್ತದೆ. ಅಂಥವರು ಈ ಕೆಳಗೆ ಹೇಳಿರುವ ಮಂತ್ರಬ್ರಾಹ್ಮಣವನ್ನು ಕೃಮಿಸಿದ್ಧಾಂತಪರವಲ್ಲದೆ ಬೇರೆ ವಿಧವಾಗಿ ಅನ್ವಯಿಸುವ ಹಾಗೆ ಅರ್ಥ ಹೇಳಲಿ ನೋಡೋಣ.

ಮನ್ತ್ರಬ್ರಾಹ್ಮಣ.

ಅತ್ರಿಣಾ ತ್ವಾ ಕ್ರಿಮೇಹನ್ಮೀ ಋಣ್ವೇನ ಜಮದಗ್ನಿನಾ ವಿಶ್ವಾವಸೋ ರ್ಬ್ರಹ್ಮಣಾಹತಃ ಕ್ರಿಮೀಣಾಗುಂರಾಜಾ ಅಪ್ಯೇಷಾಗು ಸ್ಥಪತಿರ್ಹತಃ ಅಥೋಮಾತಾ ಅಥೋಪಿತಾ ಅಥೋಸ್ಥೂರಾ ಅಥೋಕ್ಷುದ್ರಾಃ ಅಥೋ ಕೃಷ್ಣಾ ಅಥೋಶ್ವೇತಾ ಅಥೋ ಆಶಾತಿಕಾಹತಾಃ ಶ್ವೇತಾಭಿಸ್ಸಹ ಸರ್ವೇ ಹತಾಃ ||

III. ಸಜೀವಶಾರೀರಪರಿಶೋಧನ.

ಸಜೀವವಾದ ಪ್ರಾಣಿಗಳ ಮೇಲೆ ಪರಿಶೋಧನ ಮಾಡುವ ಶಾಸ್ತ್ರವು ನಮ್ಮ ಪೂರ್ವಿಕರಿಗೆ ಬಹುಕಾಲದ ಕೆಳಗೆ ಗೊತ್ತಿತ್ತು. ಈ ಶಾಸ್ತ್ರವನ್ನು ಇಂಗ್ಲೀ ಷಿನಲ್ಲಿ 'Viviseetion' ವಿವಿಸೆಕ್ಷನ್ ಎನ್ನುತ್ತಾರೆ. ಆಯುರ್ವೇದದಲ್ಲಿ ಈ ಶಾಸ್ತ್ರವೂ ಇದೆ ಎಂದು ಕೇಳಿದರೆ ನಿಮಗೆ ಆಶ್ಚರ್ಯವಾಗುವುದಿಲ್ಲವೇ! ಇಷ್ಟೇ ಅಲ್ಲ. ಪಾಶ್ಚಾತ್ಯ ವೈದ್ಯರು ಈ ವಿಷಯವಾಗಿ ವಿಚಾರಮಾಡಲು ಪ್ರಾರಂಭಿಸಿ

ಸುಮಾರು 30 ವರ್ಷಗಳಾದಾವು. ಇನ್ನೂ ಪ್ರಾರಂಭದೆಸೆಯಲ್ಲಿಯೇ ಇಧಾರಿ ಎಂದು ಹೇಳಿದರೆ ಅತಿಶಯೋಕ್ತಿಯೇನೂ ಅಲ್ಲ. ಆದರೆ ನಮ್ಮ ಪೂರ್ವಿಕರ ವಿಷಯ ಬೇರೆ. ಇಂಥ ಶಾಸ್ತ್ರ ಒಂದಿದೆ ಎಂದು ಆವರಿಗೆ ಮೊದಲಿಂದಲೂ ಗೊತ್ತಿತ್ತು ಎಂತ ಮಾತ್ರವೇ ಅಲ್ಲ. ಅವರು ಬಹುದೂರ ಪರಿಶೋಧನವನ್ನು ಮಾಡಿದ್ದರು. ಈಗಿನ ಪಾಶ್ಚಾತ್ಯ ವೈದ್ಯರು ಅತಿಕ್ಷುದ್ರವಾದ ಕೆಲವು ಪ್ರಾಣಿಗಳ ಮೇಲೆ ಪರಿ ಶೋಧನೆ ಮಾಡಿದ್ದೇವೆಂದೂ, ಅದು ಸಫಲವಾಯಿತೆಂದೂ ಬಡಾಯಿ ಹೇಳಿಕೊ ಳ್ಳುವರು. ಆದರೆ ಅದು ನಿಶ್ಚಯವಾಗಿ ಸಫಲವಾಗಲಿಲ್ಲ. ಹೀಗಿರುವಲ್ಲಿ ಈ ಅಲ್ಪ ವಾದ ಆಧಾರದ ಮೇಲೆ ಒಂದು ದೊಡ್ಡ ಸಿದ್ಧಾಂತವನ್ನು ಸ್ಥಾಪಿಸಿದ್ದೇವೆಂದು ಹೇಳುವುದಾಗಲಿ, ಅದನ್ನು ವೈದ್ಯಶಾಸ್ತ್ರದಲ್ಲಿ ಉಪಯೋಗಕ್ಕೆ ತಂದಿದ್ದೇವೆಂದು ಹೇಳುವುದಾಗಲಿ ನ್ಯಾಯವಿಲ್ಲ. ಈ ವಿಷಯದಲ್ಲಿ ನಮ್ಮ ಪೂರ್ವಿಕರು ಎಷ್ಟುದೂರ ಹೋಗಿದ್ದರೆನ್ನುವುದನ್ನು ತಿಳಿಯಬೇಕಾದರೆ ಯಜುರ್ವೇದದ ಶ್ರೌತಭಾಗದ ಆಧಾ ನಪಂಚಕವನ್ನು ಓದಿದರೆ ಸಾಕು. ಅದರಿಂದ ಯಾವುದೋ ಒಂದೆರಡು ಸಣ್ಣ ಪ್ರಾಣಿಗಳ ವಿಷಯವಾಗಿಯೇ ಅಲ್ಲ. ಪಕ್ಷಿಗಳೇನು, ಸರ್ಪಗಳೇನು, ಪಶುಗಳೇನು ಕಡೆಗೆ ಮನುಷ್ಯರ ಮೇಲೆ ಕೂಡ ಈ ವೈದ್ಯರು ಪರಿಶೋಧನೆಮಾಡಿ ಸಿದ್ಧಾಂತ ಮಾಡಿದ್ದರೆಂದು ಸ್ಫುಟವಾಗಿ ಗೊತ್ತಾಗುವುದು.

ಈ ವಿಷಯದಲ್ಲಿ ಯಜುರ್ವೇದ ವಾಕ್ಯಗಳೂ ಕೌಶಿಕಸೂತ್ರಗಳೂ ಬೇಕಾ ದಷ್ಟು ಅಪಾರವಾಗಿದೆ. ಅವುಗಳನ್ನು ಉದಹರಿಸುವುದಕ್ಕೆ ಈಗ ಅವಕಾಶವಿಲ್ಲ. ಆದರೆ ಇಷ್ಟುಮಾತ್ರ ಖಂಡಿತವಾಗಿ ಹೇಳಬಲ್ಲೆನು. ನಮ್ಮ ಪ್ರಾಚೀನರಿಗೆ ಈ ಶಾಸ್ತ್ರದಲ್ಲಿ ಸರ್ವತೋಮುಖವಾದ ಪೂರ್ಣಜ್ಞಾನವಿತ್ತು ಎಂದು ಹೇಳುವುದಕ್ಕೆ ಬೇಕಾದಷ್ಟು ಆಧಾರವಿದೆ. ಅವುಗಳಲ್ಲಿ 40 ವಿಧವಾದ ಮುಖ್ಯವಾದ ವೈದಿಕಕ್ರಮ ಗಳ ವಿಷಯವಾಗಿ ಪ್ರಸ್ತಾಪಿಸಿದೆ. ಒಂದೊಂದರಲ್ಲಿಯೂ ಒಂದೊಂದು ಜಾತಿ ಪ್ರಾಣಿಯ ವಿಷಯವಾದ ಸಿದ್ಧಾಂತಗಳು ಕಂಡುಬರುತ್ತವೆ. ಇವುಗಳನ್ನು ನೋಡಿ ದರೆ ಈ ಕೆಳಗೆ ಹೇಳಿರುವ ವಿಷಯಗಳಿಗೆ ಅವರು ಹೆಚ್ಚುಗಮನ ಕೊಟ್ಟಿದ್ದರೆಂದು ವ್ಯಕ್ತವಾಗುತ್ತದೆ.

1. ಕರುಳು ಮೊದಲಾದ ಕೋಷ್ಠಾಂಗಗಳ ಪ್ರತ್ಯೇಕಕಾರ್ಯಗಳು, ಒಂದೊಂ ದಕ್ಕೂ ಇರುವ ಸಂಬಂಧ ಮತ್ತು ಗ್ರಂಥಿಸ್ರಾವಗಳು.

2. ಶರೀರದ ಪ್ರಧಾನವಾದ ಪಂಚವಿಧಕೋಶಗಳು ಅಂದರೆ 1. ಅನ್ನ ಮಯಕೋಶ, (The Gastro intestinal or alimentary

System). 2. ಪ್ರಾಣಮಯಕೋಶ (The Respiratory System). 3. ಮನೋಮಯಕೋಶ (The Cerebrospinal & Central Nervous System). 4. ವಿಜ್ಞಾನಮಯಕೋಶ (The sutonomic System of the sensery Sympathetic nervous System). 5. ಆನಂಧಮಯ ಕೋಶವು ಉಪನ್ನ ಆನಂದೇಂದ್ರಿಯವು.

3. ಸ್ತ್ರೀಯು ಪುರುಷನಾಗುವುದು ಪುರುಷನು ಸ್ತ್ರೀಯಾಗುವುದು (The science of sex and sex metamirphesis) ಈ ವಿಷಯು ಮಾತ್ರವೇ ಅಲ್ಲದೇ ಕೆಲವು ಪ್ರಾಣಿಗಳ ಮೇಲೆ ಮೂಲಿಕೆಗಳು ಹೇಗೆ ಕೆಲಸ ಮಾಡುತ್ತವೆಯೋ ಅವುಗಳಲ್ಲಿಯೂ ಬಹು ಪರಿಶ್ರಮ ಹೊಂದಿ ಅತ್ಯಪೂರ್ವವಾದ ನಿರ್ಣಯಗಳನ್ನು ಮಾಡಿದಂತೆ ತೋರಿಬರುತ್ತದೆ. ಈ ಪರಿಶೋಧನೆಗಳು ನಮ್ಮ ಪಾಶ್ಚಾತ್ಯವಿದ್ವಾಂಸರಿಗೆ ಗೋಚರವೇ ಇಲ್ಲ. ಶ್ರೌತಭಾಗದ ಸೋಮಪಂಚಕದಲ್ಲಿ ಈ ವಿಷಯುವು ವಿಸ್ತಾರವಾಗಿ ಹೇಳಲ್ಪಟ್ಟದೆ.

ಉಪಸಂಹಾರ

ಇನ್ನು ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ. ಆಯುರ್ವೇದಶಾಸ್ತ್ರದಲ್ಲಿ ಪರಿಶೋಧನಾರ್ಹವಾದ ವಿಷಯಗಳು ಬೇಕಾದಷ್ಟಿವೆ. ಈ ಅನಂತವಾದ ಪರಿಶೋಧನೆಯ ವಿಷಯವಾಗಿ ಸೂಕ್ಷ್ಮವಾಗಿ ಒಂದೆರಡು ಮಾತುಗಳನ್ನು ಹೇಳಿದೇನೆ. ಶಾಸ್ತ್ರಪರಿಶೋಧನೆಯ ಸಮುದ್ರದಲ್ಲಿ ನಾನು ಹೇಳಿರುವುದು ಒಂದು ಬಿಂದು ಮಾತ್ರವೇ. ಮೇಲೆ ಹೇಳಿದ ಎರಡು ಮೂರು ಸಿದ್ಧಾಂತಗಳೇ ಅಲ್ಲ. ಇನ್ನೂ ಅನೇಕ ವಿಷಯಗಳಲ್ಲಿ ಪರಿಶೋಧನಮಾಡತಕ್ಕದ್ದಿದೆ. ಅಷ್ಟಕ್ಕೂ ಅವಕಾಶವಿದೆ. ಅವು ಯಾವುವೆಂದರೆ

1. ರಸಭಾಗವು, 2. ಸೂತಿಕಾಗೃಹಕರ್ಮ, ಶಿಶುಪೋಷಣೆ, 3. ಕಳೆದು ಹೋದ ಇಂದ್ರಿಯಶಕ್ತಿಯನ್ನು ಪುನರುಜ್ಜೀವನಮಾಡುವುದು. 4. ಜೀರ್ಣವಾದ ಅವಯವಗಳ ಸ್ಥಾನದಲ್ಲಿ ಕೃತ್ರಿಮಾವಯುಗಳನ್ನಿಡುವುದು, 5. ದಶರಥನು ಮಾಡಿದ ಪುತ್ರಕಾಮೇಷ್ಟಿಯಿಂದ ಮನುಷ್ಯನಿಗೆ ಹೊಸದಾಗಿ ಯೌವನವನ್ನುಂಟು ಮಾಡುವುದು. ಇಂದ್ರನಿಗೆ ಹಳೇಬೀಜವನ್ನು ತೆಗೆದುಹಾಕಿ ಬೇರೆ ಬೀಜವನ್ನು ಇಡೋಣ, 6. ಮೂಲಿಕೆಗಳ ಮೇಲೆ ಚಂದ್ರಾದಿ ಗ್ರಹಗಳ ಕೆಲಸ, ಬಿಸಿಲು ಮತ್ತು ಅದರ ಉಪಯೋಗ, 7. ಜಲಚಿಕಿತ್ಸ, 8. ಮೃತ್ತಿಕಾಚಿಕಿತ್ಸೆ, 9. ಲೋಹಗಳ ತೂಕವನ್ನು ಕಡಮೆ ಮಾಡುವುದು, 10. ಅವನ್ನು ಧೂಮಾವಸ್ಥೆಗೆ

೨೧ ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು. ೧೯೩೦.



ಪ್ರದರ್ಶಕರ ಸಮೂಹ.

(ಡಾ|| ಪಿ. ಸುಬ್ಬರಾವ್, B.Sc., ಮತ್ತು ಮ|| N. ನಾಗೇಶರಾಯರು M.A., ಇವರುಗಳ ಸಮೇತ.)

ತರುವುದು, 11. ಧಾತು ಸಂಸ್ಕಾರ, 12. ರಕ್ತದ್ವಾರಾ ಔಷಧಪ್ರಯೋಗ. Injections. ಇತ್ಯಾದಿ.

ಎಷ್ಟು ಮೇಧಾವಿಯಾದರೂ, ಎಷ್ಟು ಕಷ್ಟಪಡುವ ಅಭ್ಯಾಸವುಳ್ಳವನಾದರೂ ಒಬ್ಬ ಮನುಷ್ಯನಿಂದ ಪೂರ್ತಿಮಾಡಲಸಾಧ್ಯವಾದ ಕೆಲಸವನ್ನು ನಾನು ಪ್ರಾರಂಭ ಮಾತ್ರ ಮಾಡಿದೇನೆ. ಅದೂ ಅತ್ಯಲ್ಪವಾದ ಆರಂಭ. ಆಂಧ್ರ ಆಯುರ್ವೇದ ವಿಶ್ವವಿದ್ಯಾಲಯದ ಹೆಸರಿನಲ್ಲಿ ನಾನು ಸ್ವಲ್ಪ ಕೆಲಸಮಾಡುವ ಭಾಗ್ಯವು ದೊರಕಿತು. ಮಾಡಬೇಕಾಗಿರುವುದರಲ್ಲಿ ಇದು ಸಾವಿರದಲ್ಲಿ ಒಂದು ಪಾಲಿಲ್ಲ. ಆದರೂ ಮಾಡಿರುವುದು ಮಾತ್ರವನ್ನೇ ನೋಡಿದರೂ ಆಯುರ್ವೇದ ಶಾಸ್ತ್ರದ ಆಳವೆಷ್ಟಿರಬಹುದೆಂತ ಸುಲಭವಾಗಿ ಊಹಿಸಬಹುದು. ಇನ್ನೂ ಪರಿಶೋಧಕರು ಮುಂದೆ ಬರಬೇಕು. ಬೇಕಾದಷ್ಟು ದ್ರವ್ಯಸಹಾಯ ಬೇಕು. ಈ ಪರಿಶೋಧನಾ ಕಾರ್ಯದಿಂದ ಆಯುರ್ವೇದಶಾಸ್ತ್ರವನ್ನು ತಿರಸ್ಕರಿಸುವ ಜನರ ಬಾಯಿಯನ್ನು ಮುಟ್ಟುವುದಲ್ಲದೆ ನಮ್ಮ ಪೂರ್ವಋಷಿಗಳು ಕಾಡಿನಲ್ಲಿ ವಾಸಮಾಡುತ್ತಾ ಯಾವ ಜ್ಞಾನಸಿದ್ಧಿಯನ್ನು ಪಡೆದಿದ್ದರೆನ್ನುವ ವಿಷಯವನ್ನು ಪ್ರಪಂಚಕ್ಕೆ ತಿಳಿಸಬಹುದು. ಈ ಮಹಾಕಾರ್ಯವನ್ನು ಆಯುರ್ವೇದದಲ್ಲಿ ಅಭಿಮಾನವುಳ್ಳ ಪ್ರತಿಯೊಬ್ಬರೂ ಮಾಡತಕ್ಕದ್ದೆಂದು ನನ್ನ ಅಭಿಪ್ರಾಯ.

ತಮ್ಮಕೂಡ ಕಲೆತು ಈ ಒಂದೆರಡು ಮಾತು ಹೇಳುವ ಅವಕಾಶವು ದೊರಕುವಂತೆ ಈ ಮಹಾಕಾರ್ಯದಲ್ಲಿ ನನ್ನನ್ನು ಅಪ್ಪಣೆಮಾಡಿದ ಅಧಿಕಾರಿಗಳಿಗೆ ಮತ್ತೊಂದು ಸಲ ನನ್ನ ವಂದನೆಯನ್ನು ಅರ್ಪಿಸಿ ನನ್ನ ಭಾಷಣವನ್ನು ಉಪಸಂಹರಿಸುತ್ತೇನೆ. ಈ ವಸ್ತುಪ್ರದರ್ಶನವನ್ನು ತೆರೆಯುತ್ತೇನೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ರಸಾಯನಸಂಭಾಷಾಪರಿಷತ್.

ಇದರ ಅಧ್ಯಕ್ಷರು, ವೈದ್ಯಶಾಸ್ತ್ರಿ ನಾರಾಯಣಶಂಕರ ದೇವಶಂಕ ಪ್ರಾಣಾಚಾರ್ಯ ಅಹಮ್ಮದಾಬಾದ್ ಇವರ ಭಾಷಣ.

ಸುಧಾಕುಂಭಂ ಹಸ್ತೇದಧದಮರಕಾರ್ಥಂ ಸಮನಸಾಂ ।
ರಹಸ್ಯಂ ಜಿಹ್ವಾಗ್ರೇಗದಹರಮಥರ್ವೋಪನಿಷದಾಮ್ ॥
ಮಣಿಂಶ್ರೀವಕ್ಷಾಂತೇ ಹೃದಿಜಲನಿಧೆ ಯೋಜನಿಪುರಾ ವಿನಿಘ್ನ ।
ವಿಘ್ನಂವಃ ಸುಖಯತು ಸಧನ್ವಂತರಿವಿಭುಃ ॥

27 ನೇ ತಾರೀಖು ಮಧ್ಯಾಹ್ನ 4 ಘಂಟೆಗೆ ರಸಾಯನಸಂಭಾಷಾಪರಿಷತ್ತು ಸೇರಿತು. ಭರತಖಂಡದ ಅನೇಕ ಭಾಗಗಳಿಂದ ದಯಮಾಡಿಸಿದ್ದ ವೈದ್ಯಪ್ರತಿನಿ ಗಳೂ, ಸ್ಥಳೀಯ ವೈದ್ಯರೂ ಮತ್ತು ಅಭಿಮಾನಿಗಳೂ ಅಧ್ಯಕ್ಷರ ಭಾಷಣ ಸುಖ ವನ್ನು ಪಡೆಯಲು ಮತ್ತು ಚರ್ಚೆ ನಡೆಸಲು ದಯಮಾಡಿದ್ದರು. ಅಧ್ಯಕ್ಷ ಭಾಷಣದ ಸಾರಾಂಶ ಈ ಕೆಳಗೆ ಕೊಟ್ಟಿದೆ.—

ಮಹಾಶಯರೆ—

ತಮ್ಮಂಥ ವೈದ್ಯೋತ್ತಮರ ಸಭೆಗೆ ನನ್ನನ್ನು ಅಧ್ಯಕ್ಷನನ್ನಾಗಿ ನೇಮಿಸಿದ್ದ ರಿಂದ ನನಗೆ ತಾವು ಕೊಟ್ಟಿರುವ ಗೌರವಕ್ಕಾಗಿ ನಾನು ತಮಗೆ ಕೃತಜ್ಞತಾಪೂರ್ವ ಕವಾದ ವಂದನೆಗಳನ್ನು ಅರ್ಪಿಸುತ್ತೇನೆ. ವ್ಯಾಕರಣ, ನ್ಯಾಯ, ಮೀಮಾಂಸಾ, ವೇದಾಂತ ಮೊದಲಾದ ಶಾಸ್ತ್ರಗಳಲ್ಲಿ ವಿಚಾರದಿಂದ ಹೇಗೆ ಜ್ಞಾನವು ಪರಿಶುದ್ಧ ವಾಗುತ್ತದೆಯೇ ಹಾಗೆಯೇ ನಮ್ಮ ವೈದ್ಯಶಾಸ್ತ್ರದಲ್ಲಿಯೂ ವಿಚಾರದಿಂದ ಬಹು ಪ್ರಯೋಜನವುಂಟು.

ವಿದ್ವಾಂಸರ ಪರಸ್ಪರ ವಿಚಾರದಿಂದ ಜ್ಞಾನಾಭಿವೃದ್ಧಿಗೆ ಬಹು ಅನು ಕೂಲ ಉಂಟು. ಸಂಶಯಗಳು ಪರಿಹಾರವಾಗುತ್ತವೆ. ಅಪೂರ್ವವಾದ ವಿಷಯ ಗಳು ಹೊರಬೀಳುತ್ತವೆ. ಒಬ್ಬೊಬ್ಬ ವಿದ್ವಾಂಸರ ವಿಮರ್ಶಾಕ್ರಮವೂ ಗೊತ್ತಾಗು ತ್ತದೆ. ಶಾಸ್ತ್ರಾಧಾರ ಮತ್ತು ಅನುಭವಗಳ ಮೇಲೆ ವಿಚಾರಮಾಡಿ ವ್ಯವಸ್ಥೆಮಾಡ ಬೇಕಾದ ಅಂಶಗಳು ಬೇಕಾದಷ್ಟಿವೆ.

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦

ಶ್ರೀಯುತ ವೈದ್ಯಶಾಸ್ತ್ರೀನಾರಾಯಣಶಂಕರದೇವಶಂಕರಪ್ರಾಣಾಚಾರ್ಯ,

(ಗುಜರಾತ್ ಪ್ರಾಂತ್ಯದ ವೈದ್ಯಸಮ್ಮೇಳನದ ಮಾಜಿ ಅಧ್ಯಕ್ಷರು ಮತ್ತು

ವೈದ್ಯಪಾಠಶಾಲೆಯ ಪ್ರಿನ್ಸಿಪಾಲರು, ಅಹಮ್ಮದಾಬಾದ್.)

ರಸಾಯನಸಂಭಾಷಾ ಪರಿಷತ್ತಿನ ಅಧ್ಯಕ್ಷರವರು.

JNANAMANDIR
LIBRARY,
Math, VARANASI,
Acc. No.

ಈಗ ರಸಾಯನತಂತ್ರವನ್ನೇ ತೆಗೆದುಕೊಳ್ಳೋಣ. 'ರಸಾಯನ' ಎಂದರೆ ರೋಗವನ್ನು ಪರಿಹಾರಮಾಡಿ, ಆಯುಸ್ಸನ್ನು ವೃದ್ಧಿಮಾಡಿ ಜ್ಞಾನಶಕ್ತಿಯನ್ನು ಹೆಚ್ಚಿಸುವುದಲ್ಲದೆ ಜರಾ ವ್ಯಾಧಿಗಳನ್ನು ತಗ್ಗಿಸುವ ಒಂದು ಔಷಧ; ಇದರಲ್ಲಿ ಚಕ್ಷುಷ್ಯ, ಬೃಹ್ಮಣ, ವೃಷ್ಯ, ಎಂಬ ಗುಣಗಳಿವೆ ಎಂಬುದಾಗಿ 'चरक', 'शारंगधर' ಮತ್ತು योगरत्नाकर' ಗ್ರಂಥಗಳಲ್ಲಿ ಹೇಳಿದೆ. 'ರಸ'ವೇ ಮೊದಲಾದ ಸಪ್ತಧಾತುಗಳನ್ನು ವೃದ್ಧಿಹೊಂದಿಸುವುದಕ್ಕೆ ಈ 'ರಸಾಯನ'ವು ಮುಖ್ಯಸಾಧನ. ಇದನ್ನು ಸಿದ್ಧಮಾಡುವುದಕ್ಕೆ 'ಕುಟಿ ಪ್ರವೇಶ' ಮತ್ತು 'ವಾತಾತಪಿಕ' ಎಂಬ ಎರಡು ಮಾರ್ಗಗಳುಂಟು. ಈ ವಿಷಯಗಳು ಚರಕಸಂಹಿತೆಯ ಚಿಕಿತ್ಸಾಸ್ಥಾನದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿವೆ.

ನಾಗಾರ್ಜುನನೇ ಮೊದಲಾದ ಗ್ರಂಥಕರ್ತೃಗಳು 'ರಸಾಯನ' ವೆಂದರೆ 'ಪಾದರಸ'ವೇ ಮೊದಲಾದ ಕೆಲವು ಲೋಹಗಳೆನ್ನುತ್ತಾರೆ. ಜರಾ ಮೃತ್ಯುಗಳನ್ನು ಪರಿಹಾರಮಾಡಿ ರಸಧಾತುಗಳನ್ನು ಪುಷ್ಟಿಮಾಡಬೇಕೆನ್ನುವರು ಪಾದರಸವನ್ನು ಉಪಯೋಗಿಸಬೇಕೆಂದು ರಸರತ್ನಸಮುಚ್ಚಯ ಮತ್ತು ಆಯುರ್ವೇದ ವಿಜ್ಞಾನವೆಂಭ ಗ್ರಂಥಗಳಲ್ಲಿ ಹೇಳಿದೆ.

ಸಿದ್ಧಭೈಷಜ್ಯಮಣಿಮಾಲೆಯಲ್ಲಿ ಹೇಳಿದಂತೆ ಪಾದರಸದ ಗುಣಗಳು ಆರು. ಸಿಂಧೂರವು 'ತ್ರಿದೋಷಘ್ನ' 'ವೃಷ್ಯ,' 'ನೇತ್ರ್ಯ' ಮತ್ತು 'ಬಲ್ಯ' ಎಂದು ಹೇಳಿದೆ. ರಸಕ್ಕೆ ಸ್ವೇದನಾದಿ 18 ಸಂಸ್ಕಾರಗಳನ್ನು ಭಾವಮಿಶ್ರನು ಹೇಳುತ್ತಾನೆ.

ವೈದ್ಯನು ಶುಭಮುಹೂರ್ತದಲ್ಲಿ ದೇವಾಲಯಕ್ಕೆ ಹೋಗಿ ದೇವರನ್ನು ಪೂಜೆಮಾಡಿದನಂತರ ಪಾದರಸವನ್ನು ಕಲ್ಲಿನ ಅಥವಾ ಕಬ್ಬಿಣದ ಕಲಪತ್ತಿನಲ್ಲಿಟ್ಟು ಸ್ವೇದನ ಮೂರ್ಛನಾದಿ ಸಂಸ್ಕಾರಗಳನ್ನು ಮಾಡಬೇಕು.

(*a*) 'Cinnabar' ಇಂಗಳೀಕವನ್ನು ಜೇನಿನಮೇಣದಲ್ಲಿ ಬೆರೆಯಿಸಿ ಒಂದು ಬತ್ತಿಯಹಾಗೆ ಮಾಡಿ ಅಗ್ನಿಸ್ಪರ್ಶಮಾಡಿದರೆ ಪಾದರಸವು ಹೊರಗೆ ಬರುತ್ತದೆ.

(*b*) 'Cinnabar' ಇಂಗಳೀಕವನ್ನು ಬಟ್ಟೆಯಲ್ಲಿ ಸುತ್ತಿ ಒಂದು ತಟ್ಟೆಯಲ್ಲಿಟ್ಟು 'खपरतुत्थ' ದೊಡನೆ ಸುಡಬಹುದು.

(*c*) 'Cinnabar' ನ್ನು ಪುಡಿಮಾಡಿ ಅರಸಿನವನ್ನು ಅದನ್ನು ಒಂದು ಬಟ್ಟೆಯಲ್ಲಿ ಕಟ್ಟಿ, ಒಂದು ತಟ್ಟೆಯಲ್ಲಿಟ್ಟು ಅಗ್ನಿಸ್ಪರ್ಶಮಾಡಿಸಿ, ಮೇಲೆ ಒಂದು ಮಣ್ಣಿನ ಪಾತ್ರೆಯನ್ನು ಸುಮಾರಾಗಿ ಮುಚ್ಚಬೇಕು.

(*d*) 'Cinnabar' ಅರಸಿನವನ್ನು ಒಂದು ಬಟ್ಟೆಯಲ್ಲಿ ಕಟ್ಟಿ, ಮೇಲೆ ಬಟ್ಟೆಯನ್ನು 4 ಪದರವಾಗಿ ಸುತ್ತಿ ಎರಡು ಮಣ್ಣಿನ ತಟ್ಟೆಗಳಲ್ಲಿಟ್ಟು ಅಗ್ನಿಸ್ಪರ್ಶ ಮಾಡಿಸಿದರೆ ಪಾದರಸವು ಹೊರಗೆ ಬರುತ್ತದೆ.

ತ್ರಿಪತ್ರಿಕಾ, ಮೃಗಹರಿ, ಚಾಂಗೇರಿ, ಮೇಷಶೃಂಗೀ, ಭೃಂಗರಾಜ, ಮಯೂರಸಿಖಿ ಈ ರಸಗಳೊಡನೆ ಪಾದರಸವನ್ನು ಉಜ್ಜಿದರೆ ಶುದ್ಧವಾಗಿ ಉಪ ಯೋಗಕ್ಕೆ ಅರ್ಹವಾಗುವುದು.

ಸಿದ್ಧಭೈಷಜ್ಯಮಣಿಮಾಲಿಕೆಯಲ್ಲಿ ಪಾದರಸ ಭಸ್ಮವನ್ನು ಮಾಡುವ ಕ್ರಮವು ಹೇಳಲ್ಪಟ್ಟಿದೆ. ಒಂದು ಭಾಗ ಪಾದರಸವನ್ನು ಎರಡರಷ್ಟು ಗಂಧಕ ವನ್ನು ಸೇರಿಸಿ, 'ವಾಲುತಾ' ಯಂತ್ರದಲ್ಲಿಟ್ಟು 1 ಝಾಮದ ಹೊತ್ತು ಕುದಿಸ ಬೇಕು. ರಸಸಿಂಧೂರ, ಚಂದ್ರೋದಯ, ಮಲ್ಲಸಿಂಧೂರ, ಸಕಲಸಿಂಧೂರಗಳನ್ನು ಹೀಗೆಯೇ ಮಾಡುವುದು.

ಈ ಯೋಗಗಳನ್ನು ಚೆನ್ನಾಗಿ ತಿಳಿದುಕೊಂಡು, ಪ್ರತ್ಯಕ್ಷವಾಗಿ ತೋರಿಸ ಬೇಕು.

ಈ ಭಾಗವು ಅಭಿವೃದ್ಧಿಗೆ ಬರಬೇಕಾದರೆ ಈ ಕೆಳಗೆ ಹೇಳಿದಂತೆ ಮಾಡ ಬೇಕು.

(1) ರಸಗ್ರಂಥಗಳನ್ನು ಶೋಧನೆ ಮಾಡಿ ಪ್ರಕಾಶಮಾಡಿಸಬೇಕು.

(2) ಆಯುರ್ವೇದ ಔಷಧಶಾಲೆಗಳಲ್ಲಿ ರಸಾಯನತಂತ್ರದ ಶೋಧನೆ, ಪರೀಕ್ಷಾಪ್ರಯೋಗಗಳಿಗಾಗಿ ಏರ್ಪಾಡುಮಾಡಬೇಕು.

(3) ಈ ಯೋಗಗಳಲ್ಲಿ ಶಿಕ್ಷಣ ಕೊಡಲು ಅರ್ಹರಾದ ವಿದ್ವಾಂಸರನ್ನು ನೇಮಿಸಬೇಕು.

(4) ಸಂದಿಗ್ಧವಾದ ಯೋಗಗಳನ್ನು ವಿಮರ್ಶೆಮಾಡಲು ಒಂದು ಸಮಿತಿ ಯನ್ನು ಏರ್ಪಾಟುಮಾಡಬೇಕು.

ಆಯುರ್ವೇದಶಾಸ್ತ್ರದ ಈ ಶಾಖೆಯನ್ನು ಅಭಿವೃದ್ಧಿಪಡಿಸಬೇಕಾದರೆ ಈ ಉಪಾಯಗಳನ್ನು ತೋರಿಸಬೇಕು. ತಾವುಗಳು ಸಾವಧಾನಚಿತ್ತರಾಗಿ ಕೇಳಿ ದ್ದಕ್ಕೆ ನಾನು ಕೃತಜ್ಞನಾಗಿದ್ದೇನೆ. ಈ ರಸಾಯನ ತಂತ್ರವು ಅಭಿವೃದ್ಧಿಗೆ ಬಂದು ರೋಗಪೀಡಿತರಾದ ನಮ್ಮ ಸಹೋದರರಿಗೆ ಪ್ರಯೋಜನವನ್ನು ಬೀರ ಲೆಂಬುದೇ ನನ್ನ ಕೋರಿಕೆ.

ಇದೇ ಮೊದಲಾದ ಅತ್ಯುತ್ತಮವಾದ ಸಲಹೆಗಳನ್ನು ಕೊಟ್ಟು ತಮ್ಮ ಭಾಷಣವನ್ನು ಉಪಸಂಹಾರ ಮಾಡಿದನಂತರ ಚರ್ಚೆಗಳು ಪ್ರಾರಂಭವಾದವು.

ಅನೇಕ ವಿದ್ವಾಂಸರು ಬಹು ಉತ್ಸಾಹದಿಂದ ವಿಚಾರಮಾಡಿದುದಲ್ಲದೆ ದ್ರವ್ಯಗಳನ್ನು ಸಂಸ್ಕಾರಮಾಡುವುದು, ಭಸ್ಮಮಾಡುವುದು, ಕೂಪಿಕಾ ರಸಾಯನ ವನ್ನು ಮಾಡುವುದು ಮೊದಲಾದ ವಿಷಯಗಳಲ್ಲಿ ತಮ್ಮ ಸ್ವಂತ ಅನುಭವಗ ಳನ್ನು ಹೇಳಿದರು. ಅಧ್ಯಕ್ಷರೂ ವಿಚಾರದಲ್ಲಿ ಬೆರೆತು, ಸಭಿಕರಿಗೆ ತೃಪ್ತಿಕರವಾದ ಉತ್ತರಗಳನ್ನು ಕೊಟ್ಟರು.

ಅಧ್ಯಕ್ಷರ ಮಂಗಳಾಶಾಸನದೊಡನೆ ಪರಿಷತ್ತಿನ ಕಾರ್ಯಕಲಾಪಗಳು ಮುಗಿದವು.

ವಿಷಯವಿವೇಚನಾಸಮಿತಿ.

27—12—30 ರಲ್ಲಿ ರಾತ್ರಿ 8 ಗಂಟೆಗೆ ಸಮ್ಮೇಳನಾಧ್ಯಕ್ಷರ ಆಧಿಪತ್ಯ ದಲ್ಲಿ ಈ ಸಮಿತಿಯು ಸೇರಿತು. ಮಹಾಮಂಡಲದಲ್ಲಿ ಮಾಡಬೇಕಾದ ಬದಲಾವಣೆ ಗಳೇ ಮೊದಲಾದ ಅಂಶಗಳಲ್ಲಿ ರಾತ್ರಿ 2 ಗಂಟೆವರೆಗೂ ಚರ್ಚೆಯನ್ನು ನಡೆಯಿಸಿ, ಈ ಪುಸ್ತಕದ ಬೇರೆ ಭಾಗದಲ್ಲಿ ಕಂಡಂತೆ ಸಮ್ಮೇಳನದ ಅಂಗೀಕಾರಕ್ಕಾಗಿ ಕೆಲವು ತೀರ್ಮಾನಗಳು ನಿರ್ಧರಿಸಲ್ಪಟ್ಟವು.

ದ್ರವ್ಯಸಂಭಾಷಾಪರಿಷತ್ತಿನ ಕಾರ್ಯಗಳು.

ಅಧ್ಯಕ್ಷರು, ಡಾ|| ಕೆ. ಎಸ್. ಮಸ್ಕರ್, ಎಂ.ಎ.,ಎಂ.ಡಿ.,ಡಿ.ಪಿ.ಹೆಚ್.,
ಹಾಫ್‌ಕಿನ್ ಇನ್‌ಸ್ಟಿಟ್ಯೂಟ್, ಬೊಂಬಾಯಿ.

ದ್ರವ್ಯಸಂಭಾಷಾಪರಿಷತ್ತು—ತಾ|| 28-12-30 ರಲ್ಲಿ ಪ್ರಾತಃಕಾಲ 8-30 ಗಂಟೆಗೆ ಸಭಾಮಂಟಪದಲ್ಲಿ ಸೇರಿತು. ಶ್ರೀಯುತ ಡಾ|| ಮಸ್ಕರ್‌ರವರು ಈ ಪರಿಷತ್ತಿನ ಅಧ್ಯಕ್ಷತ್ವವನ್ನು ವಹಿಸಬೇಕೆಂದು ಶ್ರೀಯುತ ಗಣನಾಥಸೇನರು ಸೂಚಿಸಿದರು. ಶ್ರಿಯುತ ಡಾ|| ವೈ. ಲಕ್ಷ್ಮೀನೃಸಿಂಹಶಾಸ್ತ್ರಿಗಳು ಸಮರ್ಥಿಸಿದನಂತರ ಸರ್ವಾನುಮತದಿಂದ ಡಾ|| ಮಸ್ಕರವರು ಅಧ್ಯಕ್ಷಸ್ಥಾನವನ್ನು ವಹಿಸಿದರು.

ಪರಿಷತ್ತಿನ ಪ್ರಾರಂಭದಲ್ಲಿ 'ಭರತಖಂಡದ ಮೂಲಿಕೆಗಳ ಗುಣದೋಷಗಳನ್ನು ಕುರಿತು ಒಂದು ಪ್ರಬಂಧವನ್ನೂ, ಹಾವಿನ ಕಡಿತದಲ್ಲಿ ಉಪಯೋಗಿಸಲ್ಪಡುತ್ತಿರುವ ವನಸ್ಪತಿಗಳ ವಿಷಯವಾಗಿ ಮತ್ತೊಂದು ಪ್ರಬಂಧವನ್ನೂ ಅಧ್ಯಕ್ಷರು ಸಂಸ್ಕೃತದಲ್ಲಿ ಓದಿದರು. ಮೊದಲನೆಯ ಪ್ರಬಂಧದಲ್ಲಿ ಅವರು ಹೇಳಿದ ಮುಖ್ಯ ವಿಷಯಗಳು ಯಾವುವೆಂದರೆ—'ಮೊದಲು ಕೃಮಿವಿನಾಶಕಗಳೆಂದು ಪ್ರಸಿದ್ಧವಾದ ವನಸ್ಪತಿಗಳನ್ನು ವಿಮರ್ಶೆಮಾಡಲು ತೊಡಗಿದೆವು. ಅವುಗಳಲ್ಲಿ ಒಂದೂ ಉಪಯೋಗವುಳ್ಳುದುದಾಗಿ ಕಂಡುಬರಲಿಲ್ಲ. 'ಯವಾನಿ' ಮತ್ತು 'ಸುರಪರ್ಣಿ' ಎಂಬವೂ ಕೂಡ ಸ್ವತಃ ಸಾಕ್ಷಾತ್ ಉಪಯೋಗವಿಲ್ಲ. ಆದರೂ 'ಚಿಪ್ಪು' (Hookworm) ಪರಿಹಾರಕವಾದ 'ಥೈಮಾಲ್' ಎಂಬ ಔಷಧವನ್ನೂ, 'ಗುಂಡುಹುಳದ' ಪರಿಹಾರಕವಾದ 'Santonine' ಎಂಬ ಔಷಧವನ್ನೂ ಅವುಗಳಿಂದ ತೆಗೆಯಬಹುದಾಗಿದೆ. 'ಸಾಸಾಫ್ರಾಸಾತೈಲ' 'ಲಶುನತೈಲ' 'ಅನಸತೈಲ' ಗಳಲ್ಲಿಯೂ ಕೂಡ ಕೃಮಿನಾಶಕ ಗುಣವಿದೆಯೆಂದು ಕಂಡುಬಂದಿದೆ.

ಅತಿಸಾರ ಚಿಕಿತ್ಸೆಯಲ್ಲಿ ಈಗ ಉಪಯೋಗದಲ್ಲಿರುವ ಮೂಲಿಕೆಗಳ ಪೈಕಿ ಕುಟಜದ ತೊಗಟೆ, 'ಇಂದ್ರಯವ ಮಂಗುಸ್ತಾನ ಫಲದ ತೊಗಟೆ ಮತ್ತು 'ಪಲಾಶ ನಿರ್ಯಾಸ' ಎಂಬಿವೇ ಫಲಕಾರಿಗಳು. 'ಶೀತಜ್ವರ' ಪರಿಹಾರಕಗಳಲ್ಲಿ (Anti-malarials) ಸಪ್ತಪರ್ಣಿ (Alstonia Scholaris R. Br.)

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦

ಡಾ|| ಕೆ. ಎಸ್. ಮಸ್ಕರ್, M.D., M.A., B.Sc., D.P.H., D.T.M.H.

(ಬೊಂಬಾಯಿನ ಹಾಫ್ಕಿನ್ ರಿಸರ್ಚ್ ಇನ್‌ಸ್ಟಿಟ್ಯೂಟ್.)

ದ್ರವ್ಯಸಂಭಾಷಾಪರಿಷತ್ತಿನ ಅಧ್ಯಕ್ಷರವರು.

ಯಲ್ಲಿ ಗ್ರಂಥಗಳಲ್ಲಿ ಹೇಳಿರುವಷ್ಟು ಗುಣಗಳಿಲ್ಲ. 'ಪಾರಿಜಾತಪರ್ಣ' ಗಳು (Nyctonthes Arbor Tristis Linu) ಶೀತಜ್ವರ ಚಿಕಿತ್ಸೆಯಲ್ಲಿ ಉಪಯೋಗವುಂಟೆಂದು ಇದುವರಿಗೂ ಮಾಡಿದ ಪರೀಕ್ಷೆಯಲ್ಲಿ ತೋರಿದೆ. ಆದರೆ ಇನ್ನೂ ಪರೀಕ್ಷೆಮಾಡಬೇಕಾಗಿದೆ 'ಮಧುಮೇಹ ವಿನಾಶಿನಿಗಳೆಂದು' ಹೇಳಿರುವ ವನಸ್ಪತಿಗಳ ಪೈಕಿ ಮೇಷಶೃಂಗೀ, ಬ್ರಾಹ್ಮೀ, ನಿಂಬ, ಪಲಾಶಗಳ ಎಲೆಗಳೂ, 'ಜಂಬೂಲ' ಬೀಜಗಳೂ ರಕ್ತದಲ್ಲಿರುವ ಸಕ್ಕರೆಯನ್ನು ಕಮ್ಮಿಮಾಡುತ್ತವೆ. ಇನ್ನೂ ಅವುಗಳ ಪರೀಕ್ಷೆ ಪೂರ್ತಿಯಾಗಿರುವುದಿಲ್ಲ. ಇನ್ನು 'ಹೃದಯೋತ್ತೇಜಕಗಳಲ್ಲಿ 'ಟರ್ಮಿನೇಲಿಯಾ' (Terminalia) ವರ್ಗಕ್ಕೆ ಸೇರಿದ 'ಅರ್ಜುನ' ವು ಉಪಯೋಗವಿಲ್ಲ. 'ಆಲಿವೆರಿ' ಮತ್ತು 'ಸಿಟ್ರೇನಾ' ಎಂಬುವನ್ನು ರೋಗಿಗಳ ಮೇಲೆ ಉಪಯೋಗಿಸಿ ಇನ್ನೂ ಪರೀಕ್ಷೆಮಾಡಬೇಕಾಗಿದೆ ಎಂದು ಹೇಳಿದರು.

ಎರಡನೆಯ ಪ್ರಬಂಧದಲ್ಲಿ ಸರ್ಪದಂಶ ಚಿಕಿತ್ಸೆಯಲ್ಲಿ ಉಪಯೋಗಿಸಲ್ಪಡುತ್ತಿರುವ ವನಸ್ಪತಿಗಳ ವಿಷಯವನ್ನು ಓದಿದರು. ಶ್ರೀ ಡಾ|| ಮಸ್ಕರರವರೂ ಅವರ ಸ್ನೇಹಿತರು ಶ್ರೀ|| ಫಾದರ್ ಕಾಯಸರವರೂ ಪರೀಕ್ಷೆಮಾಡುವಲ್ಲಿ ಈಗ ಪ್ರಚಾರದಲ್ಲಿರುವ 314 ಮೂಲಿಕೆಗಳು ಮತ್ತು 184 ಔಷಧಗಳ ಪೈಕಿ ಒಂದೂ ಉಪಯೋಗವಿಲ್ಲವೆಂದು ನಿರ್ಣಯಮಾಡಿದರು.

ಈ ಎರಡು ಪ್ರಬಂಧಗಳನ್ನು ಓದಿದನಂತರ ಡಾ|| ಮಸ್ಕರವರು ಅವರ ಅಧ್ಯಕ್ಷ ಭಾಷಣವನ್ನು ಸಂಸ್ಕೃತದಲ್ಲಿ ಪ್ರಾರಂಭಿಸಿದರು. ಅದರಲ್ಲಿ ಅವರು ಹೇಳಿದುದೇನೆಂದರೆ—'ನಮ್ಮ ಆಯುರ್ವೇದೀಯ ವನಸ್ಪತಿಗಳ ನಿಘಂಟುಗಳಲ್ಲಿ ಗುಣವಿದ್ದದ್ದು ಅಥವಾ ಗುಣವಿಲ್ಲದ್ದು ನೂರಾರು ಮೂಲಿಕೆಗಳು ಯಾವ ಕಾರಣದಿಂದಲೋ ಸೇರಿಹೋಗಿವೆ. ಆ ಮೂಲಿಕೆಗಳನ್ನು ಪರೀಕ್ಷೆಮಾಡಿ ಯಾವುವು ಗುಣಕಾರಿಗಳೋ ಅವುಗಳನ್ನು ಮಾತ್ರ ಆರಿಸಿ ಬೇರೆ ನಿಘಂಟು ಒಂದನ್ನು ಮಾಡಬೇಕಾದ್ದು ನಮ್ಮ ಆಯುರ್ವೇದಶಾಸ್ತ್ರಜ್ಞರ ಕರ್ತವ್ಯವಾಗಿದೆ. ಇಲ್ಲಿನ ಜನರಿಗೆ ದಾರಿದ್ರ್ಯ ಹೆಚ್ಚು. ದೂರದೇಶಗಳಿಂದಬರುವ ಔಷಧಗಳನ್ನು ಕೊಳ್ಳಲಾರರು. ಆದ್ದರಿಂದ ಯಾವ ವಿಧವಾದ ಅಪಾಯಶಂಕೆಯಿಲ್ಲದೆ ಅವರವರ ಮನೆಯ ಸುತ್ತಮುತ್ತಲೂ ದೊರೆತು ಖಂಡಿತವಾಗಿಯೂ ದಿನೇದಿನೇ ಪ್ರಾಪ್ತವಾಗುವ ಕ್ಷುದ್ರರೋಗಗಳನ್ನು ಪರಿಹಾರಮಾಡುವ ಶಕ್ತಿಯುಳ್ಳ ಔಷಧಮೂಲಿಕೆಗಳನ್ನು ಸೇರಿಸಿ ಸಾರ್ವಜನಿಕವಾದ ನಿಘಂಟುವನ್ನು ಒಂದೊಂದು ಪ್ರಾಂತ್ಯಕ್ಕೂ ಬೇರೆಬೇರೆ ಮಾಡಬೇಕು. ಇದರಿಂದ ಜನರಿಗೆ ಶುದ್ಧವಾಗಿಯೂ ಹೊಸದಾಗಿಯೂ ಮೂಲಿಕೆಗಳು ವಿಶೇಷ

ದ್ರವ್ಯಪ್ರಯವಿಲ್ಲದೆ ದೊರಕುವಂತಾಗುವುದು. ಅವುಗಳನ್ನು ಸುಲಭವಾಗಿ ಗುರ್ತು ಹಿಡಿಯಬಲ್ಲವರಾಗುತ್ತಾರೆ ಮತ್ತು ಅವುಗಳನ್ನು ಸೇವಿಸುವ ವಿಧಾನವನ್ನು ವಿಶೇಷ ಬುದ್ಧಿಯ ಖರ್ಚಿಲ್ಲದೆ ತಿಳಿಯುತ್ತಾರೆ. ಜೊತೆಗೆ ನಿಖಿಲಭಾರತಾಯುರ್ವೇದ ನಿಘಂಟು ವೊಂದನ್ನು ಸಂಗ್ರಹಿಸಬೇಕು. ಆಯುರ್ವೇದದಲ್ಲಿ ಯಾವುದು ಸಾರಭೂತವೋ ಇತರ ವೈದ್ಯಶಾಸ್ತ್ರಗಳಲ್ಲಿ ಯಾವುದು ಉತ್ತಮವೋ ಅಂಥ ಮೂಲಿಕೆಗಳಿಗೆ ಮಾತ್ರ ಸಾರ್ವಜನಿಕ ನಿಘಂಟುವಿನಲ್ಲಿ ಸ್ಥಳಕೊಡಬೇಕು. ಇತ್ಯಾದಿ ವಿಷಯಗಳನ್ನು ಸಯುಕ್ತಿಕವಾಗಿ ಅಧ್ಯಕ್ಷರು ಗಂಭೀರವಾದ ಸಂಸ್ಕೃತವಾಣಿಯಲ್ಲಿ ಉಪನ್ಯಾಸ ಮಾಡಿದರು. ಅಧ್ಯಕ್ಷರ ಭಾಷಣವಾದನಂತರ ಈ ಕೆಳಗೆ ಹೇಳುವ ಪ್ರಬಂಧಗಳು ಪ್ರಸಕ್ತವಾದುವು.

(1) ಬೊಂಬಾಯಿ ಸೇಠ್ ಗೋವರ್ಧನದಾಸ್, ಸೌಂದರದಾಸ್ ಮೆಡಿಕಲ್ ಕಾಲೇಜಿನ ವಿದ್ವಾಂಸರಾದ ಡಾ|| ಎ. ಎಸ್. ಪರಂಜಪೆ ಎಂ. ಡಿ. ಮತ್ತು ಡಾ|| ಜಿ. ಕೆ. ಗೋಖಲೆ ಎಂ.ಬಿ.ಬಿ.ಎಸ್. ರವರು ಇಬ್ಬರು ಸೇರಿ ಬರೆದ "a note on the Anthelmentic Action of Embelic Acid" ಎಂಬ ಪ್ರಬಂಧ.

(2) ಆ ವೈದ್ಯರೇ ಬರೆದ 'ಹಕ್ಕಿಯರೋಗ (Rickets) ಎಂಬ ವ್ಯಾಧಿಯಲ್ಲಿ ವನಸ್ಪತಿಗಳ ಎಣ್ಣೆಗಳಿಂದಾಗುವ ಉಪಯೋಗ' ಎಂಬ ಮತ್ತೊಂದು ಪ್ರಬಂಧ.

(3) ಬೆಂಗಳೂರು ಶ್ರೀಯುತ ಪಿ. ರಾಮಸ್ವಾಮಿಅಯ್ಯರು ಎಂ.ಎ., ಎ.ಐ.ಐ. ಸೈನ್ಸ್. ರವರು ಬರೆದ 'ಕೆಲವು ಸ್ವದೇಶ ವನಸ್ಪತಿಗಳ ಮೂಲತತ್ವ' (The active principles of some indigenous drugs) ಎಂಬ ಪ್ರಬಂಧ.

(4) ಕಲ್ಕತ್ತೆಯ ಶ್ರೀಯುತ ಎನ್. ಬಿ. ದತ್ತರವರ 'ಪುರಾತನ ಭಾರತದ ವನಸ್ಪತಿಶಾಸ್ತ್ರ' ಎಂಬ ಪ್ರಬಂಧ.

(5) ಬಳ್ಳಾರಿಯ ಶ್ರೀಯುತ ಕೆ. ಅಚ್ಚಯ್ಯನವರು ಬರೆದ 'ಅಶೋಕ' (Sarce Indica) ದ ಮೇಲೆ ಬರೆದ ಪ್ರಬಂಧ.

(6) ಅನಂತಶಯನದ ಡಾ. ಕೆ. ಎ. ರಾಘವನ್‌ಪಿಳ್ಳೆ, ಎಲ್. ಆರ್. ಸಿ. ಪಿ ಅಂಡ್ ಎಸ್. ರವರು ಬರೆದ 'ವಿಷವಿಜ್ಞಾನ' ಎಂಬ ಪ್ರಬಂಧ.

ಈ ಮೇಲಿನ ಪ್ರಬಂಧಗಳೆಲ್ಲಾ ಇಂಗ್ಲಿಷನಲ್ಲಿದ್ದುವು. ಡಾ|| ಎ. ಎಸ್. ಪರಂಜಪೆಯವರು ಹಾಜರಿಲ್ಲದ ಕಾರಣ ಅವರು ಬರೆದ ಪ್ರಬಂಧಗನ್ನು

ಡಾ|| ಮಸ್ಕರವರೇ ಓದಿ ಚರ್ಚೆಗೆ ತಂದರು. ಈ ಪ್ರಬಂಧಗಳು ಸಮ್ಮೇಳನಕ್ಕೆ ಮುಂಚೆ ಸಭಿಕರ ಪೂರ್ವಾವಲೋಕನಕ್ಕೆ ದೊರೆಯಲಿಲ್ಲವಾಗಿ ಚರ್ಚೆಗಳು ಅಷ್ಟೊಂದು ವಿಶೇಷ ನಡೆಯಲು ಅವಕಾಶವಾಗಲಿಲ್ಲ.

(3) ಅನಂತರ ಮ|| ರಾ|| ರಾಮಸ್ವಾಮಿಯವರು 'ಭಾರತೀಯ ವನಸ್ಪತಿಗಳ ಮೂಲತತ್ವ' ವೆಂಬ ತಮ್ಮ ಪ್ರಬಂಧದಲ್ಲಿ 'ಮಾರ್ಫಿನ್,' 'ಕೊಕೆಯಿನ್' ಮೊದಲಾದುವುಗಳ ಉದಾಹರಣೆಯಮೇಲೆ ರಸಾಯನಶಾಸ್ತ್ರರೀತಿಯಿಂದ ವನಸ್ಪತಿಗಳನ್ನು ಪರೀಕ್ಷೆಮಾಡಿ, ಔಷದಶಾಲೆಗಳಲ್ಲಿ ಪಾಕವಿಶೇಷದಿಂದ ಮೂಲತತ್ವಗಳನ್ನು ಬೇರೆ ಮಾಡುವ ಆವಶ್ಯಕತೆಯನ್ನು ತೋರಿಸಿದರು.

ಅಧ್ಯಕ್ಷರು ಈ ಅಭಿಪ್ರಾಯವನ್ನು ಅಂಗೀಕರಿಸಿದರೂ ಆ ಮೂಲ ತತ್ವಗಳು ಎಷ್ಟು ಮುಖ್ಯವೋ ಅಷ್ಟು ಮುಖ್ಯವಾದ ಇತರ ಅಂಶಗಳೂ ಇರುವುದರಿಂದ ಅವುಗಳನ್ನೂ ಪರೀಕ್ಷಿಸಬೇಕಾದ ಆವಶ್ಯಕತೆಯನ್ನು ತೋರಿಸಿದರು.

(4) 'ಪುರಾತನಭಾರತದ ವನಸ್ಪತಿಶಾಸ್ತ್ರ' ದಲ್ಲಿ ವನಸ್ಪತಿಗಳ ಚರಿತ್ರಜ್ಞಾನದಿಂದ ಆಯುರ್ವೇದಕ್ಕೂ ಜನರಿಗೂ ಆಗುವ ಉಪಕಾರವು ಸ್ಪಷ್ಟವಾಗಿ ಹೇಳಲ್ಪಟ್ಟಿತು.

(5) ಶ್ರೀ|| ಅಚ್ಚಯ್ಯನವರು 'ಅಶೋಕ' ದಿಂದ ಹೆಚ್ಚು ಉಪಯೋಗವಿಲ್ಲೆಂದೂ, (Polyalthea longifolia) ಎಂಬುದೂ ಕೂಡ ಅಷ್ಟೇ ಉಪಯೋಗವನ್ನು ಕೊಡುತ್ತದೆಂತಲೂ ಹೇಳಿದರು.

(6) 'ವಿಷವಿಜ್ಞಾನ'ಕಾರರು ಆಯುರ್ವೇದಗ್ರಂಥಗಳಲ್ಲಿ ಹೇಳಿರುವ ವಿಷಪ್ರಾಣಿಗಳು, ಅವುಗಳ ವಿಷಸ್ವಭಾವ ಮತ್ತು ಅವುಗಳನ್ನು ಪರಿಹಾರಮಾಡುವ ಕ್ರಮಗಳನ್ನು ಬರೆದಿದ್ದರು.

ಇನ್ನೂ ಕೆಲವು ಪ್ರಬಂಧಗಳೂ ಪರಿಷತ್ತಿಗೆ ಬಂದಿದ್ದುವು. ಅವುಗಳೆಲ್ಲವನ್ನೂ ಪ್ರಬಂಧಗಳ ಸಮಿತಿಯವರು ಪರಿಶೀಲನಮಾಡಿ ಕಾಥಿಯವಾಡದ ದ್ರಾಂಗಾಧ್ರ ಸ್ಥಳದ ವೈದ್ಯವಾಸುದೇವಶಂಕರ ದ್ವಿವೇದಿಗಳು ಬರೆದ 'ನಾಲ್ಕು ವಿಧ ಅರ್ಜುನವೃಕ್ಷಗಳು' ಎಂಬ ಉಪನ್ಯಾಸವನ್ನೂ, ಮಧ್ಯಪ್ರಾಂತದ ರಾಯಪುರದ ನಿವಾಸಿಗಳಾದ ರಾಜವೈದ್ಯ ಪಿ ಡಿ. ಶರ್ಮರವರು ಬರೆದ 'ಪಿಪ್ಪಲ' ವೃಕ್ಷದ ಮೇಲಿನ ಪ್ರಬಂಧವನ್ನೂ ಒಪ್ಪಿಸಿದರು.

(a) ಡಾ|| ಮಸ್ಕರವರು ಆಯುರ್ವೇದ ವನಸ್ಪತಿ ನಿಘಂಟವನ್ನು ಸಂಸ್ಕರಣ ಮಾಡಬೇಕೆಂದು ಹೇಳಿದ ಸೂಚನೆಯ ವಿಷಯದಲ್ಲಿ ಹೆಚ್ಚು ವಿಚಾರಮಾಡಲು ಸಮ್ಮೇಳನಕ್ಕೆ ಅವಕಾಶವಿಲ್ಲದ್ದರಿಂದ ಆ ವಿಷಯವು ಮುಂದುವರಿಸಲ್ಪಟ್ಟಿತು.

(1) ಮೂತ್ರವ್ಯಾಧಿ ಚಿಕಿತ್ಸೆ (2) ಕುಷ್ಠರೋಗದ ಚಿಕಿತ್ಸೆ (3) ಆಯು ರ್ವೇದ ಔಷಧಗಳನ್ನು ಶೋಧನೆಮಾಡಬೇಕಾದರೆ ಅಂಗೀಕರಿಸಬೇಕಾದ ಕ್ರಮಗಳು ಎಂಬ ವಿಷಯಗಳಲ್ಲಿ ಉತ್ತಮವಾದ ಉಪನ್ಯಾಸಗಳನ್ನು ಮುಂದಿನ ಸಮ್ಮೇಳನದ ಕಾಲಕ್ಕೆ ಬರೆದವರಿಗೆ (1) 250 (2) 150 (3) 100 ರೂಪಾಯಿಗಳ ಬಹು ಮಾನವನ್ನು ಕೊಡುವುದಾಗಿ ವಾಗ್ದಾನಮಾಡಿದರು. ಆ ಪ್ರಬಂಧಗಳು ಸಂಸ್ಕೃತ ದಲ್ಲಿಯಾಗಲಿ, ಹಿಂದಿಯಲ್ಲಾಗಲಿ, ಇಂಗ್ಲೀಷಿನಲ್ಲಿಯಾಗಲಿ ಬರೆದವಾಗಿರಬಹುದು. ಮೇಲ್ಕಂಡ ವಿಷಯದಲ್ಲಿ ತಾವೂಕೂಡ ಬರೆದು ಬಹುಮಾನವನ್ನು ಪಡೆಯಲು ಪ್ರಯತ್ನ ಮಾಡುವರೆಂದೂ, ಬಹುಮಾನದ ಆಶೆಗೆಮಾತ್ರವೇ ಅಲ್ಲದೆ ಆಯುರ್ವೇ ದದ ಅಭಿವೃದ್ಧಿಗೂ ದೃಷ್ಟಿಕೊಟ್ಟು ವಿದ್ವಾಂಸರು ಪ್ರಬಂಧಗಳನ್ನು ಬರೆಯಬೇ ಕೆಂದೂ ಅವರು ಸೂಚಿಸಿದರು.

(b) ಸಭಿಕರು ಅಧ್ಯಕ್ಷರ ಅಮೂಲ್ಯವಾದ ಶೋಧನೆಗಳನ್ನು ಕೇಳಿ ಬಹಳ ಸಂತೋಷಪಟ್ಟು ಅವರಿಗೆ ವಂದನಾ ಸಮರ್ಪಣೆಮಾಡಿದನಂತರ ಸಭೆಯು ಮುಗಿ ಯಿತು. ಡಾ|| ಮಸ್ಕರವರೂ ಕೂಡ ಸ್ವಾಗತಮಂಡಲಿಯವರು ತಮಗೂ, ತಮ್ಮ ದ್ವಾರಾ ಮಹಾರಾಷ್ಟ್ರದವರಿಗೂ ಮಾಡಿದ ಗೌರವಕ್ಕಾಗಿ ಅವರನ್ನು ವಂದಿಸಿ ತಾವು ತಂದಿರುವ ಪ್ರದರ್ಶನ ವಸ್ತುಗಳ ವಿಷಯವನ್ನು ಸವಿಸ್ತಾರವಾಗಿ ಹೇಳಿ ದರು. ಅವುಗಳಲ್ಲಿ ಕ್ರಿಮಿನಾಶಕಗಳು, ಅತಿಸಾರಹಾರಿಗಳು, ಹೃದಯೋತ್ತೇಜಕ ಗಳು, ಸರ್ಪದಂಶಪರಿಹಾರಗಳು ಮೊದಲಾದ ಸುಮಾರು 500 ವಸ್ತುಗಳಿದ್ದುವು.

ನಿಖಿಲಭಾರತಾಯುರ್ವೇದ ಸಮ್ಮೇಳನದಲ್ಲಿ ಇಂಡಿಯಾ ಸರ್ಕಾರದವ ರನ್ನೂ ಪ್ರಾಂತಿಕ ಸರ್ಕಾರದವರನ್ನೂ ಆಯುರ್ವೇದಶಾಸ್ತ್ರಪರಿಶೋಧನಾ ಕಾರ್ಯ ವನ್ನು ಕೈಕೊಳ್ಳಲು ಪ್ರಾರ್ಥನೆಮಾಡಿಕೊಳ್ಳುವ ತೀರ್ಮಾನವು ಅಂಗೀಕರಿಸಲ್ಪಟ್ಟಿತು.

ದ್ರವ್ಯಸಂಭಾಷಾಪರಿಷತ್ತಿನ ಅಧ್ಯಕ್ಷರಾದ

(ಬೊಂಬಾಯಿ ಹಾಫ್‌ಕಿನ್ ರಿಸರ್ಚ್ ಇನ್ಸ್ಟಿಟ್ಯೂಟಿನ)

ಡಾ|| ಕೆ. ಎಸ್. ಮಸ್ಕರ್, ಎಂ.ಎ., ಎಂ.ಡಿ, ಡಿ.ಪಿ.ಹೆಚ್. ರವರ ಭಾಷಣ.

ಆರ್ಯರೇ—

ದಯಮಾಡಿ ಕೇಳಬೇಕು. ತಮ್ಮ ಅನುಗ್ರಹದಿಂದ ಈ ದ್ರವ್ಯಸಂಭಾಷಾ ಪರಿಷತ್ತಿನ ಆಧ್ಯಕ್ಷಪದವಿಯನ್ನು ಹೊಂದಿದೆನು. ಪ್ರಸ್ತುತ ವಿಷಯವಲ್ಲದೆ ಬೇರೆ ವಿಷಯದಲ್ಲಿ ಮಾತನಾಡುವ ಸ್ವಾತಂತ್ರ್ಯವನ್ನು ಕೆಲವುವೇಳೆ ಅಧ್ಯಕ್ಷರು ತೆಗೆದು ಕೊಳ್ಳುವ ಸಂಪ್ರದಾಯವುಂಟು. ಆ ಸ್ವಾತಂತ್ರವನ್ನು ಉಪಯೋಗಿಸಲಿಚ್ಛಿ ಸುತ್ತೇನೆ. ನಮ್ಮ ಭರತಖಂಡದಲ್ಲಿ ಬೆಳೆಯುವ ಔಷಧಿಗಳ ಗುಣದೋಷಗಳ ವಿಷಯದಲ್ಲಿ ಎರಡು ಪ್ರಬಂಧಗಳನ್ನು ಬರೆದು ತಮ್ಮೆದುರಿಗೆ ಓದಿರುವೆನು. ಅವು ಗಳನ್ನೇ ಮೂಲವಾಗಿಟ್ಟುಕೊಂಡು, ಆ ಮೂಲಿಕೆಗಳನ್ನು ಉಪಯೋಗಿಸುವ ಕ್ರಮ, ಅವುಗಳ ಗುಣದೋಷ, ಇವುಗಳ ವಿಷಯವಾಗಿ ತಾವು ತಿಳಿದುಕೊಂಡಿರು ವುದನ್ನು ಪುನಃ ಪರೀಕ್ಷೆಮಾಡತಕ್ಕದ್ದು ಎಷ್ಟು ಆವಶ್ಯಕವೆಂಬುದನ್ನು ತಮ್ಮೆದು ರಿಗೆ ವಿಜ್ಞಾಪಿಸುತ್ತೇನೆ.

ಪರೀಕ್ಷಿಸಿ ನಿಶ್ಚಯಿಸಲ್ಪಟ್ಟ ಔಷಧಿಗಳು ಇರುವಲ್ಲಿ ಅವುಗಳ ಗುಣದೋಷ ವಿಚಾರದಿಂದ ಫಲವೇನು? ದೇಶದ ಯಾವಭಾಗಗಳಿಗಾದರೂ ಹೋಗಿಬರಲು ಬೇಕಾದಷ್ಟು ಸುಲಭಸಾಧನಗಳುಂಟಾಗಿವೆ. ವೈದ್ಯರೂ ಬೇಕಾದಷ್ಟು ಜನರು ಸಿದ್ಧವಾಗಿಧಾರೆ. ಎಂಥ ಔಷಧಗಳು ಬೇಕಾದರೂ ದೊಡ್ಡದೊಡ್ಡ ಅಂಗಡಿಗಳಲ್ಲಿ ಕ್ರಯಕ್ಕೆ ಸಿದ್ಧವಾಗಿವೆ. ವೃತ್ತಾಂತ ಪತ್ರಿಕೆಗಳಲ್ಲಿ ಕಣ್ಣುಬಿದ್ದಕಡೆಗಳೆಲ್ಲಾ ಔಷದಿಗಳ ವರ್ಣನೆಗಳೇ. ಇವೆಲ್ಲವೂ ರೋಗಿಜನರ ಅನುಕೂಲ್ಯಕ್ಕಾಗಿರುವಲ್ಲಿ ಈ ವೃಥಾ ಗುಣದೋಷಚಿಂತೆ ಏಕೆ! ಎಂದು ಕೇಳಬಹುದು. ಇದಕ್ಕೆ 'ನಮ್ಮ ದೊಂದೆ ಉತ್ತರ. ಪರೀಕ್ಷಿಸದೆ, ಗುಣದೋಷಗಳು ನಿಶ್ಚಯವಿಲ್ಲದಿರುವ ನೂರಾರು ಔಷದಗಳಿಗಿಂತಲೂ, ನಿಶ್ಚಿತವಾದ ಒಂದು ಔಷಧವೇ ಮೇಲು. ಇದೇ ವಿದ್ವಾಂ ಸರ ಮಾತು.

ನಮ್ಮ ಭರತಖಂಡದಲ್ಲಿನ ಸನ್ನಿವೇಶವು ಸ್ವಲ್ಪ ವಿಲಕ್ಷಣವಾದುದು. ಜನರು ಪ್ರಾಯಶಃ ಒಬ್ಬರನ್ನು ನೋಡಿ ಒಬ್ಬರು ಪ್ರವರ್ತಿಸುವುದೇ ಹೆಚ್ಚು.

ಹಳೆಯದೆಂದರೆ ವಿಶ್ವಾಸ, ಹೊಸದೆಂದರೆ ದ್ವೇಷ. ಪರಕೀಯ ಚಿಕಿತ್ಸಾ ಮತ್ತು ಪರಕೀಯ ಔಷಧಿಗಳೆಂದರೆ ನಂಬಿಕೆಯೇ ಇಲ್ಲ. ಪರಕೀಯವೆಂದರೆ ವಿದೇಶವೆ ಅಂತಲ್ಲ. ನಮ್ಮೂರು ಬಿಟ್ಟು 5 ಮೈಲಿ ದೂರದಲ್ಲಿರುವುದು ಕೂಡ ಅವರ ದೃಷ್ಟಿಯಲ್ಲಿ ಪರದೇಶವೇ. ಇದರ ಮೇಲೆ ದೇಶದ ಆರ್ಥಿಕಸ್ಥಿತಿಯೂ ಚೆನ್ನಾಗಿಲ್ಲ. ದೇಶವೂ ಬಹು ವಿಸ್ತಾರವಾದುದು. ಇಲ್ಲಿರುವ ಬಡತನವನ್ನು ಹೇಳತೀರದು. ಹಡಗು ಮತ್ತು ರೈಲುಗಳಲ್ಲಿ ಸಾಗಿಬರುವ ಔಷಧಗಳು ಬಹಳ ಬೆಲೆಯಾಗುತ್ತವೆ. ಇವತ್ತಿಗೂ ನಾಳೆಗೂ ಸಾಮಾನ್ಯವಾಗಿ ಜನರಿಗೆ ಸಣ್ಣ ಸಣ್ಣ ರೋಗಗಳಿಗೆ ಚಿಕಿತ್ಸೆಪಡೆಯಲೂ ಕೂಡ ಸಾಧ್ಯವಿಲ್ಲ. ಆದ್ದರಿಂದ ತಮ್ಮ ಮನೆಗಳ ಸುತ್ತಮುತ್ತ ಬೆಳೆಯುವ ಮೂಲಿಕೆಗಳಿಂದ ತಮ್ಮ ರೋಗಗಳನ್ನು ಸಾಧ್ಯವಾದಮಟ್ಟಿಗೆ ಪರಿಹಾರ ಮಾಡಿಕೊಳ್ಳಬೇಕಾದ ಭಾರವು ಜನರ ಮೇಲೆ ಬಿದ್ದಿದೆ. ಆದ್ದರಿಂದ ಜನಸಾಮಾನ್ಯವಾದ ಚಿಕಿತ್ಸೆಯ ಲಕ್ಷಣವೇನೆಂದರೆ ಅದು ನಿಶ್ಚಯವಾಗಿಯೂ ಪ್ರಯೋಜನಕಾರಿಯಾಗಿರಬೇಕು. ಅಪಾಯವುಳ್ಳದ್ದಾಗಬಾರದು. ಅನಾಯಾಸವಾಗಿ ಸಮೀಪದಲ್ಲಿ ಸಿಕ್ಕಬೇಕು. ಖರೀದಿಯು ಸುಲಭವಾಗಿರಬೇಕು. ಉಪಯೋಗಿಸುವ ವಿಧಾನವು ಗಹನವಲ್ಲದೆ ಸುಲಭವಾಗಿ ಜ್ಞಾಪಕದಲ್ಲಿ ನಿಲ್ಲುವಂತಿರಬೇಕು.

ಈ ಪರಿಸ್ಥಿತಿಯನ್ನು ನೋಡಿದರೆ ವೈದ್ಯರು ಸಾಮಾನ್ಯ ಜನರಿಗೆ ಮಾಡಬಹುದಾದ ಉಪಕಾರವೇನೆಂದರೆ, ವಾಡಿಕೆಯಲ್ಲಿರುವ ಔಷಧಿಗಳನ್ನು ಪರೀಕ್ಷೆಮಾಡಿ ಕೆಲಸಕ್ಕೆಬಾರದ್ದನ್ನು ಬಿಸಾಟು, ಯಾವುದು ಉತ್ತಮವೋ ಉಪಯುಕ್ತವೋ ಅವುಗಳನ್ನು ಮಾತ್ರ ವ್ಯವಸ್ಥೆಮಾಡಿ ಹೇಳಬೇಕು. ಒಂದೊಂದು ಗ್ರಾಮಕ್ಕೂ, ಜಿಲ್ಲೆಗೂ, ದೇಶಕ್ಕೂ ಒಂದೊಂದು ನಿಘಂಟು ಇರಬೇಕು. ಆಯಾ ಸ್ಥಳಗಳಲ್ಲಿ ಬರುವ ರೋಗಗಳಿಗೆ ಅವುಗಳಿಂದ ಗುಣವಾಗಲು ಸಾಕಾಗಬೇಕು. ಸುಲಭವಾಗಿ ಗುರ್ತುಹಿಡಿಯಬಹುದಾದ, ಸುಲಭವಾಗಿ ಸಿಕ್ಕುವ, ಮಿಶ್ರವಲ್ಲದೆ ಆಗತಾನೆ ಕಿತ್ತುತಂದು ಉಪಯೋಗಿಸಬಹುದಾದ ಮೂಲಿಕೆಗಳನ್ನು ಒಳಗೊಂಡ ಅಂಥ ನಿಘಂಟುವು ಅತ್ಯಾವಶ್ಯಕ. ಇನ್ನು ಭರತಖಂಡಕ್ಕೆಲ್ಲಾ ಒಟ್ಟು ಒಂದು ಜೀವ ಕೋಶವಿರಬೇಕು. ಇದರಲ್ಲಿ ಅಯುರ್ವೇದದ ಸಾರಭೂತವಾದ ಮೂಲಿಕೆಗಳನ್ನೂ ಅಥವಾ ಬೇರೆ ವೈದ್ಯಶಾಸ್ತ್ರದಿಂದ ಸಂಗ್ರಹಿಸಬೇಕಾದ ಉತ್ತಮವಾದ ಔಷಧಗಳನ್ನೂ ಹೇಳಿದರೆ ಸಾಕು.

ವನಸ್ಪತಿಗಳನ್ನು ಪರೀಕ್ಷೆಮಾಡಬೇಕಾದ ಆವಶ್ಯಕತೆಯಿಲ್ಲವೆಂದು ಹೇಳುವ ಮತ್ತೊಂದು ಗುಂಪೂ ಉಂಟು. ಅವರು ಹೇಳುವ ಕಾರಣಗಳು ಬೇರೆ. ಅವರ

ಮತದಲ್ಲಿ ನಮ್ಮ ಆಯುರ್ವೇದದ ಮೂಲಿಕೆಗಳನ್ನು ಪರೀಕ್ಷೆಮಾಡುವ ಅಧಿಕಾರವೇ ಯಾರಿಗೂ ಇಲ್ಲ. ಆಯುರ್ವೇದ ಗ್ರಂಥಗಳಲ್ಲಿ ಸಿದ್ಧಾಂತವಾಗಿ ಹೇಳಿರುವುದರ ಮೇಲೆ ಪರೀಕ್ಷೆಮಾಡುವುದು ನಿಷ್ಫಲ ಮತ್ತು ವೃಥಾ ಕಾಲಹರಣ. ಯಾವ ಪುಸ್ತಕದಲ್ಲಿ ಬರೆದಿರಲಿ, ಯಾರೇ ಹೇಳಿದ್ದಾಗಲಿ, ಅದು ಅಪೌರುಷೇಯವಾದ ವೇದವಾಕ್ಯ, ಅದರಲ್ಲಿ ಅಪ್ರಾಮಾಣ್ಯ ಸಂದೇಹವೇ ಇಲ್ಲ ಎಂದು ವಾದಿಸುತ್ತಾರೆ. ಒಂದುವೇಳೆ ಹಾಗೂ ಪರೀಕ್ಷೆಮಾಡಿದ ಮೇಲೆ ಗುಣ ಕಂಡುಬಂದರೆ 'ಆಗಲೇ ನಾವು ಹೇಳಿರಲಿಲ್ಲವೇ? ಎನ್ನುತ್ತಾರೆ. ಗುಣವಿಲ್ಲವೆಂದು ಕಂಡುಬಂದಲ್ಲಿ 'ನಿಮ್ಮ ಪರೀಕ್ಷೆಯೇ ತಪ್ಪು' ಎನ್ನುತ್ತಾರೆ. ಹ್ಯಾಗಾದರೂ ಪರೀಕ್ಷೆಗೆ ಫಲವಿಲ್ಲ. ಪರೀಕ್ಷಕರ ಮೇಲೆ ಮತ್ತೊಂದು ಅಪಕೀರ್ತಿ. ಆಯುರ್ವೇದವನ್ನು ಅಲ್ಲಗಳೆಯುವುದೇ ಇವರ ಉದ್ದೇಶ್ಯವಂತೆ. ಅಥವಾ ಆಯುರ್ವೇದದಿಂದ ಕದ್ದು ಇತರ ಪರದೇಶದ ನಿಘಂಟುಗಳನ್ನು ಉದ್ಧರಿಸುವ ಆಶೆಗಾಗಿಯಂತೆ. ಈ ಮಧ್ಯದಲ್ಲಿ ಆಯುರ್ವೇದ ನಿಘಂಟುವು ದಿನೇ ದಿನೇ ದೊಡ್ಡದಾಗುತ್ತಾ ಬಂದು ಭರತಖಂಡದಲ್ಲಿರುವ ಸಕಲ ಮೂಲಿಕೆಗಳೂ ಜಾಗ್ರತೆಯಾಗಿಯೇ ಅದರಲ್ಲಿ ಅಡಗಿಹೋಗುವ ಸಂಭವ ಬರಬಹುದು.

ನಮ್ಮ ಪುಣ್ಯೋದಯದಿಂದ ಕೆಲವು ನವೀನರಾದ ಆಯುರ್ವೇದಾಭಿಮಾನಿಗಳು ತಲೆದೋರುತ್ತಿರುವರು. ಪರೀಕ್ಷೆಮಾಡದೆ ಯಾವ ಮೂಲಿಕೆಯನ್ನೂ ಒಪ್ಪುವುದಿಲ್ಲ. ಪ್ರಾಚೀನ ಮತವನ್ನೇ ಸಾಧನಮಾಡುವುದಕ್ಕೂ ಉಪಾಯಗಳನ್ನು ಹುಡುಕುತ್ತಿರುವರು. ತಮ್ಮ ಔಷಧಿಯ ಜ್ಞಾನವನ್ನು ಪ್ರತ್ಯಕ್ಷತಃ ಪರಿಶೀಲನಮಾಡಿ ಗುಣದೋಷಗಳನ್ನು ಸ್ವಯಂ ಕಂಡುಹಿಡಿದ ಹೊರತು ಔಷಧಿಯನ್ನು ಒಪ್ಪುವುದಿಲ್ಲ. ಪೂರ್ವದಿಂದಲೂ ವಿದ್ಯಾಹೀನರಾದ ಸಾಮಾನ್ಯ ಜನರಿಂದಲೇ ಮೂಲಿಕೆಗಳ ಜ್ಞಾನವನ್ನು ಸಂಗ್ರಹಿಸುವ ಸಂಪ್ರದಾಯವುಂಟು. ಚರಕ, ಸುಶ್ರುತಗಳಲ್ಲಿಯೂ ಕೂಡ ವೈದ್ಯನು ಬೆಟ್ಟಗುಡ್ಡಗಳನ್ನು ತಿರುಗಿ ಕುರುಬರು ಮತ್ತು ಅಡವಿ ಮನುಷ್ಯರಿಂದ ವಿಷಯವನ್ನು ತಿಳಿದುಕೊಳ್ಳಬೇಕೆಂದು ಹೇಳಿದೆ.

ಗೋಪಾಲಾಸ್ತಾಪಸಾವ್ಯಾಧಾ ಯೇ ಚಾನ್ಯೇವನಚಾರಿಣಃ ।
ಮೂಲಾಹಾರಾಶ್ಚಯೇ ತೇಭ್ಯೋ ಭೇಷಜಂ ವ್ಯಕ್ತಿರಿಷ್ಯತೆ ॥೧॥

ವೈದ್ಯಶಾಸ್ತ್ರದ ಇತಿಹಾಸವನ್ನು ನೋಡಿದರೆ, ಇಂಥ ನೀಚ ಜನರೇ ಅಮೂಲ್ಯವಾದ ಮೂಲಿಕೆಗಳನ್ನು ವೈದ್ಯರ ದೃಷ್ಟಿಗೆ ತಂದು ಲೋಕಕ್ಕೆ ಬಹಳ ಉಪಕಾರ ಮಾಡಿರುವ ವಿಷಯವು ವ್ಯಕ್ತವಾಗುತ್ತದೆ. ಆದರೂ ಔಷಧಪ್ರಯೋಗ

ದಲ್ಲಿಯೂ, ರೋಗಚಿಕಿತ್ಸೆಯಲ್ಲಿಯೂ ಅಂತಹ ಅಜ್ಞಾನಿಗಳಿಗೆ ಪ್ರಾಧಾನ್ಯವನ್ನು ಕೊಡುವುದು ನ್ಯಾಯವಿಲ್ಲ. ಹಾಗೆ ಅವರ ಮಾತಿಗೆ ಹೆಚ್ಚು ಬೆಲೆ ಕೊಡುವುದಾದ

ಯಸ್ಯಕಸ್ಯತರೋರ್ಮೂಲಂ ಯೇನಕೇನಾಪಿ ಪ್ರೇಷಿತಂ ।
ಯಸ್ಮೈ ಕಸ್ಮೈ ಪ್ರದಾತವ್ಯಂ ಯದ್ವಾತದ್ವಾಭವಿಷ್ಯತಿ ॥೨॥

ಎಂದಂತೆ ಆಗುವುದು. ಅವೈದ್ಯರು ಹೇಳಿದ್ದನ್ನೆಲ್ಲಾ ವೇದವಾಕ್ಯವೆಂದು ನಂಬಬಾರದೆಂದು ಸ್ಫುಟವಾಗಿ ಎಲ್ಲರಿಗಿಂತಲೂ ಮೊದಲು ಹೇಳಿದರು ಬೃಹನ್ನಿಘಂಟುರತ್ನಾಕರಕಾರರು

ಮಾಲಾಕಾರಶ್ಚರ್ಮಕಾರೋ ನಾಪಿತೋ ರಜಕಸ್ತಥಾ ।
ವೃದ್ಧಾರಂಡಾ ವಿಶೇಷೇಣ ಕಲೌ ಪಂಚಚಿಕಿತ್ಸಕಾಃ ॥೩॥

ಈಗ್ಗೆ ಸುಮಾರು 40 ವರ್ಷಗಳಿಗೆ ಮುಂಚೆಯೇ ಆಯುರ್ವೇದ ವಿಷಯದಲ್ಲಿ ಪ್ರಮಾಣಾಧಾರವಾದ ನಿಘಂಟನ್ನು ಬರೆಯಲು ಪ್ರಯತ್ನಿಸಿದವರು ಆ ನಿಘಂಟುಕಾರರು.

ನಿಘಂಟುನಾ ವಿನಾ ವೈದ್ಯೋ ವಿದ್ವಾನ್ ವ್ಯಾಕರಣಂ ವಿನಾ ।
ಅನಭ್ಯಾಸೇನ ಧಾನುಷ್ಕಸ್ತ್ರಯೋ ಹಾಸ್ಯಸ್ಯಭಾಜನಂ ॥೪॥

ಆದರೆ ಕತ್ತರಿಯನ್ನು ಧಾರಾಳವಾಗಿ ಉಪಯೋಗಿಸಿದ್ದರೆ ಎಷ್ಟೋ ಮೂಲಿಕೆಗಳು, ಅಥವಾ ಮೂಲಿಕೆಗಳಿಗೆ ಹೇಳಿರುವ ಅನೇಕ ಗುಣಗಳು ಆ ಗ್ರಂಥದಲ್ಲಿ ಸೇರುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಎಂದಿಗಾದರೂ ಆ ಕತ್ತರಿಯ ಪ್ರಯೋಗವನ್ನು ಮಾಡುವುದರಲ್ಲಿ ನಾನೂ ನಮ್ಮ ಸ್ನೇಹಿತರೂ ಕೈಹಾಕಿದ್ದೇವೆ. ಪ್ರಮಾಣಭೂತವಾದ ಆಯುರ್ವೇದ ನಿಘಂಟನ್ನು ರಚಿಸುವುದಕ್ಕೆ ಬೇಕಾದ ಸಾಧನಗಳನ್ನು ಈ ಮಹಾಸಮ್ಮೇಳನದ ಸದಸ್ಯರು ಯೋಚಿಸಬೇಕಾಗಿದೆ. ಅಂಥ ನಿಘಂಟುವನ್ನು ಮಾಡಿ ವೈದ್ಯರಿಗೂ ಮತ್ತು ಜನತೆಗೂ ಉಪಕಾರಮಾಡಲು ತಾವೇ ಶಕ್ತರು.

ಆಯುರ್ವೇದದ ಶಾಸ್ತ್ರದಲ್ಲಿ ಉದಾಹೃತವಾದ ಮೂಲಿಕೆಗಳನ್ನೂ ಇತರ ಭಾರತೀಯ ವನಸ್ಪತಿಗಳನ್ನೂ ಪರೀಕ್ಷೆಮಾಡುವುದಕ್ಕೆ ನಾವು ಎಂದು ತೊಡಗಿದೆವೋ ಅಂದಿನಿಂದಲೂ ದೀನರಾದ ರೋಗಾರ್ತರದೃಷ್ಟಿಯಿಂದಲೇ ಕೆಲಸಮಾಡುತ್ತಿದ್ದೇವೆ.

ಆಯುರ್ವೇದ ನಿಘಂಟುವಿನಲ್ಲಿಯೂ ಇತರ ಭಾರತ ನಿಘಂಟುಗಳಲ್ಲಿಯೂ ನಿಜವಾಗಿಯೂ ಸುಳ್ಳೂ, ತತ್ವವೂ ಒಟ್ಟಿಗೆ ಸೇರಿದೆಯೋ ಎಂದು ಕೇಳಬಹುದು.

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

1930.

ಶ್ರೀ|| ಪಿ. ಸುಬ್ಬನರಸಿಂಹಯ್ಯನವರು, M.Sc.
(ಮಹಾರಾಜಾ ಕಾಲೇಜು, ಮೈಸೂರು.)
ಉಪಚಾರಶಾಖೆಯ ಸೆಕ್ರೆಟರಿಗಳು.

ಶ್ರೀ|| ಭಿಷಗ್ರತ್ನ ಬಿ. ವಿ. ಪಂಡಿತರು,
(ನಂಜನಗೂಡು ಸದ್ವೈದ್ಯಶಾಲಾ ಪ್ರೊಪ್ರೈಟರು)
ಉಪಚಾರಶಾಖೆಯ ಅಧ್ಯಕ್ಷರು.

ಶ್ರೀ|| ವೈದ್ಯವಿಚಕ್ಷಣ ಪಂ|ಮು|ರಂಗಾಚಾರ್ಯರು
(ಪ್ರೊಪ್ರೈಟರ್ ಭೈಷಜ್ಯಾಶ್ರಯ, ಮೈಸೂರು.)
ಪ್ರದರ್ಶನಶಾಖೆಯ ಅಧ್ಯಕ್ಷರು.

ಇದರಲ್ಲಿ ಅಭಿಪ್ರಾಯಭೇದವೂ ಇರಬಹುದು. ತಮ್ಮ ಮುಂದೆ ಇಟ್ಟಿರುವ ಪ್ರಬಂಧಗಳಲ್ಲಿ ಈ ವಿಷಯವನ್ನೇ ಸವಿಸ್ತಾರವಾಗಿ ವಿಚಾರಮಾಡಿದೇವೆ. ಕ್ರಿಮಿನಾಶಕವಾದ ಔಷಧಿಗಳನ್ನು ಸರ್ಪವಿಷಹಾರಿಗಳಾದ ಮೂಲಿಕೆಗಳನ್ನೂ ಶೋಧನೆಮಾಡಬೇಕೆಂದು ಹೊರಟಾಗ ನಮಗಿದ್ದ ಉತ್ಸಾಹವನ್ನು ಇಷ್ಟೆಂದು ಹೇಳಲು ಸಾಧ್ಯವಿಲ್ಲ. ಒಂದಲ್ಲ, ಎರಡಲ್ಲ, ಅಂಥ ಎಷ್ಟೋ ವನಸ್ಪತಿಗಳನ್ನು ನಿರ್ಣಯಮಾಡಿ, ಜನರ ದುಃಖವನ್ನು ಪರಿಹಾರ ಮಾಡುವೆವೆಂಬ ಆಶೆಯಿತ್ತು. ನಾವು ಪರೀಕ್ಷಿಸಿದ ಮೂಲಿಕೆಗಳ ಪೈಕಿ ಕೆಲವು ಅತ್ಯಂತಾನುಪಯುಕ್ತವೆಂದೂ, ಇನ್ನು ಕೆಲವು ಮೂಲಿಕೆಗಳಲ್ಲಿ ಹೇಳಿರುವ ಗುಣಗಳು ಬರೀ ಸುಳ್ಳುಮಾತೆಂದೂ ನಾವು ಮಾಡಿದ ತೀರ್ಮಾನವನ್ನು ಕೇಳಿದಮೇಲೆ ಭಾರತನಿಘಂಟುಗಳನ್ನು ಪರಿಶೋಧನೆ ಮಾಡಬೇಕಾದ ಆವಶ್ಯಕತೆಯು ಅತಿ ಸ್ಫುಟವಾಗಿ ತೋರದಿರಲಾರದು. ಅಂಥಾ ಪರಿಶೋಧನವು ಅತ್ಯಾವಶ್ಯಕವೆಂದೂ, ಆಗಿಂದಾಗ್ಯೆ ಆ ವಿಧವಾದ ಪರಿಶೋಧನಗಳು ನಡೆಯುತ್ತಿದ್ದುವೆಂತಲೂ ಆಯಾ ಗ್ರಂಥಗಳಿಂದ ವ್ಯಕ್ತವಾಗುತ್ತದೆ.

(a) 17 ನೆಯ ಶತಮಾನಕ್ಕೆ ಮುಂಚೆ ಸಂಗ್ರಹಿಸಲ್ಪಟ್ಟ ನಿಘಂಟುಗಳಲ್ಲಿ ಕಂಡ ವನಸ್ಪತಿಗಳು, (b) ಆ ಕಾಲದಿಂದೀಚೆಗೆ ಸಂಗೃಹೀತವಾಗಿ, ಪರೀಕ್ಷಿಸಲ್ಪಟ್ಟನಂತರ ಮೇಲೆ ಹೇಳಿದ ಪ್ರಾಂತಿಕ ನಿಘಂಟುಗಳಲ್ಲಿ ಸೇರಿಸಲ್ಪಡಲರ್ಹವಾದ ವನಸ್ಪತಿಗಳು, ಎಂದು ವನಸ್ಪತಿಗಳನ್ನು ಎರಡು ಗುಂಪಾಗಿ ವಿಭಾಗಮಾಡಿದ್ದೇನೆ.

ಆಯುರ್ವೇದ ನಿಘಂಟುಗಳು.

ಆಯುರ್ವೇದ ಚರಿತ್ರೆಯನ್ನು ನೋಡಿದರೆ ಅದು ದಿನೇ ದಿನೇ ಅಭಿವೃದ್ಧಿಗೆ ಬಂದುದು ವ್ಯಕ್ತವಾಗುತ್ತದೆ. ಅದರ ಇತರ ಎಲ್ಲಾ ಭಾಗಗಳೂ ಹೇಗೆ ಬರುತ್ತಾ ಬರುತ್ತಾ ದೊಡ್ಡದಾದವೋ ಹಾಗೆಯೇ ಔಷಧಿಜ್ಞಾನವೂ ಪ್ರಬಲವಾಯಿತು. ಪ್ರಾಚೀನ ಋಷಿಗಳಿಗೆ ಸೋಮಲತೆಯೇ ಮೊದಲಾದ ಸುಮಾರು 100 ಮೂಲಿಕೆಗಳು ಸಾಕಾಗಿದ್ದವು. ಇಷ್ಟರಿಂದಲೇ ಅವರ ಆರೋಗ್ಯವು ಸಂರಕ್ಷಿತವಾಗುತ್ತಿತ್ತು. ಅಲ್ಲಿಂದೀಚೆಗೆ ವನಸ್ಪತಿಕೋಶವು ದೊಡ್ಡದಾಗುತ್ತಾ ಬಂದು ಕೊನೆಗೆ ಸುಶ್ರುತನ ಕಾಲಕ್ಕೆ 800 ವನಸ್ಪತಿಗಳು ನಿಘಂಟುವಿಗೆ ಸೇರಿದವು. ಬೌದ್ಧಮತವು ಪ್ರಚಾರಕ್ಕೆ ಬರುತಲೂ, ಗ್ರೀಕರು ಮತ್ತು ಮಹಮ್ಮದೀಯರು ದೇಶಕ್ಕೆ ನುಗ್ಗಿದ ಮೇಲೂ ನಿಘಂಟು ಇನ್ನೂ ದೊಡ್ಡದಾಯಿತು. ಆದರೆ ಈ ನಿಘಂಟುವಿನಲ್ಲಿ ಕಂಡ ವನಸ್ಪತಿಗಳೆಲ್ಲವನ್ನೂ ಆಗಿಂದಾಗ್ಯೆ ಬಂದ ವೈದ್ಯರು ಒಪ್ಪಿಕೊಂಡಿದ್ದಂತೆ ಕಾಣುವುದಿಲ್ಲ. ನಿಘಂಟುಗಳಲ್ಲಿ ಹೊಸ ಮೂಲಿಕೆಗಳು ಸೇರಿದವು. ಹಳೆಯವು ಎಷ್ಟೋ

ಕಡಮೆಯಾಡುವು. ಒಟ್ಟಿನಲ್ಲಿ ಕಡಮೆಯಾದುದೇ ಹೆಚ್ಚು. ಧನ್ವಂತರಿಯು ತನ್ನ ನಿಘಂಟುವಿನಲ್ಲಿ 490 ಮೂಲಿಕೆಗಳನ್ನು ಹೇಳಿದ್ದಾನೆ. ಮದನಪಾಲನು 830 ಹೇಳಿದ್ದಾನೆ. ನರಹರಿಪಂಡಿತನ ನಿಂಘಟನಲ್ಲ 210 ಹೆಸರುಗಳೇ ಇವೆ. ಭಾವಮಿಶ್ರನು 530 ಮೂಲಿಕೆಗಳನ್ನು ಹೇಳಿದ್ದಾನೆ. ಅವುಗಳಲ್ಲಿ 400 ಮಾತ್ರ ಮೂಲಿಕೆಗಳು. ಉಳಿದವು ಧಾನ್ಯ, ಶಾಕ ಅಥವಾ ಫಲಗಳು. ಔಷಧವೇ ಅಲ್ಲ. ನಿಘಂಟುಗಳಲ್ಲಿ ಒಂದಕ್ಕೊಂದು ತಾಳೆಬೀಳುವುದಿಲ್ಲ. ಯಾತಕ್ಕೋಸ್ಕರ ಮೂಲಿಕೆಗಳ ಹೆಸರನ್ನು ಕಿತ್ತುಹಾಕಿದರೋ, ಹಾಗೆ ಕಿತ್ತುಹಾಕುವುದರಲ್ಲಿ ಯಾವ ಪ್ರಮಾಣವನ್ನು ಅನುಸರಿಸಿದರೋ ನಮಗೆ ತಿಳಿಯದು. ನಿಘಂಟುಗಳನ್ನು ಸಂಗ್ರಹಿಸುವ ಕೆಲಸವು 17 ನೆಯ ಶತಮಾನಕ್ಕೆ ನಿಂತಿತು. ಅಲ್ಲಿಂದೀಚೆಗೆ ನಿಘಂಟುಗ್ರಂಥವು ಯಾವುದೂ ಹೊಸದಾಗಿ ಬರೆಯಲ್ಪಡಲಿಲ್ಲ.

ಭರತಖಂಡದ ಮೂಲಿಕೆಗಳು.

18 ನೆಯ ಶತಮಾನದ ಪ್ರಾರಂಭದಲ್ಲಿ ಆಯುರ್ವೇದೀಯ ವನಸ್ಪತಿಗಳನ್ನು ಮಾತ್ರವೇ ಅಲ್ಲದೆ ಇತರ ಭಾರತೀಯ ವನಸ್ಪತಿಗಳನ್ನು ಕೂಡ ವ್ಯಾಸಂಗ ಮಾಡುವುದರಲ್ಲಿ ಒಂದು ಹೊಸ ಹುರುಪು ಉಂಟಾಯಿತು. ವಿಷಯದಲ್ಲಿಯ ಅಭಿರುಚಿಯಿಂದಲೂ, ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಡೆಯಿಸಲು ಔಷಧಗಳು ಸಾಲದೆ ಬಂದದ್ದರಿಂದಲೂ ಈಸ್ಟ್ ಇಂಡಿಯಾ ಕಂಪನಿಯ ಮತ್ತು ಆ ಮೇಲೆ ಇಂಡಿಯಾ ಸರ್ಕಾರದ ಡಾಕ್ಟರುಗಳು ಮೂಲಿಕೆಗಳನ್ನು ಸಂಗ್ರಹಿಸಲು ಪ್ರಯತ್ನಪಟ್ಟರು. ಬಹುದಿವಸಗಳಿಂದಲೂ ಅಭ್ಯಾಸವಾಗಿದ್ದ ಯೂರೋಪಿನ ಔಷಧಿಗಳಿಗೆ ಬದಲಾಗಿ ಅಂಥಾ ಗುಣಕಾರಿಗಳಾದ ಭಾರತ ವನಸ್ಪತಿಗಳನ್ನುಪಯೋಗಿಸಬೇಕೆಂಬ ಆಶೆಯು ಅವರಲ್ಲಿ ತಲೆದೋರಿತು. ಅವರು ಮಾಡಿದ ಸಂಗ್ರಹವು ಅತಿ ವಿಸ್ತಾರವಾದುದು. ಆದರೆ ಈ ನಿಘಂಟುಗಳನ್ನು ಅವರು ಮುಟ್ಟಲೇ ಇಲ್ಲ. ಅವರು ಸಂಗ್ರಹಿಸಿದುದೆಲ್ಲಾ ಅಂಗಡಿಗಳಿಂದ, ಅಡವಿಗಳಿಂದ, ಕಾಡುಜನರಿಂದ ಮತ್ತು ವ್ಯವಸಾಯಗಾರದಿಂದ. ಈ ಯೂರೋಪಿನವರ ಮಾರ್ಗವನ್ನು ಅನುಸರಿಸಿ ಅಲ್ಲಲ್ಲಿ ಕೆಲವು ಭಾರತೀಯರು ಕೂಡ ವನಸ್ಪತಿಗಳ ಸಂಗ್ರಹಗಳನ್ನು ಬರೆದರು. ಈ ಕಾಲದಲ್ಲಿ ಅಲ್ಲಲ್ಲಿ ದೊರೆಯುವ ವನಸ್ಪತಿಗಳ ಸಣ್ಣ ಸಣ್ಣ ನಿಘಂಟುಗಳುಂಟಾದವು. ಕೊಂಕಣ ಪ್ರಾಂತದಲ್ಲಿ ಮಾತ್ರವೇ ದೊರೆಯುವ ವನಸ್ಪತಿಗಳನ್ನು ಸಂಗ್ರಹಿಸಿ 'ಬಾಪಟ್' ಎಂಬಾತನಿಂದ ಬರೆಯಲ್ಪಟ್ಟ 'ವನೌಷಧಿಪ್ರಕಾಶ' ವೆಂಬ ಮರಾಟೀ ನಿಘಂಟುವೇ ಇದಕ್ಕೆ ಉದಾಹರಣೆ. ಪ್ರತಿಯೊಬ್ಬ ನಿಘಂಟುಕಾರರೂ ಹೀಗೆ ಒಂದು ಸಂಗ್ರಹವನ್ನು

ಬರೆದಿದ್ದಾರೆಯೇ ಹೊರತು, ಅವರಿಂದ ಸಂಗ್ರಹಿಸಲ್ಪಟ್ಟ ವಿಷಯದಲ್ಲಿ ಪ್ರಾಮಾಣ್ಯ ವೆಷ್ಟುಮಟ್ಟಿಗೆ ಇದೆ ಎಂಬುದನ್ನು ಯಾರೂ ತೋರಿಸಿರುವುದಿಲ್ಲ.

ಸಂಸ್ಕೃತಾಂಗ್ಲ ಪ್ರಾಕೃತ ನಿಘಂಟುಗಳು.

ಡೈಮಾಕ್ ಮತ್ತು ಆತನ ಸಹಕಾರಿಗಳೂ ಅವರ ಕಾಲದವರೆಗೂ ಸಂಗ್ರಹಿಸಬಹುದಾದಷ್ಟು ವಿಷಯವನ್ನು ಬರೆದಿಟ್ಟರು. ಅವುಗಳ ಪ್ರಾಮಾಣ್ಯವನ್ನೂ ಗುಣದೋಷಗಳನ್ನೂ ಮುಂದಿನವರು ಸಾಧಿಸುವರೆಂದು ಅವರು ನಿರೀಕ್ಷಿಸಿದ್ದರು. ಮೂಲಿಕೆಗಳನ್ನು ಸಂಗ್ರಹಿಸುವುದರಲ್ಲಿ ಅವರ ಕಾಲದಲ್ಲಿ ಉಂಟಾದ ಆವೇಶವು ಇನ್ನೂ ನಿಲ್ಲಲಿಲ್ಲ. ಆದರೆ ಅವುಗಳ ಪ್ರಾಮಾಣ್ಯಸಾಧನದಲ್ಲಿ ಪಂಡಿತರಿಗೆ ಸುತರಾಂ ಆದರವೇ ಇಲ್ಲ. ವೈದ್ಯರ ಉಪಕಾರಕ್ಕೂ ಜನರ ಉಪಯೋಗಕ್ಕೂ ಎಷ್ಟೋ ನಿಘಂಟುಗಳು ಪ್ರಸಿದ್ಧಿಪಡಿಸಲ್ಪಟ್ಟವು. ವನಸ್ಪತಿಗಳ ಪಟ್ಟಿ ದೊಡ್ಡದಾದಷ್ಟೂ ಭಾರತವನಸ್ಪತಿಗಳ ಖ್ಯಾತಿಯು ಹೆಚ್ಚುವುದೆಂಬ ಭ್ರಾಂತಿಯು ಗ್ರಂಥಕರ್ತೃಗಳಿಗಿದ್ದಂತೆ ತೋರುತ್ತದೆ. ಇಷ್ಟೇ ಹೊರ್ತು ಆ ವನಸ್ಪತಿಗಳು ಎಷ್ಟುಮಟ್ಟಿಗೆ ಗುಣಕಾರಿಗಳೆಂಬುದನ್ನು ಯೋಚನೆಯನ್ನೇ ಮಾಡಿದಂತಿಲ್ಲ. ಈ ಗ್ರಂಥಗಳೆಲ್ಲವೂ ಒಂದು ಮೂಲಗ್ರಂಥದ ಪ್ರತಿಗಳೇ. ಮೂಲಪ್ರತಿಯಲ್ಲಿನ ಹಸ್ತದೋಷಗಳೂ ಕೂಡ ಪ್ರತಿಕೃತಿಯಲ್ಲಿಯೂ ಕಂಡುಬರುತ್ತವೆ. ಸಂಸ್ಕೃತ ಗ್ರಂಥಗಳೂ, ಅವುಗಳ ಪ್ರಾಕೃತ ಪರಿವರ್ತನಗಳೂ ಕೂಡ ಆಯುರ್ವೇದ ಪರಿಭಾಷೆಯಿಂದ ಆ ವಿಷಯಗಳನ್ನೇ ಆವೃತ್ತಿಮಾಡುತ್ತಾ, ಇದರಿಂದ ಆಯುರ್ವೇದದ ಗೌರವವನ್ನು ಹೆಚ್ಚು ಮಾಡಲು ಪ್ರಯತ್ನಮಾಡಿದುವು. ನಿಘಂಟುರತ್ನಾಕರದಲ್ಲಿ ೪೨೦ ಮೂಲಿಕೆಗಳ ಹೆಸರುಗಳಿವೆ. ಬೃಹನ್ನಿಘಂಟುರತ್ನಾಕರದಲ್ಲಿ 1600 ಹೆಸರುಗಳಿವೆ. ಈ ಮಹಾಸಮ್ಮೇಳನದ ಪ್ರಾರಂಭಕರಲ್ಲೊಬ್ಬರಾದ 'ಶಂಕರದಾಜೀಶಾಸ್ತ್ರೀ ಪದೆ'ಯವರು ೨27 ಮೂಲಿಕೆಗಳನ್ನು ವರ್ಣಿಸಿಧಾರೆ. ವನಸ್ಪತಿಗಳನ್ನು ಯಾವ ದೃಷ್ಟಿಯಿಂದ ಆರಿಸಿದ್ದಾರೆನ್ನುವುದನ್ನೂ ಅದೇ ಕಾಲದಲ್ಲಿ ಬರೆದ ಇತರ ಸಂಗ್ರಹ ಗ್ರಂಥಗಳಿಗೂ ಇದಕ್ಕೂ ವ್ಯತಾಸವಿರಲು ಕಾರಣವೇನೆನ್ನುವುದನ್ನೂ ಯಾರೂ ಹೇಳುವುದಿಲ್ಲ. ಈ ಪರಸ್ಪರ ವಿಸಂವಾದ ಕಾರಣಗಳನ್ನು ವಿಮರ್ಶೆಮಾಡಿದರೆ ಭಾರತೀಯ ವನಸ್ಪತಿ ತತ್ವವನ್ನು ಪುನಃ ಶೋಧನೆಮಾಡುವ ಆವಶ್ಯಕತೆಯು ಮತ್ತಷ್ಟು ವ್ಯಕ್ತವಾಗುತ್ತದೆ. 18 ನೆಯ ಶತಮಾನದ ಪ್ರಾರಂಭದಲ್ಲಿ ಆಯುರ್ವೇದ ಚಿಕಿತ್ಸೆಯು ಕೆಳಗೆ ಬಿತ್ತು. ಜನರಿಗೆ ಆಯುರ್ವೇದದಲ್ಲಿ ಅನಾದರವು ಹೆಚ್ಚಿತು. ಕೆಲವೆಡೆಯಲ್ಲಿ ಸಲ್ಲದ ಅಪಕೀರ್ತಿಯೂ ಹೊರಿಸಲ್ಪಟ್ಟಿತು. ನಿಷ್ಫಲ

ನಾವ ಔಷಧಿಗಳನ್ನು ನಮ್ಮ ಕಪಟಮಿತ್ರರು ಆಯುರ್ವೇದ ಪುಸ್ತಕಗಳಲ್ಲಿ ಸೇರಿಸಿ ಆಯುರ್ವೇದದಲ್ಲಿ ನಂಬಿಕೆಯನ್ನು ತಪ್ಪಿಸಲು ಪ್ರಯತ್ನಮಾಡಿದರು.

ಔಷಧಿ ಪ್ರದರ್ಶನಗಳು.

ವನಸ್ಪತಿಗಳ ತತ್ವಜ್ಞಾನವನ್ನು ಹರಡುವುದಕ್ಕೂ, ಮೂಲಿಕೆಗಳನ್ನು ಸಂಗ್ರಹಿಸುವುದಕ್ಕೂ ಔಷಧಿಪ್ರದರ್ಶನಗಳು ಮತ್ತೊಂದು ಮಾರ್ಗ. ವನಸ್ಪತಿ ಶಾಸ್ತ್ರಾನುಸಾರಿಯಾದ ವರ್ಣನೆಗಳು, ಬಣ್ಣಹಾಕಿದ್ದರೂ ಸರಿ, ಇಲ್ಲದಿದ್ದರೂ ಸರಿ, ಅಂತೂ ಸ್ಫುಟವಾದ ಚಿತ್ರಗಳು, ಅದರಲ್ಲಿನ ಭೈಷಜ್ಯ ಗುಣಗಳು, ಆ ಗುಣಗಳನ್ನು ಕಂಡುಹಿಡಿದ ಬಗೆ—ಇತ್ಯಾದಿ ವಿಷಯಗಳು ವಸ್ತುಪ್ರದರ್ಶನದ ಮುಖ್ಯವಾದ ಅಂಗಗಳು. ಆದರೆ ಅಲ್ಲಲ್ಲಿ ಪ್ರದರ್ಶನಗಳಲ್ಲಿ ಈ ಮೇಲೆ ಹೇಳಿದ ಅಂಗಗಳು ಕಾಣಬರುವುದಿಲ್ಲ. ವನಸ್ಪತಿ ಶಾಸ್ತ್ರಾನುಸಾರಿಯಾದ ವರ್ಣನೆಗಳಿಲ್ಲ; ಚಿತ್ರಗಳು ಸತ್ಯಾಭಾಸ, ವನಸ್ಪತಿಗಳನ್ನು ಗುರ್ತಿಸುವ ಲಕ್ಷಣಗಳ ಸೂಚನೆಯೇ ಇಲ್ಲ, ಹೆಸರುಗಳಲ್ಲಿ ವ್ಯತ್ಯಾಸ; ಅವುಗಳ ಗುಣವಿಷಯದಲ್ಲಿ 'ಆಪ್ತವಾಕ್ಯ'ವನ್ನು ಬಿಟ್ಟು ಬೇರೆ ಪ್ರಮಾಣವಿಲ್ಲ. ಈ ರೀತಿಯಾಗಿ ಕಾಣಬರುತ್ತವೆ. ನಾನು ನೋಡಿದ ಕೆಲವು ಪ್ರದರ್ಶನಗಳಲ್ಲಿ ಯಾವುದನ್ನು ಅವಶ್ಯಕವಾಗಿ ಬಿಡಬೇಕೋ ಅವುಗಳನ್ನೇ ಒಟ್ಟುಗೂಡಿಸಿಟ್ಟದ್ದರು. ಇಂಥ ಪ್ರದರ್ಶನಗಳಿಂದ ಜ್ಞಾನಾಭಿವೃದ್ಧಿಗೆ ಅವಕಾಶವಿಲ್ಲ. ಒಂದೊಂದು ಆಯುರ್ವೇದ ಪಾಠಶಾಲೆಯಲ್ಲಿಯೂ ಮೂಲಿಕಾಶಾಲೆಯೊಂದಿರಬೇಕು. ಆ ಮೂಲಿಕೆಗಳ ಚಿತ್ರಗಳನ್ನು ಬರೆದು, ಆ ಚಿತ್ರಗಳ ಕೆಳಗೆ ಆ ಮೂಲಿಕೆಗಳು ಸಿಕ್ಕುವ ಸ್ಥಳ, ಅವುಗಳ ಗುಣಗಳು, ಯಾವ ಪ್ರಮಾಣದ ಆಧಾರದ ಮೇಲೆ ಆ ಗುಣಗಳು ಅನುಭವಕ್ಕೆ ಬಂದವೋ ಆ ಪ್ರಮಾಣಗಳು ಇವುಗಳನ್ನು ಸ್ಫುಟವಾಗಿ ಸೂಚಿಸಿದ್ದರೆ ಸ್ವತಂತ್ರವಾಗಿ ವಿಚಾರಮಾಡಲಿಚ್ಛೆಯುಳ್ಳವರು ಶೋಧನಮಾಡಲು ಅನುಕಾಶವಾಗುವುದು. ಆಯುರ್ವೇದ ವೈದ್ಯರಿಗೆ ಮೂಲಿಕೆಗಳು ತಿಳಿದಿರುವುದಿಲ್ಲವೆಂತಲ್ಲ. ಪುಸ್ತಕದಲ್ಲಿ ಆಯಾಯ ಮೂಲಿಕೆಗಳ ವಿಷಯವೇನೇನು ಇದೆಯೋ ಅದೆಲ್ಲಾ ಗೊತ್ತಿದೆ. ಆ ಹೇಳಿದ ಗುಣಗಳೆಲ್ಲಾ ವನಸ್ಪತಿಗಳಲ್ಲಿದೆಯೇ? ವ್ಯತ್ಯಾಸವುಂಟೆ? ಅನುಭವದಿಂದ ಕಂಡ ಹೊಸ ವಿಷಯಗಳ್ಯಾವವು? ಎಂಬುದೇ ನಾವು ವಿಚಾರಮಾಡಬೇಕಾಗಿರುವ ಅಂಶಗಳು.

ಪರೀಕ್ಷಣೀಯಔಷಧಿಸಂಖ್ಯಾ.

ಈ ಕಳೆದ ಒಂದುನೂರು ವರ್ಷದೊಳಗೆ ಸುಮಾರು 2000 ಮೂಲಿಕೆಗಳು ವೈದ್ಯರ ಮತ್ತು ಸಾಮಾನ್ಯಜನರ ದೃಷ್ಟಿಗೆ ಬಂದಿವೆ. ತಿಳಿದ ಮೂಲಿಕೆಗಳಲ್ಲಿಯೇ

ಹೊಸಗುಣಗಳಿವೆಯೆಂದು ಹೇಳುವುದಕ್ಕೆ ಪ್ರಾರಂಭವಾಗಿದೆ. ಒಂದೇ ಮೂಲಿಕೆಯ ಬೇರೆ ಬೇರೆ ಭಾಗಗಳಲ್ಲಿ ಹೊಸಗುಣಗಳಿವೆಯಂತೆ. ಈ ವಿಷಯವೆಲ್ಲವೂ ಆಯುರ್ವೇದದ ಹೆಸರಿನಿಂದ ಪ್ರಕಟಿತವಾಗಿವೆ. ಭರತಖಂಡದಲ್ಲಿರುವ ವನಸ್ಪತಿಗಳೆಲ್ಲವೂ ಆಯುರ್ವೇದದ್ದೇ ಎಂಬ ಭ್ರಾಂತಿ ಈವತ್ತಿಗೂ ಇದೆ. ಈ ಸಾವಿರಾರು ಮೂಲಿಕೆಗಳಲ್ಲಿ ಪ್ರತಿಯೊಂದನ್ನೂ, ಒಂದೊಂದು ಮೂಲಿಕೆಯ ಪ್ರತಿಯೊಂದು ಗುಣವನ್ನೂ ಶೋಧನೆಮಾಡುವುದು ಅತ್ಯಸಾಧ್ಯ.

ಈ ಅಪರಿಮಿತವಾದ ಸಂಖ್ಯೆಯನ್ನು ಕಡಮೆಮಾಡುವುದು ಸಾಧ್ಯ. ಏತಕ್ಕೆಂದರೆ ನನ್ನ ಅಭಿಪ್ರಾಯದಲ್ಲಿ ಒಂದು ಆಯುರ್ವೇದೀಯ ನಿಘಂಟುವೆಂದರೆ ನಿಘಂಟುಗಳಲ್ಲೆಲ್ಲಾ ಅತಿ ಚಿಕ್ಕದಾದುದಕ್ಕಿಂತಲೂ ಚಿಕ್ಕದು. ಲೋಲಂಬರಾಜನ 'ವೈದ್ಯಜೀವನದಲ್ಲಿ' ನೋಡಿರಿ. ಅವನು ಹೇಳುವ ಮೂಲಿಕೆಗಳೆಷ್ಟು? ಅವು ಎಷ್ಟು ಸಾಧಾರಣವಾದವು? ನಿಜವಾದ ಆಯುರ್ವೇದವೈದ್ಯನಿಗೆ ತಾನು ಮತ್ತು ತನ್ನ ಪಿತೃಪಿತಾಮಹರ ಅನುಭವೇ ಪ್ರಮಾಣ. ಯಾರು ಯಾವ ಹೆಸರಿನಿಂದಾದರೂ ಕರೆಯಲಿ. ಅವನಿಗೆ ಬೇಕಾದ ಮೂಲಿಕೆಗಳನ್ನು ಅವನೇ ಸಂಗ್ರಹಿಸುತ್ತಾನೆ. ಅವನ ಸಂಗ್ರಹಕ್ಕೂ ಇತರರ ನಿಘಂಟುವಿಗೂ ಭೇದವಿರಬಹುದು. ಆದರೇನು? ಅದು ಪೂರ್ತಿ ಆಯುರ್ವೇದವೇ. ಪರಂಪರೆಯಾಗಿ ಬಂದದ್ದು, ತಾನು ಸ್ವಂತ ಕಲಿತದ್ದು. ತನ್ನ ಸ್ವಂತ ಗ್ರಾಮದಲ್ಲಿ ಸುತ್ತಮುತ್ತಲೂ ದೊರೆಯುವ ವನಸ್ಪತಿಗಳೇ ಅವನ ಸಣ್ಣ ನಿಘಂಟುವಿನಲ್ಲಿರುವುದು. ಈ ಕಾರಣಗಳಿಂದ ಅವನ ಸಂಗ್ರಹವೇ ಅತ್ಯುತ್ತಮ ಸಂಗ್ರಹ. ಇಷ್ಟಕ್ಕೂ ಮೂಲಿಕೆಗಳಿಂದ ಅವನಿಗಾಗಬೇಕಾದ್ದೇನು? ಮೂಲಿಕೆಗಳು ನಿಮಿತ್ತಮಾತ್ರಕ್ಕೆ. ಅವು ಒಂದು ಆಯುಧವಿದ್ದಂತೆ. ಚಿಕಿತ್ಸೆಯಲ್ಲಿ ತಾನೇ ಮುಖ್ಯ. ವೈದ್ಯನೇ ಮುಖ್ಯ. ಈ ವಿಷಯವು. ಈ ದಿನದ ಮಧ್ಯಾಹ್ನ ಚಿಕಿತ್ಸಾಸಂಭಾಷಾ ಪರಿಷತ್ತಿನಲ್ಲಿ ಸ್ಪಷ್ಟವಾಗುವುದು.

ಆಯುರ್ವೇದ ವೈದ್ಯರು ರೋಗಚಿಕಿತ್ಸೆಯಲ್ಲಿ ತೋರಿಸಿದ ಆಶ್ಚರ್ಯಕರವಾದ ಗುಣಗಳನ್ನು ಕೇಳಿ, ಭರತಖಂಡವು ದಿವ್ಯವಾದ ಔಷಧಗಳಿಗೆ ತವರುಮನೆಯೆಂಬ ಭಾವನೆಯು ಪ್ರಪಂಚವೆಲ್ಲಾ ಹರಡಿತು. ಲೋಕೋಪಕಾರವನ್ನು ಮಾಡುವ ಉದ್ದೇಶದಿಂದ ವಿಷಯವು ಎಲ್ಲಾ ಕಡೆಗಳಿಂದಲೂ ಸಂಗ್ರಹಿಸಲ್ಪಟ್ಟಿತು. ಪರೀಕ್ಷೆ ಮಾಡುವಲ್ಲಿ ಬಣ್ಣವು ವ್ಯಕ್ತವಾಯಿತು. ಹೇಳಿದ ಗುಣಗಳೊಂದೂ ಮೂಲಿಕೆಗಳಲ್ಲಿ ಕಂಡುಬರಲಿಲ್ಲ. ಆ ವಿಷಯಗಳಲ್ಲೋ ಒಂದಕ್ಕೊಂದು ಸಂಬಂಧವಿಲ್ಲ. ಕೆಲಸಕ್ಕೆ ಬಾರದವರು ಬರೆದಿಟ್ಟ ಸಂಗ್ರಹ. ಒಂದು ವಿಷಯವೂ ಸವಿಸ್ತಾರವಾಗಿಲ್ಲ. ಒಂದು

ಪುಸ್ತಕದಿಂದ ಪ್ರತಿಮಾಡುವಲ್ಲಿ ಅನೇಕ ಹಸ್ತಾದಿದೋಷಗಳು. ಇವೆಲ್ಲವನ್ನು ನೋಡಿ, ಆಯುರ್ವೇದವೆಂದರೆ ಮುಖವನ್ನು ಆ ಕಡೆ ತಿರುಗಿಸುತ್ತಾ 'ಆಯುರ್ವೇದದಲ್ಲಿ ಏನೂಇಲ್ಲ' ಎಂದು ಅನ್ಯಾಯವಾಗಿ ಅವಿಮರ್ಶಾಪೂರ್ವಕವಾದ ಅಪಕಥೆಯು ಹರಡಿತು. ಆಯುರ್ವೇದ ಚಿಕಿತ್ಸೆಯೆಂದರೆ ನಂಬಿಕೆಯೇ ಹೋಯಿತು. ಶಾಸ್ತ್ರಕ್ಕೆ ಮುಖ್ಯ ಫಲ ಚಿಕಿತ್ಸೆ. ಚಿಕಿತ್ಸೆಯಲ್ಲಿ ನಂಬಿಕೆಯಿಲ್ಲದ ಮೇಲೆ ಶಾಸ್ತ್ರದಲ್ಲಿಯೂ ನಂಬಿಕೆಹೋಯಿತು.

'ಆಯುರ್ವೇದ ವನಸ್ಪತಿಗಳ ಪರೀಕ್ಷಾಕಾಲವು ಈಗ ಒದಗಿದೆ; ಇದರ ಯೋಗ್ಯತೆಯನ್ನು ಪ್ರಪಂಚದಲ್ಲಿ ಸ್ಥಾಪಿಸಿದ ಹೊರತು ಆಯುರ್ವೇದವು ಪುನಃ ಬದುಕುವುದು ಅಸಾಧ್ಯವೆಂದು ನನ್ನ ಅಭಿಪ್ರಾಯವಲ್ಲ. ನನಗೆ ಬೇಕಾದ್ದು ಹೀನದೀನ ರೋಗಾರ್ತರ ಯೋಗಕ್ಷೇಮ. ಭರತಖಂಡದಲ್ಲಿ ಎಲ್ಲಿ ನೋಡಿದರೂ ಕೆಲಸಕ್ಕೆ ಬಾರದ ಔಷಧಿಗಳ ಗಲಾಟೆ ಹೆಚ್ಚಾಗಿದೆ. ನಿರ್ಣಯವಾದ ಔಷಧಿಗಳ ಸಹಾಯದಿಂದ ಚಿಕಿತ್ಸೆ ಮಾಡುವುದೇ ಅಸಾಧ್ಯವಾಗಿದೆ. ಯಾರೊಬ್ಬರಿಂದಲೂ ರೋಗಿಗಳ ಸಂಕಟವು ಏನೂ ಕಡಮೆಯಾಗಲಿಲ್ಲ. ವೈದ್ಯರ ತಲೆಯ ಮೇಲೆ ಬಹಳ ಭಾರವಿದೆ. ಆಭಾರವನ್ನು ನಿರ್ವಾಹಮಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಅಂಗಡಿಗಳಲ್ಲಿ ಮಾರಾಟಕ್ಕಿಟ್ಟಿರುವ ಮಿಥ್ಯಾಪ್ರಶಂಸೆಯ ಔಷಧಿಗಳ ಮೋಹವನ್ನು ಬಿಡಿಸಬೇಕಾದರೆ ವೈದ್ಯರಿಗಿಂತಲೂ ಇನ್ನು ಯಾರಿಗೆ ಸಾಧ್ಯ? ಇದೇ ಸಮ್ಮೇಳನದ ಪೂರ್ವ ಸಭಾಪತಿಗಳಲ್ಲೊಬ್ಬರು ಹೀಗೆ ಹೇಳಿದ್ದರು. "ನವೀನ ಶೋಧನಮಾರ್ಗದಿಂದ ದ್ರವ್ಯಗಳ ಬಾಹ್ಯಗುಣಗಳನ್ನೂ ಆಂತರಂಗಿಕ ಸ್ವಭಾವವನ್ನೂ ಕಂಡುಹಿಡಿದು ಅದರಿಂದ ಔಷಧಿಗಳ ಗುಣದೋಷಗಳನ್ನು ಕಂಡುಹಿಡಿಯುವ ಉಪಾಯವನ್ನು ಶೋಧಕರು ತೋರಿಸಿದಲ್ಲಿ ಭಾರತೀಯ ವೈದ್ಯರಿಗೆ ಬಹಳ ಉಪಕಾರವಾದೀತು. ಇಂಥ ಶೋಧನಕಾರ್ಯವನ್ನು ಕಲ್ಕತ್ತೆಯಲ್ಲಿರುವ ಶೋಧನಾಲಯದವರು ಇದುವರೆಗೂ ಮಾಡಿರುವುದಿಲ್ಲ. ಆದ್ದರಿಂದ ಅಂಥ ಶೋಧನಾಲಯಗಳಿಂದ ಉಪಯೋಗವೇನೂ ಇಲ್ಲವೆಂಬುದಾಗಿ ಹೇಳಿದ್ದರು. ಔಷಧಿ ವನಸ್ಪತಿಗಳನ್ನು ಶೋಧನೆಮಾಡಬೇಕಾದ್ದಕ್ಕಾಗಲಿ, ಅವರು ಹೇಳಿದಂತೆ ಶುದ್ಧವಾದ ಔಷಧಿಗಳನ್ನೂ ಅಶುದ್ಧ ಮಿಶ್ರಣಗಳನ್ನೂ ಪರೀಕ್ಷೆಮಾಡಬೇಕಾದ್ದಕ್ಕಾಗಲಿ, ಒಂದರಲ್ಲೊಂದು ಮಿಶ್ರವಾಗಿರೋಣದರಿಂದ ಅವುಗಳಿಗಿರುವ ಭೇದವನ್ನು ಕಂಡುಹಿಡಿಯುವುದೇ ಕಷ್ಟವಾಗಿದೆ. ಯಾವುದು ಮಿಶ್ರ, ಅಶುದ್ಧವೆಂದು ತಿಳಿದುಕೊಂಡಿಥೇವೆಯೋ ಅದೇ ಉತ್ತಮವಾದ ಚಿಕಿತ್ಸಾರ್ಹವಾದ ಔಷಧವಾಗಿ ಪರಿಣಮಿಸ

ಬಹುದು. 'ಕಕುಭ' ಮತ್ತು 'ಅರ್ಜುನ' ಗಳೇ ಇದಕ್ಕೆ ಸಾಕ್ಷಿ. ಸತ್ಯವು ಯಾವುದು ಎಂದು ತಿಳಿದುಕೊಳ್ಳಬೇಕಾದರೆ ಎರಡನ್ನೂ ಪರೀಕ್ಷೆಮಾಡಿದ ಹೊರತು ಸತ್ಯಾಸತ್ಯಗಳಿಗಿರುವ ಭೇದವು ಗೊತ್ತಾಗುವುದಿಲ್ಲ. ಈಗ ಸುಮಾರು 80 ವರ್ಷಗ ಳಿಂದಲೂ ನಮ್ಮ ಭರತಖಂಡದಲ್ಲಿಯೂ ಹೊರಗೂ ಪರಿಶೋಧನೆಗಳು ನಡೆಯು ತ್ತಿವೆ. ಅವು ಎಷ್ಟುಮಟ್ಟಿಗೆ ಫಲಕಾರಿಯಾಗಿವೆಯೆಂಬುದೂ ನಿಮಗೇ ಗೊತ್ತು. ಚಿಕಿತ್ಸಾತತ್ವ, ಭೌತಿಕತತ್ವ, ರಸಾಯನ ತತ್ವ ಮೊದಲಾದ ದೃಷ್ಟಿಗಳಿಂದ ಪೂರ್ಣ ಪರೀಕ್ಷೆ ಮಾಡಲ್ಪಟ್ಟು ನಿಶ್ಚಿತವಾದ ಫಲವುಳ್ಳವೆಂದು ಹೇಳಲಿಕ್ಕರ್ಹವಾದ ಔಷಧಿ ಗಳೆಷ್ಟು ಸಿಕ್ಕಿವೆ? ಬೆಟ್ಟುಗಳಲ್ಲೆಣಿಸಬಹುದು. ಶೋಧನಾಕಾರ್ಯವು ಇಷ್ಟು ಮಂದವಾಗಿರಲು, ಅನಾದರವಾಗಲಿ, ತಿರಸ್ಕಾರವಾಗಲಿ, ದೈವದ ದುರ್ವಿಪಾಕವಾ ಗಲಿ ಕಾರಣವಲ್ಲ. ಕಾರ್ಯದ ಮಹತ್ವವೂ ಅದರ ತೊಡಕುಗಳೂ ಶಾಸ್ತ್ರಜ್ಞರಿಗೆ ನಿರಾಶೆಯುಂಟುಮಾಡಿವೆ. ಆದ್ದರಿಂದ ಅಂಥಾ ಶಾಸ್ತ್ರಜ್ಞರನ್ನು ದೂಷಣೆ ಮಾಡು ವುದಕ್ಕೆ ಬದಲಾಗಿ ಅವರ ವಿಷಯದಲ್ಲಿ ಸಹಾನುಭೂತಿಯನ್ನು ತೋರಿಸಿ, ಉಚಿತ ವಾದ ದ್ರವ್ಯಸಹಾಯದಿಂದಲೋ, ಕಾರ್ಯಸಹಾಯದಿಂದಲೋ ಅವರಿಗೆ ಪ್ರೋತ್ಸಾಹ ಕೊಡೋಣ.

ಮಿಶ್ರವಾದ ಮಿಥ್ಯಾಷಧಗಳನ್ನು ಮಾರಿದವರಿಗೆ ರಾಜಶಾಸನದಿಂದ ದಂಡ ವನ್ನು ವಿಧಿಸುವ ಪ್ರಯತ್ನಕ್ಕಿಂತಲೂ, ಅವರ ಕಪಟದಗುಟ್ಟನ್ನು ಹೊರಹಾಕಿ ವಂಚನೆಗೆ ಅವಕಾಶವಿಲ್ಲದೇ ಮಾಡುವುದು ಸುಲಭವೆಂತ ತೋರುತ್ತದೆ. ಅಂಗಡಿ ಗಳಲ್ಲಿ ಔಷಧಗಳನ್ನು ಮಾರಬೇಕಾದ ಆವಶ್ಯಕತೆಯೇ ಇಲ್ಲ. ಈ ಟಿಂಕ್‌ಚರು (Tincture) ಈ ಎಕ್ಸಾಟ್ರಾಕ್ಟು (Extracts) ಈ ಸಿರಪ್‌ಗಳು (Syrups) ಇವುಗಳಿಗಿಂತಲೂ ಆಗಿಂದಾಗ್ಗೆ ಸಿದ್ಧವಾಗುವ ರಸಗಳು, ಕಷಾಯಗಳು ಶೀಘ್ರ ಗುಣಕಾರಿಗಳಾಗಿವೆ. ಈಚೆಗೆ ಮುಂಬಯಿಯಲ್ಲಿ ಒಂದು ಪ್ರದರ್ಶನವು ನಡೆಯಿತು: ನಮ್ಮ ದೇಶದಲ್ಲಿಯೇ ತಯಾರುಮಾಡಿದ ಅನೇಕ ಸಿದ್ಧೌಷಧಗಳ ವಿಷಯದಲ್ಲಿ ನಾನು ಅಭಿಪ್ರಾಯಕೊಡುವುದಿಲ್ಲವೆಂದು ನಿಂತೆನು. 'ಸ್ವದೇಶದ ಕಲಾಕೌಶಲ್ಯ ಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಬಹುಮಾನಗಳನ್ನೂ, ಪದಕಗಳನ್ನೂ, ಪ್ರಶಂಸಾ ಪತ್ರಿಕೆಗಳನ್ನೂ ಕೊಡಲೇಬೇಕಾಗಿದೆ. ನೀವು ನಿಮ್ಮ ಅಭಿಪ್ರಾಯವನ್ನು ಕೊಡ ದಿದ್ದರೆ, ಔಷಧಗಳ ಸೀಸೆಗಳು, ಪ್ಯಾಕಿಂಗ್ ಇವುಗಳನ್ನು ನೋಡಿಯಾದರೂ ಬಹುಮಾನಗಳನ್ನು ಕೊಡಬೇಕಾಗುತ್ತದೆ' ಎಂದು ಆ ಪ್ರದರ್ಶನಾಧಿಕಾರಿಗಳು ಹೇಳಿದರು. ನೋಡಿದಿರಾ! ಸ್ವದೇಶಿಯೆಂದರೆ ಇಲ್ಲಿಯೇ ಮಾಡಿದ ಕೆಲಸ. ಜನ ರನ್ನು ವಂಚಿಸುವ ಶಕ್ತಿ ಇವೆರಡೇ!

ಮೊದಲು ಆಯುರ್ವೇದ ವನಸ್ಪತಿಗಳನ್ನು ನಿರ್ಧರಿಸಬೇಕು. ಅವುಗಳ ಲಕ್ಷಣವನ್ನು ಸ್ಫುಟವಾಗಿ ಹೇಳಬೇಕು. ಇತರ ವನಸ್ಪತಿಗಳು ಸ್ವತ ಏವ ವ್ಯಾವೃತ್ತಿಯನ್ನು ಹೊಂದುತ್ತವೆ. ನಾವೆಲ್ಲರೂ ಸೇರಿ ಒಂದೇ ಗಟ್ಟಿ ಮನಸ್ಸುಮಾಡಿ, ಎಷ್ಟು ವನಸ್ಪತಿಗಳಿಲ್ಲದಿದ್ದರೆ ನಮ್ಮ ರೋಗಿಚಿಕಿತ್ಸೆಯು ನಡೆಯುವುದಿಲ್ಲವೋ ಅಷ್ಟುಮಾತ್ರ ವನಸ್ಪತಿಗಳನ್ನು ಇಟ್ಟುಕೊಳ್ಳೋಣ. ಈ ಸಣ್ಣ ಸಂಗ್ರಹವನ್ನು ಶೋಧಕರ ಮುಂದಿಟ್ಟು ಅವುಗಳ ಗುಣದೋಷ ವಿಷಯದಲ್ಲಿ ಅವರ ಅಭಿಪ್ರಾಯವನ್ನು ಕೇಳೋಣ. ನಿಶ್ಚಯವಾಗಿ ಫಲಕಾರಿಗಳಾದ ಇಂಥ ಪರಿಮಿತವಾದ ನಿಘಂಟು ಒಂದನ್ನು ನಾವು ಮಾಡಿದರೆ ಮುಂದಿನವರ ಕೃತಜ್ಞತೆಗೆ ಖಂಡಿತವಾಗಿಯೂ ಪಾತ್ರರಾಗುತ್ತೇವೆ. ಗುಣಕ್ಕೆ ಮರ್ಯಾದೆಯೇ ಹೊರತು ಬರೀ ಸಂಖ್ಯೆಗಲ್ಲ. ಆಯುರ್ವೇದದಲ್ಲಿ ಜನರಿಗಿರುವ ನಂಬಿಕೆಯನ್ನು ಹೆಚ್ಚಿಸಬೇಕಾದರೆ ಈ ಮಾರ್ಗದಿಂದ ಆಗುವಷ್ಟು ಕೆಲಸವು ಬರೀ ಕಮಿಟಿಗಳಿಂದಾಗಲಿ, ರಾಜಕೀಯ ಶಾಸನಗಳಿಂದಾಗಲಿ ಖಂಡಿತವಾಗಿಯೂ ಆಗುವುದಿಲ್ಲ. ನಮಗೆ ನಾವೇ ಸಹಾಯ ಮಾಡಿಕೊಳ್ಳದಿದ್ದರೆ ಇನ್ನು ಯಾರು ಮಾಡುವರು !

ಈಗಿನ ಪ್ರಶಸ್ತಿ ಪತ್ರಿಕೆಗಳನ್ನು ಬಹುಮಾನಗಳನ್ನು ಕೊಡುವ ಪದ್ಧತಿಯು ನಮ್ಮ ವನಸ್ಪತಿ ಜ್ಞಾನವನ್ನು ಪುನಃ ಶೋಧನೆಮಾಡುವುದಕ್ಕೂ ನಮ್ಮ ಶೋಧನಾಕಾರ್ಯದಲ್ಲಿ ಉಚಿತವಾದ ಕೆಲವು ಬದಲಾವಣೆಮಾಡುವುದಕ್ಕೂ ಕಾರಣವಾಗಿದೆ. ಈ ಸಮ್ಮೇಳನದಿಂದ ಬಹುಮಾನವನ್ನು ಪಡೆಯಬೇಕಾದರೆ ಯಾವ ನಿಯಮಗಳನ್ನು ಅಂಗೀಕರಿಸಬೇಕು ಎನ್ನುವುದು ಯಾರಿಗೂ ತಿಳಿಯದು. ಮಹಾಮಂಡಲದ ಈಗಿನ ಬಹುಮಾನಪದ್ಧತಿಯು ಚೆನ್ನಾಗಿಲ್ಲ. ಶೋಧನಾಕಾರ್ಯದಲ್ಲಿರುವ ಶ್ರಮವನ್ನು ಅದು ಯೋಚನೆಗೇ ತರುವುದಿಲ್ಲ. ಸಮ್ಮೇಳನದ ಕಾಲಕ್ಕೆ ಒಬ್ಬನ ಪ್ರಬಂಧವು ಸಿದ್ಧವಾಗಲಿಲ್ಲವೆಂದಾಗಲಿ, ತನ್ನ ಶೋಧನೆಗಳು ಮತ್ತೊಬ್ಬನಿಂದ ಕದಿಯಲ್ಪಡಬಹುದೆಂಬ ಭಯದಿಂದ ಇನ್ನೊಂದು ಸಮ್ಮೇಳನದವರೆಗೂ ಕಾಯಲು ಅವನಿಗೆ ಸಾಧ್ಯವಿಲ್ಲೆಂದಾಗಲಿ, ತಾನು ಕಂಡುಹಿಡಿದ ವಿಷಯಗಳು ಸಮ್ಮೇಳನದಲ್ಲಿ ಅಂಗೀಕರಿಸಲ್ಪಡಲಾರದೆಂಬ ಭಯದಿಂದ ಸಮ್ಮೇಳನಕ್ಕೆ ತರಲೇ ಇಲ್ಲವೆಂದಾಗಲಿ, ಅವನ ಪ್ರಯತ್ನಗಳು ನಿಷ್ಫಲವಾಗಬೇಕೇ? ವನಸ್ಪತಿ ಶೋಧನದ ಬೇರೆ ಬೇರೆ ಅಂಶಗಳಿಗೆ ನಾವು ಬೆಲೆ ಕೊಡಬಾರದೆ? ಶೋಧಕರು ವೈದ್ಯರಾಗಲಿ, ಇತರರಾಗಲಿ, ಭಾರತೀಯರಾಗಲಿ, ಇತರದೇಶದವರಾಗಲಿ, ಯಾರು ಮಾಡಿದಾಗ್ಯೂ ಆಯುರ್ವೇದಕ್ಕೆ ಸಂಬಂಧಪಟ್ಟ ಶೋಧನೆಗಳಿಗೆ ಸನ್ಮಾನ ಮಾಡು

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

1930.



ಶ್ರೀ|| ಲಕ್ಷ್ಮೀನರಸಿಂಹಯ್ಯನವರು, M.A.
(ಮಹಾರಾಜಾಕಾಲೇಜು, ಮೈಸೂರು.)
ಪ್ರಬಂಧಶಾಖೆಯ ಸೆಕ್ರೆಟರಿಗಳು.

ಶ್ರೀ|| ಭಿಷಗ್ರತ್ನ ಪಾ|| ವೆಂಕಟಾಚಲಪಂಡಿತರು
(S.S.R. ವೈದ್ಯಶಾಲಾ ಪ್ರೊಪ್ರೈಟರ್, ಮೈಸೂರು)
ಪ್ರಬಂಧಶಾಖೆಯ ಅಧ್ಯಕ್ಷರು.

ಶ್ರೀ|| ಆ|| ವಿ|| ವಿ. ಬಿಳಿಗಿರಯ್ಯಂಗಾರ್ಯರು,
(ಸೀನಿಯರ್ ಪಂಡಿತ್, ಗಾ|| ಆ|| ಆಸ್ಪತ್ರೆ, ಮೈಸೂರು.)
ಪ್ರಬಂಧಯೋಗ್ಯತಾನಿರ್ಧಾರಣಶಾಖಾಧ್ಯಕ್ಷರು.

ವುದು ನ್ಯಾಯವಾಗಿದೆ. ಹೆಚ್ಚು ಗಲಾಟೆಮಾಡದೆ, ಕಷ್ಟಸಹಿಷ್ಣುತೆಯಿಂದ ಶ್ರಮ ಪಡುತ್ತಾ, ಯಾವ ಪ್ರತಿಫಲವನ್ನೂ ಪಡೆಯದೆ, ಇದಕ್ಕೆ ಪ್ರತಿಯಾಗಿ ಮಿಥ್ಯಾ ನಿಂದೆಗೆ ಗುರಿಯಾಗುತ್ತಿರುವ ಸಂಶೋಧಕರನ್ನು ಮರ್ಯಾದೆ ಮಾಡಿದರೆ, ಮಹಾ ಮಂಡಲದ ಕೀರ್ತಿಯೂ ಮೂರುಲೋಕದಲ್ಲೂ ಸ್ಥಾಯಿಯಾಗಿ ನಿಲ್ಲುವುದು.

ತತ್ಕಾಲದಲ್ಲಿ ಬೇಕಾದ್ದೇನು? ಅದನ್ನು ಪೂರ್ತಿಮಾಡುವುದಕ್ಕೆ ಶೋಧಕರು ಮಾಡಬೇಕಾದ ಪ್ರಯತ್ನಗಳು ಯಾವುವು? ಅದಕ್ಕೆ ಸಾಧನಗಳು ಯಾವುವು? ಎಂಬ ವಿಷಯಗಳನ್ನು ಸವಿಸ್ತಾರವಾಗಿ ತಮ್ಮ ಮುಂದೆ ವಿಜ್ಞಾಪಿಸಿರುವೆನು. ಈ ವಿಚಾರಗಳಲ್ಲಿ ಈ ಸಮ್ಮೇಳನವು ಹೇಗೆ ಸಹಾಯಮಾಡಬಲ್ಲುದು ಎಂಬುದನ್ನೂ ಸೂಚಿಸಿದ್ದೇನೆ. ನಮ್ಮಲ್ಲಿ ಪ್ರಪಂಚವು ಇಟ್ಟಿರುವ ನಂಬಿಕೆಗೆ ಅನುರೂಪವಾದ ಕಾರ್ಯವನ್ನು ಮಾಡಲು ತಕ್ಕ ಪ್ರಯತ್ನ ಮಾಡಬೇಕೆಂದು ತಮ್ಮಲ್ಲಿ ವಿಜ್ಞಾಪಿಸಿ ನನ್ನ ಉಪನ್ಯಾಸವನ್ನು ಉಪಸಂಹರಿಸುತ್ತೇನೆ.

ಮಹನೀಯರೇ,

ಇನ್ನೊಂದು ಮಾತು. ಈ ಸಮ್ಮೇಳನದ ಪೂರ್ವ ಸಭಾಪತಿಗಳ ಅಭಿಪ್ರಾಯಭೇದಗಳನ್ನು ನಾನು ಹೇಳಿದ ಮಾತ್ರಕ್ಕೆ ಅವರಲ್ಲಿ ನನಗೆ ಗೌರವ ಕಡಮೆಯೆಂಬ ಭಾವನೆಯು ಬರಬಾರದು. ಅವರವರ ವಿದ್ಯಾಭ್ಯಾಸಕ್ರಮ, ಬುದ್ಧಿಶಕ್ತಿ, ಪ್ರತಿಭಾ ಮತ್ತು ಭಾವಗಳು ಇವುಗಳನ್ನು ಅನುಸರಿಸಿ ಅಭಿಪ್ರಾಯಗಳನ್ನು ಹೇಳಲು ಸ್ವಾತಂತ್ರ್ಯವು ಪ್ರತಿಯೊಬ್ಬರಿಗೂ ಉಂಟು. ಆ ಅಭಿಪ್ರಾಯಾನುಸಾರವಾಗಿ ಆಯುರ್ವೇದದ ಪುನರುಜ್ಜೀವನಕ್ಕೆ ಅವರವರು ಪ್ರಯತ್ನಮಾಡಬಹುದು. ಅನೇಕ ದೃಷ್ಟಿಗಳ ಸಾಮರಸ್ಯದಿಂದಲೇ ಅಭಿವೃದ್ಧಿ. ಕಲ್ಲಿಗೆ ಕಲ್ಲಿನಿಂದ ಹೊಡೆದರೇ ತಾನೇ ಬೆಂಕಿಯುಂಟಾಗುವುದು?

ಈ ಭಾವವನ್ನು ಮನಸ್ಸಿನಲ್ಲಿಟ್ಟುಕೊಂಡು, ಸಮ್ಮೇಳನಾಧ್ಯಕ್ಷರಾದ ಶ್ರೀ|| ಗಣನಾಥಸೇನರ ಭಾಷಣ, ಶ್ರೀ|| ಡಿಸೌಜಾ ಸಾಹೇಬರ ಭಾಷಣ ಮತ್ತು ಸ್ವಾಗತಮಂಡಲಾಧ್ಯಕ್ಷರ ಭಾಷಣಗಳನ್ನು ನೋಡೋಣ. ನಾವುಗಳೊಬ್ಬಬ್ಬರೂ ಸೇರಿ ಯೋಚನೆಮಾಡಿ ಮಾತನಾಡಿಕೊಂಡಿದ್ದಂತೆ ಬೇರೆ ಬೇರೆ ದೇಶದಿಂದ ಬಂದಿದ್ದಾಗ್ಯೂ ನಮ್ಮೆಲ್ಲರ ಅಭಿಪ್ರಾಯವೂ ಒಂದೇ ಆಗಿದೆ. ಇದುವರೆಗೂ ನಾವು ಕೇಳಿರುವ ಭಾಷಣಗಳಿಗೂ ಈ ಭಾಷಣಗಳಿಗೂ ಬಹಳ ವ್ಯತ್ಯಾಸವಿದೆ. ನನ್ನ ಕೆಲಸದಲ್ಲಿ ಮುಕ್ಕಾಲುಪಾಲು ಆಯಿತೆಂತಲೇ ತಿಳಿದುಕೊಂಡು ಅಧ್ಯಕ್ಷರ ಅನುಮತಿಯಂತೆ ವನಸ್ಪತಿಗಳ ಶೋಧನೆಯ ವಿಷಯವನ್ನು ಮಾತ್ರ ಪ್ರಸ್ತಾಪಿಸಿದರೆ

ಸಾಕೆಂದೂ ನಾನು ಅಚ್ಚುಹಾಕಿಸಿದ್ದ ಭಾಷಣಗಳನ್ನು ಹರಿದುಹಾಕಿ ಅವರು
ಹೇಳಿದ್ದನ್ನೇ 2-3 ನಿಮಿಷಗಳಲ್ಲಿ ಸಂಗ್ರಹಮಾಡಿ ನಿಲ್ಲೋಣವೆಂದೂ ಯೋಚ
ಮಾಡಿದ್ದೆನು.

ಆದರೆ ಮಧ್ಯಾಹ್ನದ ಭಾಷಣಗಳನ್ನು ಕೇಳುವಲ್ಲಿ ಬೆಳಿಗ್ಗೆ ಹೇಳಿದ ವಿಷ
ಗಳಿಗೂ ಮಧ್ಯಾಹ್ನದ ಮಾತುಗಳಿಗೂ ಸಂಬಂಧವೇ ಇಲ್ಲ. ಹಳೇ ಮಾತುಗಳ
ಪ್ರಾರಂಭವಾದವು. ಅಷ್ಟೇ ಸಾಲದೇ, ಉತ್ತರ ಕೊಡಬೇಕೆಂದು ಶಪಥಗಳು
ಭಾಷಣಗಳನ್ನು ಅಚ್ಚು ಹಾಕಿಸಿದರೆ ಇದೇ ಅನಾನುಕೂಲ. ಅದನ್ನು ಬದಲಾ
ಸಲು ಸಾಧ್ಯವಿಲ್ಲ. ಪೂರ್ತಿಯಾಗಿ ಹರಿಯಬೇಕು. ಅಥವಾ, ಸಂದರ್ಭ ಹೇಗೆ
ಇರಲಿ ಅದನ್ನು ಹಾಗೆಯೇ ಓದಬೇಕು. ಅನೇಕ ವಿಷಯಗಳನ್ನು ಪುನಃ ಚರ್ಚೆ
ತರಬೇಕು ಎಂಬುವ ಉದ್ದೇಶ್ಯವು ಉಪನ್ಯಾಸಕರಿಗೆ ಇದ್ದಂತೆ ಪ್ರಧಾನಪು
ಗಳು ಹೇಳಿದರು. ಸಮ್ಮೇಳನಾಧ್ಯಕ್ಷರು ಹೇಳಬೇಕಾದ ಉತ್ತರವನ್ನೆಲ್ಲಾ ಹೇ
ದ್ದಾರೆಂತ ನಾನು ತಿಳಿದುಕೊಂಡಿದ್ದುದನ್ನು ಬಿಟ್ಟು, ಅವರಭಿಪ್ರಾಯಗಳ
ಯುಕ್ತಿಗಳಿಂದಲೂ, ಸಮ್ಮತಿಗಳಿಂದಲೂ ಪುಷ್ಟೀಕರಿಸಬೇಕಾಗಿ ಬಂತು. ಇ
ರಿಂದ ನನ್ನ ಭಾಷಣವನ್ನು ಬದಲಾಯಿಸದೆ ಹಾಗೆಯೇ ಇಟ್ಟು ಸಮ್ಮೇಳನಾಧ್ಯಕ್ಷ
ಮಾತುಗಳನ್ನೇ ಪುನಃ ಸಭಿಕರ ಜ್ಞಾಪಕಕ್ಕೆ ತಂದೆನು.

ನಾನು ಹೇಳಿರುವ ಅಭಿಪ್ರಾಯಗಳಿಗಾಗಿ ನಾನು ಕ್ಷಮಾಪಣೆ ಬೇಡಲು
ಕತೆಯಿಲ್ಲ. ಯಾಕೆಂದರೆ, ಸಮ್ಮೇಳನಾಧ್ಯಕ್ಷರು ಬೇಡಿಕೊಂಡಿರುವುದೇ ಸಾ
ಅವರಿಗಾದ ಗತಿಯೇ ನನಗೂ ಆಗಲಿ.

ಡಾ|| ಕೆ. ಎಸ್. ಮಸ್ಕರ್, ಎಂ.ಎ., ಎಂ.ಡಿ., ಬಿ.ಎಸ್.ಸಿ., ಡಿ.ಪಿ.ಹೆಚ್.,
ಮತ್ತು
ಫಾದರ್ ಕಾಯಿಸ್, ಇವರುಗಳ
"ಭಾರತ ವನಸ್ಪತಿಗಳ ಗುಣದೋಷ ಪರೀಕ್ಷಾ"
ಎಂಬ ಪ್ರಥಮಪ್ರಬಂಧದ ಸಾರಾಂಶ.

ದಕ್ಷಪ್ರಜಾಪತಿಯನ್ನು ಕುರಿತು ಅಶ್ವಿನೀದೇವತೆಗಳು ಕೇಳಿದರಂತೆ— "ವನಸ್ಪತಿಗಳು ಎಲ್ಲಿಂದ ಹುಟ್ಟಿದವು? ಅವುಗಳಲ್ಲಿ ಎಷ್ಟು ಜಾತಿಗಳು? ರಸಗಳೆಷ್ಟು? ಉಪರಸಗಳೆಷ್ಟು? ಅವುಗಳ ಹೆಸರುಗಳ್ಯಾವವು? ಲಕ್ಷಣಗಳ್ಯಾವವು? ಅವುಗಳ ವರ್ಣ ಗುಣಗಳ್ಯಾವವು? ಅವುಗಳಿಗೆಲ್ಲಿ ಉಪಯೋಗ? ಯಾವ ದ್ರವ್ಯಾಂತರದೊಡನೆ ಸೇರಿಸಿದರೆ ಯಾವ ರೋಗವು ಪರಿಹಾರವಾಗುತ್ತದೆ?" ಎಂಬದಾಗಿ.

ಒಬ್ಬ ಶಾಸ್ತ್ರಜ್ಞನು ಪರಿಶೋಧನೆ ಮಾಡಲು ಹೊರಟಾಗ ಇಂಥ ನೂರಾರು ಪ್ರಶ್ನೆಗಳು ಹೊಳೆಯುತ್ತವೆ. ಈಗಿನ ಸಂಸ್ಕೃತಿಯೇ ಅಂಥಾದ್ದು. ಜನರಿಗೆ ಜ್ಞಾನಾರ್ಜನೆಯಲ್ಲಿಯೂ ವಿಮರ್ಶೆಯಲ್ಲಿಯೂ ಬಹು ಉತ್ಸಾಹ. ತತ್ವವನ್ನು ತಿಳಿಯಲು ಆಶೆ.

ಭಾರತದೇಶದ ವನಸ್ಪತಿಗಳ ಗುಣದೋಷಗಳ ಚರ್ಚೆಗೆ ನಾವಿಬ್ಬರೂ ಕೈಹಾಕಿದಂದಿನಿಂದಲೂ ಈ ಸಂದೇಹ ಪರಂಪರೆಗಳೇ ನಮ್ಮ ಹಣೆಯಬರಹವಾಗಿವೆ. ಧನಾಶಾ ಪಿಶಾಚಗ್ರಸ್ತರಾದ ಕೆಲವರನ್ನ ಬಿಟ್ಟು ಉಳಿದ ಜನರು ಸಾಮಾನ್ಯವಾಗಿ ಶಾಸ್ತ್ರತತ್ವವನ್ನು ತಿಳಿಯಲೆತ್ನಿಸುವರು. ಅಷ್ಟೆ ಅಲ್ಲ, ಪರಂಪರೆಯಾಗಿ ಬಳಕೆಯಲ್ಲಿರುವ ಔಷಧಗಳನ್ನು ಪರೀಕ್ಷೆಯಲ್ಲಿ ಅನುಪಯುಕ್ತವೆಂದು ತಿಳಿದುಬಂದರೆ ಬಿಡುವುದಕ್ಕೂ ಸಿದ್ಧರಿಧಾರೆ. ಇಂಥ ಜನರಿರುವುದರಿಂದಲೇ ನಮ್ಮ ಶ್ರಮವು ಸಾರ್ಥಕವು ಎಂದು ಖಂಡಿತವಾಗಿ ಹೇಳಬಹುದು.

'ಒಂದು ಔಷಧಿಯನ್ನು ಫಲಕಾರಿ ಎಂದು ತೋರಿಸುವುದು ರೋಗಿಜನರಿಗೆ ಎಷ್ಟು ಉಪಯೋಗವೋ ಆ ಔಷಧಿಯು ಉಪಯೋಗವಿಲ್ಲವೆಂದು ಹೇಳುವುದೂ ಕೂಡ ಅಷ್ಟೇ ಆವಶ್ಯಕವು.' ಎಂಬ ಅಭಿಪ್ರಾಯದಿಂದ ವನಸ್ಪತಿ ಗುಣದೋಷ ವಿಮರ್ಶೆಗೆ ಕೈಹಾಕಿದೆವು.

ಈ ಕಾರ್ಯವನ್ನು 1917 ನೆಯ ಇಸವಿಯಲ್ಲಿ ಪ್ರಾರಂಭಿಸಿದೆವು. ಇನ್ನೂ ಆ ಕೆಲಸವು ನಡೆಯುತ್ತಲೇ ಇದೆ. ಇದುವರೆಗೂ ಆಯಾ ಸ್ಥಳದ ವಿದ್ಯಮಾನ ಗಳನ್ನು ಅನುಸರಿಸಿ ನಮ್ಮ ಶೋಧನೆಗಳನ್ನು ನಡೆಯಿಸಿದ್ದೇವೆ. ಎಂದರೆ ಆಯಾ ಸ್ಥಳದಲ್ಲಿ ಕಂಡುಬರುವ ವ್ಯಾಧಿಗಳ ಅಥವಾ ಸಾಂಕ್ರಾಮಿಕಜಾಡ್ಯಗಳ ಪರಿಹಾರಕ್ಕೆ ತಕ್ಕಂಥ ಮೂಲಿಕೆಗಳನ್ನು ಶೋಧನೆಮಾಡುತ್ತಾ ಬಂದಿದೇವೆ. ಮತ್ತು ಆಧುನಿಕ ಶಾಸ್ತ್ರಸಮಯಾನುಸಾರವಾಗಿ ಮೂಲಿಕೆಗಳ ಗುಣದೋಷ ವಿಚಾರಮಾಡುವುದಕ್ಕೆ ಸಾಧ್ಯಾಸಾಧ್ಯವನ್ನು ನೋಡಿಕೊಂಡು ಶೋಧನೆಗಳಿಗೆ ಪ್ರಾರಂಭಮಾಡಿಧೇವೆ.

ಮೊದಲು 'ಕೃಮಿವಿನಾಶಕ' ಗಳೆಂದು (Anthelmentics) ಪ್ರಸಿದ್ಧ ವಾದ ವನಸ್ಪತಿಗಳ ಪರೀಕ್ಷೆಗೆ ತೊಡಗಿದೆವು. 1917 ನೇ ಜುಲೈಯಿಂದ 1923 ನೆಯ ಮಾರ್ಚಿಯ ವರೆಗೂ ತಿರುಚನಾಪಲ್ಲಿಯ ಜೈಲಿನಲ್ಲಿ ಈ ಪರೀಕ್ಷೆಯನ್ನು ನಡೆಸಿದೆವು. ಜೈಲಿನಲ್ಲಿ ಆಹಾರವಿಹಾರಗಳಲ್ಲಿ ನಿರ್ಬಂಧವಿದ್ದುದರಿಂದ ಕೃಮಿ ವಿನಾಶಿನಿಗಳ ಪರೀಕ್ಷೆಗೆ ಬಹಳ ಅನುಕೂಲವಿತ್ತು. ಮದರಾಸ್ ಪ್ರೆಸಿಡೆನ್ಸಿಯ ನಾನಾಭಾಗಗಳಿಂದ ಬಂದ ಸುಮಾರು 2,000 ಜನರು ನಮ್ಮ ಪರೀಕ್ಷೆಗೆ ಸಿಕ್ಕಿ ದರು. ಅವರು ಪ್ರಾಯಶಃ ರೈತರು ಮತ್ತು ಇತರ ಕೈಕೆಲಸದವರು.

ಅವರನ್ನು ಪರೀಕ್ಷಿಸುವಲ್ಲಿ, ಶೇಕಡಾ 98 ಮಂದಿಯಲ್ಲಿ 'ಕೊಕ್ಕೆಹುಳ' (Hook worm) ವೆಂಬ ಕೃಮಿಗಳಿದ್ದು ವು. ಶೇಕಡಾ 60 ಮಂದಿಗೆ 'ಗುಂಡು ಹುಳದ' (Round worm) ಕೃಮಿರೋಗವಿತ್ತು. ಶೇಕಡಾ 35 ಮಂದಿ 'ದ್ವಿಮುಖಿ' (Whip worm) ಎಂಬ ಕೃಮಿಬಾಧೆಗೆ ಸಿಕ್ಕಿದ್ದರು. ಶೇಕಡಾ 7 ಮಂದಿ 'Strong Yloides' ಎಂಬ ಕೃಮಿಗಳಿಗೂ, ಶೇಕಡಾ 79 'ಕಿಲುಬೆ ಹುಳ' (Oxyuris) ಎಂಬ ಕೃಮಿಗಳಿಗೂ ಸಿಕ್ಕಿದ್ದರು.

ನಮ್ಮ ಭರತಖಂಡದಲ್ಲಿ 36 ತರಹ 'ಆಂತ್ರಪರಪುಷ್ಟ' (Hemmi nthic) ಕೃಮಿಗಳಿವೆಯೆಂದು ವ್ಯವಸ್ಥೆಯಾಗಿದೆ. ಆದರ ಪೈಕಿ ಈ ಮೇಲೆ ಹೇಳಿದ 5 ವಿಧವಾದ ಕೃಮಿಗಳು ನಾವು ಚಿಕಿತ್ಸೆಮಾಡಿದ ಸ್ಥಳಗಳಲ್ಲಿ ಹೆಚ್ಚಾಗಿ ಕಂಡುಬಂದವು. ಸುಶ್ರುತದಲ್ಲಿ 13 ವಿಧವಾದ ಕ್ರಿಮಿಗಳು ಹೇಳಲ್ಪಟ್ಟವೆ. ಅಥ ರ್ವವೇದದಲ್ಲಿ 30 ವಿಧವಾದ 'ಪರಪುಷ್ಟಕೃಮಿಗಳು' (Intestinal parasites) ಹೇಳಲ್ಪಟ್ಟವೆ. ಆದರೆ ಚರಕಸುಶ್ರುತಗಳಲ್ಲಿ ಹೇಳಿರುವುದಕ್ಕೂ ಇದಕ್ಕೂ ತಾಳೆ ಸಿಕ್ಕುವುದಿಲ್ಲ. ಚರಕ ಮತ್ತು ಇತರಗ್ರಂಥಗಳಲ್ಲಿ 12 ವಿಧ 'ಆಂತ್ರಪರಪುಷ್ಟಕೃಮಿ ಗಳು' ಹೇಳಲ್ಪಟ್ಟವೆ. ಯಾವ ಔಷಧಿಗಳು ಆಂತ್ರ (Intestiues) ಗಳಲ್ಲಿರುವ

Acc. No. 824

ಕೃಮಿಗಳನ್ನು ಕೊಲ್ಲುತ್ತವೆಯೋ ಅಥವಾ ಹೊರಗೆ ಹೊರಡಿಸುತ್ತವೆಯೋ ಅವು ಗಳಿಗೆ 'ಕೃಮಿನಾಶಕ' (Anthelmentics) ಗಳೆಂದು ನಾವು ಕರೆದಿದ್ದೇವೆ. ಯಾವವು ಖಂಡಿತವಾಗಿ ಕೊಲ್ಲುತ್ತವೆಯೋ ಅವುಗಳಿಗೆ 'ಕೃಮಿಘ್ನ' (Vermicide) ವೆಂದು ಸಂಜ್ಞೆ. ಯಾವುವು ಕೊಲ್ಲದೆ ಹೊರಗೆ ಹೊರಡಿಸುತ್ತವೆಯೋ ಅವುಗಳಿಗೆ 'ಕೃಮಿಹಾರಕ' (Vermicibe) ಗಳೆಂದು ಸಂಜ್ಞೆ.

'ಕೃಮಿವಿನಾಶಕ' ಗಳ (Anthelmentics) ಗುಣಗಳನ್ನು ಕಂಡುಹಿಡಿಯುವುದಕ್ಕೆ ಮೂರು ಮಾರ್ಗಗಳುಂಟು. ಮೊದಲು ಪರೀಕ್ಷಾರ್ಹವಾಗಿರುವ ಔಷಧಗಳನ್ನು ಕೊಟ್ಟು ಹೊರಬೀಳುವ ಕೃಮಿಗಳನ್ನು ಎಣಿಸುವುದು. ಆ ಮೇಲೆ ವ್ಯವಸ್ಥಿತವಾದ ಔಷಧವನ್ನೇ ಕೊಟ್ಟು ಹೊರಗೆಬಂದ ಕೃಮಿಗಳಿಂದ ಒಟ್ಟು ಎಷ್ಟು ಕೃಮಿಗಳು ಆಂತ್ರಗಳಲ್ಲಿದ್ದವು. ಎಂದು ಕಂಡುಹಿಡಿದು, ಆ ಒಟ್ಟು ಸಂಖ್ಯೆಯಲ್ಲಿ ನಮ್ಮ ಪರೀಕ್ಷಾರ್ಥವಾದ ಔಷಧದಿಂದ ಹೊರಗೆಬಂದ ಕೃಮಿಗಳ ಪ್ರಮಾಣವನ್ನು ಕಂಡುಹಿಡಿಯುವುದು, ಇದು ನಮ್ಮ ಪರೀಕ್ಷಾಮಾರ್ಗ.

ಆರುತಿಂಗಳಿಗೆ ಮೇಲ್ಪಟ್ಟು ಜೈಲಿನಲ್ಲಿ ಇರಬಹುದಾದ ಕೃಮಿರೋಗಿಗಳನ್ನು ಆರಿಸಿದೆವು. ಪ್ರಯೋಗಗ್ರಂಥಗಳಲ್ಲಿ ಹೇಳಿದಂತೆ ಪರೀಕ್ಷೆಯ ಔಷಧವನ್ನು ಕೊಟ್ಟು, ಆ ಕೃಮಿಗಳನ್ನು ಹೊರಗೆ ಹೊರಡಿಸುವುದಕ್ಕೆ ಪ್ರವೃತ್ತಿಗೆ ಕೊಟ್ಟೆವು. ಒಬ್ಬೊಬ್ಬರ ಮಲಗಳನ್ನೂ ಬೇರೆ ಬೇರೆ ತಕ್ಷಣವೇ ತೊಳೆದು ಒಂದು ಅಂಗುಲಕ್ಕೆ 40 ಕಣ್ಣುಗಳಿರುವ ತಂತಿ ಜರಡಿಗಳಲ್ಲಿ ಮಲವನ್ನು ಶೋಧಿಸಿದೆವು. ಜರಡಿಯಲ್ಲಿ ಕೊನೆಗೆ ಉಳಿದ ಮಲವನ್ನು ತೆಗೆದು ಕಪ್ಪು ಬುಡಗಳುಳ್ಳ ಗಾಜಿನಪಾತ್ರೆಗಳಲ್ಲಿ ಹಾಕಿ ಹುಳುಗಳನ್ನು ಆರಿಸಿ, ಜಾತಿವಾರಾಗಿ ವಿಂಗಡಿಸಿದೆವು. ಈ ರೀತಿಯಾಗಿ ಎಲ್ಲರ ಮಲವನ್ನೂ ಔಷಧ ಕೊಟ್ಟಮೇಲೆ 5 ದಿನಗಳವರೆಗೂ ಪರೀಕ್ಷೆ ಮಾಡಿದೆವು. ಮಲವೆಲ್ಲವೂ ನಮ್ಮ ಸ್ವಾಧೀನಕ್ಕೆ ಸಿಕ್ಕುವುದಕ್ಕಾಗಿ ಬಂದಿಗಳನ್ನು ಹೊರಗೆ ಬಿಡಲೇ ಇಲ್ಲ.

ಹತ್ತುದಿವಸ ಬಿಟ್ಟುಕೊಂಡು 'ವ್ಯವಸ್ಥಿತ' (Standard Treatment) ವಾದ ಔಷಧವನ್ನು ಕೊಟ್ಟೆವು. ಮಲದಲ್ಲಿ ಪೂರ್ತಿ ಹುಳು ಕಾಣಿಸದಿರುವ ವರೆಗೂ 10 ದಿನಕ್ಕೆ ಒಂದುಸಲ ಆ ಔಷಧವನ್ನು ಕೊಡುತ್ತಾ ಬಂದೆವು. 'ಪರೀಕ್ಷಾ' ವನಸ್ಪತಿಯ ಪ್ರಯೋಗದಿಂದ ಹೊರಬಿದ್ದ ಕೃಮಿಗಳೂ, 'ವ್ಯವಸ್ಥಿತ' ವಾದ ಔಷಧಿಯ ಪ್ರಯೋಗದಿಂದ ಹೊರಬಿದ್ದ ಕೃಮಿಗಳೂ ಒಟ್ಟುಸೇರಿ ಆರೋಗಿಯ ಅಂತ್ರಗಳಲ್ಲಿದ್ದ ಕೃಮಿಗಳ ಒಟ್ಟು ಸಂಖ್ಯೆ ಎಂದು ನಿಶ್ಚಯಿಸಲ್ಪಟ್ಟಿತು.

ನಾವು ಉಪಯೋಗಿಸಿದ 'ವ್ಯವಸ್ಥಿತವಾದ ಔಷಧವು 'ತ್ರೈಮಾಲ್' (Thymol) ಎಂಬುದು. 60 ಗ್ರೇನಿನ ಪರಿಮಾಣದಲ್ಲಿ 'ಚಿಪ್ಪ' ಕೃಮಿಗಳ ರೋಗಿಗಳಿಗೆ (Hook worms) ಕೊಟ್ಟೆವು. 'ಅಯನ' (Rund worms') ಗಳ ನಾಶಕ್ಕೆ 5 ಗ್ರೈಯಿನಿನ ಪ್ರಮಾಣದಲ್ಲಿ ಸ್ಯಾಂಟೊನೈನನ್ನು ಕೊಟ್ಟೆವು. ಇತರ ವಿಧವಾದ ಕೃಮಿನಾಶನದಲ್ಲಿ ಸಮರ್ಥವಾದ ಔಷಧಿ ಇಲ್ಲದ್ದರಿಂದ ನಮ್ಮ ಪರೀಕ್ಷೆಯನ್ನು ಈ ಎರಡು ವಿಧವಾದ ಕೃಮಿ ವಿಷಯಗಳಲ್ಲಿಯೇ ಸಂಕೋಚಮಾಡಿದೆವು.

'ಪರೀಕ್ಷಾ' ಔಷಧವನ್ನು ಅಲ್ಪಪ್ರಮಾಣದಲ್ಲಿ ಪ್ರಾರಂಭಮಾಡಿ, ವಾಂತಿ, ತಲೆ ತಿರುಗೋಣ ಮೊದಲಾದ ಗುರ್ತಿನಿಂದ ಹೆಚ್ಚು ಪ್ರಮಾಣ ತಡೆಯುವುದಿಲ್ಲವೆಂದು ತಿಳಿದುಬರುವ ವರೆಗೂ ಪ್ರಮಾಣವನ್ನು ಹೆಚ್ಚುಮಾಡಿ ನಿಲ್ಲಿಸಿದೆವು. 'ಚಿಪ್ಪ' ಕೃಮಿಗಳ ಔಷಧವನ್ನು ಬರೀ ಹೊಟ್ಟೆಯಲ್ಲಿ ಬೆಳಿಗ್ಗೆ ಕೊಟ್ಟು, ಒಂದು ಸಲವಾದರೂ ಭೇದಿಯಾಗವ ವರೆಗೂ ಆಹಾರಕ್ಕೆ ಅವಕಾಶ ಕೊಡುತ್ತಿರಲಿಲ್ಲ. 'ಅಯವ' ಪೀಡಿತರಿಗೆ ಸಾಯಂಕಾಲ ಔಷಧವನ್ನೂ, ಮಾರನೆಯ ಬೆಳಿಗ್ಗೆ ವಿರೇಚನವನ್ನೂ ಕೊಟ್ಟೆವು.

ಈ ರೋಗವು ಸುಸಾಧ್ಯವಾದರೂ, ಬಹು ಜನರು ಇದರಿಂದ ಪೀಡಿತರಾಗಿರುವುದರಿಂದಲೂ, ಆ ಕೃಮಿಗಳನ್ನು ನಾಶಮಾಡಲು ಸಾಧ್ಯವಾಗಿರುವುದರಿಂದಲೂ, ಅಪಾಯವಿಲ್ಲದೆ, ನಂಬಿಕೆಗೆ ಅರ್ಹವಾಗಿ, ಸುಲಭವಾದ ಮತ್ತು ಪ್ರಯೋಗಾರ್ಹವಾಗಿಯೂ, ಅಗ್ಗವಾಗಿಯೂ ಇರುವ ಒಂದು 'ಕೃಮಿವಿನಾಶಕ' ಔಷಧಿಯನ್ನು ಕಂಡುಹಿಡಿಯಬೇಕೆಂಬುದೇ ನಮ್ಮ ಉದ್ದೇಶ್ಯ. ಮೊದಲಿಂದಲೂ ಔಷಧದ ರಾಸಾಯನಿಕಪ್ರಕೃತಿಗೂ, ಅದರ ಕೃಮಿಹನನ ಶಕ್ತಿಗೂ ಇರುವ ಸಂಬಂಧವನ್ನು ತಿಳಿದುಕೊಂಡೇ ತಕ್ಕಂಥ ಔಷಧಿಯನ್ನು ಹುಡುಕಲು ಹೊರಟೆವು. ಈ ಪರಸ್ಪರ ಸಂಬಂಧಜ್ಞಾನದಿಂದ ಕೆಲವು ಔಷಧಿಗಳಲ್ಲಿ ಇದುವರೆಗೂ ತಿಳಿಯದೆ ಅಡಗಿರುವ ಕೃಮಿನಾಶಕ ಗುಣಗಳು ನಮ್ಮ ದೃಷ್ಟಿಗೆ ಬೀಳುತ್ತವೆ.

1600 ವನಸ್ಪತಿಗಳಲ್ಲಿ 500 ವನಸ್ಪತಿಗಳು ಕೃಮಿನಾಶಕಗಳೆಂದು ಪ್ರಸಿದ್ಧವಾಗಿವೆ. ಚರಕಾದಿ ಚಿಕಿತ್ಸಾಸ್ಥಾನದಲ್ಲಿ ಹೇಳಿರುವ 56 ವನಸ್ಪತಿಗಳ ಪೈಕಿ ಅರ್ಕ, ಚಿತ್ರಕಾದಿ ಕೆಲವು ವಿಷವೃಕ್ಷಗಳನ್ನು ಬಿಟ್ಟು, ನಾವು 25 ವನಸ್ಪತಿಗಳನ್ನು ಪರೀಕ್ಷೆಮಾಡಿದೆವು. ಇದರಿಂದ ಏರ್ಪಟ್ಟ ಸಿದ್ಧಾಂತವೇನೆಂದರೆ—ಈ ಭರತಖಂಡದಲ್ಲಿ ಕೃಮಿಪರಿಹಾರಕ್ಕೋಸ್ಕರ ಉಪಯೋಗಿಸಲ್ಪಡುವ ಒಂದು ಔಷಧವೂ ನಿಜವಾಗಿ ಕೃಮಿವಿನಾಶಕವಲ್ಲ. 'ಯವಾನೀ' 'ಸುರಪರ್ಣ' ಎಂಬೆರಡೂ ಅಷ್ಟೇ

ಆದರೂ ' ಚಿಪ್ಪು,' ' ಅರಿಯವ ' ಪರಿಹಾರಕಗಳಾದ ' ಥಾಯಮೂಲ ' (Thymol) ಮತ್ತು ' ಸ್ಯಾಂಟೋನೈನ್ ' (Santonine) ಎಂಬವುಗಳು ಅವುಗಳಿಂಡ ತೆಗೆಯ ಬಹುದಾದ ಕಾರಣ ಅವುಗಳಿಂದ ಉಪಯೋಗವುಂಟು. ಸರ್ಷಪಾದಿತೈಲ, ಲವಂಗತೈಲ ಮತ್ತು ಆನಸತೈಲಗಳಲ್ಲಿ ಕೃಮಿನಾಶಕಗುಣಗಳಿವೆ ಯೆಂಬುದು ಅವು ಗಳ ರಾಸಾಯನಿಕಪ್ರಕೃತಿಗೂ ಔಷಧಿಗುಣಕ್ಕೂ ಇರುವ ಸಂಬಂಧವನ್ನು ತಿಳಿದುದ ರಿಂದ ವ್ಯಕ್ತವಾಯಿತು.

ಅತಿಸಾರ ವಿಷ್ಟಂಭಕಗಳು.

ಬೊಂಬಾಯಿಯಲ್ಲಿ ಔಷಧಿವಿಜ್ಞಾನಶಾಲೆಯು, ಸ್ಥಾಪಿಸಲ್ಪಟ್ಟ ಕೆಲವು ದಿವಸಗಳಲ್ಲಿಯೇ, ಎಷ್ಟು ಅಪಾಯವಿಲ್ಲದಿದ್ದರೂ, ಬಂದಿಗಳಮೇಲೆ ಅಂಥ ಪರೀಕ್ಷೆ ಯನ್ನು ನಡೆಸಬಾರದು ಎಂಬ ಸರ್ಕಾರದವರ ಅಪ್ಪಣೆಯನ್ನನುಸರಿಸಿ, ತಿರುಚನಾ ಪಲ್ಲಿಯ ಕೆಲಸವನ್ನು ನಿಲ್ಲಿಸಬೇಕಾಯಿತು. ಬೊಂಬಾಯಿಯಲ್ಲಿಯೇ ಇರುವ ಆಸ್ಪತ್ರೆಗಳಲ್ಲಿಯೇ ನಮ್ಮ ಚಿಕಿತ್ಸಾಕಾರ್ಯವನ್ನು ನಡೆಸಬಹುದೆಂದು ತೋರಿ, ಅತಿಸಾರ ಮತ್ತು ವಿಷಮಜ್ವರಗಳಿಗೆ ಉಪಯೋಗಿಸಲ್ಪಡುತ್ತಿದ್ದ ಔಷಧಗಳನ್ನು ಪರೀಕ್ಷೆಮಾಡತೊಡಗಿದೆವು.

ಬೊಂಬಾಯಿ ಆಧಿಪತ್ಯದಲ್ಲಿ ರಕ್ತಾತಿಸಾರಗಳಿಂದ ಸಾಯುವವರು 1000 ಜನರಲ್ಲಿ 1.4 ಮಂದಿ. ಜ್ವರ ಮತ್ತು ಶ್ವಾಸರೋಗಗಳಿಂದ ಸಾಯುವವರನ್ನು ಲೆಖ್ಖಮಾಡಿದರೆ ಇವರ ಮೂರನೆಯ ಸ್ಥಾನಕ್ಕೆ ಬರುತ್ತಾರೆ. ಸಾವಿರ ರೋಗಿ ಗಳಲ್ಲಿ ಆಸ್ಪತ್ರೆಗೆ ಬರುವವರೇ 115 ಮಂದಿ. ಅವರಲ್ಲಿ 4 ಮಂದಿಗೆ ಅತಿಸಾರ ರೋಗದ ಬಾಧೆ ಇದ್ದಂತೆ ಕಂಡುಬಂತು. ಈ ರೋಗವು ಆಷಾಡ, ಶ್ರಾವಣ, ಮತ್ತು ಭಾದ್ರಪದ ಮಾಸಗಳಲ್ಲಿ ಹೆಚ್ಚಾಗಿ ವ್ಯಾಪಿಸುತ್ತದೆ.

ಈ ಮೇಲೆ ಹೇಳಿದ ಸಂಖ್ಯೆಯಲ್ಲಿ ಅತಿಸಾರರೋಗಪೀಡಿತರೆಲ್ಲರೂ ಸೇರು ವುದಿಲ್ಲ. ಆಸ್ಪತ್ರೆಯಿಂದ ದೂರದಲ್ಲಿರುವ ಅಸಹಾಯಕರಾದ ನೂರಾರು ರೋಗಿಗ ಳನ್ನು ಬಿಟ್ಟು ವೈದ್ಯಸಹಾಯಕರಾದ ರೋಗಿಗಳ ದೃಷ್ಟಿಯಿಂದಲೇ ' ಅತಿಸಾರ ವಿಷ್ಟಂಭಕ 'ಗಳಾದ ಔಷಧಿಗಳನ್ನು ಪರೀಕ್ಷೆಮಾಡಲು ಕೈಹಾಕಿದೆವು. ಈಗ ಪ್ರಚಾ ರದಲ್ಲಿರುವ ಔಷಧಗಳಿಗಿಂತಲೂ ಉತ್ತಮವಾದ ಔಷಧವನ್ನು ಕಂಡುಹಿಡಿಯ ಬೇಕೆಂದು ನಮ್ಮ ಉದ್ದೇಶವಲ್ಲ. ಮತ್ತೇನೆಂದರೆ, ಫಲಕಾರಿಯಾಗಿಯೂ, ಸುಲಭ ವಾಗಿದೊರೆಯುವುದಾಗಿಯೂ, ಅಗ್ಗವಾಗಿ ಶ್ರಮವಿಲ್ಲದೆ ತೆಗೆದುಕೊಳ್ಳಲು ಅರ್ಹ ವಾದದ್ದಾಗಿಯೂ ಇರುವ ಒಂದು ಔಷಧವನ್ನು ಕಂಡುಹಿಡಿಯಬೇಕೆಂಬುದೇ ನಮ್ಮ ಮನೋರಥ.

ಬೊಂಬಾಯಿಯ ಎರಡು ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ಪ್ರಾರಂಭಮಾಡಿದೆವು. ವೈದ್ಯಶಾಲೆಯ ಅಧಿಕಾರಿಗಳು ನಮಗೆ ಬೇಕಾದ ಅನುಕೂಲ್ಯವನ್ನು ಒದಗಿಸಿದರು. ಅಲ್ಲಿಗೆ ಬರುವ ರೋಗಿಗಳೆಲ್ಲರೂ ಪ್ರಾಯಶಃ ಬಡವರ. ಆಸ್ಪತ್ರೆಯಲ್ಲಿ ದೊರೆಯುವ ಸುಖವಸತಿ ಮತ್ತು ಉಪಚಾರಗಳಿಂದ ರೋಗಕ್ಕೆ ಉಪಶಾಂತಿಯುಂಟೆಂಬುದೇನೋ ನಿಜ. ಆದರೆ ಈ ಕಾರಣವು ಅಲ್ಲಿರುವ ರೋಗಿಗಳೆಲ್ಲರಿಗೂ ಅನ್ವಯಿಸುವುದರಿಂದ ನಮ್ಮ ಪರೀಕ್ಷ್ಯಗಳಾದ ಔಷಧಿಗಳ ಗುಣವ್ಯವಸ್ಥೆಯಲ್ಲಿ ಅದನ್ನು ಎಣಿಸಬೇಕಾದುದಿಲ್ಲ.

ಔಷಧವನ್ನು ಕೊಡುವುದಕ್ಕೆ ಮುಂಚೆ ರೋಗಿಗಳನ್ನು ಚೆನ್ನಾಗಿ ಪರೀಕ್ಷೆ ಮಾಡಿದೆವು. ಸೂಕ್ಷ್ಮದರ್ಶಕಯಂತ್ರಗಳಿಂದಲೂ, ಸ್ಥೂಲದೃಷ್ಟಿಯಿಂದಲೂ, ಹೊಸದಾಗಿ ಬಿದ್ದಮಲಗಳಲ್ಲಿರುವ ಸೂಕ್ಷ್ಮಕ್ರಿಮಿ ಪರೀಕ್ಷೆಯಿಂದಲೂ, ರೋಗದಕಾರಣವನ್ನು ಕಂಡುಹಿಡಿದುದಲ್ಲದೆ ನಲಿಕಾಯಂತ್ರ (Sigmoidoscope) ದಿಂದ ರೋಗವಿವರವನ್ನೂ ಔಷಧಿಯನ್ನು ಕೊಟ್ಟಮೇಲೆ ಪಕ್ವಾಶಯ ಮತ್ತು ವಾಯುಗಳ ಸ್ಥಿತಿಯನ್ನೂ ಪರೀಕ್ಷೆಮಾಡಿದೆವು.

ಆಸ್ಪತ್ರೆಗೆ ಬಂದ ಅತಿಸಾರರೋಗಿಗಳಲ್ಲಿ ಬಹಳ ಭೇದವುಂಟು. ರೋಗದ ಲಕ್ಷಣ, ಪ್ರಕಾರ, ಪ್ರಾಬಲ್ಯ, ರೋಗಿಗಳ ದೇಹಶಕ್ತಿ, ಚಿಕಿತ್ಸೆಯಿಂದ ಆದಗುಣ ಈ ಯಾವವಿಷಯುದಲ್ಲಿಯೂ ಒಬ್ಬರನ್ನೊಬ್ಬರಿಗೆ ಹೋಲಿಸುವುದು ಸಾಧ್ಯವಿರಲಿಲ್ಲ. ಆದ್ದರಿಂದ 'ನಿರ್ಣೀತ' (Standrd treatment) ವಾದ ಔಷಧವನ್ನು ಕೊಟ್ಟು ಕೆಲವರನ್ನು ಮಾತ್ರ ಬೇರೆಇಟ್ಟು ಪರೀಕ್ಷೆಮಾಡಲನಾವಶ್ಯಕವಾಗಿತ್ತು, ಕೆಲವು ರೋಗಿಗಳನ್ನು ಚಿಕಿತ್ಸೆಯಿಲ್ಲದೆ ಬೇರೆ ಇಡುವುದೂ ಸಾಧ್ಯವಿರಲಿಲ್ಲ.

ಮಲದಲ್ಲಿ ರಕ್ತಾಮಗಳಿಲ್ಲದೆ ಗಟ್ಟಿಯಾಗಿ ದಿನ 1 ಕ್ಕೆ ಒಂದೆರಡು ಸಲ ಮಲವಿಸರ್ಜನೆಯಾಗುತ್ತಾ ಕಾಲಕ್ಕೆ ಹಸಿವಾದರೆ 'ಅತಿಸಾರ ರೋಗ' ಪರಿಹಾರವಾಯಿತೆಂದು ನಾವು ಸದ್ಯಕ್ಕೆ ಭಾವಿಸಿದೆವು.

ಮೊದಲು ಔಷಧವನ್ನು ಹಾಗೆಯೇ ಪುಡಿಮಾಡಿಕೊಡುತ್ತಿದ್ದೆವು. ರೋಗಿಯ ಸ್ಥಿತಿಯನ್ನನುಸರಿಸಿ ಔಷಧಪ್ರಮಾಣವನ್ನು ಹೆಚ್ಚುಮಾಡಿದೆವು. ನಮ್ಮ ಪರೀಕ್ಷೆಯ ಔಷಧವು ನಿಷ್ಫಲವೆಂದು ಕಂಡಮೇಲೆ ಆಸ್ಪತ್ರೆಯ ಮಾಮೂಲು ಚಿಕಿತ್ಸೆಯನ್ನೇ ಮಾಡಿದೆವು. ಆಸ್ಪತ್ರೆಯನ್ನು ಬಿಡುವವರೆಗೂ ರೋಗಿಗಳನ್ನು ಪರೀಕ್ಷೆಮಾಡುತ್ತಲೇ ಇದ್ದೆವು.

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ.

1930.

ಶ್ರೀ|| ಅನಂತರಾಮಯ್ಯನವರು, M.A.,
(ಮಹಾರಾಜಾ ಕಾಲೇಜು, ಮೈಸೂರು.)
ಆರೋಗ್ಯಶಾಖೆಯ ಅಧ್ಯಕ್ಷರು.



ಶ್ರೀ|| ಎನ್. ಕಸ್ತೂರಿಯವರು, M.A.,B.L.,
(ಇಂಟರ್‌ಮೀಡಿಯೇಟ್ ಕಾಲೇಜು, ಮೈಸೂರು.)
ಸಭಾ ಮತ್ತು ವಿಚಾರಣಾಶಾಖೆಯ ಅಧ್ಯಕ್ಷರು.

ಶ್ರೀ|| ಬಿ. ಎಸ್. ರಾಮಕೃಷ್ಣಯ್ಯ, ಆ|| ವಿ||
(ಸಿಟಿ ಕೋ ಆಪರೇಟಿವ್ ಬ್ಯಾಂಕ್, ಮೈಸೂರು.)
ಸಭಾ ಮತ್ತು ವಿಚಾರಣಾಶಾಖಾ ಸೆಕ್ರೆಟರಿಗಳು.

ಈ ವಿಧವಾಗಿ ಪರೀಕ್ಷೆಮಾಡಿದ್ದರಲ್ಲಿ ಈ ಕೆಳಗೆ ಹೇಳುವ ನಿರ್ಣಯವನ್ನು ಮಾಡಿದೆವು. ಅತಿಸಾರದಲ್ಲಿ ಸಪ್ತಪರ್ಣಿ (Alstorina Scholaris R. Br.) ಯಿಂದ ಉಪಯೋಗವಿಲ್ಲ. ಈಗ ಪ್ರಚಾರದಲ್ಲಿರುವ ಔಷಧಿಗಳಿಗಿಂತ ಕುಟಜದ ತೊಗಟೆಯು ಎಷ್ಟೋ ಗುಣಕಾರಿ, 'ಇಂದ್ರಜವ, ಮಂಗುಸ್ತಾನ' ಹಣ್ಣಿನ ಮೇಲಿನ ಸಿಪ್ಪೆಯು (Garcinia Mango Stana Limu) ಮತ್ತು ಮುತ್ತುಗದ ಗೋಂದು (ಪಲಾಶನಿರ್ಯಾಸ—(Butea Frandosa Rosb) ಇವುಗಳು ಅತಿಸಾರರೋಗಹಾರಿಗಳು ; ಆದರೆ ಕೃಷ್ಣಕುಟಜ ತ್ವಕ್ ಮತ್ತು ಬೀಜಗಳು (Wrightia tinctona R. Br) ಮತ್ತು ಟೊಮೆಂಟೋ ಸಜಾತಿ ತ್ವಗ್ (Wrightia tomentosa Roem and Schultes) ಅತಿಸಾರ ಬೀಜಗಳು (Wrightia tomentosa Roem and Schultes) ಅತಿಸಾರ ನಿವಾರಣೆಯಲ್ಲಿ ಫಲಕಾರಿಯಲ್ಲ.

ವಿಷಮಜ್ವರಪರಿಹಾರಕಗಳು.

(Antimalarials)

ಬೊಂಬಾಯಿ ಅಧಿಪತ್ಯದಲ್ಲಿ ಜ್ವರಗಳಿಂದ ಸಾಯುವಷ್ಟು ಜನರು ಇನ್ನು ಯಾವ ವ್ಯಾಧಿಯಿಂದಲೂ ಸಾಯುವುದಿಲ್ಲ. 1000 ಕ್ಕೆ 11 ಮಂದಿ ಜ್ವರಗಳಿಂದ ಸಾಯುವರು. ಅದರಲ್ಲಿಯೂ ವಿಷಮಜ್ವರವು (Malaria) ಎಲ್ಲಾ ಜ್ವರಗಳಿಗಿಂತಲೂ ಅತಿ ಪ್ರಬಲ. ಇದರಿಂದ 1000 ಕ್ಕೆ 3 ಮಂದಿ ಖಂಡಿತ ಸಾಯುತ್ತಾರೆ.

ಆಸ್ಪತ್ರಿಗೆ ಬರುವವರು 1000 ಕ್ಕೆ 115 ಮಂದಿ ಎಂದು ಹಿಂದೆಯೇ ಹೇಳಿದೆ. ಅದರಲ್ಲಿ 43 ಮಂದಿ ವಿಷಮಜ್ವರಗ್ರಸ್ತರು. ಈ ಸಂಖ್ಯೆಯಲ್ಲಿ ಸೇರದ ನೂರಾರು ಜ್ವರಗ್ರಸ್ತರು ಗ್ರಾಮಾಂತರಗಳಲ್ಲಿ ಅಸಹಾಯಕರಾಗಿ ನರಳುತ್ತಿದ್ದಾರೆ. ಜನರಿಗೆ (Quinine) ಕ್ವಿನಾಯಿನ್ ಎಂದರೆ ದ್ವೇಷ. ಆದ್ದರಿಂದ ಅದರ ಪ್ರತಿನಿಧಿವನಸ್ಪತಿಯನ್ನು ಕಂಡುಹಿಡಿಯಬೇಕೆನ್ನುವುದೇ ನಮ್ಮ ಮನೋರಥ.

ಚಿಕಿತ್ಸೆಪಡೆಯಲಿಚ್ಛೆಯುಳ್ಳವರೇನೋ ಬೇಕಾದಷ್ಟುಮಂದಿ ಇಧಾರೆ. ಆದರೆ ಅವರು ಆಸ್ಪತ್ರೆಯಲ್ಲಿಯೇ ವಾಸವಾಗಿದ್ದು ಚಿಕಿತ್ಸೆಪಡೆಯಬಚ್ಛಸುವುದಿಲ್ಲ. ಬೊಂಬಾಯಿ ಪಟ್ಟಣವು ವಿಷಮಜ್ವರಕ್ಕೆ ತವರುಮನೆಯಾದರೂ ನಮ್ಮ ಶೋಧನ ಕಾರ್ಯಕ್ಕೆ ಅನುಕೂಲವಿಲ್ಲ.

ನಮ್ಮ ಕೈಗೆ ಸಿಕ್ಕಿದ ಕೆಲವು ರೋಗಿಗಳಿಗೂ ಮೊದಲು ರಕ್ತಪರೀಕ್ಷೆ ಮಾಡಿಸಿ ರೋಗದ ಸ್ವಭಾವವನ್ನು ಕಂಡುಕೊಂಡು ಅನಂತರವೇ ನಮ್ಮ ಪರೀಕ್ಷಾ ಚಿಕಿತ್ಸೆಯನ್ನು ಪ್ರಾರಂಭಮಾಡಿದೆವು. ಆದರ ಫಲಿತಾಂಶವನ್ನೂ ಗುರುತಿಟ್ಟೆವು.

ಪ್ರತಿದಿನವೂ ವಿಷಮಜ್ವರಪರಪುಷ್ಟಜಂತುಗಳ (Parasite) ಸಂಖ್ಯೆಯನ್ನೂ ಜಾತಿಯನ್ನೂ ಪರೀಕ್ಷೆಮಾಡಿದೆವು. ಚಿಕಿತ್ಸೆಯು ಗುಣಕಾರಿಯಾದುದಕ್ಕೆ ಗುರ್ತ ನೆಂದರೆ, ಜ್ವರವು ನಿಂತು ಪರಪುಷ್ಟಜಂತುಗಳು ರಕ್ತದಲ್ಲಿ ಎರಡು ವಾರಗಳ ವರೆಗೂ ಕಾಣದಿರುವುದೇ.

ನಾವು ಸಪ್ತಪರ್ಣದ ತೊಗಟೆಯನ್ನೂ ಪಾರಿಜಾತಪತ್ರಗಳನ್ನೂ ಉಪ ಯೋಗಿಸಿದೆವು. ಪರೀಕ್ಷೆಯು ಇನ್ನೂ ಸಾಲದು. ಆದರೂ ಪಾರಿಜಾತಪತ್ರಗಳೇ ಮೇಲೆಂದು ತೋರುತ್ತದೆ. ಸಪ್ತಪರ್ಣವನ್ನು ಗ್ರಂಥಗಳಲ್ಲಿ ಹೊಗಳಿರುವುದೇನೋ ನಿಜ. ಆದರೆ ನಮಗೆ ನಂಬಿಕೆ ಬರಲಿಲ್ಲ.

ಮಧುಮೇಹವಿನಾಶಿನಿಗಳು.

(Antiglycoseuretics)

ಮಧುಮೇಹರೋಗವು ಧಾನ್ಯಾಹಾರಿಗಳಲ್ಲಿ ಹೆಚ್ಚು. ಅದರಲ್ಲಿಯೂ ಸ್ವಲ್ಪ ಅನುಕೂಲಸ್ಥರಾಗಿ ಅನ್ನಪಾನಗಳಿಗೆ ಕಷ್ಟಪಡದೆ ಕುಳಿತು ಕೆಲಸಮಾಡುವ ಜನ ರಲ್ಲಿ ಈ ರೋಗವು ಇನ್ನೂ ಪ್ರಚುರ. ಇದರ ಪ್ರಾಚುರ್ಯವನ್ನು ನೋಡಿ, ಆಯು ರ್ವೇದದಲ್ಲಿ ಹೇಳಿರುವ ಔಷಧಿಗಳನ್ನು ಪರೀಕ್ಷೆಮಾಡಲುದ್ಯುಕ್ತರಾದೆವು.

ಮೊದಲು ರಕ್ತದಲ್ಲಿ ಸಕ್ಕರೆಯ ಭಾಗವು ಹೆಚ್ಚಾಗಿ ಅನಂತರ ಮೂತ್ರ ದಲ್ಲಿ ಕಾಣುತ್ತದೆ. ಆದ್ದರಿಂದ ರಕ್ತದಲ್ಲಿನ ಶರ್ಕರಾಂಶದ ಹೆಚ್ಚುಕಡಮೆಯೇ ಔಷಧಿಯ ಗುಣಾವಗುಣಗಳಿಗೆ ಗುರ್ತು. ಬೊಂಬಾಯಿಯಲ್ಲಿಯೂ ಗುಜ ರಾತಿನಲ್ಲಿಯೂ ಮಧುಮೇಹರೋಗದವರು **ಮೇಷಶೃಂಗೀ** ಎಲೆಯನ್ನು ತಿನ್ನುವವಾಡಿಕೆ ಇದೆ. ಅನೇಕರು ತಮ್ಮ ತೋಟಗಳಲ್ಲಿಯೇ ಈ ಗಿಡವನ್ನು ಬೆಳೆ ಯುತ್ತಾರೆ. ಆದ್ದರಿಂದ ಈ ಮೂಲಿಕೆಯ ಗುಣಾವಗುಣಗಳನ್ನು ಪರೀಕ್ಷೆಮಾ ಡಲು ಪ್ರಯತ್ನಿಸಿದೆವು. ಸರ್ಕಾರದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪ್ರಾರಂಭಿಸಿ ದೆವು. ಆಹಾರನಿಯಮಮಾಡಿಯೂ ಯಾರಿಗೆ ರಕ್ತದಲ್ಲಿಯೂ ಮೂತ್ರದಲ್ಲಿಯೂ ಶರ್ಕರಾಂಶವು ಕಡಮೆಯಾಗಲಿಲ್ಲವೋ ಅಂಥವರನ್ನೆ ನಮ್ಮ ಪರೀಕ್ಷೆಗೆ ತೆಗೆದು ಕೊಳ್ಳೋಣವೆಂದು ಸಂಕಲ್ಪಮಾಡಿದೆವು. ಆದರೇನು! ಅಲ್ಲಿನ ರೋಗಿಗಳು ಬಡವ ರಾದರೂ ಅವಿನೀತರು. ಅನ್ನಪಾನಗಳಲ್ಲಿ ಹದ್ದುಬಸ್ತಿಗೆ ನಿಲ್ಲಲು ಒಪ್ಪಲಿಲ್ಲ. ರಕ್ತ ಪರೀಕ್ಷೆಗೂ ಮೂತ್ರಸಂಗ್ರಹಕ್ಕೂ ಅವಕಾಶವನ್ನು ಕೊಡದೇಹೋದರು. ಆದ್ದ ರಿಂದ ಪ್ರಯೋಗಶಾಲೆಯಲ್ಲಿಯೇ (Laboratory) ಪರೀಕ್ಷೆಮಾಡಿ ತೃಪ್ತರಾಗ ಬೇಕಾಯಿತು. ಮೇಷಶೃಂಗಿಪರ್ಣಗಳನ್ನು, ಬಾಯಿಮುಖಾಂತ್ರ ಉಪಯೋಗಿಸಲಿ

ಅಥವಾ ರಕ್ತದ್ವಾರಾ ಉಪಯೋಗಿಸಲಿ, ಅವು ರಕ್ತದಲ್ಲಿ ಶರ್ಕರಾಂಶವನ್ನು ಕಡಮೆಮಾಡುತ್ತವೆ. ಔಷಧಕೊಡುವುದು ಸುಲಭ. ಇವು ಜೀರ್ಣಕಾರಿ, ಬಲಕಾರಿ, ಮೂತ್ರಜನಕ, ವಿರೇಚಕ, ಆದ್ದರಿಂದ ಮಧುಮೇಹದಲ್ಲಿ ಖಂಡಿತವಾಗಿಯೂ ಗುಣಕಾರಿ. ಇದರಂತೆಯೇ ಬ್ರಾಹ್ಮೀ, ನಿಂಬ, ಪಲಾಶಪರ್ಣಗಳೂ, ಜಂಬೂಬೀಜಗಳೂ ಈ ರೋಗದಲ್ಲಿ ಗುಣಕಾರಿಗಳೇ. ಆದರೆ ಇವುಗಳನ್ನು ಇನ್ನೂ ಪರೀಕ್ಷೆಮಾಡಬೇಕಾಗಿದೆ.

ಹೃದಯೋತ್ತೇಜಕಗಳು

ಹೀಗೆ ಮಧುಮೇಹ ಚಿಕಿತ್ಸೆಯೇ ವಿಫಲವಾಗಲು, ಹೃದ್ರೋಗ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಸುತರಾಂ ಅವಕಾಶವಿಲ್ಲ ವೆನ್ನುವುದು ಸ್ಫುಟವೇ ಆದ್ದರಿಂದ ನಮ್ಮ ಪರೀಕ್ಷೆಗಳನ್ನು ಕರುಗಳ ಮೇಲೆಯೇ ಮಾಡಬೇಕಾಗಿ ಬಂತು.

'ಟರ್ಮಿನೆಲಿಯಾ' ಎಂಬ ವರ್ಗಕ್ಕೆಸೇರಿದ 'ಅರ್ಜುನ' ಮತ್ತು 'ಕಕುಭ' ಎಂಬ ಎರಡು ಮೂಲಿಕೆಗಳನ್ನು ಒಂದನ್ನು ಮತ್ತೊಂದನ್ನಾಗಿ ಜನರು ತಿಳಿದಿದಾರೆಂದು ನಮ್ಮ ದೃಷ್ಟಿಗೆ ಗೋಚರವಾಯಿತು. ಇದರಿಂದ ಯಾವ ಮೂಲಿಕೆಯಲ್ಲಿ ಯಾವಗುಣವಿದೆ ಎಂದು ನಿರ್ಣಯವಾಗಿ ಹೇಳುವುದೂ ಅಸಾಧ್ಯವಾಯಿತು ಒಂದರಲ್ಲಿ ಇಲ್ಲದ ಗುಣವನ್ನು ಹೇಳುವುದು ಇರುವ ಗುಣವನ್ನು ಇಲ್ಲವೆಂದ. ಹೇಳುವುದೂ ಕೂಡ ನಮ್ಮ ದೃಷ್ಟಿಗೆ ಬಿತ್ತು. ಈ ಸಂದೇಹವನ್ನು ಪರಿಹಾರ ಮಾಡುವ ಪ್ರಯತ್ನದಲ್ಲಿ ಟರ್ಮಿನೇಲಿಯಾವರ್ಗದ ಎಲ್ಲಾ ವನಸ್ಪತಿಗಳ ತೊಗಟೆಗಳನ್ನೂ ಪರೀಕ್ಷೆಮಾಡಬೇಕಾಯಿತು.

ಹೀಗೆ ಪರೀಕ್ಷೆ ಮಾಡಿದ್ದರಲ್ಲಿ ಸಹಜವಾಗಿರುವ ಟರ್ಮಿನೇಲಿಯಾವರ್ಗಕ್ಕೆ ಸೇರಿದ ವನಸ್ಪತಿಗಳ ತೊಗಟೆಗಳನ್ನು ಔಷಧಿವಿಜ್ಞಾನ ದೃಷ್ಟಿಯಿಂದ 3 ವಿಧವಾಗಿ ವಿಂಗಡಿಸಬಹುದು. (1) ಅರ್ಜುನ, ವಿಭೀತಕ, ಪಾಲಿಡಾ ಇವು ಮೂತ್ರವನ್ನು ಮಾಡಿಸುತ್ತವೆ. ಹೃದಯವನ್ನು ಉತ್ತೇಜನಮಾಡುವುದಿಲ್ಲ. (2) ಬಾಯೆಲಾಟಾ ಕೋರಿಏಸಿಯಾ, ಪಾಯರಿಫೋಲಿಯಾ ಇವು ಸುಮಾರಾಗಿ ಹೃದಯೋತ್ತೇಜಕಗಳು. (3) ತಾಟಪಾ, ಸಿಟ್ರಿನಾ. ಮಿರಿಯಾತೋಫರ್ಾ, ಆಲಿವೆರಿ, ಪಾನಿಕ್ಯುಲೇಟಾ, ಕಕ್ಕುಭ ಇವು ಮೂತ್ರವನ್ನೂ ಉಂಟುಮಾಡುತ್ತವೆ. ಹೃದಯವನ್ನು ಉತ್ತೇಜನ ಮಾಡುತ್ತವೆ.

ಟರ್ಮಿನೇಲಿಯಾವರ್ಗದ ಔಷಧಿಗಳಲ್ಲಿ ಹೃದಯೋತ್ತೇಜಕ ಗುಣವಿದೆ ಎಂದು ತಿಳಿದರೆ ಮಾತ್ರಸಾಲದು. ಸಿಟ್ರಿನಾ, ಆಲಿವೆರಿ ಎಂಬೀ ಎರಡು ಮೂಲಿಕೆ

ಗಳನ್ನು ಔಷಧವಿಜ್ಞಾನ ದೃಷ್ಟಿಯಿಂದ ಚಿಕಿತ್ಸಾಪೂರ್ವಕವಾಗಿ ಶೋಧನೆ ಮಾಡ
ತಕ್ಕಸಾಧನವಿಲ್ಲವೆಂಬುದೇ ಕೊರತೆ.

ಉಪಸಂಹಾರ.

ವನಸ್ಪತಿಗಳ ಸಂಸ್ಕೃತದ ನಾಮಗಳು ಅನೇಕ ವೇಳೆ ಬುದ್ಧಿಭ್ರಮಣೆಯನ್ನುಂಟುಮಾಡುತ್ತವೆ. ಈಗಿನ ಸಂಗ್ರಹಕಾರರು ವನಸ್ಪತಿಗಳನ್ನು ಗುರ್ತುಹಿಡಿಯುವುದರಲ್ಲಿ ಎಷ್ಟೋಕಡೆ ತಪ್ಪು ಮಾಡಿಧಾರೆ. ಆದ್ದರಿಂದ ಆಯುರ್ವೇದಗ್ರಂಥಗಳಲ್ಲಿ ಹೇಳಿರುವ ವನಸ್ಪತಿಗಳನ್ನು ತಿಳಿದುಕೊಳ್ಳುವುದೆ ಕಷ್ಟವಾಗಿದೆ. ನಾವು ವನಸ್ಪತಿ ಶಾಸ್ತ್ರರೀತ್ಯಾ ಗೊತ್ತಾದ ವನಸ್ಪತಿಗಳನ್ನು ಪರೀಕ್ಷೆಮಾಡಿ, ಸಾಧ್ಯವಾದಕಡೆ ಜನಸಾಮಾನ್ಯರು ಉಪಯೋಗಿಸುವ ಸಂಸ್ಕೃತ ಹೆಸರುಗಳನ್ನು ಕೊಟ್ಟಿಧೇವೆ.

(2) ನಮ್ಮ ಶೋಧನಗಳ ಫಲಿತಾಂಶವನ್ನು ಆಯುರ್ವೇದ ಪರಿಭಾಷೆಯಲ್ಲಿ ತಿರುಗಿಸಿ ಹೇಳುವ ಕೆಲಸವನ್ನು ಆಯುರ್ವೇದ ವೈದ್ಯರಿಗೆ ಬಿಟ್ಟಿದೇವೆ.

(3) ಔಷಧಿಗಳ ಗುಣಗಳು ಅವುಗಳಲ್ಲಿನ ಯಾವುದೋ ಒಂದು ಅವಯವವನ್ನು ಆಶ್ರಯಿಸಿರುವುದಿಲ್ಲ. ಕೆಲವು ಅವಯವಗಳು ಅಗ್ನಿತಾಪದಿಂದ ವಿಕಾರವನ್ನು ಹೊಂದುತ್ತವೆ. ಇದಕ್ಕೆ ಉದಾಹರಣೆ ಶುಷ್ಕಭಸ್ಮ. ಅಥವಾ ಅರಿಷ್ಟ ಮತ್ತು ಆಸವಗಳನ್ನು ಮಾಡಿದಾಗ ಆಗುವಂತೆ ಔಷಧಿಯೇ ವಿಕಾರವನ್ನು ಹೊಂದುತ್ತದೆ.

(4) ಆಯುರ್ವೇದದ ಚರಿತ್ರೆಯನ್ನು ನೋಡಿದರೆ ಯಾವಾಗಲೂ ಬದಲಾವಣೆಗಳು ಆಗುತ್ತಿದ್ದುವೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಬ್ರಹ್ಮನು ಬ್ರಹ್ಮಸಂಹಿತಾರೂಪವಾಗಿ ಉಪದೇಶಮಾಡಿದ ಮೇಲೆ ಆದ ಬದಲಾವಣೆಗಳನ್ನು ಭಾವಮಿಶ್ರನೇ ಸಂಗ್ರಹಿಸಿಧಾನೆ ಚಿಕಿತ್ಸೆಯ ಅನುಭವದ ಮೇಲೆ ಹಳೇ ಸಿದ್ಧಾಂತಗಳನ್ನು ಎಷ್ಟೋವೇಳೆ ಬದಲಾಯಿಸಿದ್ದೂ ಕಂಡುಬರುತ್ತದೆ. ಹೀಗೆ ಕಾಲಕಾಲಕ್ಕೆ ಬದಲಾವಣೆಯಾದ ಸಂಗತಿಯನ್ನು ಒಪ್ಪುವಲ್ಲಿ ನಾವು ಮಾಡಿರುವ ಪರಿಶೋಧನೆಗಳನ್ನೂ ನಮ್ಮ ಚಿಕಿತ್ಸಾನುಭವವನ್ನೂ ಪರಿಶೀಲಿಸಿ ಕೆಲಸಕ್ಕೆಬಾರದ ವನಸ್ಪತಿಗಳನ್ನು ತೆಗೆದುಹಾಕಿ ಹೊಸದಾದರೂ ನಿರ್ವಿವಾದವಾಗಿ ಗುಣಕಾರಿಗಳೆಂದು ಹೇಳಬಹುದಾದ ವನಸ್ಪತಿಗಳನ್ನು ಆಯುರ್ವೇದದೊಳಗೆ ಸೇರಿಸುವುದು ಉಚಿತವಾಗಿದೆ

ಈ ಪ್ರಬಂಧದಲ್ಲಿ ಹೇಳಿರುವ ವಿಷಯದಲ್ಲಿ ಆಧಾರವೂ ಈ ಕೆಳಗೆಕೊಡಲ್ಪಟ್ಟದೆ.

ಆಧಾರಗಳು (References)

ಫಾ|| ಜೆ. ಎಫ್. ಕಾಯಿಸ್ ಮತ್ತು ಡಾ|| ಕೆ. ಎಸ್. ಮಸ್ಕರ್

ಇಂಡಿಯನ್ ಜರ್ನಲ್ ಮೆಡಿಕಲ್ ರೀಸರ್ಚ್ ಮೆಮಾಯಿರ್.

ಥಿಮೋಲ್ VII. 2 ; ಓಲಿಯಂ ಅಬ್ಸಿಂತೀ VII. 3 ; ಓಲಿಯಂ ಕ್ಯಾಜುಪತಿ VII. 4 ; ಓಲಿಯಂ ಟೆರೆಬಿಂತನೇ VIII. 1 ; ಓಲಿಯಂ ಯೂಕಲಿಪ್ಟಿ VIII. 2 ; ಎಕ್ಸ್ಟ್ರಾಕ್ಟಂ ಫಿಲೀಕನ್ ಲಿಕ್ವೀಡಂ IX. 2 ; ಕೌಸೂ IX, 2 ; ಕಮಲ IX, 2 ; ಪಲ್ವೀನ್ ಅರೀಕ IX, 2 ; ಸಾಲಿಸಿಲಿಕ್ ಆಸಿಡ್ ಅಂಡ್ ಡೆರಟೀವ್ಸ್ IX, 4 ; ಪ್ರಾಫಸಿಲ್ ಫೆನೋಟ್ಸ್ X, 2 ; ಆಂಟಿ ಸೆಪ್ಟಿಕ್ಸ್ XI, 1; ಕೆಥಾರ್ಟಿಕ್ಸ್ XI, 1; ಥಿಮೋಲಿನ ಡ್ರಗ್ಸ್ XI, 2 ; ಮಿಸಲೇನಿಯಸ್ ಆಂತಲ್ಮಿಂಟಿಕ್ಸ್ XI, 2 ;

ಫಾ|| ಜೆ. ಎಫ್. ಕಾಯಿಸ್ ಮತ್ತು ಡಾ|| ಕೆ. ಎಸ್. ಮಸ್ಕರ್

ಇಂಡಿಯನ್ ಜರ್ನಲ್ ಮೆಡಿಕಲ್ ರೀಸರ್ಚ್, ಅಸ್ಕಾರಿಯೋಡ್ಸಿನ ನೋಟ್ಸು XI, 2.

ಫಾ|| ಜೆ. ಎಫ್. ಕಾಯಿಸ್ ಮತ್ತು ಡಾ|| ಕೆ. ಎಸ್. ಮಸ್ಕರ್

ಭಾರತ ವನಸ್ಪತಿಗಳ ಗುಣದೋಷಪರಿಕ್ಷಾ—ಹಲರೀನ ಆಂಟಿಡಿಸೆಂಟರೀಕ ಇಂಡಿಯನ್ ಮೆಡಿಕಲ್ ರೀಸರ್ಚ್ ಮೆಯಾಯಿರ್ ನಂ. 6.

ಡಾ|| ಕೆ. ಎಸ್. ಮಸ್ಕರ್ ಮತ್ತು ಫಾ|| ಜೆ. ಎಫ್. ಕಾಯಿಸ್

ಭಾರತ ತನಸ್ಪತಿಗಳ ಗುಣದೋಷಪರೀಕ್ಷಾ—ಜನ್ಮೆ ಮಾಸಿಲ್ವೆಸ್ಟಕ, ಇಂಡಿಯನ್ ಮೆಡಿಕಲ್ ರೀಸರ್ಚ್ ಮೆಮಾಯಿರ್, ನಂ 1.

ಫಾ|| ಜೆ. ಎಫ್. ಕಾಯಿಸ್, ಡಾ|| ಕೆ. ಎಸ್. ಮಸ್ಕರ್

ಮತ್ತು

ಡಾ|| ಎಂ. ಇಸಾಕ್ಸ್

ಜೆನಸ್ ಟೆರ್ಮಿನೇಲಿಯಾವಿನ ಕಾಮನರ್ ಇಂಡಿಯನ್ ಸೀರಿಸ್ ಮತ್ತು ಇದರ ಚಿಕ್ಕೆ ಗುಣದೋಷಪರೀಕ್ಷಾ—ಇಂಡಿಯನ್ ಮೆಡಿಕಲ್ ರೀಸರ್ಚ್ ಮೆಯಾಯಿರ್ ನಂ. 16.

ಡಾ|| ಕೆ. ಎಸ್. ಮಸ್ಕರ್ ಮತ್ತು ಫಾ|| ಜೆ. ಎಫ್. ಕಾಯಿಸ್

ಸರ್ವವಿಷಪರಿಹಾರಕಗಳಾದ ವನಸ್ಪತಿಗಳು—ಇಂಡಿಯನ್ ಮೆಡಿಕಲ್ ರೀಸರ್ಚ್ ಮೆಮಾಯಿರ್ ನಂ. 19.

ಡಾ|| ಕೆ. ಎಸ್ ಮಸ್ಕರ್ ಮತ್ತು ಫಾ|| ಜೆ. ಎಫ್. ಕಾಯಿಸ್ ರವರ

ಪ್ರಬಂಧ ೨

ಹಾವಿನ ವಿಷಪರಿಹಾರಕಗಳಾದ ವನಸ್ಪತಿಗಳು.

ನಮ್ಮಲ್ಲಿ ಪರಂಪರೆಯಾಗಿ ಎಷ್ಟೋ ಔಷಧಗಳು ರೂಢಿಗೆ ಬಂದಿವೆ. ಎಷ್ಟು ರೋಗಗಳು ನಮ್ಮ ಅನುಭವದಲ್ಲಿವೆಯೋ ಅದಕ್ಕಿಂತಲೂ ಹೆಚ್ಚಾಗಿ ಔಷಧಗಳು ಇವೆ. ಪ್ರತಿಯೊಂದೂ ಸಂಜೀವಿನಿ ಎಂಬ ಭಾವನೆ ಜನರಲ್ಲಿ ಬಂದಿದೆ. ಉದಾ ಹರಣೆಗಾಗಿ ಹೆಚ್ಚು ಹುಡಕಬೇಕಾದ್ದಿಲ್ಲ. ಹಾವಿನ ಕಡಿತದಲ್ಲಿ ವಿಷಪರಿಹಾರಕ ಗಳೆಂದು ಪ್ರಸಿದ್ಧಿಹೊಂದಿದ ಸುಮಾರು 300 ಔಷಧಗಳು ನಮ್ಮ ದೃಷ್ಟಿಗೆ ಬಂದುವು. ಇವೆಲ್ಲಾ ಕಾಕಮ್ಮನ ಕಥೆಗಳೆಂದು ತಳ್ಳುವುದೂ ನ್ಯಾಯವಿಲ್ಲವಾದ್ದ ರಿಂದ ಈ ಪ್ರತಿಯೊಂದು ಔಷಧವನ್ನೂ ಶಾಸ್ತ್ರೀಯವಾಗಿ ಪರೀಕ್ಷೆಮಾಡಿ ನೋಡಿದೆವು.

ಶಾಸ್ತ್ರೀಯವಾದ ತೀರ್ಮಾನವನ್ನು ಕೊಡಬೇಕಾದರೆ, ಒಬ್ಬ ಹಾವು ಕಚ್ಚಿ ದವನಿಗೆ ಒಂದು ಔಷಧವನ್ನು ಹಾಕಿದೆವು. ಅವನು ಬದುಕಿಕೊಂಡನೆಂಬುದಿಷ್ಟೇ ಸಾಲದು. ಆ ಔಷಧವನ್ನು ಉಪಯೋಗಿಸದಿದ್ದರೆ ಅವನು ಖಂಡಿತವಾಗಿ ಸಾಯು ತ್ತಿದ್ದನೇ ಎಂಬುದನ್ನೂ ವಿಚಾರಮಾಡಬೇಕು. ಎಂದರೆ—ಮರಣವನ್ನುಂಟು ಮಾಡುವಷ್ಟು ಸರ್ಪ ವಿಷವು ಆ ಮನುಷ್ಯನ ರಕ್ತದಲ್ಲಿ ಸೇರಿತ್ತೇ ಎಂಬುದನ್ನು ಗೊತ್ತುಮಾಡಬೇಕು. ಅನೇಕ ವೇಳೆ ಸರ್ಪಗಳು ಮರಣವನ್ನುಂಟುಮಾಡುವಷ್ಟು ವಿಷವನ್ನು ಕಡಿತದ ಗಾಯದಲ್ಲಿ ಕಾರದಿರಬಹುದು.

ಈ ಔಷಧವನ್ನು ಪರೀಕ್ಷೆಮಾಡಬೇಕಾದರೆ ಒಂದೇ ಮಾರ್ಗ. ಒಂದು ತರಹ ವಿಷದ ಹಾವಿನ ವಿಷವನ್ನು ಬೇರೆ ತೆಗೆದು ಆರೋಗ್ಯದಲ್ಲಿರುವ ಪ್ರಾಣಿಗೆ ತಕ್ಕಷ್ಟು ಬಿಟ್ಟು ಅನಂತರ ಆ ಔಷಧವನ್ನುಪಯೋಗಿಸಿ, ಗುಣವಾಗುತ್ತದೆಯೋ ಇಲ್ಲವೇ ಎಂಬುದನ್ನು ಸೂಕ್ಷ್ಮದೃಷ್ಟಿಯಿಂದ ನೋಡಬೇಕು. ಹೀಗೆ ಒಂದೇ ಸಲ ಮಾಡಿದರೆ ಸಾಲದು. ಅನೇಕ ಪ್ರಾಣಿಗಳ ಮೇಲೆ ಅನೇಕ ಸಲ ಪರೀಕ್ಷೆಮಾಡ ಬೇಕು. ಇದೇ ಕ್ರಮವನ್ನು ನಾವು ಅನುಸರಿಸಿದ್ದು.

1867 ನೇ ಇಸವಿಯಲ್ಲಿ ಫೇರರ್ ಮತ್ತು ಷಾರ್ಟ್ ಎಂಬುವರು ಈ ವಿಷ ಯದಲ್ಲಿ ಪ್ರವರ್ತಿಸಿದ ಮೊದಲು ಭರತಖಂಡದಲ್ಲಿಯೂ ಹೊರಗಡೆಯೂ ಅನೇಕರು ಕೈಹಾಕಿದರು. ವನಸ್ಪತಿಗಳ, ಖನಿಜಗಳ ಮತ್ತು ಪ್ರಾಣಿಜಗಳಾದ ಅನೇಕ ಔಷಧ ಗಳನ್ನು ಅವರು ಪರೀಕ್ಷೆಮಾಡದಂತೆ ಅವರು ಬರೆದಿಟ್ಟಿರುವ ಗ್ರಂಥಗಳಿಂದ

ಗೊತ್ತಾಗುತ್ತದೆ. ಅವರು ಪರೀಕ್ಷೆಮಾಡಿದ ವಿವರವನ್ನೆಲ್ಲಾ ಬರೆದಿಟ್ಟಿಥಾರೆ. ಸರ್ಪವಿಷಹಾರಿಗಳೆಂದು ಹೇಳಲ್ಪಡುವ ಔಷಧಗಳ ಪಟ್ಟಿಯಿಂದ ಯಾವ ರಾಸಾಯನಿಕ ಔಷಧಗಳನ್ನು ತೆಗೆದುಹಾಕಬೇಕೆಂದು ಸ್ಫುಟವಾಗಿ ಗೊತ್ತಾಗುತ್ತದೆ.

ಯಾವುವು ಖಂಡಿತವಾಗಿಯೂ ಸರ್ಪ ವಿಷಯವನ್ನು ಪರಿಹಾರ ಮಾಡುತ್ತದೆಯೋ ಅಂಥ ಔಷಧಗಳನ್ನು ಅವರು ಪರೀಕ್ಷೆಮಾಡಲಿಲ್ಲ. ನೂರಾರು ಔಷಧಗಳನ್ನು ಪರೀಕ್ಷೆಮಾಡಿ ಅನುಪಯುಕ್ತವೆಂದು ವ್ಯವಸ್ಥೆಮಾಡಿದರಂತೆ. ಆ ಔಷಧಗಳು ಯಾವುವೋ ಹೇಳುವುದಕ್ಕೆ ಸಾಧ್ಯವಲ್ಲ. 'ನಾಗಪಂಚಕ-ಶಿಖಾ' (the fruit of Phumeria aculifolia Poiret Bombay Bactriological Lab. 1920) ಮತ್ತು ಈಶ್ವರೀಪರ್ಣಗಳು (Aristolochia Indica ಎಂಬಿವೆರಡರ ವಿಷಯದಲ್ಲಿಯೂ, 'ತಂಜಾವೂರುಮಾತ್ರೆ' ಗಳೆಂಬ ಸಿದ್ಧಾಷಧವಿಷಯದಲ್ಲಿಯೂ ಅವರು ಮಾಡಿದ ಪರೀಕ್ಷಾ ವಿವರಗಳನ್ನು ಕೊಟ್ಟಿಥಾರೆ. ಮೇಲೆ ಹೇಳಿದ ಪರೀಕ್ಷೆಗಳಿಂದ ನಮಗೆ ತಿಳಿದುಬಂದ ವಿಷಯವಿಷ್ಟೇ!

ಇಂಥ ಸಂದರ್ಭವನ್ನು ನೋಡಿ, ಭಾರತವನಸ್ಪತಿಗಳ ಸರ್ಪವಿಷಪರಿಹಾರಕ ಶಕ್ತಿಯನ್ನು ಪರೀಕ್ಷೆಮಾಡಲು ನಾವು ತೊಡಗಿದೆವು. ಅಂಥಾ ಔಷಧಿಗಳು ಎಷ್ಟುಬೇಕಾದರೂ ಇರಲಿ, ಎಣಿಸುವುದಕ್ಕೆ ಅಸಾಧ್ಯವೆಂದು ಜನರು ಹೇಳುತ್ತಿದ್ದ ಮಾತನ್ನು ನಾವು ನಂಬಲಿಲ್ಲ. ನಾವು ಊಹಿಸಿದಂತೆಯೇ ಆ ಔಷಧಗಳು ಅಷ್ಟು ಹೆಚ್ಚಾಗಿಯೂ ಕಂಡುಬರಲಿಲ್ಲ.

ಪರೀಕ್ಷಾಕ್ರಮ.

1. ವನಸ್ಪತಿಗಳು.

ದೇಶಭಾಷೆಗಳಲ್ಲಿನ ಹೆಸರುಗಳು ಒಂದೊಂದು ಭಾಷೆಯಲ್ಲಿ ಒಂದೊಂದು ಆಗಿರುತ್ತವೆ. ದೇಶಭಾಷೆಗಳೂ ಅನೇಕವಾದ್ದರಿಂದ ಹೆಸರುಗಳೂ ಅನೇಕ. ಆದ್ದರಿಂದ ನಾವು ನಮ್ಮ ಶೋಧನೆಯಲ್ಲಿ ದೇಶಭಾಷೆಗಳಲ್ಲಿನ ಹೆಸರುಗಳನ್ನು ಲೆಕ್ಕಿಸಲಿಲ್ಲ.

ಆಯುರ್ವೇದ ಗ್ರಂಥಗಳಲ್ಲಿ ಹೇಳಿರುವ ಸಂಸ್ಕೃತದ ಹೆಸರುಗಳನ್ನೇ ಉಪಯೋಗಿಸಿದ್ದೇವೆ. ಎಲ್ಲಿ ವೈದ್ಯರಿಗೂ ಸಂದೇಹ ಬರಬಹುದೋ ಅಂಥ ಕಡೆಗಳಲ್ಲಿ ಪಾಶ್ಚಾತ್ಯ ವನಸ್ಪತಿಶಾಸ್ತ್ರದಲ್ಲಿ ಉಪಯೋಗಿಸಿರುವ ಹೆಸರುಗಳನ್ನು ಕೊಟ್ಟಿಥೇವೆ. ಪ್ರಾಯಶಃ ಸಂಸ್ಕೃತ ಹೆಸರುಗಳು ಹಾವುಗಳ ಅವಯವಗಳ ಹೆಸರಾಗಿರುತ್ತವೆ; ಅಥವಾ ಹಾವಿನಲ್ಲಿರುವ ಯಾವುದೋ ಒಂದು ಗುಣವನ್ನು ಹೇಳುತ್ತವೆ. ಉದಾಹರಣೆ—ಸರ್ಪಾಕ್ಷ, ಸರ್ಪಾಂಗೀ, ನಾಗಫಣಾ, ಫಣಿಜಿಹ್ವಾ, ಅತಿವಿಷ ಇತ್ಯಾದಿ.

ಸರ್ಪವಿಷ ಚಿಕಿತ್ಸೆಯಲ್ಲಿ ವನಸ್ಪತಿಯ ಯಾವ ಭಾಗವನ್ನು ಉಪಯೋ... ಬೇಕೆಂದು ಹೇಳಿದೆಯೋ ಅದನ್ನೇ ಉಪಯೋಗಿಸಿಧೇವೆ. ಹೇಳಿರುವ ಗುಣ... ಆ ಭಾಗಗಳಿಗೆ ಅನ್ವಯಿಸತಕ್ಕವು.

2. ರಸಗಳು

ನಮ್ಮ ಚಿಕಿತ್ಸೆಯಲ್ಲಿ ಬೇಕಾದ ಮೂಲಿಕೆಗಳನ್ನು ಆಗಿಂದಾಗ್ಗೆ ಹೊಸ... ಕಾಡುಗಳಿಂದಲೂ, ತೋಟಗಳಿಂದಲೂ, ಅಂಗಡಿಗಳಿಂದಲೂ ತರುತ್ತಿದ್ದೆ... ಮೂಲಿಕೆಗಳನ್ನು ನುಣ್ಣಗೆಅರದು ಸ್ವಲ್ಪ ನೀರುಸೇರಿಸಿ 2-3 ಸಲ ಹಿಂಡಿ ರಸ... ಯುತ್ತಿದ್ದೆವು. ಆ ಮೇಲೆ ಆ ರಸವನ್ನು ತೆಳ್ಳನೆಯಬಟ್ಟೆಯಲ್ಲಿ ಶೋಧಿಸು... ದ್ದೆವು. ನಿಂತಸಿಪ್ಪೆಯನ್ನು ಅರ್ಧಗಂಟೆಯವರೆಗೆ ಬಿಸಿನೀರನಲ್ಲಿ ಕುದಿಸಿ, ಬಿಸಿ... ಯಾಗಿರುವಾಗಲೆ ತೆಳ್ಳಗಿನಬಟ್ಟೆಯಲ್ಲಿ ಶೋಧಿಸಿ ತಣ್ಣಗಾದ ಮೇಲೆ ಮುಂಚೆ... ದಿದ್ದ ರಸದಲ್ಲಿ ಬೆರೆಸುತ್ತಿದ್ದೆವು.

ಮೂಲಿಕೆಗಳು ಒಣಗಿದ್ದರೆ ಅದನ್ನು ಪುಡಿಮಾಡಿ ಹಿಮಮಂಜು... (Refigerator) ಯಲ್ಲಿ ಕೆಲವು ದಿವಸವಿಟ್ಟು, ಹದಕ್ಕೆ ಬಂದಮೇಲೆ ... ಪದಾರ್ಥಕ್ಕೆ ಮಾಡುವ ಸಂಸ್ಕಾರಗಳನ್ನೆಲ್ಲಾ ಮಾಡಿ ಉಪಯೋಗಿಸುತ್ತಿದ್ದೆವು.

3. ಔಷಧಕೊಡುವಬಗೆ

ಹೊಟ್ಟೆಯೊಳಗೆ ಕೊಡಬೇಕಾದ ರಸವನ್ನು ದೇಹದ ಬಿಸಿಯಷ್ಟು ... ಮಾಡಿ ನಲಿಕೆಯಿಂದ (Stormach tube) ಸ್ವಲ್ಪಸ್ವಲ್ಪವಾಗಿ ಪಶುಗಳಿಗೆ ... ಸುತ್ತಿದ್ದೆವು. ನಲಿಕೆಯಲ್ಲಿ ಅಲ್ಪಸ್ವಲ್ಪ ಉಳಿದ ಔಷಧವನ್ನೂ ಸ್ವಲ್ಪ ನೀರು... ಹೊಟ್ಟೆಯೊಳಕ್ಕೆ ಸೇರಿಸುತ್ತಿದ್ದೆವು. ಪಶುಗಳ ತೂಕವನ್ನನುಸರಿಸಿ 5 ಕರ್ಷ... ಮೊದಲು 10 ಕರ್ಷಗಳವರೆಗೂ ಕೊಡುತ್ತಿದ್ದೆವು. (C. C). ಈ ರಸವನ್ನು ... ವಿಷವನ್ನುಕೊಟ್ಟ ತಕ್ಷಣವೇ ಕೊಡುತ್ತಿದ್ದೆವು.

(ಅ) ಅಂಜನವಾಗಿಯಾಗಲಿ, ನಸ್ಯವಾಗಿಯಾಗಲಿ, ಉಪಯೋಗಿಸಬೇ... ಕಾದ ಔಷಧವನ್ನು ತಕ್ಕಷ್ಟು ಗಟ್ಟಿಮಾಡಿ ಆರು ಅಥವಾ ಎಂಟು ಬಿಂದುಗಳನ್ನು ಗಾಜಿನ ನಾಳದಿಂದ ಕಣ್ಣಿನಲ್ಲಾಗಲಿ ಮೂಗಿನಲ್ಲಾಗಲಿ 15 ಅಥವಾ 30 ನಿಮಿ... ಷಗಳಿಗೊಂದಾವರ್ತಿ ಬಿಡುತ್ತಿದ್ದೆವು.

(ಇ) ವಿಷವನ್ನು ರಕ್ತದಲ್ಲಿ ಬಿಟ್ಟಜಾಗದಲ್ಲಿ 4 ಚದುರಂಗುಲವರೆಗೂ ಕೂದಲನ್ನು ಕತ್ತರಿಸಿ ಚೆನ್ನಾಗಿ ತೊಳೆದು ರಕ್ತಬರುವವರೆಗೂ ಕೆರೆದು ಅಲ್ಲಿ ಔಷ... ಧವನ್ನು ಹಚ್ಚುತ್ತಿದ್ದೆವು.

4. ಔಷಧಮಾನ

ಎಲ್ಲಿ ಗ್ರಂಥಗಳಲ್ಲಿ ಪರಿಮಾಣ ಹೇಳಿದೆಯೋ ಅದನ್ನೇ ಅನುಸರಿಸಿದೆವು. ಎಲ್ಲಿ ಹೇಳಲ್ಲಿಲ್ಲವೋ ಆ ಸಂದರ್ಭಗಳಲ್ಲಿ ವನಸ್ಪತಿಗಳ ಗುಣಾನುಸಾರವಾಗಿ ನಾವೇಪರಿಮಾಣವನ್ನು ಗೊತ್ತುಮಾಡಿದೆವು. ಅದರಲ್ಲಿಯೂ ಪಶುಶರೀರದ ತೂಕವನ್ನು ಅನುಸಂಸಿ ಪರಿಮಾಣವನ್ನು 'ಪ್ರಸ್ಥ' ದ ರೀತಿಯಲ್ಲಿ ಕಲ್ಪಿಸಿದೆವು. (ಈ ಉಪನ್ಯಾಸದಲ್ಲಿ ಮಾಗಧಿ ಪರಿಮಾಣವನ್ನು ಅನುಸರಿಸಿಥೇವೆ.)

5. ಪಶು.

ನಮ್ಮ ಪರೀಕ್ಷೆಗೆ ನಾಯಿಗಳನ್ನೇ ಹಿಡಿದೆವು. ಬೀದಿಯಲ್ಲಿ ಅಲೆದಾಡುತ್ತಾ ಮ್ಯುನಿಸಿಪಾಲಿಟಯವರಿಂದ ಕೊಲ್ಲಲ್ಪಡುವುದಾಗಿ ವ್ಯವಸ್ಥಿತವಾದುವುಗಳನ್ನೇ ನಾವು ತೆಗೆದುಕೊಂಡೆವು. ಪರೀಕ್ಷೆಗೆ ಮುಂಚೆ ಕೆಲವು ದಿವಸ ಅವುಗಳನ್ನು ಪಶುಶಾಲೆಯಲ್ಲಿ ಆಹಾರೋಪಚಾರಗಳಿಂದ ಸಂರಕ್ಷಣೆಮಾಡುತ್ತಿದ್ದೆವು. ಪರೀಕ್ಷಾದಿನ ಅದಕ್ಕೆ ಬೆಳಿಗ್ಗೆ ಆಹಾರ ಕೊಡದೆ ವಿಷವನ್ನು ದೇಹದೊಳಗೆ ಬಿಟ್ಟು ಔಷಧವನ್ನು ಕೊಟ್ಟ ಮೇಲೆ ನೀರನ್ನು ಕೊಡುತ್ತಿದ್ದೆವು.

ನಾವು ಪ್ರಯೋಗಕ್ಕೆ ತೆಗೆದುಕೊಂಡ ನಾಯಿಗಳು ಸರಾಸರಿ 14 ಪ್ರಸ್ಥ ತೂಗುತ್ತಿದ್ದವು. 8 ಕ್ಕೆ ಕಡಮೆಯಿಲ್ಲ. 16 ಕ್ಕೆ ಜಾಸ್ತಿಯಿಲ್ಲ.

ಒಂದು ಸಲಕ್ಕೆ 'ದರ್ವೀಕರ' (Colubrine) ವಿಷಪರೀಕ್ಷೆಗೆ ಎರಡು, 'ಮಂಡಲೀ' (Viberine) ವಿಷಪರೀಕ್ಷೆಗೆ ಎರಡು, ಒಟ್ಟು 4 ನಾಯಿಗಳನ್ನು ತೆಗೆದುಕೊಂಡೆವು.

6. ವಿಷ.

ಪ್ರಾಣಿಯು ಹಾವಿನಿಂದ ಕಚ್ಚಲ್ಪಟ್ಟು ಸಾಯಬೇಕಾದರೆ 'ದರ್ವೀಕರ' (Cobra) ಮತ್ತು 'ಮಂಡಲಿ' (Daboia) ಈ ಎರಡು ಜಾತಿಗಳೇ ಮೃತ್ಯುಕರಗಳೆಂದು ಹೆಸರುವಾಸಿಯಾದವುಗಳು. ಆದ್ದರಿಂದ ಇವುಗಳ ವಿಷಗಳನ್ನೇ ನಾಯಿಯ ತೊಡೆಯ ರಕ್ತನಾಳಗಳಲ್ಲಿ ಬಿಡುತ್ತಿದ್ದೆವು.

ಔಷಧವು ವ್ಯಾಪಿಸುವುದಕ್ಕೆ 2 ಘಂಟೆಗಳಕಾಲ ಬೇಕಾದ್ದರಿಂದ ಅಷ್ಟು ಹೊತ್ತಿನವರೆಗೂ ನಾಯಿಯು ಬದುಕಿರಲು ಅವಕಾಶಕೊಡುವಷ್ಟು ಪರಿಮಾಣದ ವಿಷವನ್ನು ಮಾತ್ರ ಪ್ರಯೋಗಿಸಿದೆವು. ನಾಯಿಯ ತೂಕವನ್ನು ಅನುಸರಿಸಿ ಪ್ರಸ್ಥ 1ಕ್ಕೆ ½ 'ಸರ್ಷಪ' ದಷ್ಟು ನಾಗರಹಾವಿನ ವಿಷವನ್ನು ಬಿಡುತ್ತಿದ್ದೆವು. ಇದರಿಂದ ಪ್ರಾಣಿಯು 2 ಗಂಟೆಯಿಂದ 5 ಗಂಟೆ ಕಾಲದೊಳಗಾಗಿ ಸಾಯುತ್ತಿತ್ತು. ಇದ

ರಿಂದ ನಾಯಿ ತೂಕ 1 ಕ್ಕೆ 'ಸರ್ಷಪ' ದಷ್ಟು ಮಂಡಲೀಹಾವಿನ ವಿಷವನ್ನು ಬಿಡುವ ಪ್ರಮಾಣ. ಇದರಿಂದ ವಿಷಪ್ರಯೋಗಮಾಡಿದ 4 ರಿಂದ 7 ಗಂಟೆಯೊಳಗಾಗಿ ನಾಯಿಯು ಪ್ರಾಣವನ್ನು ಬಿಡುತ್ತಿತ್ತು.

ಪರೀಕ್ಷಿಸಿದ ಔಷಧಿಗಳು.

ಶಾಲಿಗ್ರಾಮನು ಬೃಹನ್ನಿಘಂಟುವಿನಲ್ಲಿ ಹೇಳಿರುವ 1621 ವನಸ್ಪತಿಗಳ ಪೈಕಿ 211 ವನಸ್ಪತಿಗಳು ಸರ್ಪವಿಷದಲ್ಲಿ ವಿನಿಯುಕ್ತವಾಗಿವೆ. ಇದಕ್ಕೆ ಬಾಪಟನು ಹೇಳಿರುವ 16 ನ್ನು, ರಾಬರ್ಟ್ಸನನು ಹೇಳಿದ 14, ಇತರರು ಹೇಳಿರುವ 87 ಇಷ್ಟನ್ನೂ ಸೇರಿಸಿದರೆ ಒಟ್ಟು 314 ವನಸ್ಪತಿಗಳು ಸರ್ಪವಿಷಹಾರಿಗಳೆಂದು ಆಯುರ್ವೇದದಲ್ಲಿ ಪ್ರಸಿದ್ಧವಾದುವು. ಅವುಗಳ ಪೈಕಿ 34 ವನಸ್ಪತಿಗಳು ಪರಮದುರ್ಲಭವಾದ್ದರಿಂದ ಅವುಗಳನ್ನು ಬಿಟ್ಟರೆ ಉಳಿದ 294 ಮೂಲಿಕೆಗಳು ನಮ್ಮ ಪರೀಕ್ಷೆಗೆ ಅರ್ಹವಾದುವು.

ನಾವು ಪ್ರತ್ಯೇಕವಾಗಿ 314 ವನಸ್ಪತಿಗಳನ್ನೂ, 184 ಸಿದ್ಧೌಷಧಗಳನ್ನೂ ಉಪಯೋಗಿಸಿ ಪರೀಕ್ಷೆಮಾಡಿದೆಯಾದ್ದರಿಂದ ನಮ್ಮ ಸಂಶೋಧನವು ಸಾಂಗವಾಯಿತೆಂದು ಹೇಳುವುದರಲ್ಲಿ ಸಂಶಯವಿಲ್ಲ.

ನಿರ್ಣಯ.

ನಮ್ಮ ಭರತಖಂಡದಲ್ಲಿ ಸರ್ಪವಿಷಹಾರಿಗಳೆಂದು ಹೇಳಿರುವ ಒಂದು ಔಷಧಿಯೂ ವಿಷಪರಿಹಾರಮಾಡುವುದರಲ್ಲಿಯಾಗಲಿ, ವಿಷಪ್ರಭಾವವನ್ನು ತಗ್ಗಿಸುವುದರಲ್ಲಿಯಾಗಲಿ, ಅಲ್ಪಸ್ವಲ್ಪ ಗುಣಕೊಡುವುದರಲ್ಲಿಯಾಗಲಿ ಸರ್ವಥಾ ಉಪಯೋಗವಿಲ್ಲವೆಂದು ನಮ್ಮ ಸಿದ್ಧಾಂತವೇರ್ಪಟ್ಟಿದೆ.

ಈ ಕೆಳಗೆ ಹೇಳಿರುವ ವಿಷಯಗಳನ್ನು ಗಮನಿಸಿದರೆ ನಮ್ಮ ನಿರ್ಣಯವು ಅಸಂಭಾವಿತವೆಂದು ಕಾಣಲಾರದು.

(1) ನಮ್ಮ ಆಯುರ್ವೇದ ಗ್ರಂಥಗಳಲ್ಲಿ ಹೇಳಿರುವ ವನಸ್ಪತಿಗಳೆಲ್ಲಾ ಪ್ರಯೋಗಾರ್ಹವೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಬರಬರುತ್ತಾ ಹಿಂದಿನ ಗ್ರಂಥಕರ್ತೃಗಳು ಹೇಳಿದ ಔಷಧಗಳಲ್ಲಿ ಗುಣಕಂಡುಬಾರದ್ದರಿಂದ ಮುಂದಿನವರು ಪ್ರಯೋಗಾರ್ಹವಾದ ಔಷಧಗಳ ಸಂಖ್ಯೆಯನ್ನು ಕಡಮೆಮಾಡುತ್ತಾ ಬಂದರು. ಈ ವಿಷಯವು ಈ ಕೆಳಗಿನ ಪಟ್ಟಿಯಿಂದ ವ್ಯಕ್ತವಾಗುತ್ತದೆ.

		ಚಿಕಿತ್ಸಾಯೋಗಗಳ ಸಂಖ್ಯೆ	ವನಸ್ಪತಿಗಳ ಸಂಖ್ಯೆ
?	ಚರಕಸಂಹಿತಾ	26	107
	ಸುಶ್ರುತಸಂಹಿತಾ	19	161
c 700	ಅಷ್ಟಾಂಗಹೃದಯ	20	81
c1000	ಸಿದ್ಧಯೋಗ	12	18
1316	ಶಾರ್ಙ್ಗಧರಸಂಹಿತೆ	5	32
c1400	ರಸರತ್ನಾಕರ	16	39
c1500	ರಸಚಿಂತಾಮಣಿ	1	1
c1550	ಭಾವಪ್ರಕಾಶ	1	14
1676	ಯೋಗರತ್ನಾಕರ	20	51
1730	ಆಯುರ್ವೇದಪ್ರಕಾಶ	4	6
c1800	ವೈದ್ಯವಿನೋದ	4	15
1867	ನಿಘಂಟುರತ್ನಾಕರ	10	14
1896	ಶಾಲಿಗ್ರಾಮನಿಘಂಟು	11	21

(2) ಔಷಧಿಗೆ ಹಾವಿನ ವಿಷಪರಿಹಾರದಲ್ಲಿ ಪ್ರಸಿದ್ಧಿ ಬಂದಿರಬಹುದು. ಆದರೂ ಅದು ನಿಜವಾಗಿ ಪರಿಹಾರಕವೆಂದು ಹೇಳಲಾಗುವುದಿಲ್ಲ. ಸರ್ಪ ಕಡಿದ ಒಡನೆಯೇ, 'ಅದು ವಿಷದಹಾವೇ ಅಲ್ಲವೇ'? 'ಮರಣವನ್ನುಂಟುಮಾಡುವಷ್ಟು ವಿಷ ಕಾರಿದೆಯೇ' ಎಂಬಂಶಗಳನ್ನು ವಿಚಾರಿಸುವುದಕ್ಕೆ ವಿಧಾನವೇ ಇಲ್ಲದೆ ಯಾವುದೊ ಒಂದು ಔಷಧಿಯನ್ನು ಉಪಯೋಗಿಸಿರಬಹುದು. ಔಷಧವಿಲ್ಲದಿದ್ದರೂ ಬದುಕಬಹುದಾದ ಮನುಷ್ಯನು ಬದುಕಿದನೆಂದಮಾತ್ರಕ್ಕೆ ಆ ಔಷಧವು ನಿಜವಾದ ಔಷಧವಾದೀತೆ? ಶೋಧಕರು ತಮ್ಮ ಪರೀಕ್ಷೆಯಲ್ಲಿ ಈ ಅಂಶಗಳಿಗೆಲ್ಲಾ ದೃಷ್ಟಿಯನ್ನು ಕೊಟ್ಟು, ಸರಿಯಾದ ವಿಷಸರ್ಪದ ವಿಷವನ್ನೇ ಮರಣವನ್ನುಂಟುಮಾಡುವಷ್ಟು ಪ್ರಮಾಣದಲ್ಲಿ ರಕ್ತದಲ್ಲಿ ಬಿಟ್ಟು ಔಷಧಿಯನ್ನು ಪ್ರಯೋಗಿಸಿ ಅದು ವ್ಯರ್ಥವೆಂದು ಮಾಡಿದ ತೀರ್ಮಾನಕ್ಕೆ ಬೆಲೆಕೊಡಬೇಕೇ ಬರೀ ಪ್ರಸಿದ್ಧಿಗೆ ಬೆಲೆಕೊಡಬೇಕೇ ಎಂಬುದನ್ನು ಯೋಚನೆಮಾಡಬೇಕಾದ ಅಂಶವಾಗಿದೆ.

(3) ಸರ್ಪಗಳೆಲ್ಲವೂ ವಿಷದವೆಂದೂ, ಮರಣಜನಕವೆಂದು ಜನಪ್ರವಾದ. ಇದು ಬರೀ ಅಂಧಶ್ರದ್ಧೆಯಮಾತು. ಎಲ್ಲಾ ಸರ್ಪಗಳೂ ವಿಷದವಲ್ಲ ವಿಷದಸರ್ಪಗಳೆಲ್ಲಕ್ಕೂ ವಿಷವನ್ನು ಕಾರುವ ಸಾಧನವಿಲ್ಲದಿರಬಹುದು. ಇವೆರಡರಲ್ಲಿ ಯಾವು

ದಿಲ್ಲದಿದ್ದರೂ ಸರ್ಪದಿಂದ ಭಯವಿಲ್ಲ. ಮರಣವನ್ನುಂಟುಮಾಡುವಷ್ಟು ವಿಷವಿರಬೇಕು. ಆ ವಿಷವನ್ನು ಗಾಯದಲ್ಲಿಬಿಡುವ ಹಲ್ಲುಗಳಿರಬೇಕು. ಇವೆರಡೂ ಇದ್ದರೇನೇ ಹಾವಿನಿಂದ ಅಪಾಯ.

ಚರಕದಲ್ಲಿಯೂ, ಸುಶ್ರುತದಲ್ಲಿಯೂ, ಮಹಾಭಾರತದಲ್ಲಿಯೂ ಸರ್ಪಗಳ ಜಾತಿಗಳನ್ನು ಹೇಳಿಧಾರೆ. ಅವುಗಳ ಲಕ್ಷಣಗಳು ಸ್ಫುಟವಾಗಿ ಆ ಗ್ರಂಥಗಳಿಂದ ತಿಳಿಯುವುದಿಲ್ಲ. ವನಸ್ಪತಿ ಶಾಸ್ತ್ರರೀತಿಯಿಂದಲೂ ಅನೇಕ ಜಾತಿಗಳಿವೆಯೆಂದು ವ್ಯಕ್ತವಾಗುತ್ತವೆ. ಆ ಜಾತಿಗಳ ಪೈಕಿ (Viberidae) ಎಂಬ ಒಂದು ಜಾತಿಯಸರ್ಪವೂ, (Colubridae) ಗುಂಪಿಗೆ ಸೇರಿದ (Proterogiypha) ಎಂಬ ಸರ್ಪಜಾತಿಯೂ ವಿಷಜಾತಿಗೆ ಸೇರಿದವೆಂದು ವ್ಯವಸ್ಥಿತವಾಗಿವೆ.

ಅವುಗಳ ಹೆಸರೇನಾದರೂ ಇರಲಿ, ನಮಗೆ ಬೇಕಾದ ವಿಷಯವಿಷ್ಟೆ. ಹಾವು ಅಪಾಯಕರವಾಗಬೇಕಾದರೆ ಅದರ ಬಾಯಲ್ಲಿ ವಿಷದ ಕೋರೆ ಯಿರಬೇಕು. ಈ ದೃಷ್ಟಿಯಿಂದ ನೋಡಿದರೆ ನಮ್ಮ ಮನೆಯ ಸುತ್ತಮುತ್ತಲೂ ಕಣ್ಣಿಗೆ ಬೀಳುವ ಸರ್ಪಗಳಷ್ಟೈಕಿ ಬಹುಮಟ್ಟಿಗೆ ಅಪಾಯಕರವಾದವಲ್ಲ. ನಿಜವಾಗಿಯೂ ಮರಣವನ್ನುಂಟುಮಾಡುವ ಸರ್ಪಗಳು ಬಹಳ ಕಡಿಮೆ.

(4) ವಿಷಸರ್ಪಗಳೂ ಕೂಡ ಕಡಿದಾಗಲೆಲ್ಲಾ ಪ್ರಾಣಹೋಗುವುದೆಂಬ ನಿಶ್ಚಯವಿಲ್ಲ. ಅನೇಕವೇಳೆ ಮರಣವನ್ನುಂಟುಮಾಡುವಷ್ಟು ವಿಷವನ್ನು ಸರ್ಪವು ಕಾರದಿರಬಹುದು. ಈ ವಿಷಯವು ಸುಶ್ರುತಚರಕಗಳಲ್ಲಿಯೂ ಹೇಳಿದೆ. ಅವರ ಅಭಿಪ್ರಾಯಾನುಸಾರ ಸರ್ಪಗಳು ರೋಗಪೀಡಿತಗಳಾಗಲಿ, ಮುದಿಯಾಗಲಿ ಬಹಳ ಎಳೆಯವಾಗಲಿ, ಮುಂಗಸಿಯಿಂದ ಪೀಡಿತವಾಗಿರಲಿ, ಕೃಶವಾಗಿರಲಿ, ಭಯಪಟ್ಟಿರಲಿ, ಮಳೆಗೂ ಪ್ರವಾಹಕ್ಕೂ ಶಿಕ್ಕಿ ಬಳಲಿದುವಾಗಿರಲಿ, ಅಂಥವುಗಳಿಂದಲೂ ಮತ್ತು ಆಕಸ್ಮಾತ್ ನಮಗೆ ತಗಲಿದಕಾಲದಲ್ಲಿಯಾಗಲಿ, ವಿಷಸರ್ಪಗಳು ಅಪಾಯಕರವಾದವಲ್ಲ. ಶಿಶಿರ ಋತುವಿನಲ್ಲಿಯೂ, ಮೈಥುನಾನಂತರವೂ, ಚಳಿಗಾಳಿಗೂ ಬಿಸಿಲಿಗೂ ಸಿಕ್ಕಿ ಬಳಲಿದಾಗಲೂ, ಹಸಿವು ನೀರಡಿಕೆಯಿಂದ ಕಂದಿರುವಾಗಲೂ, ಆಯಾಸಪಟ್ಟಿರುವಾಗಲೂ, ಬಹಳ ತಿರುಗಿದಕಾಲದಲ್ಲಿಯೂ, ಆಗತಾನೇ ಎಲ್ಲಿಯೋ ವಿಷಕಾರಿದ್ದರೂ ಅಂತಹ ಹಾವು ಕಚ್ಚಿದರೆ ಬಾಧಕವಿಲ್ಲವೆಂತ ವಾಗ್ಭಟದಲ್ಲಿಯೂ ಹೇಳಿದೆ.

ವಿಷಸರ್ಪವಾದಾಗ್ಯೂ, ವಿಷದಲ್ಲಿ ಬಲವಿಲ್ಲದಿದ್ದರೂ, ವಿಷವು ಬಹಳ ಕಡಮೆಯಾಗಿದ್ದರೂ ಸರ್ಪದಿಂದ ಭಯವಿಲ್ಲವೆಂಬುದಾಗಿ ಆಯುರ್ವೇದದಲ್ಲಿಯೇ ಹೇಳಿದೆ.

೨೧ ನೆಯ ನಿಖಿಲಭಾರತಾಯುರ್ವೇದ ಮಹಾಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

1930



ಶ್ರೀ|| ೪|| ವಿ|| ಗೋಪಾಲಕೃಷ್ಣಾವಧಾನಿಗಳು,
(ಗಣೇಶ ಆಯುರ್ವೇದಿಕ್ ಫಾರ್ಮಸಿ, ಮೈಸೂರು.)

ಶ್ರೀ|| ಆ|| ವಿ|| ವೆಂಕಟೇಶಶಾಸ್ತ್ರಿಗಳು,
(ಆಯುರ್ವೇದಿಕ್ ಆಸ್ಪತ್ರೆ. ಮೈಸೂರು.)
ಆರ್ಥಿಕಶಾಖೆಯ ಸೆಕ್ರೆಟರಿಗಳು.

ಶ್ರೀ|| ಎಸ್. ಎ. ಪಂಡಿತರು,
(ಮೈಸೂರು ಆಯುರ್ವೇದಿಕ್ ಫಾರ್ಮಸಿ, ಮೈಸೂರು.)

ಚರಕದಲ್ಲಿಯೂ, ಸುಶ್ರುತದಲ್ಲಿಯೂ, ವಾಗ್ಭಟದಲ್ಲಿಯೂ, ವಿಷದ ಪರಿಮಾಣದಲ್ಲಿಯೂ, ಕೌರ್ಯದಲ್ಲಿಯೂ, ಹಾವುಗಳ ವಯಸ್ಸನ್ನೂ ಋತುಭೇದಗಳನ್ನೂ ಅನುಸರಿಸಿ ಬದಲಾವಣೆಗಳಾಗುತ್ತವೆಂದು ಹೇಳಿದೆ. ನಾಗರಹಾವಿಗೆ ಯೌವನದಲ್ಲಿಯೂ ಮತ್ತು ವರ್ಷಋತುವಿನಲ್ಲಿಯೂ ಮಂಡಲಿಯ ಹಾವಿಗೆ ಮಧ್ಯವಯಸ್ಸಿನಲ್ಲಿಯೂ ಮತ್ತು ಶಿಶಿರಋತುವಿನಲ್ಲಿಯೂ 'ರಾಜೀಮಂಡ'ಕ್ಕೆ ಮುದಿತನದಲ್ಲಿಯೂ ಮತ್ತು ಗ್ರೀಷ್ಮಋತುವಿನಲ್ಲಿಯೂ ಮಿಶ್ರಜಾತಿಯ ಹಾವುಗಳಿಗೆ ಋತುಸಂಧಿಗಳಲ್ಲಿಯೂ ವಿಷವು ಹೆಚ್ಚಾಗುತ್ತದೆ ಎಂದು ಅವರ ಅಭಿಪ್ರಾಯ.

ಅವರೇ ಇನ್ನೂ ಹೇಳುತ್ತಾರೆ—ಸರ್ಪದ ಬಾಯಿಯಲ್ಲಿ 4 ಹಲ್ಲುಗಳಿವೆ. ಎಡದ ಕಡೆ ಕೆಳಭಾಗದಲ್ಲಿರುವುದು ಬಿಳಿಯದು. ಅದರ ಮೇಲೆ ಹಳದಿಯ ಬಣ್ಣದ್ದು. ಬಲಗಡೆ ಕೆಳಗಿರುವುದು ಕೆಂಪುದು ಅದರ ಮೇಲೆ ಕಪ್ಪಿನದು ಎಂಬುದಾಗಿ ಹಾವುಗಳಿಗೆ 4 ದಂಷ್ಟ್ರಗಳಿವೆ. ಮೊದಲನೆಯದರಿಂದ ವಿಷಬಿಂದುವೇ ಬರುತ್ತದೆ. ಎರಡನೆಯದರಿಂದ ಅದಕ್ಕೆ 2ರಷ್ಟು. ಮೂರನೆಯದರಿಂದ ಮೂರರಷ್ಟು. ಕೊನೆಯದರಿಂದ 4ರಷ್ಟು ವಿಷಬರುತ್ತದೆ. ಈ ಹಲ್ಲುಗಳ ಕಡಿತವನ್ನನುಸರಿಸಿ ವಿಷಗಳ ಪ್ರಮಾಣದಲ್ಲಿಯೂ, ಅಪಾಯದಲ್ಲಿಯೂ ತಾರತಮ್ಯವಿರುತ್ತದೆ.

ಹಾವಿನಿಂದ ಕಡಿಸಿಕೊಂಡವರು ಹುಡುಗರಾದರೆ, ಹೆಂಗಸಾದರೆ, ಜನ್ಮದಿಂದ ರೋಗಿಯಾದರೆ, ಹುಟ್ಟಿನಿಂದಲೇ ಬಲಹೀನರಾದರೆ, ವಿಷವು ಎಷ್ಟು ಬಾಧಕವೋ, ಬಲಿಷ್ಠನಲ್ಲಿಯೂ, ತರುಣನಲ್ಲಿಯೂ ಅಷ್ಟು ಬಾಧಕವಿಲ್ಲ. ಎಂಬುದಾಗಿ ಚರಕಸುಶ್ರುತವಾಗ್ಭಟಗಳಲ್ಲಿಯೇ ಹೇಳಿದೆ.

ಈ ಮೇಲೆ ಹೇಳಿದ ವಿಷಯಗಳಿಂದ ವ್ಯವಸ್ಥೆಯಾಗುವದಿಷ್ಟು ವಿಷಯ. ಸರ್ಪವು ವಿಷದಿಂದ ಕೂಡಿದ್ದು ಆದರೂ, ಅದರ ಕಡಿತದಿಂದ ಮರಣಸಂಭವಿಸುವ ನಿಯಮವಿಲ್ಲ. ಆಗತಾನೇ ಹಾವು ಆಹಾರವನ್ನು ತಿಂದು ಬಂದಿದ್ದರೆ ವಿಷವೆಲ್ಲಾ ಖರ್ಚಾಗಿರಬಹುದು. ಅಥವಾ ಇನ್ನು ಯಾವುದಾದರೂ ಒಂದು ಪ್ರಾಣಿಯನ್ನು ಆಗತಾನೇ ಕಡಿದಿದ್ದು ವಿಷವನ್ನೆಲ್ಲಾ ಕಾರಿರಬಹುದು. ರಕ್ತನಾಳಗಳಲ್ಲಿ ವಿಷ ಸೇರದೆಯೂ ಇರಬಹುದು. ಹಾವಿನಿಂದ ಕಡಿಸಿಕೊಂಡವನು ಬಲವಾದ ಬಟ್ಟೆಯನ್ನು ಹಾಕಿಕೊಂಡಿದ್ದರೂ, ಕಡಿತದ ಜಾಗದಲ್ಲಿ ಕೂದಲು ಹೆಚ್ಚಾಗಿದ್ದರೂ, ಕೊಬ್ಬು ಹೆಚ್ಚಾಗಿದ್ದರೂ, ಕಡಿತದಲ್ಲಿ ವಿಷಬೀಳದಿರಬಹುದು.

ಇಂಥಾ ಸಂದರ್ಭಗಳಲ್ಲಿ ಹಾವಿನಕಡಿತದಿಂದ ಅಪಾಯವಿಲ್ಲ. ಆಗ್ಗೆ ಉಪಯೋಗಿಸಿದ ಔಷಧಿಗಳೆಲ್ಲಾ ಸಂಜೀವಿನಿಗಳೇ ಆಗುತ್ತವೆ.

5. ಸರ್ಪವಿಷಚಿಕಿತ್ಸೆಯ ಉದ್ದೇಶವೇನು ?

ವಿಷದಹಾವು ಬಲವಾಗಿಕಚ್ಚಿ ಗಾಯದಲ್ಲಿ ಮರಣವನ್ನುಂಟುಮಾಡು ವಷ್ಟು ವಿಷವನ್ನು ಸುರಿಸಿದಮೇಲೆ ಚಿಕಿತ್ಸೆಯನ್ನು ಮಾಡುವುದಾದರೆ ಆ ಚಿಕಿತ್ಸೆ ಯಿಂದ ಈ ಕೆಳಗೆ ಹೇಳುವಂತೆ ಪ್ರಯೋಜನವಾಗುವಂತಿರಬೇಕು. (1) ಗಾಯ ದಲ್ಲಿ ಸುರಿಸಿದ ವಿಷವು ಶರೀರದಲ್ಲೆಲ್ಲಾ ವ್ಯಾಪಿಸಬಾರದು. ವ್ಯಾಪಿಸಿರುವಷ್ಟು ವಿಷಪ್ರಮಾಣವು ಕಡಮೆಯಾಗಬೇಕು. (2) ಚಿಕಿತ್ಸೆಗೆ ಮುಂಚೆಯೇ ವ್ಯಾಪಿಸಿ ರುವ ವಿಷದಿಂದ ಏನೂ ಕೆಡಕುಆಗಬಾರದು. (3) ಆಗಲೇ ವ್ಯಾಪಿಸಿರುವ ವಿಷದ ವೇಗವನ್ನು ನಿಲ್ಲಿಸಿ, ಮುಂದಕ್ಕೆ ವಿಷವು ವ್ಯಾಪಿಸದಂತೆ ಅದನ್ನು ನಿಲ್ಲಿಸಬೇಕು.

ಸರ್ಪದಂಶದಲ್ಲಿ ಉಪಯೋಗಿಸಲರ್ಹವಾದ ವನಸ್ಪತಿಗಳಲ್ಲಿ ಚಿಕಿತ್ಸೆಯದೃಷ್ಟಿ ಯಿಂದ ಮೂರು ವಿಭಾಗಮಾಡಬಹುದು.

1. ಬಾಹ್ಯಗಳು.

(ಅ) ತೋದಪ್ರಶಾಮಕ—ಕಾಕಫಲ, ವಂಶಲೋಚನ, ಭೂರ್ಜಪತ್ರ, ತುಲಸೀ ಮುಂತಾದುವುಗಳು. (ಆ) ಉಪಶೋಷಣ—ಶುಂಟೀ, ಕುಟಜ ಮುಂತಾದುವುಗಳು. (ಇ) ಶೋಥಪ್ರತೀಕಾರಕ—ಪಸಸ, ವತ್ಸನಾಭಿ ಮುಂತಾ ದುವುಗಳು. (ಈ) ಸ್ತಂಭಕ—ಬಬ್ಬೂಲ, ಸಪ್ತಪರ್ಣ. (ಉ) ವೇದನಾ ಶಾಮಕ—ಹಸ್ತಿಶುಂಡ, ಪಿಂಡಕಗರ ಆಶೋಕ ಮುಂತಾದವುಗಳು. (ಊ) ಶೋಣಿತೋತ್ಕ್ಲೇಶಕ—ಸರ್ಷಪ, ರಾಜಸರ್ಷಪ, ಮಾಂದಾರ. (ಎ) ಸ್ಥಾವರ ವಿಷವರ್ಗೀಯ—ವತ್ಸನಾಭ, ಅತಿವಿಷ ಕರವೀರ.

2. ಆಭ್ಯಂತರ.

(ಕ) ರೇಚ ಮತ್ತು ಭೇದಕ—ಅಂಕೋಲ, ದಂತೀ, ಜಯಪಾಲ, ಇಂದ್ರ ವಾರುಣೀ. (ಖ) ವಾಮಕ—ಸಾತಲಾ, ಆಪಾಮಾರ್ಗ, ಮಾಂದಾರ. (ಗ) ಸ್ತನ್ಯಜನಕ—ಗುಡೂಜೀ ಏರಂಡ, ಕಾರ್ಪಾಸೀ. (ಘ) ಲಾಲಾಪ್ರಸೇಕಜನಕ— ಚಿತ್ರಕ, ಕಂಟಕಾರೀ. (ಙ) ಸ್ವೇದಜನಕ—ಉಶೀರ, ಶಲ್ಲಕೀ. (ಚ) ಮೂತ್ರ ಜನಕ—ವಚಾ, ಪುನರ್ನವ. (ಛ) ಶ್ಲೇಷ್ಮನಿಸ್ಸಾರಕ—ಹರಿತಮಂಜರೀ, ವಾಸಕ. (ಜ) ಪಿತ್ತಸಾರಕ—ತಂದುಲೀಯ, ಜ್ಯೋತಿಷ್ಮತಿ. (ಝ) ಶಿರೋ ವಿರೋಚಕ (ನಸ್ಯ)—ಗೋಕರ್ಣೆ, ಕಲಿಕಾರೀ, ಮರಿಚ. (ಞ) ಸುಗಂಧೋ ತ್ತೇಜಕ—ಲಶುನ, ಸೂಕ್ಷ್ಮೈಲಾ, ಅಜಗಂಧ. (ಟ) ದೀಪಕ, ಪಾಚಕ ಏಲಾ, ಅಗರು, ಅಜಮೋದ. (ಠ) ಬಲ್ಯ, ಪೌಷ್ಟಿಕ—ನಿಂಬ, ಮಹಾನಿಂಬ. (ಡ) ಶಾಮಕ—ಪದ್ಮಕ, ಧತ್ತೂರ. (ಢ) ಅವಸಾದಕ—ಅಹಿಫೇನಕ, ದೇವನಾಲ.

(ಣ) ವಿಕಾಶಿಕ—ವಾಸಕ, ಹಿಂಗು, ನಾಗದಮನೀ. (ತ) ಮಾದಕ—ಅಹಿಫೇನಕ, ದಾರುರೀ. (ಥ) ರಸಾಯನ—ಸೇಹುಂಡ, ದಾರುಹರಿದ್ರಾ, ಭಾರಂಗೀ, ಸಾರಿವಾ.

3 ಜೀವಾತುಗಳು.

ಶಿರೀಷ, ಈಶ್ವರಿ, ಗುಡೂಚಿ, ನಾಕುಲಿ, ಸುಗಂಧಕ, ಸರ್ಪಗಂಧಿ.

6. ಗಾಯದಲ್ಲಿಮಾಡುವ ಚಿಕಿತ್ಸೆಯು ವ್ಯರ್ಥ.

ಶರೀರದ ಇತರ ಭಾಗಗಳಲ್ಲಿ ವಿಷವು ಪ್ರಸರಿಸದಂತೆ ಮಾಡುವುದೇ ಗಾಯದಲ್ಲಿ ಚಿಕಿತ್ಸೆಯನ್ನು ಮಾಡುವ ಉದ್ದೇಶ್ಯ. ಗಾಯಕ್ಕೆ ಸ್ವಲ್ಪ ಮೇಲುಗಡೆ ದಾರದಿಂದ ಬಲವಾಗಿಕಟ್ಟುವುದು, ಗಾಯವನ್ನು ಕತ್ತರಿಸುವುದು, ಔಷಧವನ್ನ ಹಚ್ಚುವುದು, ಪೊಟಾಸಿಯಂಪರ್‌ಮ್ಯಾಂಗನೇಟ್ ದ್ರಾವಕವನ್ನು ಒಳಕ್ಕೆ ಬಿಡುವುದು ಇವೇ ಮುಖ್ಯವಾದ ಚಿಕಿತ್ಸೆಗಳು.

ಆಯುರ್ವೇದದಲ್ಲಿ ಈ ಬಾಹ್ಯೋಪಚಾರಗಳಿಗೆ ಬಹಳ ಪ್ರಾಮುಖ್ಯತೆ ಕೊಡಲ್ಪಟ್ಟಿದೆ. ಈ ಉಪಚಾರಕ್ಕೆ ಸುಶ್ರುತಾದಿಗಳು 'ಸ್ಥಾನಜಯ' ಎಂಬ ಹೆಸರನ್ನು ಕೊಟ್ಟಿದ್ದಾರೆ. ಸರ್ಪವಿಷವು ಸುತ್ತಲೂ ಪ್ರಸರಿಸಿ, ಮುಖ್ಯವಾದ ಶರೀರ ಭಾಗಗಳನ್ನು ಕೆಡಿಸಿ, ಪುನಃ ಗಾಯದ ಸ್ಥಳಕ್ಕೆ ವಾಪಸು ಬರುತ್ತದೆ ಎಂದು ಅವರ ಸಿದ್ಧಾಂತ. ಆದ್ದರಿಂದ ಗಾಯವನ್ನು ಚಿಕಿತ್ಸೆಮಾಡುವುದು ಅವಶ್ಯಕವೆಂದು ಅವರು ಹೇಳುತ್ತಾರೆ. 'ಜಂಗಮ' ವಿಷವು ಕೆಳಗಿನಿಂದ ಮೇಲಕ್ಕೂ, 'ಸ್ಥಾವರ' ವಿಷವು ಮೇಲಿನಿಂದ ಕೆಳಕ್ಕೂ ಪ್ರವಹಿಸುವುದು ಅವುಗಳ ಸ್ವಭಾವವಂತೆ. ಆದ್ದರಿಂದ ಈ ಎರಡು ವಿಷಗಳು ಪರಸ್ಪರ ಪ್ರತಿಭಾಧಕವಾಗಿ ವಿಷವೇಗವನ್ನೆ ನಿಲ್ಲಿಸುತ್ತವೆ ಎಂದವರಭಿಪ್ರಾಯ.

ಪಾಶ್ಚಾತ್ಯ ಔಷಧಗಳನ್ನಾಗಲಿ, ಭರತಖಂಡದ ಔಷಧಗಳನ್ನಾಗಲಿ, ಸಸ್ಯಜವಾಗಲಿ, ಖನಿಜವಾಗಲಿ, ಗಾಯದಲ್ಲಿ ಉಪಯೋಗಿಸಿದ್ದರಿಂದ ಶರೀರದಲ್ಲಿ ವಿಷವ್ಯಾಪ್ತಿಯನ್ನು ನಿಲ್ಲಿಸುವಂಥ ಔಷಧವು ಯಾರಿಗೂ ಇದುವರೆಗೂ ಸಿಕ್ಕಿರುವುದಿಲ್ಲ.

7. ಅಭ್ಯಂತರಚಿಕಿತ್ಸೆಯೂ ವ್ಯರ್ಥವೆ.

ಇದರ ಉದ್ದೇಶ್ಯ ರಕ್ತದಲ್ಲಿಯೂ ಶರೀರದಲ್ಲಿಯೂ ಚಿಕಿತ್ಸೆಗೆ ಮುಂಚೆ ಪ್ರಸರಿಸುವ ವಿಷವು ಕೆಡಕನ್ನುಂಟುಮಾಡದಂತೆ ಮಾಡುವುದೇ. ಈ ಉದ್ದೇಶ್ಯದಿಂದ ವಾಂತಿಮಾಡಿಸುವುದು, ಭೇಧಿಮಾಡಿಸುವುದು ಮೊದಲಾದ ಮಾರ್ಗಗಳಿಂದ ಶರೀರದಲ್ಲಿರುವ ಮಲಾಪಹರಣ ದ್ವಾರಾ, ಅದರಲ್ಲಿರುವ ವಿಷವೂ ಹೊರಬೀಳಲೆಂದು ಈ ಚಿಕಿತ್ಸೆಯನ್ನು ಮಾಡುತ್ತಾರೆ. ಇಷ್ಟು ಚಿಕಿತ್ಸೆಯನ್ನು ಸಹಿಸಿಕೊಳ್ಳುವ ಶಕ್ತಿಯನ್ನುಂಟುಮಾಡುವುದಕ್ಕಾಗಿ ಹೃದಯೋತ್ತೇಜಕಗಳನ್ನೂ ಬಲಸಂವ

ರ್ಥಕಗಳನ್ನೂ ಕೊಡುತ್ತಾರೆ. ಇಷ್ಟು ಮಾಡಿದಾಗ್ಯೂ ಹೊರಗೆ ಹೋಗುವ ವಿಷವು ಅತ್ಯಲ್ಪವಾದ್ದರಿಂದ ಗಣನೆಗೂ ಕೂಡ ಅರ್ಹವಲ್ಲವೆಂದು ವ್ಯವಸ್ಥೆಯಾಗಿದೆ. ಆದ್ದರಿಂದ ಈ ಅಂತರಚಿಕಿತ್ಸೆಯೂ ವ್ಯರ್ಥವೇ.

(8) ಆ ವಿಷದ ಶಕ್ತಿಯು ಇಷ್ಟೆಂದಾಗಲಿ, ಹೀಗೆಂದಾಗಲಿ ಹೇಳಲು ಸಾಧ್ಯವಿಲ್ಲ. ತಕ್ಕ ರಾಸಾಯನಿಕ ಔಷಧಗಳಾಗಲಿ, ವನಸ್ಪತಿರೂಪವಾದ ಔಷಧಗಳಾಗಲಿ ಖಂಡಿತವಾಗಿಯೂ ಇಲ್ಲ. ಸರ್ಪದ ಆಕಾರಕ್ಕೂ ವನಸ್ಪತಿಗೂ ಇರುವ ಸಾದೃಶ್ಯದಿಂದ ಕೆಲವು ವನಸ್ಪತಿಗಳು, ಎಲ್ಲಾ ಸರ್ಪಗಳಮೇಲೋ, ಅಥವಾ ಕೆಲವು ಜಾತಿಗಳಮೇಲೋ ಅನಿಷ್ಟವನ್ನುಂಟುಮಾಡುತ್ತವೆ ಎಂಬ ಕಾರಣದಿಂದ ಕೆಲವು ವನಸ್ಪತಿಗಳು ವಾಡಿಕೆಯಲ್ಲಿ ಬಂದಿವೆಯೇ ಹೊರ್ತು ಖಂಡಿತವಾಗಿಯೂ ವಿಷಪರಿಹಾರಕವಾದ ಯಾವ ಔಷಧಿಯೂ ಇಲ್ಲ.

9. ಉಪಸಂಹಾರ.

ಮೇಲೆ ಹೇಳಿದ ಅಂಶಗಳಿಂದ ಇಷ್ಟು ವ್ಯವಸ್ಥೆಯಾಯಿತು.

(a) ಅಪಾಯಕರವಾದ ವಿಷವುಳ್ಳದ್ದಾಗಿ, ಆ ವಿಷವನ್ನು ಕಾರುವುದಕ್ಕೆ ತಕ್ಕ ಸಾಧನವುಳ್ಳ ಸರ್ಪಗಳು ಬಹಳ ಕಡಿಮೆ.

(b) ಅಂಥ ಸರ್ಪಗಳುಕೂಡ ಅನೇಕ ಕಾರಣಗಳಿಂದ ಮರಣವನ್ನುಂಟುಮಾಡುವಷ್ಟು ವಿಷವನ್ನು ಕಾರುವುದಕ್ಕೆ ಅವಕಾಶವಿರಲಾರದು.

(c) ಗಾಯದಲ್ಲಿ ಸೇರಿರುವ ವಿಷವು ಮರಣವನ್ನುಂಟುಮಾಡುವಷ್ಟು ಪ್ರಮಾಣದಲ್ಲಿ ಸೇರಿದೆಯೇ ಇಲ್ಲವೆ ಎಂದು ನಿರ್ಣಯಿಸುವುದಕ್ಕೆ ತಕ್ಕ ಸಾಧನವಿಲ್ಲ. ಈ ಕಾರಣಗಳಿಂದ ಯಾವನೋ ಒಬ್ಬ ಹಾವಿನಿಂದಕಚ್ಚಲ್ಪಟ್ಟವನು ಔಷಧ ಪ್ರಯೋಗವಾದಮೇಲೆ ಬದುಕಿದನೆಂಬುದೇ ಆ ಔಷಧಿಯ ಗುಣವನ್ನು ನಿರ್ಧರಿಸುವುದಕ್ಕೆ ತಕ್ಕಷ್ಟು ಆಧಾರವಲ್ಲ.

ಆದ್ದರಿಂದ ಸರ್ಪವಿಷವನ್ನು ಪರಿಹಾರಮಾಡುವ ಔಷಧಗಳನ್ನು ಪರೀಕ್ಷಿಸಬೇಕಾದರೆ ಒಂದೇ ರಾಜಮಾರ್ಗ. ಪ್ರಯೋಗಶಾಲೆಯಲ್ಲಿ ರೋಗವಿಲ್ಲದ ಪಶುವಿಗೆ ಮರಣವನ್ನುಂಟುಮಾಡುವಷ್ಟು ವಿಷವನ್ನು ಬಿಡಬೇಕು. ಅನಂತರ ಔಷಧಿಯನ್ನು ಪ್ರಯೋಗಿಸಬೇಕು. ಇದು ಒಂದುಸಲ ಮಾಡಿದರೆ ಸಾಲದು. ಅನೇಕ ಆವೃತ್ತಿ ಮಾಡಬೇಕು. ಹೀಗೆ ಮಾಡಿದರೆ ಸರ್ಪವಿಷಚಿಕಿತ್ಸೆಯ ಗುಣವು ವ್ಯಕ್ತವಾಗುವುದು.

ಹಂಸಕ್ಷೀರನ್ಯಾಯದಿಂದ ಸಾರವಾದುದನ್ನು ಗ್ರಹಿಸಲು ಪ್ರಾರ್ಥನೆ—

ಆಧಾರಗಳು. (References)

1. ಡಿಮಾಕ್‌ವಾರ್ಡ್‌ನ್ ಮತ್ತು ಹೂಪರ್ (1890-1893)—ಫಾರ್ಮಕಾಗ್ರಾಫಿಯಾ ಇಂಡಿಕಾ, ಬೊಂಬಾಯಿ. 2. ಜೆ. ಫೇಯಕರ್ (1872)—ದಿ ಥಾಂಟೋಫಿಡಿಯಾ ಆಫ್ ಇಂಡಿಯಾ, ಲಂಡನ್. 3. ಕೀರ್ತಿಕರ್ ಮತ್ತು ಬಾಸು (1918)—ಇಂಡಿಯನ್ ಮೆಡಿಸಿನಲ್ ಪ್ಲಾಂಟ್ಸ್, ಅಲ್ಲಹಬಾದ್. 4. ಪಿ. ಮೆರಿಯಾದಾಸ್ (1906)—ಮೋಯಿರ್ಸ್ ಮೆಡಿಕೇಲ್ ಡಿ. ಇಂಡೀ, ಪಾಂಡಿಚೆರಿ. 5. ಮಸ್ಕರ್ ಕೆ. ಎಸ್. ಮತ್ತು ಕಾಯಿಸ್ ಜೆ. ಎಫ್. (1930)—ಸರ್ಪವಿಷಪರಿಹಾರಗಳಾದ ವನಸ್ಪತಿಗಳು, ಇಂಡಿಯನ್ ಮೆಡಿಸಿನಲ್ ರೀಸರ್ಚ್ ಮೆಮಾಯಿರ್, ನಂ. 16. 6. ಇ. ರಾಬರ್ಟ್ಸ್ (1919)—ಸರ್ಪವಿಷ ಪರಿಹಾರಗಳು, (ನೇಟೀವ್ ರೆಮಿಡೀಸ್) ಕೊಲಂಬೋ. 7. ಸಿ. ವ್ಯಾಲೆಂಟಿನೋ (1906)—ನೋಟ್ಸ್ ಸರ್. ಇಂಡೀ ಪ್ಯಾರೀಸ್. 8. ಎ. ಜೆ. ವಾಲ್ (1883)—ಭರತಖಂಡದ ಸರ್ಪ ವಿಷಗಳು.—ಅವುಗಳ ಸ್ವಭಾವ ಮತ್ತು ಪರಿಣಾಮಗಳು. 9. ಎಫ್. ವಾಲ್ (1913)—ಬ್ರಿಟಿಷ್ ಇಂಡಿಯನ್ ಡೊಮಿನಿಯನ್‌ನಿನ ಸರ್ಪಗಳು (Terestrial Snakes), ಬೊಂಬಾಯಿ. 10. ಜಿ. ವಾಟ್ (1889-1893)—ಕಮರ್ಷಿಯಲ್ ಪ್ರಾಡಕ್ಟ್ಸ್ ಆಫ್ ಇಂಡಿಯಾ, ಕಲ್ಕತ್ತಾ. 11. ವ್ಯಾಸ—ಮಹಾಭಾರತ. 12. ಚರಕ—ಚರಕಸಂಹಿತ. 13. ಸುಶ್ರುತ—ಸುಶ್ರುತಸಂಹಿತ. 14. ವಾಗ್ಭಟ—ಅಷ್ಟಾಂಗಹೃದಯ. 15. ವೃಂದಮಾಧವ—ಸಿದ್ಧಯೋಗ. 16. ಮಾಧವಕರ—ರೋಗವಿನಿಶ್ಚಯ. 17. ಶಾರ್ಙ್ಗಧರ—ಶಾರ್ಙ್ಗಧರ. 18. ನಿತ್ಯನಾಥ—ರಸರತ್ನಾಕರ. 19. ಅನಂತದೇವ—ರಸಚಿಂತಾಮಣಿ 20. ಭಾವಮಿಶ್ರ—ಭಾವಪ್ರಕಾಶ 21. ಲೋಲಂಬರಾಜ (1608)—ವೈದ್ಯಜೀವನ. 22. (1676)—ಯೋಗರತ್ನಾಕರ. 23. ಧನ್ವಂತ್ರೀ—ಧನ್ವಂತ್ರೀ ನಿಘಂಟು. 24. ಕಾಶೀರಾಜ—ರಾಜನಿಘಂಟು. 25. ಮದನಪಾಲ—ನಿಘಂಟು. 26. ಮಾಧವ ಉಪಾಧ್ಯಾಯ (1730)—ಆಯುರ್ವೇದಪ್ರಕಾಶ. 27. ಶಂಕರನಾಮ—ವೈದ್ಯವಿನೋದ. 28. ದಾತಾರ್, ದಾಮನ್‌ಕರ್, ಮಹಾಬಲ್, ಪಟೇಲ್ ಮತ್ತು ಗೋಖಲೆ (1867)—ನಿಘಂಟು ರತ್ನಾಕರ 29. ಕಾಯದೇವ—ವೈದ್ಯರತ್ನಾಕರ ನಿಘಂಟು. 30. ಚಕ್ರಪಾಣಿ—ದ್ರವ್ಯಗುಣಸಂಗ್ರಹ. 31. ರಾಜವಲ್ಲಭ—ದ್ರವ್ಯಗುಣ. 32. ವಾಸುದೇವ ಶಾಸ್ತ್ರಿ ಬಾಪಟ್ (1882)—ವನೌಷಧಿ ಪ್ರಕಾಶ. 33. ಚಾಬಿದತ್ತಾರಾಂ (1896)—ಬೃಹನ್ನಿಘಂಟು ರತ್ನಾಕರ. 34. ಸಾಲಿಗ್ರಾಂ (1896)—ಸಾಲಿಗ್ರಾಂ ನಿಘಂಟು. 35. ಬಲ್ಲಸೇನ—ಅದ್ಭುತಸಾಗರ. 36. —ಔಷದಿ ಕಲ್ಪ. 37. —ಗುಡೂಚ್ಯಾಧಿ ನಿಘಂಟು.

3 ಬೊಂಬಾಯಿ ಮೆಡಿಕಲ್ ಕಾಲೇಜಿನ ಪ್ರೊಫೆಸರ್ Dr. A. S. ಪರಂಜಪೆ, M.D. D.T.M. M.B.Ch.B. Edin. ಮತ್ತು ಬೊಂಬಾಯಿ ದ್ರವ್ಯಗುಣದ ಪರಿಶೋಧಕರಾದ Dr. G. K. ಗೋಖಲೆಯವರು ಬರೆದ ಪ್ರಬಂಧ.

ವಿಡಂಗದ್ರಾವಕ (Embelic Acid)ವು ಕ್ರಿಮಿನಾಶಕವೇ?

ಆಯುರ್ವೇದದಲ್ಲಿ ವಿಡಂಗಫಲವು ಕ್ರಿಮಿವಿನಾಶಕವೆಂದು ಹೇಳಿದೆ. ಯಾವ ವಿಧವಾದ ಕ್ರಿಮಿಯನ್ನು ನಾಶಮಾಡುತ್ತದೆ ಎಂದು ಆದರಿಂದ ತಿಳಿಯ ಬರುವುದಿಲ್ಲ.

ಗಂಡುಪದ್ (Tapeworm) ಎಂಬ ಕ್ರಿಮಿಯಲ್ಲಿ ಗುಣಕಾರಿಯೆಂದು ಹಾರಿಸ್ (Harris) ಮತ್ತು ವಾರ್ಡ್ ಎಂಬುವರೂ ಬರೆದಿಧಾರೆ.

ಪಾಕಯಸ್ ಮತ್ತು ಡಾ|| ಮಸ್ಕರ್‌ರವರು ತಿರುಚನಾಪಳ್ಳಿಯ ಕಾರಾಗೃಹದ ವಾಸಿಗಳ ಮೇಲೆ ಪ್ರಯೋಗಿಸಿ ಚಿಪ್ಪ (Hookworm), ದ್ವಿಮುಖ (Whifworm), ಚುರು (Threadworm), ಅನ್ನಾದ (Roundworm), ಎಂಬ ಕ್ರಿಮಿಗಳನ್ನು ನಾಶಮಾಡುವಶಕ್ತಿ ವಿಡಂಗಫಲ (Embelic Ribs) ಗಳಿಗೆ ಇಲ್ಲವೆಂದು ವ್ಯವಸ್ಥೆಮಾಡಿದರು. ಈ ಕ್ರಿಮಿಗಳೇ ಶೇಕಡಾ 99 ರ ಮಟ್ಟಿಗೆ ಆಂತ್ರಕ್ರಿಮಿರೋಗಿಗಳಲ್ಲಿ ಇರುವುದು. ಗಂಡುಪದ್ (Tapeworm) ಕ್ರಿಮಿಗಳ ವಿಷಯದಲ್ಲಿ ಅವರು ಪರೀಕ್ಷೆಮಾಡಿದಂತೆ ಕಂಡುಬರುವುದಿಲ್ಲ. 1914 ನೇ ಇಸವಿಯಲ್ಲಿ ಪ್ರಸಿದ್ಧಿಪಡಿಸಿದ ಬ್ರಿಟಿಷ್ ನಿಘಂಟುವಿನಲ್ಲಿ (British Pharmacopoea) ಇದು 'ಗಂಡುಪದ್' ಕ್ರಿಮಿಗಳಿಗೆ ನಾಶಕವೆಂದು ಹೇಳಿದೆ. ಇದು ಪ್ರಾಯಶಃ ವಾರ್ಡನ್ ಸಾಹೇಬನ ಹೇಳಿಕೆಯಮೇಲಿರಬಹುದು.

ಇದುವರೆಗೂ ಪ್ರಯೋಗಿಸಿದವರೆಲ್ಲಾ ವಿಡಂಗಫಲವನ್ನು ಹಾಗೆಯೇ ಉಪಯೋಗಿಸಿದ್ದಂತೆ ತೋರುತ್ತದೆ ನಾವು ಆ ಹಣ್ಣಿನಿಂದ (ಬೀಜ) ದ್ರಾವಕವನ್ನು (Embelic Acid) ತೆಗೆದು ಅದನ್ನು ಕ್ರಿಮಿನಾಶನದಲ್ಲಿ ಪ್ರಯೋಗಿಸಿ ಪರೀಕ್ಷಿಸಿದೆವು. ನಮ್ಮ ಪರೀಕ್ಷೆಯಿಂದ ಗೊತ್ತಾದ ನಿರ್ಣಯವೇನೆಂದರೆ—

(1) ಈ ದ್ರಾವಕದಿಂದ ಮೀನುಗಳಲ್ಲಿಯೂ ಮಣ್ಣುಹುಳುಗಳ ಮೇಲೂ ಅತ್ಯಲ್ಪ ಗುಣವುಂಟು.

(2) ಮೇಲೆ ಹೇಳಿದ ಯಾವ ತರಹ ಕ್ರಿಮಿಗಳ ಮೇಲೂ ಇದು ಕೆಲಸ ಮಾಡುವುದಿಲ್ಲ. ಎಂಬುದೇ ಮುಖ್ಯ ಸಾರಾಂಶ.

4 ಬಾಲಕ್ಷಯದಲ್ಲಿ ವನಸ್ಪತಿಗಳ ಎಣ್ಣೆಯಿಂದ ಆಗುವ ಉಪಯೋಗ. (Rickest)

ಪ್ರಬಂಧಕಾರರು:—ಡಾ|| ಗೋಖಲೆ ಮತ್ತು ಪರಂಜಪೆಯವರ ಎರಡನೆಯ ಲೇಖನ.

ಬಾಲಕ್ಷಯದಲ್ಲಿ 'ಕಾಡ್‌ಲೀವರ್ ಆಯಿಲನ್ನು' ರೋಗಿಗಳಿಗೆ ಡಾಕ್ಟರುಗಳು ಕೊಡುತ್ತಾರೆ. ಇದು ಅನೇಕರ ಮನಸ್ಸಿಗೆ ಒಪ್ಪುವುದಿಲ್ಲ. ಅನೇಕರ ಆಚಾರಕ್ಕೂ ವಿರುದ್ಧ. ಇದೂ ಅಲ್ಲದೆ ಅಭ್ಯಾಸವಿಲ್ಲದವರಿಗೆ ಇದರ ವಾಸನೆಯನ್ನು ಸಹಿಸುವುದಕ್ಕೆ ಆಗುವುದಿಲ್ಲ.

18 ನೆಯ ಶತಮಾನದಲ್ಲಿ ನಾರ್ವೆಯಲ್ಲಿ ಈ ಎಣ್ಣೆಯನ್ನು ತಯಾರು ಮಾಡುವುದಕ್ಕೆ ಪ್ರಾರಂಭಿಸಿದ ಮೊದಲು ಅನೇಕ ದೇಶದವರು ಉಪಯೋಗಿಸುತ್ತ ಬಂದಿಧಾರೆ. ಇದರಲ್ಲಿ ದೇಹಪೋಷಕವಾದ ದ್ರವ್ಯಗಳಿದೆ ಎಂದು ಕೆಲವರು, ಸುಲಭವಾಗಿ ಜೀರ್ಣಿತವಾಗುವ ಆಹಾರವೇ ಎಂದು ಕೆಲವರು, ಮತ್ತೆ ಕೆಲವರು ಇದರಲ್ಲಿರುವ ವಿಟಮೀನ್‌ಗಳು ದೇಹಪೋಷಕವೆಂದೂ ಕಾಡ್‌ಲೀವರ್ ಆಯಿಲನ್ನು ಪ್ರಶಂಸೆ ಮಾಡಿರುವರು.

ಬಾಲಕ್ಷಯಕ್ಕೆ ಕಾರಣವೇನೆಂದು ಅನೇಕರು ಚರ್ಚಿಸಿರುವರು. ಗ್ಲಾಸ್‌ಗೋಪಟ್ಟಣದ ಕೆಲವರು ಶೋಧಕರು ತಕ್ಕಷ್ಟು ಗಾಳಿ, ಬೆಳಕಿಲ್ಲದೆ ಈ ರೋಗವು ಬರುವುದೆಂತು ನಿರ್ಧರವಾಡಿದ ಮೇಲೆ, ಈ ರೋಗದಲ್ಲಿ 'ಕಾಡ್‌ಲಿವರ್ ಆಯಿಲಿಗೆ ಬದಲಾಗಿ ಪ್ರಕೃತಿ ಚಿಕಿತ್ಸೆಯು ಪ್ರಾರಂಭವಾಯಿತು. ರೋಗಿಗಳನ್ನು ಧಾರಾಳವಾಗಿ ಬಿಸಿಲಿನಲ್ಲಿಯೂ ಶುದ್ಧವಾದ ಗಾಳಿಯಲ್ಲಿಯೂ ಓಡಾಡಿಸುವುದೇ ಚಿಕಿತ್ಸೆಯಾಯಿತು.

ಮತ್ತೆ ಕೆಲವರು ಕೃತ್ರಿಮ ಬೆಳಕಿನಲ್ಲಿ ಮಕ್ಕಳನ್ನು ಕೂಡಿಸಿ ಚಿಕಿತ್ಸೆ ಮಾಡಿದರು. ಆಹಾರದ್ರವ್ಯವನ್ನು ಕೃತ್ರಿಮ ಬೆಳಕಿಗೆ ತೋರಿಸುವುದರಿಂದ ಅದರಲ್ಲಿ ಬಲವರ್ಧಕಶಕ್ತಿಯು ಹೆಚ್ಚಾಗುವುದೆಂದು ತಿಳಿದು ಅಂಥ ಆಹಾರವನ್ನುಪಯೋಗಿಸ ಹತ್ತಿದರು.

ನಾವು ಬೆಳಕಿನಲ್ಲಿಟ್ಟ ವನಸ್ಪತಿಗಳ ಎಣ್ಣೆಯನ್ನುಪಯೋಗಿಸಿ ಪರೀಕ್ಷೆ ಮಾಡೋಣವೆಂದು ಹೊರಟೆವು. ನಮ್ಮ ಪ್ರಯೋಗಕ್ಕೆ ಪಾತ್ರ ಇಲಿಗಳು. ಇವುಗಳಲ್ಲಿ ಮೂರು ಪಂಗಡ ಮಾಡಿ ಮೊದಲನೆ ಪಂಗಡವನ್ನು ಸರಿಯಾದ ಪುಷ್ಟಿಕರವಾದ ಆಹಾರದ ಮೇಲಿಟ್ಟು, ಇತರ ಪಂಗಡದವುಗಳನ್ನು ಹೋಲಿಸುವುದಕ್ಕೋಸ್ಕರ ಇಟ್ಟುಕೊಂಡೆವು. 2 ನೇ ಪಂಗಡದವುಗಳಿಗೆ ಕಾಡ್‌ಲಿವರ್ ಆಯಿಲನ್ನೂ, 3 ನೇ ಪಂಗಡದವುಗಳಿಗೆ ವನಸ್ಪತಿಗಳ ಎಣ್ಣೆಯನ್ನೂ ಕೊಟ್ಟೆವು. ಕಾಡ್‌ಲಿವರ್ ಆಯಿಲಿನಿಂದ ಆದಷ್ಟು ಉಪಯೋಗವು ಈ ವನಸ್ಪತಿಗಳ ಎಣ್ಣೆಯಿಂದಲೂ ಆಯಿತು. ಬೆಳಕಿನಲ್ಲಿ ಆ ಎಣ್ಣೆಯನ್ನು ಇಟ್ಟಷ್ಟೂ ಹೆಚ್ಚು ಗುಣಕಾಣಬಂತು.

5. ಕೆಲವು ಭಾರತವನಸ್ಪತಿಗಳ ಮೂಲತತ್ವಗಳು.

ಪ್ರಬಂಧಕಾರರು ಶ್ರೀಯುತ ಪಿ. ರಾಮಸ್ವಾಮಿ ಅಯ್ಯರ್, M.A., A.I.I.Sc.,
ತಾತಾವಿಜ್ಞಾನ ಶೋಧನಾಲಯ, ಬೆಂಗಳೂರು.

ನಮ್ಮ ಪಿತೃಪಿತಾಮಹ ಪರಂಪರೆಯಾಗಿ ವೈದ್ಯಶಾಸ್ತ್ರಜ್ಞಾನವು ಬೇಕಾದಷ್ಟು ಬಂದಿದೆ. ಇದು ಬಹು ಅಮೂಲ್ಯವಾದುದೆಂದು ಹೇಳಲು ಸಂದೇಹವಿಲ್ಲ. ಈ ವೈದ್ಯದಲ್ಲಿ ಉಪಯೋಗಿಸಲ್ಪಡುವ ದ್ರವ್ಯಗಳ ಸ್ವರೂಪ, ಲಕ್ಷಣ ಮತ್ತು ರೋಗಗಳ ಮೇಲೆ ಅವುಗಳ ಪರಿಣಾಮ ಇವುಗಳನ್ನು ವ್ಯವಸ್ಥಿತವಾಗಿ ನಿರ್ಧಾರ ಮಾಡಿದ ಹೊರತು. ಈ ವೈದ್ಯವನ್ನು 'ಆಯುರ್ವೇದ' ವೆಂಬ ಹೆಸರಿನಿಂದ ಕರೆಯುವುದು ನ್ಯಾಯವಿಲ್ಲ.

ಈ ಕೆಲಸವು ರಸಾಯನ ಶಾಸ್ತ್ರಾಧೀನವೆಂದು ನನ್ನ ಅಭಿಪ್ರಾಯ. ಪಾಶ್ಚಾತ್ಯ ವೈದ್ಯವನ್ನು ನಮ್ಮ ಆಯುರ್ವೇದಕ್ಕೆ ಹೋಲಿಸಿ ನೋಡಿದರೆ, ಅದು ಇನ್ನೂ ಅತಿ ಬಾಲ್ಯಾವಸ್ಥೆಯಲ್ಲಿದ್ದರೂ, ರಸಾಯನಶಾಸ್ತ್ರದ ಜ್ಞಾನ ಮತ್ತು ಶೋಧನಗಳ ಸಹಾಯದಿಂದ ಅನೇಕ ರೋಗಗಳಿಗೆ ಪರಿಹಾರೋಪಾಯಗಳನ್ನು ಉಂಟುಮಾಡಿದೆ.

ಔಷಧಿಗಳು ಎರಡುವಿಧ :—1. ಸ್ವಾಭಾವಿಕವನಸ್ಪತಿ, ಖನಿಜ, ಪ್ರಾಣಿಜ. 2. ಶೋಧನಾಲಯಗಳಲ್ಲಿ ಪಾಕದಿಂದ ಸಿದ್ಧವಾಗುವ ಕೃತಕವಾದ ಔಷಧ. ಔಷಧಗಳು ಸ್ವಾಭಾವಿಕವಾಗಲಿ, ಕೃತಕವಾಗಲಿ, ಬಹುಕಾಲದ ಪ್ರಯೋಗಾನಂತರ ಅವುಗಳ ಗುಣಗಳನ್ನು ಅನುಭವಕ್ಕೆ ತಂದುಕೊಂಡಮೇಲೆಯೇ ರೋಗಿಗಳಮೇಲೆ ಅವುಗಳು ಚಿಕಿತ್ಸೆಗೆ ಅರ್ಹವಾಗುವುವು.

ಔಷಧಿಗೂ ರಸಾಯನಶಾಸ್ತ್ರಕ್ಕೂ ಇರುವ ಸಂಬಂಧ.

(1) ಸ್ವಾಭಾವಿಕವಾಗಿ ವನಸ್ಪತಿಗಳೇ ಮೊದಲಾದ ಔಷಧಿಗಳು ಯಾವಾಗಲೂ ಉತ್ತಮವಾದವುಗಳೇ ಸಿಕ್ಕುತ್ತವೆಂದು ಹೇಳುವುದಕ್ಕೆ ಆಗುವುದಿಲ್ಲ. ಕಾಲಭೇದದಿಂದ, ಅನೇಕ ಬದಲಾವಣೆಗಳೂ ಬರಬಹುದು. ಆದ್ದರಿಂದ ರಸಾಯನಶಾಸ್ತ್ರರೀತಿಯಿಂದ ಆ ಸ್ವಾಭಾವಿಕ ದ್ರವ್ಯದಲ್ಲಿರುವ ಮೂಲತತ್ವವನ್ನು ಬೇರೆ ಮಾಡಿದರೆ ಅಂಥ ಔಷಧಿಯು ಯಾವಾಗಲೂ ಒಂದೇ ವಿಧವಾದ ಗುಣವನ್ನು

ಕೊಡುತ್ತದೆ. ಫಲನಿಶ್ಚಯವಿರುತ್ತದೆ. ಉದಾಹರಣೆ—ಮಾರ್ಫಿನ್, ಕೊಕೆಯಿನ್, ಇತ್ಯಾದಿ.

(೨) ಆ ಮೂಲತತ್ವಗಳ ರಾಸಾಯನಿಕ ಸ್ವರೂಪವನ್ನು ವ್ಯವಸ್ಥೆಮಾಡಿ, ಯಾವ ಪದಾರ್ಥಗಳ ಸ್ವಾಭಾವಿಕ ಮಿಶ್ರಣದಿಂದ ಆ ತತ್ವವು ಆಗಿದೆಯೋ ಆ ಪದಾರ್ಥಗಳನ್ನು ಕೃತಕವಾಗಿ ಮಿಶ್ರಣಮಾಡಿ, ಔಷಧಗಳನ್ನು ತಯಾರುಮಾಡುವುದು.

(3) ಅದೇ ತತ್ವವನ್ನೊಳಗೊಂಡ ಸ್ವತಂತ್ರದ್ರವ್ಯಗಳನ್ನು ಪ್ರಯೋಗಾಲಯಗಳಲ್ಲಿ ರಾಸಾಯನಿಕಶಾಸ್ತ್ರರೀತಿಯಿಂದ ಮಿಶ್ರಣಮಾಡಿ, ಇನ್ನೂ ಉತ್ತಮವಾದ, ಕ್ಷಿಪ್ರಗುಣಕಾರಿಗಳಾದ ಔಷಧಗಳನ್ನು ನಿರ್ಮಾಣಮಾಡುವುದು.

ಈ ನವೀನ ಯುಗದಲ್ಲಿ ರಸಾಯನಶಾಸ್ತ್ರ ಸಹಾಯದಿಂದ ಮೇಲೆ ಹೇಳಿದಂತೆ ಔಷಧಗಳನ್ನು ಸಿದ್ಧಮಾಡಿ, ರೋಗಿಗಳ ಬಾಧೆಯನ್ನು ಪರಿಹಾರಮಾಡುತ್ತಾ ಲೋಕಕ್ಕೆ ಉದಾರವಾದ ಉಪಕಾರವು ನಡೆಯುತ್ತದೆ.

ಇದೇ ಆಲೋಚನೆಯಿಂದ ನಾವೂ ಸಹ ನಮ್ಮ ಭಾರತವನಸ್ಪತಿಗಳಲ್ಲಿ ಕೆಲವುಗಳ ಮೂಲವಸ್ತುಗಳನ್ನು ತೆಗೆದಿದ್ದೇವೆ.

6. ಅಶೋಕ ಎಂಬುದರಮೇಲಿನ ಉಪನ್ಯಾಸ.

ಪ್ರಬಂಧಕರ್ತರು—ಭಿಷಗ್ವರ, ಕೆ. ಅಚ್ಚಯ್ಯ, A.M. A.E. ಬಳ್ಳಾರಿ.

ಅಶೋಕ ವೃಕ್ಷದ ಪ್ರಾಮುಖ್ಯತೆ, ಅದಕ್ಕೆ ಗ್ರಂಥಗಳಲ್ಲಿರುವ ಬೇರೆ ಬೇರೆ ಹೆಸರುಗಳು, ಇದು ಬೆಳೆಯುವ ಸ್ಥಳ, ಇದರ ವರ್ಣನೆ. ಸ್ವರೂಪ ಮತ್ತು ಗುಣಗಳು ಯಾವ ರೋಗದಲ್ಲಿ ಇದರಿಂದ ಉಪಯೋಗ ಇತ್ಯಾದಿ ವಿಷಯಗಳು ಸವಿಸ್ತಾರವಾಗಿ ಹೇಳಲ್ಪಟ್ಟವೆ.

7. ಆಯುರ್ವೇದದಿಂದ ತಿಳಿದುಬರುವ ಪ್ರಾಚೀನ ವನಸ್ಪತಿಶಾಸ್ತ್ರ.

ಪ್ರಬಂಧಕಾರರು—ಶ್ರೀ ಎಸ್. ಬಿ. ದತ್, M.R.A.S. ಕಲ್ಕತ್ತಾ.

ಆಯುರ್ವೇದದ ಶಾಸ್ತ್ರದಲ್ಲಿ ವನಸ್ಪತಿಗಳ ಹೆಸರುಗಳು ಅಸಂಖ್ಯಾತವಾಗಿದ್ದರೂ ಅವುಗಳ ಸ್ವರೂಪ ಲಕ್ಷಣಗಳಿಗನುಸಾರವಾಗಿ ವನಸ್ಪತಿಶಾಸ್ತ್ರದೃಷ್ಟ್ಯಾ ವಿಭಾಗಗಳು ಕಂಡುಬರುವುದಿಲ್ಲ. ಆದರೂ ಆಯುರ್ವೇದ ಗ್ರಂಥಗಳ ಸಹಾಯದಿಂದ ಭಾರತವನಸ್ಪತಿಶಾಸ್ತ್ರವೊಂದನ್ನು ಸಂಗ್ರಹಿಸಲು ಬೇಕಾದಷ್ಟು ಅನುಕೂಲಗಳು ದೊರೆಯುತ್ತವೆ.

ವನಸ್ಪತಿಶಾಸ್ತ್ರದಿಂದ ಬರೀ ಜ್ಞಾನಾಭಿವೃದ್ಧಿಯು ಮಾತ್ರವೇ ಅಲ್ಲದೆ ಅದರಿಂದ ಜನರ ಸಂಪದಭಿವೃದ್ಧಿಗೂ ಸಹಾಯವಾಗುತ್ತದೆ. ಅನೇಕ ವರ್ಷಗಳ ಕೆಳಗೆ ವನಸ್ಪತಿಗಳಿಂದ ಏನು ಉಪಯೋಗ ಜನರು ಪಡೆಯುತ್ತಿದ್ದರೆಂಬುದು ಗೊತ್ತಾದರೆ, ಆ ಉಪಯೋಗವನ್ನು ಪಡೆಯುವುದಕ್ಕೆ ನಾವೂ ಪ್ರಯತ್ನ ಮಾಡಬಹುದು. ಅದರಿಂದ ನಮ್ಮ ಸಂಪದಭಿವೃದ್ಧಿಯೂ ಆಗುತ್ತದೆ.

ನಮ್ಮ ಆಯುರ್ವೇದಶಾಸ್ತ್ರ ಸಹಾಯದಿಂದ ವನಸ್ಪತಿಶಾಸ್ತ್ರವನ್ನು ಸಂಗ್ರಹಿಸಲು ಸಾಧ್ಯವೆಂಬುದನ್ನು ತೋರಿಸಲು 50 ವನಸ್ಪತಿಗಳನ್ನು ತೆಗೆದುಕೊಂಡು ವಿಚಾರಮಾಡಿದ್ದೇವೆ. ಅವುಗಳ ಪೈಕಿ 13 ಔಷಧವಾಗಿ ಉಪಯೋಗಿಸತಕ್ಕವು. ಇತರ ವನಸ್ಪತಿಗಳು ಬೇರೆ ಬೇರೆ ಉಪಯೋಗಕ್ಕೆ ಬರುತ್ತವೆ. ಆಹಾರಕ್ಕಾಗಿರುವ 16, ಎಣ್ಣೆಗೋಸ್ಕರ 4, ನಾರಿಗೋಸ್ಕರ 5, ಮನೆಯ ಉಪಯೋಗಕ್ಕೋಸ್ಕರ 12, ಚರ್ಮವನ್ನು ಹದಮಾಡುವುದಕ್ಕೂ ಬಣ್ಣ ಹಾಕುವುದಕ್ಕೂ 3, ಸುವಾಸನಾ ದ್ರವ್ಯಗಳು 2.

ಆಯುರ್ವೇದ ವನಸ್ಪತಿಗಳು ಪ್ರಾಯಶಃ ಜನರಿಗೆ ಇತರ ವಿಧವಾಗಿ ಉಪಯೋಗದಲ್ಲಿದ್ದುದಾದಕಾರಣ ಅವುಗಳು ಬಹಳ ಸಾಧಾರಣವಾಗಿ ದೊರೆಯುತ್ತಿದ್ದವು. ಔಷಧಕ್ಕೋಸ್ಕರ ಪ್ರತ್ಯೇಕವಾಗಿ ಬೆಳೆಯಿಸಬೇಕಾದ್ದು ಕೆಲವೇ. ಪಾಶ್ಚಾತ್ಯವೈದ್ಯದ ಔಷಧಗಳಂತೆ ಜನರಿಗೆ ಹೆಚ್ಚು ಖರ್ಚನ್ನುಂಟುಮಾಡುವವಲ್ಲ. ಆಯುರ್ವೇದಜ್ಞರು ಈ ವನಸ್ಪತಿಗಳನ್ನು ಶೋಧನೆಮಾಡುವುದರಿಂದ ಪಾಶ್ಚಾತ್ಯವೈದ್ಯಶಾಸ್ತ್ರಕ್ಕೆ ಸಮವಾದ ಗೌರವವನ್ನು ಆಯುರ್ವೇದಕ್ಕೂ ಸಂಪಾದಿಸಿಕೊಡುವುದಲ್ಲದೆ ಭಾರತವನಸ್ಪತಿಶಾಸ್ತ್ರವನ್ನು ಸಂಗ್ರಹಿಸಲು ಶಕ್ತರಾಗುವರು.

ಉದಾಹರಣೆಗಾಗಿ ಕೆಲವು ವನಸ್ಪತಿಗಳ ವಿಚಾರಮಾಡೋಣ.

ಕುಲಂಜನ—

ಇದು ಸುಮಾತ್ರ, ಜಾವಾ ಮತ್ತು ದಕ್ಷಿಣ ಇಂಡಿಯಾದಲ್ಲಿ ಬೆಳೆಯುತ್ತದೆ. ವರ್ತಕರು ಇದನ್ನು 'ಜಾವಾ ಹಲಂಗಲ್' ಎಂದು ಕರೆಯುತ್ತಾರೆ. ಭಾವಪ್ರಕಾಶಕಾರರು 'ಮಲಬಾರಿ ಒಚ್' ಎಂಬ ಹೆಸರಿನಿಂದ ಇದನ್ನು ವ್ಯವಹರಿಸುತ್ತಾರೆ. 12 ನೆಯ ಶತಮಾನದ ವರೆಗೂ ಜಾವಾದಿಂದ ದೊಡ್ಡ ಕುಲಂಜನವೂ, ಚೀಣಾದಿಂದ ಚಿಕ್ಕ ಕುಲಂಜನವೂ ಬರುತ್ತದೆ ಎಂದು ಪ್ರತೀತಿ ಇತ್ತು. ಇವೆರಡೂ ಬೇರೆ ಜಾತಿಯವು. ಕೆಲವು ಕಾಲದ ಮೇಲೆ ಮಲಬಾರಿನಲ್ಲಿಯೂ ಬಂಗಾಳದಲ್ಲಿಯೂ ಬೆಳೆಯುವುದಕ್ಕೆ ಆರಂಭವಾಯಿತು. ಅಂಗಡಿಗಳಲ್ಲಿ ಮಾರುವ ಕುಲಂಜನದಲ್ಲಿ ಕೆಲವುಮಟ್ಟಿಗೆ ಅಡವಿಯಲ್ಲಿ ಬೆಳೆದುದೂ ಬರುತ್ತದೆ. ಪಶ್ಚಿಮದಲ್ಲಿ ಔಷಧವಾಗಿ ಉಪಯೋಗಿಸುವುದಕ್ಕಿಂತಲೂ, ಸುವಾಸನೆಗೆ ಹೆಚ್ಚಾಗಿ ಉಪಯೋಗಿಸುತ್ತಾರೆ.

ಸಪ್ತಪರ್ಣಚಕ್ಕೆ. Alstonia Scholaris—

ಇದು ಭರತಖಂಡದಲ್ಲಿ ನೀರು ಹೆಚ್ಚಾಗಿರುವ ಕಡೆಯಲ್ಲಿ ಬೆಳೆಯುತ್ತದೆ. ಬಹುಕಾಲದಿಂದಲೂ ಔಷಧಿಗಾಗಿ ಉಪಯೋಗದಲ್ಲಿದೆ. ಸುಶ್ರುತದಲ್ಲಿಯೂ ಇದನ್ನು ಬಹಳವಾಗಿ ಹೊಗಳಿಧಾರೆ. ಅಜೀರ್ಣರೋಗದಲ್ಲಿ ಇದರಿಂದ ಬಹಳ ಉಪಯೋಗವಂತೆ. ಅದರ ತೊಗಟೆಯನ್ನು ಕ್ವಿನಯಿನ್‌ನಂತೆ ಉಪಯೋಗಿಸಬಹುದು. ಆದರೆ ಅದರಷ್ಟು ಗುಣಗಳಿಲ್ಲ. ಇದರ ಆಕಾರದಿಂದಲೂ ವಾಸನೆಯಿಂದಲೂ ಇದನ್ನು ನೋಡಿ ಜನರು ಹೆದರುತ್ತಾರೆ. ಬರ್ಮಾದೇಶದಲ್ಲಿ ಈ ಮರದ ಹಲಗೆಗಳ ಮೇಲೆ ಮರಳನ್ನು ಹರಡಿ ಮಕ್ಕಳು ಅಕ್ಷರಗಳನ್ನು ತಿದ್ದುತ್ತಾರೆ. ಇದರ ಮರವು ಬಹಳ ಹಗುರವಾಗಿರುವುದರಿಂದ ಪೆಟ್ಟಿಗೆಗಳನ್ನು ಮಾಡುವುದಕ್ಕೂ ಸಾಮಾನುಗಳನ್ನು ಸಾಗಿಸುವುದಕ್ಕು ಉಪಯೋಗಿಸುತ್ತಾರೆ.

ಇದೇ ರೀತಿಯಾಗಿ ಇನ್ನು ಒಂದೆರಡು ವನಸ್ಪತಿಗಳ ವಿಚಾರ ತೋರಿಸಿ, ತಾವು ಪ್ರತ್ಯೇಕವಾಗಿ ವಿಚಾರಮಾಡಿರುವ ಸುಮಾರು 46 ಮೂಲಿಕೆಗಳ ಹೆಸರನ್ನು ಮಾತ್ರ ಕೊನೆಗೆ ಕೊಟ್ಟಿಧಾರೆ.

ಚಿಕಿತ್ಸಾಸಂಭಾಷಾಪರಿಷತ್ತಿನ ಕಾರ್ಯಕ್ರಮ.

ಕೊಲೊಂಬೋ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲ್‌ರವ ಕ್ಯಾಪ್ಟನ್ ಪನಿಕ್ಕರ್, ಎಲ್. ಆರ್. ಸಿ. ಪಿ., ಎಂ. ಆರ್. ಸಿ. ಎಸ್., ರವರ ಘನ ಕ್ಷತೆಯಲ್ಲಿ ಚಿಕಿತ್ಸಾ ಸಂಭಾಷಾ ಪರಿಷತ್ತಿನ ಕಾರ್ಯಕ್ರಮವು 28-12-1930 ನೆ ದಿವಸ 2-30 ಗಂಟೆಗೆ ಸರಿಯಾಗಿ ಉಪಕ್ರಮವಾಯಿತು. ಸಭಾಮಂದಿರವು ಸ ಸಿದ್ಧ ಪ್ರತಿನಿಧಿಗಳಿಂದಲೂ, ಸ್ವಾಗತಮಂಡಲದ ಸದಸ್ಯರುಗಳಿಂದಲೂ ಮ ಪ್ರೇಕ್ಷಕರಿಂದಲೂ ಕಿಕ್ಕಿರಿಯುವಂತೆ ತುಂಬಿದ್ದಿತು. ಅಗ್ರಾಸನಾಧಿಪತಿಗಳು ಸ ವಾದ ವಾಗ್ಝರಿಯಲ್ಲಿ ಪೂರ್ಣ ಪಾಂಡಿತ್ಯ ಪ್ರದರ್ಶಕವಾದ ತಮ್ಮ ಭಾಷಣವ ಮಾಡಿದರು. ಆಯುರ್ವೇದ ಶಾಸ್ತ್ರರೀತ್ಯ ಸ್ವಸ್ಥವೃತ್ತದ ನಿಯಮಗಳು, ದಿನಚ ಋತುಚರ್ಯ, ಸ್ನಾನ, ಅಭ್ಯಂಗ, ವ್ಯಾಯಾಮ ಇವೇ ಮೊದಲಾದ ವಿಷಯಗಳ ವಿವರಿಸಿ, ಕಠಿನತರವಾದ ಮತ್ತು ಬಹುದಿವಸಗಳಿಂದಲೂ ಬಾಧಿಸುತ್ತಿ ಕೆಲವು ರೋಗಗಳ ನಿದಾನ ಮತ್ತು ಚಿಕಿತ್ಸಾವಿಧಿಗಳನ್ನು ತಿಳಿಸಿದರು.

ಈವಿಷಯಕ್ಕೆ ಸಂಬಂಧಪಟ್ಟ ಲೇಖನಗಳು ದೇಶಭಾಷೆಗಳಲ್ಲೇ ಅನೇಕವ ಇದ್ದುದರಿಂದ, ಎಲ್ಲವನ್ನೂ ವಿವರವಾಗಿನೋಡಲು ಅಗ್ರಾಸನಾಧಿಪತಿಗಳಿಗೆ ಆಗಲ ಆದಾಗ್ಯೂ ಚಿಕಿತ್ಸಾ ವಿಷಯಿಕ ಚರ್ಚೆಯು ಯಾವ ಕ್ರಮದಲ್ಲಿ ನಡೆಯಬೇಕ ಅದನ್ನು ಸೂಚಿಸಿ, ಕೆಲವು ಲೇಖನಗಳನ್ನು ಓದಲು ಅವಕಾಶಕೊಟ್ಟ ಶಾಸ್ತ್ರಾಧಾರದ ಮೇಲೆ ನಡೆದ ಚರ್ಚೆಯನ್ನು ಕೇಳಿ, ಸಂತೋಷಪಟ್ಟು, ಕೊ ಅವರು ಸಮಂಜಸವಾದ ಉತ್ತರವನ್ನು ಕೊಟ್ಟರು. ಅಗ್ರಾಸನಾಧಿಪತಿಗ ಮನಃಪೂರ್ವಕವಾದ ವಂದನೆಗಳನ್ನು ಅರ್ಪಿಸಿ, ಸಭೆಯು ಮುಕ್ತಾಯವಾಯಿ

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦



ಆಯುರ್ವೇದಭೂಷಣ ಕ್ಯಾಪ್ಟನ್ ಪನಿಕರ್, L.R.C.P., M.R.C.S.

(ಕೊಲಂಬೋ ಆಯುರ್ವೇದಿಕ್ ಕಾಲೇಜಿನ ಪ್ರಿನ್ಸಿಪಾಲರು.)

ಚಿಕಿತ್ಸಾಸಂಭಾಷಾಪರಿಷತ್ತಿನ ಅಧ್ಯಕ್ಷರವರು.

ಚಿಕಿತ್ಸಾ ಸಂಭಾಷಾ ಪರಿಷತ್ತಿನಲ್ಲಿ ಓದುವುದಕ್ಕೂ ಮತ್ತು ಚರ್ಚಿಸುವುದಕ್ಕೂ ಬಂದಿದ್ದ ಲೇಖನಗಳು ಯಾವುವೆಂದರೆ:—

ಲೇಖಕರ ಹೆಸರುಗಳು	ಭಾಷೆ	ವಿಷಯ
1. ಮೈಸೂರಿನ ಆಯುರ್ವೇದವಿದ್ವಾನ್ ಟಿ. ಕೃಷ್ಣಶಾಸ್ತ್ರಿಗಳವರು	ಕನ್ನಡ	ಆಯುರ್ವೇದದ ಕ್ರಮದಲ್ಲಿ ಪ್ಲೇಗಿನ ಚಿಕಿತ್ಸೆ
2. ಪೊಲ್ಲಾಚಿ ವೈದ್ಯವಿಶಾರದ ಶ್ರೀ|| ಪಿ. ಎಸ್. ಅನಂತನಾರಾಯಣಶರ್ಮ	ಸಂಸ್ಕೃತ	ವಾತರಕ್ತ
3. ಶಿಕಾರಿಪುರದ ವೈದ್ಯ ರಾಜ ಶ್ರೀ|| ಭವಾನೀ ದತ್ತಶರ್ಮ	ಹಿಂದಿ	ಕಣ್ಣು ಮತ್ತು ಅದರ ಸಂಬಂಧದ ವಿಷಯ
4. ಕಾಥ್ಯವಾಡದ ಪೂರೀಬಂದರಿನ ಶ್ರೀ|| ಪಂ|| ಬಲವಂತಶರ್ಮ	ಸಂಸ್ಕೃತ	ಮಾಧವಾಕರನ ಪ್ರಕಾರ ಕೆಲವು ರೋಗ ಲಕ್ಷಣದ ಪರಿಶೀಲನೆ
5. ಬಳ್ಳಾರಿ ಮ್ಯುನಿಸಿಪಲ್ ಆ. ಆಸ್ಪತ್ರೆಯ ಮ|| ಹೆಚ್. ಪಿ. ರಾಘವೇಂದ್ರಾಚಾರ್ಯರು	ತೆಲಗು ಮತ್ತು ಸಂಸ್ಕೃತ	ಕರುಳಿನ ಕ್ರಿಮಿಗಳು, ಆ ಪ್ರಕಾರ ಅದರ ಚಿಕಿತ್ಸೆ
6. ತುಮಕೂರು ಚಿಕ್ಕಪೇಟೆಯ ಮ|| ವಿ. ಎನ್. ಚನ್ನಗಿರಯ್ಯನವರು	ಕನ್ನಡ	ಕ್ಷಯ ಮತ್ತು ಅದರ ಚಿಕಿತ್ಸೆ
7. ವಿಜಯನಗರದ ವ್ಯಾಸಕುಟೀರದ ಡಾ|| ಜೆ. ವ್ಯಾಸರಾಯರು	ಇಂಗ್ಲಿಷ್	ಗುಲ್ಮ, ಪಿತ್ತಕೋಶಮತ್ತು ಮಕ್ಕಳ ವಿಶೇಷ ಚಿಕಿತ್ಸಾ
8. ಸಿರಾ ತಾಲ್ಲೂಕು ಬುಕ್ಕಾಪಟ್ನದ ಮ|| ಲಕ್ಷ್ಮಯ್ಯನವರು	ಕನ್ನಡ	ಅನೇಕ ರೋಗಗಳಿಗೆ ಕೆಲವು ಗೊತ್ತಾದ ಚಿಕಿತ್ಸೆಗಳು
9. ಶ್ರೀ|| ದೇಹಲಿ ಪಂಡಿತ ಮಖನಲಾಲ್‌ಶರ್ಮರವರು	ಹಿಂದಿ	ಟಥೋಸ್ಕೋಪಿನ ವರ್ಣನೆ ಮತ್ತು ಕೆಲವು ಕಾಯಿಲೆಗಳಲ್ಲಿ ಅದರ ಉಪಯೋಗ
10. ಅರಸೀಕೆರೆ ತಾ|| ಜಾವಗಲ್ಲು ಶ್ರೀ|| ಆ|| ವಿದ್ವಾನ್ ವೈ. ಎ. ಶ್ಯಾಮಣ್ಣ	ಕನ್ನಡ	ಆರೋಗ್ಯತತ್ವಗಳು
11. ಮೈಸೂರು ಗೌ|| ಆ|| ಆಸ್ಪತ್ರೆಯ ಕವಿರಾಜ ಕೆ. ಎ. ಚಿಟ್ಟಯಣ್ಣ ಎಲ್.ಎ.ಎಂ.ಎಸ್.	ಇಂಗ್ಲಿಷ್	ಉದುಂಬರಸಾರ
12. ಈರೋಡಿನ ಮುನಿಸಿಪಲ್ ಸಿದ್ಧ ಆಸ್ಪತ್ರೆಯ ಮ|| ಟಿ. ಜಿ. ರಾಮಮೂರ್ತಿ ಅಯ್ಯರ್‌ರವರು	ಇಂಗ್ಲಿಷ್	ಸಿದ್ಧರ ಪದ್ಧತಿಯ ಪ್ರಕಾರ ಚಿಕಿತ್ಸಾ

ಲೇಖಕರ ಹೆಸರು	ಭಾಷೆ	ವಿಷಯ
13. ಮೈಸೂರು ಅ॥ ವಿ॥ ಗೋಪಾಲ ಕೃಷ್ಣಾವಧಾನಿಗಳು	ಕನ್ನಡ	ಕಾಮಾಲೆ ಮತ್ತು ಅದರ ಚಿಕಿತ್ಸೆ.
14. ಅರಕಲಗೂಡು ಶ್ರೀ ಮಲ್ಲಿಪಟ್ಟಣದ ಶ್ರೀ॥ ಕೆ. ವಿ. ನಾರಾಯಣರಾಯರು	ಕನ್ನಡ	ಗುಲ್ಮವ್ಯಾಧಿಯ ಚಿಕಿತ್ಸೆ.
15. ಮೈಸೂರು ಆ॥ ವಿ॥ ಮ॥ ಟ. ಶ್ರೀನಿವಾಸ ಅಯ್ಯಂಗಾರ್ಯರು.	ಇಂಗ್ಲಿಷ್	ಕರುಳಿನ ಕ್ರಿಮಿ ಮತ್ತು ಅದರ ಚಿಕಿತ್ಸೆ.
16. ಮ॥ ಕೆ. ವಿ. ರಾಮ್	ಕನ್ನಡ	ಬಾಲರೋಗಚಿಕಿತ್ಸಾ.
17. ಮೈಸೂರು ಆ॥ ಕಾಲೇಜಿನ 4 ನೇ ತರಗತಿ ವಿದ್ಯಾರ್ಥಿ ಶ್ರೀ ಬಿ. ವೆಂಕಟಸುಬ್ಬಯ್ಯ (1) (2) ಮತ್ತು (3)	ಕನ್ನಡ	ಗರ್ಭಿಣಿಯರ ರೋಗಗಳು ಮತ್ತು ಚಿಕಿತ್ಸೆ.

ಉದುಂಬರಸಾರ.

ಪಂ॥ ಕೆ. ಎ. ಚಿಟ್ಟಿಯಣ್ಣ, L.A.M.S. ಫಿಜಿಷಿಯನ್ ಅಂಡ್ ಸರ್ಜನ್,
ಗೌ॥ ಆಯುರ್ವೇದಿಕ್ ಆಸ್ಪತ್ರೆ, ಮೈಸೂರು.

ಸಾಮಾನ್ಯ ಮರವಾದ ಅತ್ತಿಮರದ ರಸಕ್ರಿಯೆಯು ಹೊಸ ಔಷಧವಲ್ಲ. ಅತ್ತಿಚಕ್ಕೆ, ಎಲೆ, ಹೀಚು, ಎಲ್ಲವನ್ನೂ ಜಜ್ಜಿ ಅದರ 8 ರಷ್ಟು ನೀರಿನಲ್ಲಿ ಬೇಯಿಸಿ ಶೋಧಿಸಿ, ಆ ಕಷಾಯವನ್ನು ಗಟ್ಟಿಯಾಗುವವರೆವಿಗೂ ಕಾಯಿಸಿದರೆ ಸಿಕ್ಕುವ ಲೇಹ್ಯವೇ ಉದುಂಬರಸಾರ. ನಮ್ಮ ಗೌ॥ ಆಯುರ್ವೇದಿಕ್ ಆಸ್ಪತ್ರೆಯಲ್ಲಿ ಇದನ್ನು ಸಾವಿರಾರು ಜನಗಳಿಗೆ ಉಪಯೋಗಿಸಿ ಇದರ ಒಳ್ಳೆಯ ಗುಣಗಳನ್ನು ಸಿದ್ಧಾಂತಮಾಡಿದ್ದೇವೆ. ಪುರಾತನವಾದ ನಮ್ಮ ಆಯುರ್ವೇದಶಾಸ್ತ್ರದಲ್ಲಿ ಇಂತಹ ವಿಷಯುಗಳು ಹೇರಳವಾಗಿರುತ್ತವೆ.

ಶಸ್ತ್ರಕ್ರಿಯೆಯನ್ನು ಮಾಡುವಾಗಲೂ ಮತ್ತು ವ್ರಣಚಿಕಿತ್ಸೆಗಳಲ್ಲೂ ಇದಿಲ್ಲದಿದ್ದರೆ ಕೆಲಸ ನಡೆಯುವದೇ ಇಲ್ಲ. ಇದರ 1 ತೊಲೆಯಷ್ಟನ್ನು 50 ತೊಲೆ ಮರಳುವ ನೀರಿನಲ್ಲಿ ಕರಗಿಸಿರುವ ಉದುಂಬರ ಸಾರವು ಸಾಧಾರಣ ಮತ್ತು ದುಷ್ಟ ವ್ರಣಗಳನ್ನು ತೊಳೆಯುವುದಕ್ಕೂ ರಕ್ತವನ್ನು ನಿಲ್ಲಿಸುವುದಕ್ಕೂ ಅತ್ಯಂತ ಉತ್ತಮವಾದದ್ದು. ಈ ಔಷಧವನ್ನು ನಮ್ಮ ಆಸ್ಪತ್ರೆಯಲ್ಲಿ ಉಪಯೋಗಿಸಿದ್ದರಲ್ಲಿ

1929-30 ರಲ್ಲಿ ಸುಮಾರು 6000 ರೋಗಿಗಳಲ್ಲಿ ಯಾವ ಉಪದ್ರವಗಳೂ ಇಲ್ಲದೆ ಗುಣಮಾಡಿರುತ್ತೆ.

ಹರಿತವಾದ ಪದಾರ್ಥಗಳಿಂದ ಗಾಯವಾದಾಗ ಈ ಜಲದಿಂದ ತೊಳೆದು ಉದುಂಬರಸಾರವನ್ನು ಒಂದು ಮಡಿಯಾದ ಬಟ್ಟೆಗೆ ತಡವಿ ಬಟ್ಟೆಯನ್ನು ಅಲ್ಲಿಗೆ ಇಟ್ಟು ಪಟ್ಟ ಕಟ್ಟಿದರೆ ವ್ರಣವು ಕೊಳೆಯದೆ 1 ವಾರದಲ್ಲಿ ಮಾಯುವುದು. ಪ್ರದರದಲ್ಲಿ ಹೊಟ್ಟೆಗೆ ಕೊಡಬಹುದು. ರಕ್ತಪಿತ್ತ, ರಕ್ತಾತಿಸಾರಗಳಲ್ಲಂತೂ ಇದು ಬಹು ಶೀಘ್ರಕಾರಿಯಾಗಿ ಕೆಲಸಮಾಡುತ್ತದೆ.

ಹಲ್ಲಿನ ವಸಡು ಮತ್ತು ನಾಲಿಗೆಯಲ್ಲಿ ಆಗುವ ವಾತ ಮತ್ತು ಪೂಯಗಳ ಸ್ಥಿತಿಯಲ್ಲಿ ಈ ಸಾರವನ್ನೇ ಅಲ್ಲಿಗೆ ಹಚ್ಚಬಹುದು. ಅಥವಾ ಆ ಜಲದಿಂದ ಗಂಡೂಷ ಮಾಡಿದರೆ ರೋಗಿಗೆ ತುಂಬಾ ಅನುಕೂಲವಾಗುತ್ತದೆ.

ಉರಿಗಣ್ಣು, ಕಣ್ಣುನೋವು ಮುಂತಾದವುಗಳಲ್ಲಿ ದಿನಕ್ಕೆ 2-3 ಸಾರಿ ಈ ದ್ರವದಿಂದ ತೊಳೆದಲ್ಲಿ ಅತ್ಯಂತ ಫಲಕಾರಿಯಾಗಿದೆ. ಕರ್ಣಸ್ರಾವದಲ್ಲಿ ಈ ದ್ರವದಿಂದ ಕಿವಿಯನ್ನು ತೊಳೆದಲ್ಲಿ ತುಂಬಾ ಗುಣಕಾರಿಯಾಗಿ ಕಂಡುಬಂದಿದೆ.

ಪೂಯಮೇಹ, ಸೋಮರೋಗ ಮುಂತಾದ ವ್ಯಾಧಿಗಳಲ್ಲೂ, ದೊಡ್ಡ ಕರುಳಿನ ವ್ಯಾಧಿಯಲ್ಲೂ (ಪ್ರವಾಹಿಕಾ, ರಕ್ತಾತಿಸಾರ) ವಸ್ತಿಕರ್ಮದಿಂದ ಈ ಜಲವನ್ನು ಉಪಯೋಗಿಸಿದರೆ ಮೊದಲನೆ ಉಪಯೋಗದಲ್ಲೇ ಗುಣ ಕಾಣುವುದು.

ನಮ್ಮ ಘನ ಸರ್ಕಾರದವರು ಇಷ್ಟುಮಟ್ಟಿಗೆ ನಾಮ್ಮಲ್ಲಿ ಶಾಸ್ತ್ರಲೋಡನೆ ಮತ್ತು ಪ್ರಸರಣಮಾಡಲು ಅನುಕೂಲಿಸುವಂತೆ ಕಾಲೇಜು ಮುಂತಾದವನ್ನು ಸ್ಥಾಪಿಸಿರುವುದಕ್ಕಾಗಿ ವೈದ್ಯರೂ, ಪ್ರಜೆಗಳೂ ಬಹಳ ಕೃತಜ್ಞರಾಗಿರಬೇಕಾಗಿದೆ.

ಕ್ರಿಮಿಗಳು.

ಭಿಷಕ್‌ಚೂಡಾಮಣಿ ಆ|| ವಿ|| ಪಂ|| ಟಿ. ಶ್ರೀನಿವಾಸಯ್ಯಂಗಾರವರು.

ಲೆಕ್ಚರರ್ ಗೌ|| ಆಯುರ್ವೇದಿಕ್ ಕಾಲೇಜ್ ಮತ್ತು ಫಿಜಿಷಿಯರ್ನ-ಇಂಡಿಜಿನಸ್ ಆಸ್ಪಟಲ್ ಮೈಸೂರು, ಇವರಿಂದ.

ಬಹು ಸಾಧಾರಣರೋಗವೂ ಕೆಲವು ವೇಳೆ ಮೋಹವನ್ನುಂಟುಮಾಡಿ ನಿರ್ಣಯಿಸಲು ಕಷ್ಟವಾಗಬಹುದು.

20 ವರ್ಷದ ಹುಡುಗನೊಬ್ಬನಿಗೆ ಹೊಟ್ಟೆ ದಪ್ಪನಾಗಿ, ಕೈಕಾಲು ಸಣ್ಣನಾಗಿ, ಮಾತು ನಿಂತುಹೋಗಿ, ಮಂಕುಬಂದು, 10 ವರ್ಷದ ಹುಡುಗನಂತೆ ಕಾಣುತ್ತಿದ್ದನು. ವೈದ್ಯರಿಂದ ರೋಗ ನಿರ್ಣಯವಾಗಲೇ ಇಲ್ಲ. ಅವನ ಮರಣಾನಂತರ ಒಳಗೆ ನೋಡಿದಾಗ ಹೊಟ್ಟೆ ಕರುಳುಗಳ ತುಂಬ ಉದ್ದವಾದ ಕೃಮಿಗಳು ತುಂಬಿದ್ದವು.

ಅಜೀರ್ಣರೋಗಭೂಯಿಷ್ಠವಾದ ನಮ್ಮ ದೇಶದಲ್ಲಿ ಕೃಮಿಗಳಿಂದ ಆಗುವ ಹಾವಳಿ ಬಹಳ ಹೆಚ್ಚು. ಕೃಮಿನಾಶವಾದರೆ ಆ ರೋಗಸಮೂಹವೆಲ್ಲ ನಾಶವಾಗುವದು. ಅದನ್ನು ನಿರ್ಣಯಿಸುವದು ಕೆಲವು ವೇಳೆ ಅತಿ ಕಷ್ಟವಾಗುವದು. ಆಗ ವಾಗ್ಭಟನು ಹೇಳುವಂತೆ ದೂಷ್ಯದೇಶಾದಿಗಳನ್ನು ಚನ್ನಾಗಿ ವಿಮರ್ಶಿಸಬೇಕು.

ರೋಗಿ ತಿಳಿಸುವ ಮತ್ತು ವೈದ್ಯನು ಪರೀಕ್ಷೆಯಿಂದ ತಿಳಿಯುವ ಸರ್ವ ಲಕ್ಷಣಗಳನ್ನೂ ಒಟ್ಟುಗೂಡಿಸಿ ನಂತರ ಚಿಕಿತ್ಸೆಮಾಡುವ ಹೋಮಿಯೋಪಾಥಿಯವರಂತೆ ನಮ್ಮಲ್ಲಿರುವ ಸೂತ್ರಗಳನ್ನೂ ಶ್ಲೋಕಗಳನ್ನೂ ವಿಸ್ತರಿಸಿಕೊಳ್ಳಬೇಕು.

ಕೇವಲ ದುರ್ಲಕ್ಷಣಗಳಿಂದ ಕೂಡಿದ ವೃದ್ಧಹೆಂಗಸೊಬ್ಬರನ್ನು ಹೊರಗಿನ ಕೊಠಡಿಯಲ್ಲಿಟ್ಟಿದ್ದರು. ನಾನು ಎಷ್ಟು ಪರೀಕ್ಷಿಸಿದರೂ ರೋಗನಿರ್ಣಯವಾಗಲಿಲ್ಲ. ಇದ್ದಕ್ಕಿದ್ದ ಹಾಗೆ ಆಕೆ ಬಾಯಿತೆರೆದರು. ಆಗ ಗಂಟಲಿನಲ್ಲಿ ಒಂದು ಉದ್ದವಾದ ಜಂತುವು ಕಾಣಿಸಿತು. ಅದನ್ನು ಈಚೆಗೆ ಕಿತ್ತುಹಾಕಿ, ಮನೆಗೆ ಬಂದು ಕ್ರಿಮಿಯ ಔಷಧವನ್ನು ಕೊಡಲಾಗಿ ರೋಗಿಯು ಒಳಕ್ಕೆ ಎದ್ದು ಹೋದರು.

ಗ್ರಾಮಾಂತರದಲ್ಲಿ ಒಬ್ಬಾಕೆಗೆ ಮೂರ್ಛೆ-ವ್ಯಾಧಿಯು ಬರುತ್ತಿತ್ತು. ಆಕೆಯ ಲಕ್ಷಣಗಳನ್ನು ನೋಡಿದ್ದರಲ್ಲಿ ಅಪಸ್ಮಾರವೆಂದು ಹೇಳಲು ನನಗೆ ಸಂದೇಹವಿತ್ತು ಕೆಲವು ಕಾಲದಮೇಲೆ ಗ್ರಂಥವನ್ನು ನೋಡುತ್ತಿದ್ದಾಗ ಈ ಶ್ಲೋಕವು ಕಣ್ಣಿಗೆ ಬಿತ್ತು.

ಅಕಸ್ಮಾತ್ಪತಿತೋ ಭೂಮೌ ಚಕ್ಷುರ್ಭ್ಯಾನಚಪಶ್ಯತಿ ।
ಮುಖೇಲಾಲಾಭವೇದ್ಯಸ್ಯ ಸಂಜಾತಕೃಮಿಲಕ್ಷಣಂ ॥

ಕೂಡಲೆ ಆಕೆಗೆ ಕೃಮಿಹರೌಷಧವನ್ನು ದಿನಕ್ಕೆರಡುವೇಳೆಯಂತೆ ೭ ದಿನಕ್ಕಾಗುವಷ್ಟು ಕಳುಹಿಸಿದೆ. ಆರುದಿನ ತೆಗೆದುಕೊಂಡಮೇಲೆ ಆಕೆಗೆ ಭೇದಿಯಾಗುವಂತೆ ಕೃಮಿಗಳು ೧೦೦ ಗಟ್ಲೆ ಹೊರಬಿದ್ದವು. ರೋಗನಿರ್ಣಯಮಾಡಲು ಮನಶ್ಶಾಂತಿ ಇರಬೇಕು. ವ್ಯಂಗಕ್ಕೂ ಕೃಮಿಗೂ, ಕಂಡೂ, ಕೋಠಗಳಿಗೂ ಕೃಮಿರೋಗಕ್ಕೂ ಸಂಬಂಧವಿರುವಂತೆ ಕಾಣುತ್ತದೆ. ಕೆಲವುಕಡೆ ಮಾಡಿದ ಚಿಕಿತ್ಸೆಗಳ ಫಲದ ಅನುಭವದಿಂದ ಈ ಮಾತನ್ನು ಹೇಳುತ್ತೇನೆ.

ಕೃಮಿಹರೌಷಧಗಳ ವಿಷಯದಲ್ಲಿ ದ್ರವ್ಯಗಳು ಅನೇಕವುಂಟು. ಕೆಲವು ಆಶುಕಾರಿಗಳು, ಕೆಲವು ಚಿರಕಾರಿಗಳು, ಕೆಲವುಗಳಲ್ಲಿ ಪಶ್ಚಾತ್ ಫಲಗಳು ದುಷ್ಟ; ಕೆಲವುಗಳನ್ನು ತೆಗೆದುಕೊಳ್ಳಲು ಅಸಹ್ಯವು. ಇವನ್ನೆಲ್ಲ ನೋಡಿ ಕಡೆಗೆ ನನ್ನ ಸಿದ್ಧಾಂತವು ಯೋಗರತ್ನಾಕರಸ್ಥ ಕ್ರಿಮಿಕುಠಾರರಸದಲ್ಲಿ ನಿಂತಿದೆ. ಮೂಲಿಕೆಯಲ್ಲಿ ಮಂಚಿಪತ್ರಿಯು ಉತ್ತಮ. ದೊಡ್ಡವರು ೧ ಚಮಚ ಇದರ ರಸವನ್ನು ಕೆಲವು ವೇಳೆ ತೆಗೆದುಕೊಳ್ಳಬೇಕು. ಮಕ್ಕಳಿಗೆ ಈ ಸೊಪ್ಪನ್ನು ಅರೆದು ನಾಭಿ ಗುದಗಳಿಗೆ ಲೇಪಮಾಡುವದರಿಂದ ಬಹಳ ಅನುಕೂಲ ಕಾಣುತ್ತದೆ.

ಅಂತೂ ಈ ರೋಗದ ವಿಷಯದಲ್ಲಿ ಶಾಸ್ತ್ರಾನುಸಾರ "ಜ್ವರೋವಿವರ್ಣತಾ...." ಇತ್ಯಾದಿ ಶ್ಲೋಕಗಳನ್ನು ಯಾವಾಗಲೂ ಜ್ಞಾಪಕವಿಟ್ಟುಕೊಂಡಿರಬೇಕು.

ಆಯುರ್ವೇದ ವಿದ್ವಾನ್ ಪಂ|| ಗೋಪಾಲಕೃಷ್ಣವೆಥಾನಿಗಳವರಿಂದ ಪಾಂಡುರೋಗ (ಚಿಕಿತ್ಸೆಯ) ವಿಷಯವಾಗಿ ಓದಲ್ಪಟ್ಟ ಉಪನ್ಯಾಸದ ಮುಖ್ಯ ಸಾರಾಂಶ.

ಆಯುರ್ವೇದ ಶಾಸ್ತ್ರದಲ್ಲಿ ಔಷಧವು ವ್ಯಾಧಿಯನ್ನನುಸರಿಸಿ ಬೃಂಹಣ, ಲಂಘನ ಎಂಬುದಾಗಿ ದ್ವೈವಿಧ್ಯವನ್ನು ಹೊಂದಿದೆ.

ವ್ಯಾಧಿಗಳು ಮನುಷ್ಯನು ಈ ಜನ್ಮದಲ್ಲಿ ಮಾಡುವ ಮಿಥ್ಯಾಹಾರಾದಿ ಅಪರಾಧಗಳಿಂದಲೂ, ಮತ್ತೆ ಕೆಲವು ವ್ಯಾಧಿಗಳು ಜನ್ಮಾಂತರದಲ್ಲಿ ಮಾಡಿದ ಪಾಪ ಕರ್ಮಗಳಿಂದಲೂ ಈ ಜನ್ಮದಲ್ಲಿ ಸಂಭವಿಸುವುವು.

ಮೊದಲನೆಯ ಮಿಥ್ಯಾಹಾರಜನಿತವಾದ ವ್ಯಾಧಿಯು ತನ್ನಿವಾರಕ ಔಷಧಗಳಿಂದಲೂ; ಎಡನೆಯದಾದ ಜನ್ಮಾಂತರಕೃತಪಾಪಜನ್ಯವಾದ ವ್ಯಾಧಿಯು ತನ್ನಿವಾರಕಗಳಾದ ಜಪ, ಹೋಮ, ದೇವತಾರಾಧನ ಮೊದಲಾದವುಗಳಿಂದಲೂ, ಉಭಯಗಳಿಂದಲೂ, ಉಭಯಜನ್ಯವಾದ ವ್ಯಾಧಿಯು ದೋಷ ಮತ್ತು ಪಾಪಹರಗಳಾದ ಪ್ರತಿ ಕ್ರಿಯೆಗಳಿಂದಲೂ ನಿವಾರಿಸಲ್ಪಡಬೇಕು. ಈ ರೀತಿ ಪೂರ್ವಾಚಾರ್ಯರುಗಳು ಸ್ಪಷ್ಟೋಕ್ತಿಗಳಿಂದ ಹೇಳುತ್ತಿರುವಾಗ ನಾಸ್ತಿಕರು ಜನ್ಮಾಂತರವಿಲ್ಲವೆಂದು ಹೇಳುವುದು ಕೇವಲ ಮೌಢ್ಯವಾಗಿದೆ. ಶರೀರದ ಉತ್ಪತ್ತಿಸ್ಥಿತಿಗಳಿಗೆ ಕಾರಣಭೂತಗಳಾದ ವಾತಾದಿದೋಷಗಳು ಸಮಸ್ಥಿತಿಯಲ್ಲಿದ್ದಲ್ಲಿ ದೇಹವು ಆರೋಗ್ಯ

ಸ್ಥಿತಿಯಲ್ಲಿರುವುವು. ಅವುಗಳು ವ್ಯತ್ಯಾಸವಾದಲ್ಲಿ ಸ್ವಾಭಾವಿಕವಾದ ವ್ಯಾಧಿಯಾಗಲೀ ಮರಣವಾಗಲೀ ಸಂಭವಿಸುವುದು. ಅಪಥ್ಯವಾದ ಆಹಾರಾದಿಗಳು ದೋಷಗಳಿಗೆ ವಿಷಮತ್ವವನ್ನುಂಟುಮಾಡಿ ರಸಾದಿ ಸಪ್ತಧಾತುಗಳನ್ನು ಕೆಡಿಸಿ ರೋಗಗಳನ್ನುಂಟುಮಾಡುವುವು. ವೈಷಮ್ಯವನ್ನು ಹೊಂದಿದ ದೋಷಗಳಿಂದುಂಟಾಗುವ ಯಾತನೆಗಳೇ ರೋಗಲಕ್ಷಣನೆಂಬದಾಗಿ ಹೇಳಿಸಿಕೊಳ್ಳುತ್ತವೆ. ರೋಗವನ್ನು ನಿಶ್ಚಯಮಾಡಬೇಕಾದಲ್ಲಿ

ದರ್ಶನಸ್ಪರ್ಶನಪ್ರಶ್ನೈಃ ಪರೀಕ್ಷೇತಾಥರೋಗಿಣಂ ।
ರೋಗಂ ನಿಧಾನಪ್ರಾಗ್ರೂಪಲಕ್ಷಣೋಪಶಯಾಪ್ತಿಭಿಃ ॥

ಇತ್ಯಾದಿಗಳಿಂದ ಪರೀಕ್ಷಿಸಿ ರೋಗವನ್ನು ನಿರ್ಣಯಿಸಬೇಕು. ವ್ಯಾಧಿನಿವಾರಕವಾದವುಗಳೆಲ್ಲವೂ ವ್ಯಾಧಿಗೆ ಪಥ್ಯವೆಂತಲೂ, ಔಷಧವೆಂತಲೂ, ಪ್ರಸಿದ್ಧವಾಗಿರುವದು. ಈ ರೀತಿಯಾದ ವ್ಯಾಧಿನಿವಾರಣಕ್ರಮವು ಔಷಧಗಳಲ್ಲಿ 6 ಪ್ರಕಾರವಾಗಿಯೂ, ಆಹಾರದಲ್ಲಿ 6 ವಿಧಗಳಾಗಿಯೂ, ವಿಹಾರದಲ್ಲಿ 6 ವಿಧಗಳಾಗಿಯೂ, ಒಟ್ಟು 18 ವಿಧಗಳಾಗಿವೆ. ಇವುಗಳಿಗೆ ಉದಾಹರಣೆಗಳನ್ನು ಅನೇಕಗ್ರಂಥಗಳಲ್ಲಿ ಹೇಳಿರುತ್ತೆ.

ಸನ್ನಿಪಾತಜ್ವರ, ಕ್ಷಯರೋಗ, ಪಾಂಡು, ಪರಿಣಾಮಶೂಲೆ ಮೊದಲಾದ ಅನೇಕ ದೀರ್ಘಕಾಲದಿಂದ ಅನುಸರಿಸಿ ಬಂದಿರುವ ವ್ಯಾಧಿಗಳು ಪಾರದೇಶೀಯ ವೈದ್ಯಚಿಕಿತ್ಸೆಯಿಂದ ಗುಣವಾಗದೇ ಏತತ್ಕ್ರಮದಿಂದ ಶಾಸ್ತ್ರ ಮತ್ತು ಅನುಭವ ರೀತಿಗಳಿಂದ ಗುಣವಾಗುವುದೆಂಬುದನ್ನು ಎಷ್ಟು ಹೇಳಿದರೂ ಅತಿಶಯೋಕ್ತಿಯಾಗಲಾರದು. ಇದಕ್ಕೆ ಕಾರಣವೇನೆಂದರೆ ಯಸ್ಮಿನ್ದೇಶೇಹಿಯೋಜಾತಃ....ಹಿತಂ| ಮತ್ತು ದೂಷ್ಯಂ........ಜಾತುಚಿತ್ ಇವುಗಳೇ ಪ್ರಮಾಣವು.

ಈ ರೀತಿಯಾದ ವ್ಯಾಧಿಗಳಲ್ಲಿ ಒಂದಾದ ಪಾಂಡುರೋಗವನ್ನು ಮುಖ್ಯವಾಗಿಟ್ಟುಕೊಂಡು ಅನೇಕ ಗ್ರಂಥಗಳಲ್ಲಿರುವ ವಿಚಾರಗಳನ್ನು ಬಿಟ್ಟು ರೋಗಲಕ್ಷಣ ಮತ್ತು ಕೈಗಂಡ ಚಿಕಿತ್ಸೆಯನ್ನು ಮಾತ್ರ ಇಲ್ಲಿ ಬರೆಯುತ್ತೇನೆ.

ಸಾಮಾನ್ಯವಾಗಿ ಪಾಂಡುರೋಗವು ಐದು ಪ್ರಕಾರವಾಗಿರುವುದು. ನಿಧಾನ ಅತಿ ವ್ಯಾಯಾಮ, ಅತಿಯಾದ ಆಮ್ಲ, ವಾ, ಲವಣರಸಸೇವನೆ ಮದ್ಯಪಾನಾ ದಿವಾಸ್ವಪ್ನ ಇವುಗಳಿಂದ ದೋಷಗಳು ಮನುಷ್ಯನ ರಕ್ತವನ್ನು ಸೇರಿ ಕ್ಷೀಣರಕ್ತವನ್ನಾಗಿ ಮಾಡಿ ಚರ್ಮವನ್ನು ಬಿಳಿಯಬಣ್ಣವುಳ್ಳದ್ದನ್ನಾಗಿ ಮಾಡುವುವು.

ಪೂರ್ವರೂಪ—ಮೈಚರ್ಮ ಒಡೆಯುವುದು, ಶಾಖಾಗಳಲ್ಲಿ ನೀರೂರುವದು, ಕೈಕಾಲು ಸಣ್ಣಾಗುವುದು, ಮಣ್ಣು ತಿನ್ನುವುದರಲ್ಲಿ ಅಪೇಕ್ಷೆ, ಕಣ್ಣಿನ ಸಮೀಪದಲ್ಲಿ ಶೋಥ, ಮಲಮೂತ್ರಗಳ ಹಳದೀಬಣ್ಣ, ಅಗ್ನಿಮಾಂದ್ಯ, ಕಷ್ಟ ಶ್ವಾಸ, ಉಬ್ಬಸ, ಹೃತ್ಕಂಪ, ದುರ್ಬಲವಾದ ನಾಡೀಗತಿ, ತಲೆತಿರುಗು, ಕಿವಿಯಲ್ಲಿ ಶಬ್ದ, ಕ್ರಮೇಣ ದೇಹದ ತೂಕ ಕಡಿಮೆಯಾಗುವುದು, ಮುಖ, ಕೈಕಾಲುಗಳಲ್ಲಿ ಶೋಥ, ಜ್ವರ, ಹೊಟ್ಟೆಯುಬ್ಬರ, ಭೇದಿ, ತಲೆನೋವು ಇತ್ಯಾದಿ.

ಪ್ರಭೇದಗಳು—ಒರಟಾದ ಚರ್ಮ, ಕಪ್ಪು, ವಾ ಕೆಂಪುಬಣ್ಣ, ನಡುಕ, ಚುಚ್ಚುವಿಕೆ ಇವುಗಳು ವಾತಪಾಂಡುವಿನಲ್ಲಿಯೂ, ಮಲಮೂತ್ರಗಳಲ್ಲಿಯೂ, ಕಣ್ಣುಗಳಲ್ಲಿಯೂ, ಪೀತವರ್ಣ, ಉರಿ, ಬಾಯಾರಿಕೆ, ಜ್ವರ ಇವು ಪಿತ್ತಪಾಂಡುವಿನಲ್ಲಿಯೂ ಕಫವು ಹೆಚ್ಚಾಗಿ ಬೀಳುವುದು, ಶೋಥ, ತೂಕಡಿಕೆ, ಆಲಸ್ಯ, ಮೈಕೈಕಾಲುಗಳ ಭಾರ, ನೇತ್ರ ಮತ್ತು ಮಲಮೂತ್ರಗಳು ಬಿಳುಪಾಗಿರುವುದು ಇವು ಕಫಜ ಪಾಂಡುವಿನಲ್ಲಿಯೂ ಇರುವುವು.

ಈ ಮೇಲಿನ ಲಕ್ಷಣಗಳು ಮಿಶ್ರವಾಗಿದ್ದಲ್ಲಿ ಸನ್ನಿಪಾತಪಾಂಡುವೆಂದು ತಿಳಿಯುವುದು.

ಈ ಕಾಮಾಲೆಯು ಬಹುದಿನ ಅನುಸರಿಸಿ ಬಂದಲ್ಲಿ ಕುಂಭಕಾಮಿಲೆಯೆಂದು ಶಾಸ್ತ್ರಜ್ಞರು ಹೇಳುವರು.

ಇದರಲ್ಲಿ, ಹಲೀಮಕ, ಪಾನಕೀಲ, ಮುಂತಾದ ಕೆಲವು ಭೇದಗಳುಂಟು. ಶಾಸ್ತ್ರದಲ್ಲಿ ಪ್ರಸಿದ್ಧವಾಗಿರುವ ಚಿಕಿತ್ಸೆಯನ್ನು ಬಿಟ್ಟು ಮುಖ್ಯವಾದ ನನ್ನ ಅನುಭವದಲ್ಲಿ ಕಂಡುಬಂದಿರುವ ಚಿಕಿತ್ಸೆಯನ್ನು (ಕೈಗೊಂಡದ್ದು) ಇಲ್ಲಿ ಬರೆದಿದ್ದೇವೆ.

ಕೈಗಂಡದ್ದು.

ರೋಗಿಯ ಬಲಾಬಲವನ್ನರಿತು ಮೊದಲನೆಯ ದಿನ ಬೆಳಿಗ್ಗೆ ಅರ್ಧಪಾವು ಹಸುವಿನ ಹಾಲು ವಾ ಮೊಸರು ತರಿಸಿ ಅದಕ್ಕೆ ¾ ಔನ್ಸಿನಷ್ಟು (ನಾಗಬಲಾ) ತುರುಬೇಸೊಪ್ಪಿನ ರಸವನ್ನು ಹಿಂಡಿ ಬೆಳಿಗ್ಗೆ ಮಾತ್ರ ಕುಡಿಸುವುದು.

ಆಹಾರ—ಔಷಧ ಕೊಟ್ಟ ದಿನ ಹಾಲು ಮೊಸರುಗಳ ಪೈಕಿ ಏತರಲ್ಲಿ ಔಷಧ ಕೊಡುತ್ತೇವೆಯೋ ಅದರಲ್ಲೇ ಆ ದಿನ ಪಥ್ಯವನ್ನು ಕೊಡುವುದು. ಮಾರನೇ ದಿನ ಅಭ್ಯಂಗಸ್ನಾನಮಾಡಿಸಿ ಸೀಸಾರು ಅನ್ನ, ಮಜ್ಜಿಗೆ ವಾ ಹಾಲು ಇವುಗಳನ್ನು ಊಟಮಾಡುವುದು. ಈ ರೀತಿ ಒಂದು ದಿನ ಮಾಡಿದಲ್ಲಿ ಸಾಮಾನ್ಯವಾಗಿ ಅರ್ಧ ಭಾಗ ಕಡಿಮೆಯಾಗಿ ಅಗ್ನಿದೀಪ್ತಿಯುಂಟಾಗಿ ಆಹಾರದಲ್ಲಿ ಅಪೇ

ಕ್ಷೆಯುಂಟಾಗುವುದು. ಆ ಕಾಲದಲ್ಲಿ ರೋಗಿಯ ಬಲವನ್ನರಿತು ಜೀರ್ಣಕಾರಿಯಾದ ಆಹಾರವನ್ನು ಕೊಡಬೇಕು. ನಂತರ 3-4 ದಿನಗಳು ಬಿಟ್ಟು ಒಂದಾವರ್ತಿ ಇದೇ ಮೇರೆ ಔಷಧವನ್ನು ಕೊಟ್ಟು ಪಥ್ಯವನ್ನು ನಡೆಸಬೇಕು. ಇದಾದ 7-8 ದಿನಗಳವರಿಗೆ ಬೇರೆ ಅಪಥ್ಯಮಾಡದಿದ್ದಲ್ಲಿ ಎಂಥಾ ಕಾಯಿಲೆಯಾದರೂ ಗುಣವಾಗಿ ಕಣ್ಣು ಚರ್ಮ ಮುಂತಾದ್ದಶಲ್ಲಿರುವ ವಿವರ್ಣವು ಹೋಗಿ ಸ್ವಚ್ಛವಾಗುತ್ತೆ. ಇನ್ನೂ ಶೇಷವಿರುವಂತೆ ಕಂಡುಬಂದಲ್ಲಿ ಮೇಲ್ಕಂಡ ಔಷಧವನ್ನು ಅಲ್ಪಮಾತ್ರದಲ್ಲಿ ಕೊಡುವುದು. ಇದಾದ ಮೇಲೆ ಬಿಸಲಲ್ಲಿ ತಿರುಗಾಡುವುದು, ಅತಿ ವ್ಯಾಯಾಮ, ಸ್ನಾನ, ವ್ಯವಾಯ, ಖಾರ ತಿನ್ನುವುದು ಇವುಗಳನ್ನು ಕೆಲವು ದಿನಗಳು ಬಿಡಬೇಕು.

ಗೋಧಿ, ಅಕ್ಕಿ, ಜಾಂಗಲಮಾಂಸರಸ ಹೆಸರು, ಸಾರಂಗೀಬೇಳೆ ಇವುಪಥ್ಯ.

ಚಲನಚಿತ್ರಗಳ ಪ್ರದರ್ಶನದ ಮೂಲಕ ನಡೆದ ಆರೋಗ್ಯ ವಿಷಯಕವಾದ ಉಪನ್ಯಾಸ.

ಡಾ॥ ಎ. ಲಕ್ಷ್ಮೀಪತಿಯುವರಿಂದ.

ಮದರಾಸು ಆಂಧ್ರ ಆಯುರ್ವೇದಿಕ್ ಫಾರ್ಮಸಿಯ ಪ್ರೊಪ್ರೈಟರ್‌ರವರಾದ ಡಾ॥ ಎ. ಲಕ್ಷ್ಮೀಪತಿಯವರು, 28-12-30 ರಲ್ಲಿ, ಸಭಾಮಂದಿರದಲ್ಲಿ, ಆರೋಗ್ಯವಿಚಾರವಾದ ಚಿತ್ರಪ್ರದರ್ಶನ ಮಾಡಿ, ಹುರಿದುಂಬಿಸುವಂಥಾ ಭಾಷಣವನ್ನು ಮಾಡಿದರು. ಅವರು ತೋರಿಸಿದ ಚಲನ ಚಿತ್ರಗಳಲ್ಲಿ ಆಸನಗಳ ವಿವರದ ಕೆಲವು ಚಿತ್ರಗಳಿದ್ದವು. ಈ ಆಸನಗಳ ಉಪಯೋಗ ಮತ್ತು ಪ್ರಾಮುಖ್ಯತೆಯನ್ನು ತಿಳಿಸಿ, ಶರೀರದ ಬೇರೆ ಬೇರೆ ಭಾಗಗಳಿಗೆ ಹೇಗೆ ವ್ಯಾಯಾಮವನ್ನು ಕೊಡಬಹುದೋ ಅದನ್ನು ಉದಹರಿಸಿ, ನಮ್ಮ ದೇಹವನ್ನು ನಮ್ಮ ವಶದಲ್ಲಿ ಇಟ್ಟುಕೊಳ್ಳಲು ಈ ಆಸನಗಳು ಸಾಧಕವಾಗಿರುವದರಿಂದ, ಈ ವ್ಯಾಯಾಮ ಪದ್ಧತಿಯು ಪಾಶ್ಚಾತ್ಯ ಪದ್ಧತಿಗಿಂತ ಹೇಗೆ ಹೆಚ್ಚು ಮೇಲಾದುದೋ ಆ ವಿಷಯವನ್ನು ತಿಳಿಯಪಡಿಸಿದರು. ನಮ್ಮ ಭರತಖಂಡದಲ್ಲಿ ಈ ಅಂಗಸಾಧನೆಗಳು 2000 ವರ್ಷಗಳಿಗಿಂತಲೂ ಹಿಂದಿನಿಂದ ವಾಡಿಕೆಯಲ್ಲಿವೆ ಎಂಬುದನ್ನು ವ್ಯಕ್ತಪಡಿಸಿದರು.

ಅನಂತರದಲ್ಲಿ ಮತ್ತೆ ಕೆಲವು ಚಿತ್ರಪ್ರದರ್ಶನದ ಮೂಲಕ, ಹೊತ್ತಿಗೆ ಮುಂಚೆ ಏಳುವಿಕೆ, ನದೀಸ್ನಾನ, ಹಲ್ಲನ್ನು ಉಜ್ಜಿಕೊಳ್ಳುವ ವಿವಿಧ ವಿಧಾನಗಳ ಮಹತ್ವ ಇವುಗಳನ್ನು ಪ್ರೇಕ್ಷಕರ ಮನಸ್ಸಿಗೆ ಬರುವಂತೆ ಮಾಡಿದರು. ಕೊಳದ

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦

ಭಿಷಗ್ರತ್ನ ಡಾ|| ಪಿ. ಲಕ್ಷ್ಮೀಪತಿ, B.A., M.B.C.M.

(ಆಂಧ್ರ ಆಯುರ್ವೇದಿಕ್ ಫಾರ್ಮಸಿ, ಮದ್ರಾಸು.)

ಆರೋಗ್ಯಶಾಸ್ತ್ರದ ಮೇಲಿನ ಚಲನಚಿತ್ರದ ಉಪನ್ಯಾಸಕರು.

ಸ್ನಾನವು ಅನಾರೋಗ್ಯಕರವೆಂದೂ ನದೀ ಸ್ನಾನವೇ ಆರೋಗ್ಯಕರವೆಂದೂ ತೋರಿಸಿ, ಸರಿಯಾದ ಸ್ನಾನದಿಂದಾಗುವ ಲವಲವಿಕೆಯು ದೊಡ್ಡ ಲಾಭವೆಂಬಂಶವನ್ನು ದೃಢಪಡಿಸಿದರು.

ಶರೀರಮರ್ದನದ ಅನೇಕ ವಿಧಗಳನ್ನು ಉದಹರಿಸುವ ಚಿತ್ರಗಳನ್ನು ತೋರಿಸಿ, ಅದು ಹೇಗೆ ಮುಖ್ಯವಾದುದೋ ಅದನ್ನು ತಿಳಿಸಿದರು.

ಕೊನೆಯಲ್ಲಿ ಹಿಂದೆ ನಡೆದ ನಾಸಿಕ್ ಕಾನ್ಫರೆನ್ಸಿನ ಚಿತ್ರಗಳನ್ನು ಪ್ರದರ್ಶಿಸಿದರು. ಇದು ವಿವೇಕ ಪ್ರದವಾಗಿಯೂ ಮತ್ತು ಮನೋಹರವಾಗಿಯೂ ಇತ್ತು. ಇಂತಹ ಪ್ರದರ್ಶನಗಳ ಪ್ರಾಮುಖ್ಯತೆಯು ಜನಗಳ ಮನಸ್ಸಿನಲ್ಲಿ ಚೆನ್ನಾಗಿ ಮಂದಟ್ಟಾಯಿತು.

ಸಬ್‌ಜಕ್ಟ್ ಕಮಿಟಿ

ಸಬ್ಜಕ್ಟ್ ಕಮಿಟಿಯ ಎರಡನೆಯ ಮೀಟಿಂಗ್.

28-12-30 ರಲ್ಲಿ ರಾತ್ರಿ 8 ಗಂಟೆಗೆ ಪ್ರಾರಂಭವಾಯಿತು. ಕಾನ್ಫರೆನ್ಸಿನ ಅಧ್ಯಕ್ಷರವರೇ ಅಗ್ರಾಸನವನ್ನು ವಹಿಸಿದ್ದರು. ಕರ್ಣಾಟಕದ ಮತ್ತು ಇತರ ಪ್ರಾಂತ್ಯಗಳ ಸದಸ್ಯರೂ, ಜ. ಸೆಕ್ರೆಟರಿಗಳೂ ಮತ್ತು ಪ್ರೆಸಿಡೆಂಟರುಗಳೂ ಮೀಟಿಂಗಿನಲ್ಲಿ ಭಾಗಿಗಳಾಗಿದ್ದರು. ರಾತ್ರಿ ಬಹುಹೊತ್ತಿನಮೇಲೆ, ಅನಾರೋಗ್ಯದ ದೆಶೆಯಿಂದ ಪ್ರೆಸಿಡೆಂಟರು, ಬೊಂಬಾಯಿನ ಪಂಡಿತ ಯಾದವಜೀ ತ್ರಿಯಂಬಕಜೀ ಆಚಾರ್ಯರವರನ್ನು ಅಗ್ರಾಸನಕ್ಕೆ ವಹಿಸಲು ಹೇಳಿ, ತಾವು ಹೊರಟುಹೋದರು. ಇವರ ಅಧ್ಯಕ್ಷತೆಯಲ್ಲಿ ಮೀಟಿಂಗು ರಾತ್ರಿ 2 ಗಂಟೆಯವರೆಗೂ ನಡೆದು, ಉಳಿದ ವಿಷಯವನ್ನು ಚರ್ಚಿಸಲು, ಮಾರನೇ ದಿನಕ್ಕೆ ಮುಂದುವರಿಸಲ್ಪಟ್ಟಿತು.

ಸಾಮಾನ್ಯಸಂಭಾಷಾಪರಿಷತ್ತು.

(ತಾ|| 29—12—30 ರಲ್ಲಿ ಪ್ರಾತಃಕಾಲ 8 ಗಂಟೆಯಿಂದ)

ತ್ರಿದೋಷತತ್ವದ ವಿಚಾರವಾಗಿಯೂ ಮತ್ತು ಆಯುರ್ವೇದದ ಸಾಮಾನ್ಯ ವಿಷಯಗಳ ಮೇಲೂ ಬರೆದಿದ್ದ ಲೇಖನಗಳು ಇತರ ಪರಿಷತ್ತುಗಳಲ್ಲಿ ಚರ್ಚೆಗೆ ಬರಲು ಮಾರ್ಗವಿಲ್ಲದಿದ್ದುದರಿಂದ, ಸಾಮಾನ್ಯ ಸಂಭಾಷಾಪರಿಷತ್ತೆಂಬ ಮತ್ತೊಂದು ಪರಿಷತ್ತು ನಡೆಸಲ್ಪಟ್ಟಿತು. ಈ ವಿಷಯವನ್ನು ಪ್ರತಿನಿಧಿಗಳಿಗೂ ಮತ್ತು ಸ್ವಾಗತ ಸಭಾಸದಸ್ಯರಿಗೂ ಮುಂಚಿತವಾಗಿಯೇ ತಿಳಿಸಿ, ತತ್ಪರಿಷತ್ತನ್ನು ಈ ದಿವಸ (29-12-30) ಪ್ರಾತಃಕಾಲ 8 ಗಂಟೆಗೆ ಸರಿಯಾಗಿ ಸೇರಿಸಿದ್ದಾಯಿತು.

ಕರ್ಣಾಟಕ, ಆಂಧ್ರ ಮತ್ತು ತಮಿಳುನಾಡಿನ ಪ್ರತಿನಿಧಿಗಳೂ ಇತರ ಸುಪ್ರಸಿದ್ಧ ಪ್ರೇಕ್ಷಕರೂ ಸಭೆಯನ್ನಲಂಕರಿಸಿದ್ದರು. ಪಾಟಿಯಾಲದ ಆಯುರ್ವೇದಾಚಾರ್ಯ ಪಂಡಿತ ಶಿವಶರ್ಮರವರನ್ನು ಅಗ್ರಾಸನಕ್ಕೆ ಚುನಾಯಿಸಿದರು. ದೇಶಭಾಷೆಗಳಲ್ಲಿದ್ದ ಲೇಖನಗಳನ್ನು ಆಂಗ್ಲಭಾಷೆಗೆ ತರ್ಜುಮೆ ಮಾಡುವುದರಲ್ಲಿ ಜ|| ಸೆಕ್ರೆಟರಿಗಳಾದ ಡಾ|| ವೈ. ಎಲ್. ಶಾಸ್ತ್ರಿಗಳವರು ಬಹಳ ಉಪಕಾರ ಮಾಡಿ, ಪ್ರೇಕ್ಷಕರ ಪ್ರಶ್ನೆಗಳಿಗೆ ಸಮಂಜಸ ಉತ್ತರಗಳನ್ನು ಕೊಟ್ಟರು. ಚರ್ಚೆಗಳು ದೇಶಭಾಷೆಗಳಲ್ಲೇ ನಡೆದವು. ಲೇಖನಗಳನ್ನು ಓದಲು ಅವಕಾಶ ದೊರೆತದ್ದಕ್ಕಾಗಿ ಕರ್ಣಾಟಕಾಂಧ್ರ, ತಮಿಳನಾಡೇ ಮೊದಲಾದ ಪ್ರಾಂತ್ಯಗಳ ಪ್ರತಿನಿಧಿಗಳು ಬಹಳ ಸಂತೋಷಪಟ್ಟರು.

ಕೆಲವು ಅಸಾಧ್ಯ ಖಾಯಿಲೆಗಳನ್ನು ಒಂದೊಂದು ಮೂಲಿಕಾ ಪ್ರಯೋಗದಿಂದಲೇ ಹೇಗೆ ಚಿಕಿತ್ಸೆ ಮಾಡಬಹುದೋ ಅದನ್ನು ಗ್ರಾಮಾಂತರಗಳಿಂದ ಬಂದಿದ್ದ ಅನೇಕ ಪಂಡಿತರು ತಿಳಿಸಿ, ಮೂಲಿಕೆಗಳ ಸಕಲ ವಿಷಯಗಳನ್ನೂ ನಿರೂಪಿಸಿದರು.

ಮಹಾಮಂಡಲದ ಆಯುರ್ವೇದ ಪರಿಶೋಧನಾಲಯದಲ್ಲಿ ಮೂಲಿಕೆಗಳನ್ನು ಆಮೂಲಾಗ್ರವಾಗಿ ಪರಿಶೋಧನೆ ಮಾಡುವುದು ಹೇಗೆ ಆವಶ್ಯಕವೋ ಅದನ್ನು ಅಗ್ರಾಸನಾಧಿಪತಿಗಳು ವಿವರಿಸಿದರು.

ಅಗ್ರಾಸನಾಧಿಪತಿಗಳಿಗೂ ಜನರಲ್ ಸೆಕ್ರೆಟರಿಯವರಿಗೂ ಮನಃಪೂರ್ವಕ ವಂದನೆಗಳನ್ನರ್ಪಿಸಿದನಂತರ ಸಭೆಯು ಮುಕ್ತಾಯವಾಯಿತು.

೨೧ ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦.



ಪ್ರೊಫೆಸರ್ ಶಿವಶರ್ಮ ಆಯುರ್ವೇದಾಚಾರ್ಯ,

(ಪ್ರೊಪ್ರೈಟರ್, ಮಕರಧ್ವಜಫಾರ್ಮಸಿ, ಲಾಹೋರ್.)

ಸಾಮಾನ್ಯಸಂಭಾಷಾಪರಿಷತ್ತಿನ ಅಧ್ಯಕ್ಷರವರು.

ಈ ಪರಿಷತ್ತಿನಲ್ಲಿ ಓದಿಸಲ್ಪಟ್ಟ ಮತ್ತು ಚರ್ಚಿಸಲ್ಪಟ್ಟ ಲೇಖನಗಳ ವಿವರ.

ಲೇಖಕರ ಹೆಸರುಗಳು	ಭಾಷೆ	ವಿಷಯ
1. ಕೋಣನೂರಿನ ಪಂಡಿತ ಕೆ. ಶ್ರೀ ಕಂಠಯ್ಯನವರು.	ಕನ್ನಡ	ಆಯುರ್ವೇದದ ಅನೇಕ ಅಂಗಗಳ ವಿಚಾರ.
2. ಗುಂಡ್ಲಪೇಟೆ ತಾಲೂಕು, ಬಾಚಹಳ್ಳಿ ಪಂಡಿತ ಶ್ರೀಪದ್ಮನಾಭಯ್ಯನವರು.	ಕನ್ನಡ	ಸಪ್ತಧಾತುಗಳ ವ್ಯತ್ಯಾಸ ಮತ್ತು ಅದರ ಚಿಕಿತ್ಸಾ.
3. ಬೆಂಗಳೂರು ಚಾಮರಾಜಪೇಟೆಯ ಶ್ರೀ ಶಾರದಾಂಬ	ಕನ್ನಡ	ಆಯುರ್ವೇದರೀತ್ಯಾ ಶಾರೀರಾರೋಗ್ಯಶಾಸ್ತ್ರ ತತ್ವಗಳು.
4. ಬೆಂಗಳೂರು ಚಿಕ್ಕಪೇಟೆ ಸದ್ವೈದ್ಯಶಾಲಾ ಏಜಂಟ್, ಪಂಡಿತ ಎಲ್ಲಪ್ಪನವರು.	ಹಿಂದಿ	ಜೈನ ಆಯುರ್ವೇದ ವಿವರ ಮತ್ತು ಅದರಿಂದಾಗಿರುವ ಕೆಲಸ.
5. ಹಾಸನ ಡಿ॥ ನಿಟ್ಟೂರಿನ ಆ॥ ವಿ॥ ಶ್ರೀ॥ ಎಸ್. ಸುಬ್ಬರಾಮಯ್ಯನವರು.	ಕನ್ನಡ	ಆಯುರ್ವೇದ ಸಕಲಪದ್ಧತಿಗಳಿಗೂ ಮೂಲಾಧಾರ.
6. ಮೈಸೂರು ಆ॥ ಕಾಲೇಜಿನ ಶ್ರೀ॥ ಎಲ್. ನರಸಿಂಹಮೂರ್ತಿಯವರು.	ಕನ್ನಡ	ಮಾನವ ದೇಹದ ತ್ರಿದೋಷಗಳು.
7. ಅಮರಾವತಿಯ ವೈದ್ಯಭೂಷಣ ಶ್ರೀ॥ ಪುರುಷೋತ್ತಮಶಾಸ್ತ್ರಿಗಳು.	ಸಂಸ್ಕೃತ	ದೋಷಾಃ ಕಿಮುತ ಧಾತವ
8. ಬೆಂಗಳೂರು ಮೆಡಿಕಲ್ ಸ್ಕೂಲಿನ ಆ॥ ವಿ॥ ಶ್ರೀ॥ ಎಚ್. ಎಸ್. ಸುಬ್ರಹ್ಮಣ್ಯಶಾಸ್ತ್ರಿಗಳು.	ಇಂಗ್ಲಿಷ್	ಆಯುರ್ವೇದರೀತ್ಯಾ ಶಾರೀರಶಾಸ್ತ್ರ.
9. ಪುಣೆಯ ಡಾ॥ ಜಿ. ಜಿ. ಆಪ್ಟೆ, ಎಂ. ಬಿ. ಬಿ. ಎಸ್.	ಇಂಗ್ಲಿಷ್	ಆಯುರ್ವೇದ ಮತ್ತು ಅಲೋಪತಿಯ ಪ್ರಕಾರ ನಾಳಗಳ ಮತ್ತು ನರಗಳ ವಿಚಾರ.
10. ಪಂಜಾಬಿನ ಆಯುರ್ವೇದವಿಶಾರದ ಶ್ರೀ॥ ಕೃಷ್ಣಶಾಸ್ತ್ರಿಗಳು.	ಹಿಂದಿ	ಆಯುರ್ವೇದ ಔಷಧ ರಚನಾ.
11. ಸಿಡ್ಲಘಟ್ಟದ ಮ॥ ತಿಮ್ಮನಾಯಕನಹಳ್ಳಿ ಶ್ರೀ॥ ಎ. ವೆಂಕಟದಾಸಶಾಸ್ತ್ರಿಗಳು.	ಕನ್ನಡ	ಸುಶ್ರುತನಪ್ರಕಾರ ಮಾನವ ದೇಹರಚನಾ ವಿವರ.
12. ಪುಣೆಯ ಶ್ರೀ॥ ಟಿ. ಆರ್. ಆಪ್ಟೇ.	ಹಿಂದಿ	ಸ್ರೋತಸ್ ಮತ್ತು ಶಿರಾಧಮನಿಗಳ ವಿವರ.

ತ್ರಿದೋಷತತ್ವದ ಮೇಲಿನ ಲೇಖನಗಳು.

ಲೇಖಕರ ಹೆಸರು ಭಾಷೆ

1. ಜಾಡ್ಲ ಜಲಂದರಿನ ಶ್ರೀ ಹರಿದತ್ತಶಾಸ್ತ್ರಿಗಳು. ಸಂಸ್ಕೃತ
2. ಅಮರಾವತಿ ಹಿರ್ಲೀಕರೆ ಶ್ರೀ ಪುರುಷೋತ್ತಮಸುಕಾರಾಂ. ,,
3. ಕಡೂರು ಆ|| ಭೂ|| ಪಿ. ಸೂರ್ಯನಾರಾಯಣಶಾಸ್ತ್ರಿಗಳು. ಕನ್ನಡ
4. ಮೈಸೂರು ಆ|| ವಿ|| ಮಾರ್ಕಂಡೇಯಶಾಸ್ತ್ರಿಗಳು. ಕನ್ನಡ
5. ಷೋರನೂರಿನ ಕೆ. ಎ. ಸಮಾಜದ ಶ್ರೀ ಎಂ. ನಾರಾಯಣ ನಂಬೀಶನ್. ಸಂಸ್ಕೃತ
6. ತಮಕೂರು ಡಿ|| ಬ್ಯಾಲದ ಪಂ|| ರಾಮಸ್ವಾಮೈಯ್ಯನವರು. ಕನ್ನಡ
7. ಶಿವಮೊಗ್ಗಾ ಆ|| ಪಂ|| ಜೆ. ಲಕ್ಷ್ಮಿನರಸಿಂಹಅಯ್ಯಂಗಾರ್ಯರು. ಸಂಸ್ಕೃತ
8. ಮದರಾಸ್ ಇಂಡಿಯನ್ ಮೆಡಿಕಲ್ ಸ್ಕೂಲಿನ ಶ್ರೀ|| ಪಿ. ನಾರಾಯಣ ಭಟ್ಟರು. ಇಂಗ್ಲಿಷ್
9. ಕನ್ನಾನೂರಿನ ಶ್ರೀ|| ಕರುಣಾಕರನ್ ರವರು. ಸಂಸ್ಕೃತ
10. ಗುಂಡ್ಲುಪೇಟೆ ತಾ|| ಬಾಚಿಹಳ್ಳಿ ಶ್ರೀ|| ಪದ್ಮನಾಭೈಯ್ಯನವರು. ಕನ್ನಡ
11. ಗುಜರಾತ್ ಸಿದ್ಧಾಪುರದ ಶ್ರೀ ವೈದ್ಯ ಶೀತಾರಾಂದುರ್ಲಭರಾಂರವರು. ಮರಾಠಿ
12. ಕಡೂರು ಡಿ|| ಕಳಸಾಪುರದ ಶ್ರೀ|| ಲಕ್ಷ್ಮೀನರಸಿಂಹಜೋಯಿಸರು. ಕನ್ನಡ
13. ಎಂಪೈರ್ ರಾಯಲ್ ಪಾಠಶಾಲಾ ಪ್ರೊಫೆಸರ್ ಶ್ರೀ|| ಭಗವತೀಪ್ರಸಾದ ಶುಕ್ಲರವರು. ಸಂಸ್ಕೃತ
14. ಉತ್ತರ ಗುಜರಾತಿನ ಸೋಜಿತ್ರಪುಷ್ಟಿ ಔಷಧಾಲಯದ ಶ್ರೀ|| ವೈದ್ಯಶಂಕರಪ್ರಸಾದರು. ಹಿಂದೀ

ತ್ರಿದೋಷಸಿದ್ಧಾಂತದಮೇಲಿನ ಉಪನ್ಯಾಸ.

(ಆಯುರ್ವೇದಭೂಷಣ ಪಟ್ಣಗೆರೆ ಸೂರ್ಯನಾರಾಯಣಶಾಸ್ತ್ರಿಗಳವರಿಂದ.)

ಪ್ರಪಂಚದಲ್ಲಿ ಹುಟ್ಟಿ ಬೆಳೆಯುತಲಿರುವ ಪ್ರತಿಯೊಂದು ಶಾಸ್ತ್ರವೂ ಕಲೆಯೂ ಒಂದಲ್ಲ ಒಂದು ಬಗೆಯಿಂದ ಪ್ರಾಣಿಸಾಮಾನ್ಯಕ್ಕೇ ಸುಖಸಂತೋಷಗಳನ್ನು ಹೆಚ್ಚಿಸುವುದಕ್ಕಾಗಿಯೊ ಅಥವಾ ದುಃಖನಿವಾರಣೆಗಾಗಿಯೋ ಹುಟ್ಟಿದೆ. ಸಾಂಖ್ಯಶಾಸ್ತ್ರದ ಪ್ರಾರಂಭವೇ ಈ ಚರ್ಚೆ. ದುಃಖಸ್ವರೂಪವನ್ನು ಆಧ್ಯಾತ್ಮಿ

ಕಾದಿ ರೂಪವೆಂದು ವರ್ಣಿಸಿ ಆ ಮಾನಸಿಕ ಶಾರೀರಕ ರೋಗಗಳನ್ನು ಪರಿಹರಿಸುವ ಯುಕ್ತಿ ಏನೆಂಬುದನ್ನು ಶಾಸ್ತ್ರ ಅನುಭವದೃಷ್ಟಿಯಿಂದ ವಿಮರ್ಶೆ ಮಾಡಿದೆ.

ಈ ಸಂದರ್ಭದಲ್ಲಿ ದೇಹರಚನೆಯೂ ತಿಳಿಯಬೇಕಾದದ್ದು. ವೇದಾಂತ ಮತ್ತು ಆಯುರ್ವೇದಗಳು ಈ ಜ್ಞಾನವನ್ನು ಕೊಡತಕ್ಕವು. ಶ್ರೀಶಂಕರರೂ ವೇದಾಂತವನ್ನು ಶಾರೀರಕಮೀಮಾಂಸಾಶಾಸ್ತ್ರವೆಂದು ಕರೆದಿದ್ದಾರೆ. ಮತ್ತು ವೇದಾಂತಪರಿಭಾಷೆಯಲ್ಲಿ ವಿಸ್ತಾರವಾಗಿ ವಿಮರ್ಶಿಸಿದ್ದಾರೆ.

ಸಾಂಖ್ಯಶಾಸ್ತ್ರಕಾರರು ಹೇಳುವಂತೆ ಜಗತ್ಸೃಷ್ಟಿಯು ಮೂಲಕಾರಣವಾದ ಅವ್ಯಕ್ತದಿಂದ ಪ್ರಾರಂಭವಾಗಿ ಮಹತ್ತತ್ತ್ವ ಅಹಂಕಾರಗಳೂ ಅವುಗಳಿಂದ ೧೧ ಇಂದ್ರಿಯ, ೫ ತನ್ಮಾತ್ರಗಳು ಮತ್ತು ಪಂಚಭೂತಗಳೂ ಪರಿಣಾಮರೂಪದಿಂದ ವ್ಯಕ್ತವಾಗುತ್ತ, ಇವುಗಳಿಂದ ಬೇರೆಯಾದ ಜೀವಾತ್ಮನ ಸಂಸರ್ಗದಿಂದ ಚೈತನ್ಯವಿಲ್ಲದ ಈ ೨೪ ತತ್ತ್ವಗಳಲ್ಲಿ ಚೈತನ್ಯವುಂಟಾಗಿ ಚಿಕಿತ್ಸೆಗೆ ಅರ್ಹನಾಗಿರುವ ಕರ್ಮಪುರುಷನ ಸೃಷ್ಟಿಯಾಯಿತು.

ವೈದ್ಯಶಾಸ್ತ್ರಾನುಯಾಯಿಗಳೂ ಸಾಂಖ್ಯಮತವನ್ನು ಅನೇಕಮಟ್ಟಿಗೆ ಅವಲಂಬಿಸಿ ಜಗತ್ಸೃಷ್ಟಿಯನ್ನೂ ಅದರಿಂದ ಶುಕ್ರಾರ್ತವ ನಂತರ ಗರ್ಭ ತದ್ವೃದ್ಧಿಫಲದಲ್ಲಿ ಮಾತಾಪಿತೃರೂಪವಾದ ಪ್ರಜೆ ಈ ವಿಷಯಗಳನ್ನೂ ವರ್ಣಿಸಿದ್ದಾರೆ. ಈ ಸ್ಥಳದಲ್ಲಿ ವೈದ್ಯಶಾಸ್ತ್ರಕಾರರು ವರ್ಣಿಸುವ ಪಂಚಭೂತಗಳು ತನ್ಮಾತ್ರಗಳು ಅವುಗಳಲ್ಲಿ ಸೇರಿರುವ ಸತ್ವಾದಿಗುಣಲಕ್ಷಣ ಮತ್ತು ಪ್ರಪಂಚದಲ್ಲಿ ಅವು ಹೇಗೆ ಹರಡಿವೆ ಇವೆಲ್ಲ ವರ್ಣಿತವಾಗಿವೆ.

ಹಿಂದೆ ಹೇಳಿದ ಆಧ್ಯಾತ್ಮಿಕ ದುಃಖವೆಂಬುದು ರೋಗಸ್ವರೂಪವಾದದ್ದು. ರೋಗವು ಸ್ಥಾನ, ಕಾಲ, ಇತ್ಯಾದಿಗಳಿಗೆ ಅನುಸಾರವಾಗಿ ಬೇರೆ ಬೇರೆ ವಿಭಾಗಗಳುಳ್ಳದ್ದಾಗಬಹುದು. ಶಾರೀರಕ, ಮಾನಸಿಕ, ದೋಷಜ, ಆಗಂತುಜ, ಕರ್ಮಜ, ದೋಷಜ ಇತ್ಯಾದಿ "ಅಗ್ನಿಸ್ಸೋಮೋ ವಾಯುಃ ಸತ್ತ್ವಂ ರಜಸ್ತಮಃ ಪಂಚೇಂದ್ರಿಯಾಣಿ ಭೂತಾತ್ಮೇತಿಪ್ರಾಣಾಃ" ಎಂಬ ಸುಶ್ರುತವಚನವು ವಿಶೇಷ ಜ್ಞಾನದಾಯಕವಾದದ್ದು. ಅಗ್ನಿ, ಸೋಮ, ವಾಯು ಮುಂತಾದವು ಹೇಗೆ ಪ್ರಾಣಸ್ವರೂಪಗಳು, ಪ್ರಾಣವು ಯಲ್ಲಕ್ಷಣಯುಕ್ತವು, ಹೇಗೆ ಇವುಗಳ ಸಂಪೂರ್ಣಜ್ಞಾನದಿಂದ ಶರೀರದಲ್ಲಿ ಬಾಹ್ಯಾಭ್ಯಂತರತಃ ನಡೆಯುವ ಸಮಸ್ತ ಕಾರ್ಯಗಳೂ ಪೂರ್ಣಿತವಾದವು ಎಂಬ ವಿಷಯಗಳೆಲ್ಲಾ ಈ ವಾಕ್ಯದಲ್ಲಿ ಅಡಗಿವೆ. ವಾತ, ಪಿತ್ತ, ಕಫ ಇದರಲ್ಲೇ ಐಕ್ಯವಾಗಿದೆ.

ಈ ತ್ರಿದೋಷಗಳ ತತ್ತ್ವವೆ ವೈದ್ಯಶಾಸ್ತ್ರಕ್ಕೆ ಮುಖ್ಯವಾದ ಆಧಾರತತ್ತ್ವ. ಇವುಗಳ ಜ್ಞಾನದಿಂದಲೇ ಸಮಸ್ತ ರೋಗಗಳ ನಿರ್ಣಯವೂ ಚಿಕಿತ್ಸೆಯೂ ನಡೆಯಬೇಕಾಗಿದೆಯಾದ್ದರಿಂದ ಇವುಗಳ ಸ್ಥಾನ, ಸಮಾನಾವಸ್ಥೆ, ವಿಷಮವಾಗುವ ರೀತಿ, ವಿಷಮವಾಗಲು ಕಾರಣ ಇತ್ಯಾದಿಯಾದ ರೋಗೋತ್ಪತ್ತಿಗೆ ಪೂರ್ವಭಾವಿ ಕಾರ್ಯಕ್ರಮಗಳು ಚೆನ್ನಾಗಿ ತಿಳಿಯಬೇಕು. ಅಲ್ಲದೆ ಇವುಗಳ ಚಯಕೋಪಾದ್ಯವಸ್ಥೆಗಳಿಗೆ ಕಾರಣಗಳಾದ ಮಿಥ್ಯಾಹಾರ ವಿಹಾರಗಳ ವಿಚಾರಕ್ಕೆ ಕೈಹಾಕಿದರಂತೂ ನಿಘಂಟುವನ್ನೆಲ್ಲ ಆಲೋಡನೆಮಾಡಿದಂತಾಯಿತು. ದ್ರವ್ಯಗಳಲ್ಲಿ ಪಂಚಭೂತಗಳು ಹೇಗೆ ಸೇರಿವೆ? ಅವುಗಳಲ್ಲಿ ಮಧುರಾದಿರಸಗಳು ಹೇಗೆ ಕಾಣಸುತ್ತವೆ? ಗುರುಮಂದಾದಿಗುಣಗಳೆಷ್ಟು? ವೀರ್ಯ, ವಿಪಾಕ ಪ್ರಭಾವಗಳು ಎಂಥವು ಮುಂತಾದ ವಿಷಯಗಳೆಲ್ಲ ಮನಸ್ಸಿಗೆ ಚೆನ್ನಾಗಿ ತಿಳಿಯಬೇಕು.

ನಂತರ ಇವೇ ತ್ರಿದೋಷಗಳು ಮನುಷ್ಯನ ಜನ್ಮಕಾಲದಲ್ಲೀ ಶುಕ್ರಾರ್ತವಗಳಲ್ಲಿ ಸೇರಿ ಜೀವಾವಧಿ ಅವನಲ್ಲಿ ಪ್ರಕಾಶವಾಗಿ ಇದ್ದುಕೊಂಡು ಆಯಾಯ ದೋಷಕ್ಕನುಸಾರವಾದ ಪ್ರಕೃತಿಯುಳ್ಳವನನ್ನಾಗಿ ಮಾಡಿ ತಮ್ಮ ಲಕ್ಷಣಗಳನ್ನು ತೋರಿಸಿಕೊಳ್ಳುತ್ತವೆ.

ರೋಗನಿರ್ಣಯಕ್ಕೂ ಮತ್ತು ರೋಗಚಿಕಿತ್ಸೆಗೂ ಅನುಕೂಲಿಸುವಂತೆ ದೇಶವಿದೇಶಗಳಲ್ಲಿ ಅನೇಕವಿಧವಾದ ಸಿದ್ಧಾಂತಗಳಿದ್ದಾಗ್ಯೂ ತದನುಸಾರವಾಗಿ ಅಲ್ಲಲ್ಲಿ ಹೊಸರೋಗಗಳೂ ಅವುಗಳ ಚಿಕಿತ್ಸೆಗಳೂ ಮೇಲೆ ಮೇಲೆ ಕಂಡುಹಿಡಿಯಲ್ಪಡುತ್ತಲಿದ್ದಾಗ್ಯೂ "ಹೇತುಪ್ರತ್ಯನೀಕಚಿಕಿತ್ಸೆ" ಎಂದು ಪ್ರಸಿದ್ಧವಾಗಿರುವ ನಮ್ಮ ಆಯುರ್ವೇದಸ್ಥವಾದ ತ್ರಿದೋಷಸಿದ್ಧಾಂತವೇ ಅತ್ಯಂತ ಸುಲಭವಾದದ್ದು. ಮತ್ತು ಅತ್ಯಂತ ಪ್ರಬಲಪ್ರಯೋಜನಕಾರಿಯಾದದ್ದು. ಎಂಬ ವಿಷಯದಲ್ಲಿ—

ವಿಕಾರನಾಮಾಕುಶಲೋನಜಿಹ್ರೀಯಾತ್ಕದಾಚನ ।
ನಹಿಸರ್ವವಿಕಾರಾಣಾಂ ನಾಮತೋಸ್ತಿ ಧ್ರುವಾಸ್ಥಿತಿಃ ।
ಸ ಏವ ಕುಪಿತೋ ದೋಷಃ ಸಮುತ್ಥಾನ ವಿಶೇಷತಃ ।
ಸ್ಥಾನಾಂತರಾಣಿ ಚ ಪ್ರಾಪ್ಯವಿಕಾರಾನ್ಕುರುತೇ ಬಹೂನ್ ॥

ಇತ್ಯಾದಿಯಾದ ವಾಗ್ಭಟಾಚಾರ್ಯನ ಮಾತು ಸಾಕಾಗಿರುತ್ತದೆ. ರೋಗನಿವಾರಣವನ್ನು ಮಾಡುವುದರಲ್ಲಿ ಅದರ ಮೂಲಕಾರಣವನ್ನು ಕಂಡುಹಿಡಿದು ಅದನ್ನ ಧ್ವಂಸಮಾಡುವ ಕ್ರಮಕ್ಕಿಂತ ಉತ್ತಮವಾದ ಕ್ರಮವಾವದಿರುವುದು? ಆದ್ದರಿಂದ ತ್ರಿದೋಷತತ್ತ್ವವು ಸರ್ವಶಾಸ್ತ್ರಸಮ್ಮತವು ಮತ್ತು ಮನುಷ್ಯನ ದುಃಖನಿವೃತ್ತಿಮಾಡುವ ಪ್ರಯತ್ನದಲ್ಲಿ ಅತ್ಯುತ್ತಮವೆಂದು ಸಿದ್ಧಾಂತವು.

ಸಬ್ಜೆಕ್ಟ್ ಕಮಿಟಿ.

29-12-30 ದಿವಸ ಮಧ್ಯಾಹ್ನ 2 ಘಂಟೆಯ ಸಮಯದಲ್ಲಿ ವಿಷಯನಿರ್ಮಾಣಕ ಸಂಸ್ಥೆಯ ಮೀಟಿಂಗು ಪುನಃ ಸೇರಿ ಕೆಲಸವನ್ನು ಪೂರೈಸಿತು. ಸಾಯಂಕಾಲ 4½ ಗಂಟೆಯವರೆಗೂ ಚರ್ಚೆಗಳು ನಡೆದು, ಕಾನ್ಫರೆನ್ಸಿನಲ್ಲಿ ತರಬೇಕಾದ ಸೂಚನೆಗಳು ಬಹುಮತದಿಂದ ನಿರ್ಣಯಿಸಲ್ಪಟ್ಟವು.

ಈ ಕಮಿಟಿಯ ಮೀಟಿಂಗನ್ನು ಮುಕ್ತಾಯಮಾಡುವ ಮೊದಲು ಜನರಲ್ ಸೆಕ್ರೆಟರಿಯವರು, ಪ್ರೆಸಿಡೆಂಟರನ್ನೂ ಮತ್ತು ಇತರ ಮೆಂಬರುಗಳನ್ನೂ ವಂದಿಸಿ, ಸಾವಧಾನದಿಂದಲೂ ಮತ್ತು ಸಹಾನುಭೂತಿಯಿಂದಲೂ ಅಗಾಧವಾದ ಕೆಲಸವನ್ನು ಮಾಡಿದುದಕ್ಕಾಗಿ ಸಂತೋಷಪಟ್ಟರು. ಕಾನ್ಫರೆನ್ಸಿನ ಕಾರ್ಯಕ್ರಮದಲ್ಲಿ ಅವಶ್ಯಕವಾಗಿ ಬದಲಾವಣೆಯನ್ನು ಮಾಡಬೇಕಾಗಿ ಬಂದುದರಿಂದ, ಕಾನ್ಫರೆನ್ಸಿನ ಕೊನೆಯ ಮೀಟಿಂಗ್, ಅದೇ ದಿವಸ ರಾತ್ರಿ 8 ಗಂಟೆಗೆ ಸೇರುವದಾಗಿ ತಿಳಿಯಪಡಿಸಿದರು.

ಆರನೆಯ ಕರ್ಣಾಟಕಪ್ರಾಂತಿಕ ಆಯುರ್ವೇದ ಸಮ್ಮೇಳನ.

(29—12—1930 ರಲ್ಲಿ ಸಾಯಂಕಾಲ 6 ರಿಂದ 8-30 ಗಂಟೆಯ ವರೆಗೆ)

ಹಿಂದೆಯೇ ಪ್ರಕಟಪಡಿಸಿದ್ದಂತೆ, ಕರ್ಣಾಟಕಾಯುರ್ವೇದ ಪರಿಷತ್ತಿನ ಆರನೆಯ ಸಮ್ಮೇಳನವು, ಬೆಂಗಳೂರಿನ ಪ್ರಮುಖವೈದ್ಯರೂ, ಮೈಸೂರು ಗವರ್ನಮೆಂಟ್ ಆಯುರ್ವೇದ ಮಹಾಪಾಠಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರೂ ಆದ **ಡಾ|| ಎಸ್. ವೆಂಕೋಬರಾವ್**, ಬಿ.ಎ., ಬಿ.ಎಂ.ಡಿ. ಅಪಾತಿಕರಿ, ಇವರ ಅಧ್ಯಕ್ಷತೆಯಲ್ಲಿ ಸೇರಿತು. ಅವರನ್ನು ಅಗ್ರಾಸನಕ್ಕೆ ಸೂಚಿಸುವ ಸಂದರ್ಭದಲ್ಲಿ, ಆಯುರ್ವೇದ ಮತ್ತು ಆಯುರ್ವೇದಾವಲಂಬಿಗಳ ಸ್ಥಿತಿಯನ್ನು ಉತ್ತಮಗೊಳಿಸುವುದರಲ್ಲಿ ಡಾ|| ವೆಂಕೋಬರಾಯರು ಸ್ವಶಕ್ತಿಯಿಂದ ಪ್ರಯತ್ನಪಟ್ಟುದುದಲ್ಲದೆ, ಸರ್ಕಾರದ ಮೂಲಕವೂ ಹೇಗೆ ಸಹಾಯವನ್ನು ಕಲ್ಪಿಸಿಕೊಟ್ಟರೋ ಅದನ್ನು ಶ್ರಿಮಾನ್ ಕೆ. ಶೇಷಯ್ಯರ್‌ರವರು ಸಭೆಯವರಿಗೆ ತಿಳಿಸಿದರು. ಈ ಸೂಚನೆಯನ್ನು ಸಿಂಹಳದ್ವೀಪದ ಜಾಫ್ನಾ ಆಯುರ್ವೇದಿಕ್ ಕಾಲೇಜಿನ ವೈಸ್ ಪ್ರಿನ್ಸಿಪಾಲರಾದ ಆಯುರ್ವೇದ ವಿದ್ವಾನ್ ಎಚ್. ಶ್ರೀನಿವಾಸ ಅಯ್ಯಂಗಾರ್ಯರೂ, ಬೆಂಗಳೂರಿನ ಪಂಡಿತ ಎಲ್ಲಪ್ಪನವರೂ, ನಂದಿಯ ತತ್ವವಾದಿ ಪಂಡಿತ ಸಿ. ಸುಬ್ಬಣ್ಣಾಚಾರ್ಯರವರೂ ಪುಷ್ಟೀಕರಿಸಲು, ಡಾ|| ವೆಂಕೋಬರಾಯರವರು ಸಭೆಯ

ವರ ಪ್ರಾರ್ಥನೆಯಂತೆ ಅಗ್ರಾಸನವನ್ನು ವಹಿಸಿದರು. ಸಭಾ ಮಂದಿರವು ಕರ್ಣಾಟಕದ ಪ್ರತಿನಿಧಿಗಳಿಂದಲೂ, ಮತ್ತು ಪ್ರೇಕ್ಷಕರಿಂದಲೂ ಕಿಕ್ಕಿರಿಯುವಂತೆ ತುಂಬಿದ್ದಿತು. ಬೆಂಗಳೂರಿನ ಪಂ|| ಪಟ್ಟಾಭಿರಾಮಶಾಸ್ತ್ರಿಗಳವರು ದೇವತಾಸ್ತೋತ್ರವನ್ನು ಮಾಡಿದ ತರುವಾಯ, ಅಧ್ಯಕ್ಷರವರು ಎದ್ದು ತಮ್ಮ ಅಮೋಘಭಾಷಣವನ್ನು ಮಾಡಿದರು. ಸತ್ಯಜ್ಞಾನಗಳಿಗೆ ಆಯುರ್ವೇದವು ಹೇಗೆ ಮೂಲಾಧಾರವೋ, ಚಿಕಿತ್ಸಾ ತತ್ವಗಳೆಲ್ಲವನ್ನೂ ಅದು ಹೇಗೆ ಅಡಕಗೊಂಡಿರುವುದೋ, ಪಾಶ್ಚಾತ್ಯಾದಿ ವೈದ್ಯಶಾಸ್ತ್ರಗಳು ಹೇಗೆ ಆಯುರ್ವೇದದ ಅಂಶಪ್ರಾಯಗಳೋ, ಅವುಗಳನ್ನು ವಿವರಿಸಿ, ಆಯುರ್ವೇದದ ಉತ್ಕೃಷ್ಟತೆಗಳನ್ನು ತೋರಿಸಿದರು. ಇತರ ವೈದ್ಯಗಳ ಘನಶಾಸ್ತ್ರಜ್ಞರು ಆಯುರ್ವೇದದ ಮಹತ್ತಿನ ವಿಷಯವಾಗಿ ಬರೆದಿರುವುದನ್ನೂ ಸಹ ಶೃತಪಡಿಸಿ, ತಮ್ಮ ಅಭಿಮತವನ್ನು ದೃಢೀಕರಿಸಿದರು.

ಅನಂತರದಲ್ಲಿ, ಕರ್ಣಾಟಾಯುರ್ವೇದ ಮಂಡಲದ ಕಾರ್ಯದರ್ಶಿಗಳಾದ ಡಾ|| ಸವಣೂರ್‌ರವರು, ಸಹಕಾರ್ಯದರ್ಶಿಗಳಾದ ವಿದ್ವಾನ್ ಕೆ. ಶೇಷಶಾಸ್ತ್ರಿಗಳವರು ಅಸ್ವಸ್ಥತೆಯಿಂದ ಸಮ್ಮೇಳನಕ್ಕೆ ಬರಲು ಅಸಾಧ್ಯವಾದುದಕ್ಕಾಗಿ ವ್ಯಸನಪಟ್ಟು, ಕಳೆದ ೬ ವರ್ಷಗಳಿಂದಲೂ ಈ ಮಂಡಲವು ಮಾಡಿರುವ ಕೆಲಸವನ್ನು ಸಂಪೂರ್ಣವಾಗಿ ತಿಳಿಸಿ, ಕರ್ಣಾಟಕದಲ್ಲಿನ ಆಯುರ್ವೇದ ವೈದ್ಯರ ಮತ್ತು ಆಯುರ್ವೇದದ ಪ್ರಕೃತಸ್ಥಿತಿಯನ್ನು ವಿವರಿಸಿ, ತದಭಿವೃದ್ಧಿಗೆ ಸಲಹೆಗಳನ್ನು ಕೊಟ್ಟರು.

ಕರ್ಣಾಟಕಾಯುರ್ವೇದ ವಿದ್ಯಾಪೀಠದ ಕಾರ್ಯದರ್ಶಿಗಳಾದ ಡಾ|| ವೈ. ಎಲ್. ಶಾಸ್ತ್ರಿಗಳವರು, ತತ್ಪೀಠಕ್ಕೆ ಸದಸ್ಯರನ್ನು ಚುನಾಯಿಸುವ ಠರಾವನ್ನು ತರಲು, ವಿದ್ಯಾಪೀಠದ ವೈಸ್‌ಪ್ರೆಸಿಡೆಂಟರೂ, ಮಂಡಲದ ಜನರಲ್ ಸೆಕ್ರೆಟರಿಗಳೂ ಆದ ಡಾ|| ಎಚ್. ವಿ. ಸವಣೂರ್‌ರವರು ಈಗಿನ ಏರ್ಪಾಟೇ ಮುಂದಿನ ಸಮ್ಮೇಳನದ ವರೆಗೂ ನಡೆಯಬಹುದೆಂದು ಸೂಚಿಸಲು, ಸಕಲರೂ ಅದನ್ನು ಅನುಮೋದಿಸಿದರು.

ಮತ್ತೆ ಕೆಲವು ಮುಖ್ಯವಾದ ಠರಾವುಗಳು ಚರ್ಚಿಸಲ್ಪಟ್ಟು, ಬಹುಮತದ ಮೇಲೆ ಕೆಲವು ಅಂಗೀಕೃತವಾದವು. ಮಂಡಲದ ಆಫೀಸನ್ನು ಶೃಂಗೇರಿಯಿಂದ ಬೆಂಗಳೂರಿಗೆ ಬದಲಾಯಿಸುವುದು, ಮುಂದಿನ ಸಮ್ಮೇಳನವನ್ನು ಬಳ್ಳಾರಿಯಲ್ಲಿ ನಡೆಸಲು ಅಲ್ಲಿನ ವೈದ್ಯರು ಕೊಟ್ಟ ಆಹ್ವಾನವನ್ನು ಸ್ವೀಕರಿಸುವುದು ಇವುಗಳೇ ಮುಖ್ಯವಾದ ಠರಾವುಗಳಾಗಿವೆ.

ಸಮ್ಮೇಳನದ ಜನರಲ್ ಸೆಕ್ರೆಟರಿಗಳು ಅಧ್ಯಕ್ಷರಿಗೆ ಹಾರವನ್ನು ಹಾಕಿದ ನಂತರ, ಅವರಿಗೆ ಧನ್ಯವಾದಗಳನ್ನರ್ಪಿಸಿ, ಸಭೆಯು ಮುಕ್ತಾಯಗೊಂಡಿತು.

೨೧ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦



ಶ್ರೀಯುತ ಡಾ|| ಎಸ್. ವೆಂಕೋಬರಾವ್, B.A., B.M.D.

(ರಿ|| ಹೆಡ್ಮಾಸ್ಟರು, ಗಾ|| ಆಯುರ್ವೇದಿಕ್ ಕಾಲೇಜು, ಮೈಸೂರು.)

ಕರ್ನಾಟಕಪ್ರಾಂತಿಕ ಆಯುರ್ವೇದ ಸಮ್ಮೇಳನದ ಅಧ್ಯಕ್ಷರು.

1930 ನೇ ಇಸವಿ ಡಿಶಂಬರು ತಿಂಗಳಲ್ಲಿ ಮೈಸೂರಿನಲ್ಲಿ ನಡೆದ ಕರ್ಣಾಟಕ ಆಯುರ್ವೇದ ಮಂಡಲದ 6 ನೆಯ ಸಮ್ಮೇಳನಾಧ್ಯಕ್ಷರಾದ ಡಾ|| ಎಸ್. ವೆಂಕೋಬರಾಯರವರ ಭಾಷಣದ ಸಾರಾಂಶ.

ಈ ಕರ್ಣಾಟಕಾಯುರ್ವೇದ ಪರಿಷತ್ತಿನ ಅಧ್ಯಕ್ಷಪದವಿಗೆ ನನ್ನನ್ನು ನಿಯಮಿಸಿ ನನಗೆ ಒಂದು ಗೌರವವನ್ನುಂಟುಮಾಡಿದುದಕ್ಕಾಗಿ ಸ್ವಾಗತಮಂಡಲಿಯ ಅಧ್ಯಕ್ಷರಿಗೂ ಸದಸ್ಯರಿಗೂ ನನ್ನ ವಂದನೆಯನ್ನು ಅರ್ಪಿಸುವುದು ನನ್ನ ಪ್ರಥಮ ಕರ್ತವ್ಯವಾಗಿದೆ. ಪರಿಷತ್ತಿನ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚೆಯೇ ಅಧ್ಯಕ್ಷರು ಭಾಷಣವನ್ನು ಮಾಡುವ ಪದ್ಧತಿಯನ್ನು ಅನುಸರಿಸಿ, ಆಯುರ್ವೇದ ಶಾಸ್ತ್ರದ ಮಹತ್ವವನ್ನು ಕುರಿತು ಪ್ರಸ್ತಾಪಿಸುತ್ತೇನೆ.

ಆಯುರ್ವೇದ ಶಾಸ್ತ್ರವನ್ನು ಪೂರ್ಣವಾಗಿ ಸಂಗ್ರಹಿಸುವುದು ಸಾಧ್ಯವಲ್ಲ. ನನಗೆ ಅರ್ಧಗಂಟೆಯ ಕಾಲ ಅವಕಾಶ ಕ್ಲುಪ್ತವಾಗಿರುವುದು. ಆದ್ದರಿಂದ ಹೇಳಬೇಕಾದ ಅಂಶವನ್ನೆಲ್ಲಾ ಬಹಳ ಸಂಗ್ರಹವಾಗಿ ಹೇಳಬೇಕಾಗಿರುವುದರಿಂದ ತಮ್ಮ ಕ್ಷಮಾಪಣೆಯನ್ನು ಬೇಡುತ್ತೇನೆ.

ಅನೇಕರು ಹೇಳುವುದೇನೆಂದರೆ—'ಆಯುರ್ವೇದದಲ್ಲಿ ಏನಿದೆ? ಯಾವುದೋ ಹಳೇ ಕಂದಾಚಾರ, ಅಂಧಪರಂಪರೆ, ಅಲೋಪೇತಿ, ಹೋಮಿಯೋಪತಿ ಮೊದಲಾದ ಶಾಸ್ತ್ರಗಳು ದಿನೇ ದಿನೇ ಅಭಿವೃದ್ಧಿಯಾಗುತ್ತಿರುವಲ್ಲಿ ಅರ್ಥವಿಲ್ಲದ ಜನ್ಮಾಂತರದ 'ವಾತ ಪಿತ್ತ ಕಫ' ತತ್ವಗಳನ್ನು ಕಟ್ಟಿಕೊಂಡರೆ ನಗುಬರುವುದಿಲ್ಲವೆ? ಇಂಥ ತತ್ವವನ್ನು ಅವಲಂಬಿಸಿರುವ ಆಯುರ್ವೇದವನ್ನು ಪುನರುಜ್ಜೀವನ ಮಾಡಬೇಕೆಂಬುದು ಶುದ್ಧ ಹುಚ್ಚರ ಮಾತು, ಇತ್ಯಾದಿಯಾಗಿ.

ಹೀಗೆ ಹೇಳನಮಾಡುವವರಿಗೆ ಪಾಪ! ಆಯುರ್ವೇದದ ವಿಷಯವೇ ತಿಳಿಯದು; ಅಥವಾ ದ್ವೇಷವಾದರೂ ಇರಬೇಕು. ಅದರ ಚಿಕಿತ್ಸಾಮಾರ್ಗವನ್ನೇ ಚಾಚು ತಪ್ಪದೆ ಅನುಸರಿಸುವುದರಿಂದ ಉಂಟಾಗುತ್ತಿರುವ ಗುಣವೇ ಅದರ ಮಹತ್ವದ ವಿಷಯದಲ್ಲಿ ಸಾಕ್ಷಿ. ಅದರ ಯೋಗ್ಯತೆಯ ವಿಷಯದಲ್ಲಿ ನಮ್ಮವರು ಆಡಿ ತೋರುವ ಮಾತನ್ನು ಹೇಳಿದರೆ ಅತಿಶಯೋಕ್ತಿಯೆಂದೋ, ಜಂಭವೆಂದೋ ತೋರಬಹುದು.

ಕಲ್ಕತ್ತೆಯ ಮೆಡಿಕಲ್ ಕಾಲೇಜಿನ ಪ್ರಿನ್ಸಿಪಾಲರು ಡಾ|| ಚಾರ್ಲೆಸ್ ಸಾಹೇಬರು, ಪ್ರೊಫೆಸರ್ ವೀಬರ್‌ಸಾಹೇಬರು, ಫಿಲಡೆಲ್ಫಿಯವಾಸಿಗಳಾದ

ಡಾ|| ಚಿ. ಇ. ಕ್ಲಾರ್ಕ್, ಎಂ.ಎ.,ಎಂ.ಡಿ. ಸಾಹೇಬರು, ಡಾ|| ಹಾನೀಲಿ ಸಾಹೇಬರೇ ಮೊದಲಾದ ಪಾಶ್ಚಾತ್ಯವಿದ್ವಾಂಸರು ಆಯುರ್ವೇದದ ವಿಷಯದಲ್ಲಿ ಆಡಿರುವ ಗೌರವದ ಮಾತು ಅಭಿಮಾನದ ಮಾತಲ್ಲವೆಂದು ಸರ್ವರೂ ಒಪ್ಪಲೇಬೇಕಾಗಿದೆ.

ತ್ರಿದೋಷತತ್ವವೆಂದರೆ, ಅನೇಕರಿಗೆ ಗೊತ್ತಿಲ್ಲದ ಮಾತ್ರಕ್ಕೇ ಅದು ಅಂಧ ಪರಂಪರೆಯಾದೀತೇ ? ಅದು ಸಿದ್ಧಾಂತವೆಂದರೆ ಸಾಲದು. ಅನುಭವದ ಸಾರ. ಶರೀರದಲ್ಲಿ ನಡೆಯುವ ಕಾರ್ಯಗಳೆಲ್ಲವೂ ಈ ತತ್ವವನ್ನು ಅನುಸರಿಸಿಯೇ ನಡೆಯುತ್ತವೆ. ವಾತ, ಪಿತ್ತ, ಕಫಗಳು ಸಮವಾಗಿರುವಾಗ ಆರೋಗ್ಯವೂ, ಅವು ವಿಷಮವಾಗಿರುವಾಗ ರೋಗವೂ ಉಂಟಾಗುವುವು. ಇದು ಅನುಭವದಿಂದ ಸಿದ್ಧವಾದ ವಿಷಯ. ಯುಕ್ತಿಯುಕ್ತವಾದುದು, ಶಾಸ್ತ್ರೀಯವಾದುದು. ಇದನ್ನು ಅಪ್ರಮಾಣವೆಂದು ಹೇಳಲು ಸಾಧ್ಯವಿಲ್ಲ.

ಈಗ ನಮ್ಮಲ್ಲಿ ಪ್ರಚಾರದಲ್ಲಿರುವಷ್ಟೇ ಆಯುರ್ವೇದವೆಂದೂ ಹೇಳಲು ಸಾಧ್ಯವಿಲ್ಲ. ಇಷ್ಟಕ್ಕೆ ಆಯುರ್ವೇದವು ಸಂಪೂರ್ಣವಾಗುವುದಿಲ್ಲ. ಅದರ ಗ್ರಂಥವೂ ಅಪಾರ, ಗ್ರಂಥಗಳಲ್ಲಿ ಸಿಕ್ಕದ ಅಮೂಲ್ಯವಾದ ವಿಷಯಗಳು ಅನೇಕ ಜನರಲ್ಲಿಯೂ ಕುಟುಂಬಗಳಲ್ಲಿಯೂ ರಹಸ್ಯವಾಗಿವೆ.

ನಮ್ಮ ಆಯುರ್ವೇದಶಾಸ್ತ್ರಕ್ಕೆ ಸಿದ್ಧಾಯುರ್ವೇದವೆಂದೂ ಹೆಸರು. ಇದನ್ನು ಈಶ್ವರನು ನಂದಿ, ಪತಂಜಲಿ, ಬೋಗ, ಅಗಸ್ತ್ಯ ಮೊದಲಾದವರಿಗೆ ಸಾಕ್ಷಾತ್ ಉಪದೇಶಿಸಿದನು. ಇದರಲ್ಲಿ ಆರುಭಾಗಗಳುಂಟು—(1) ಔಷಧಭಾಗ. (2) ಯೋಗ. (3) ರಸವೈದ್ಯ. (4) ಜ್ಯೋತಿಶ್ಶಾಸ್ತ್ರ. (5) ಮಂತ್ರ. (6) ಕಲ್ಪ. ಇವುಗಳೆಲ್ಲವನ್ನೂ ಓದಿದ ಹೊರತು ಆಯುರ್ವೇದಜ್ಞಾನವು ಪೂರ್ಣವಾಗುವುದಿಲ್ಲ.

ಈ ಮೇಲೆ ಹೇಳಿದ ಭಾಗಗಳೆಲ್ಲಕ್ಕಿಂತಲೂ ಯೋಗವು ಅತಿಮುಖ್ಯವಾದುದು. ಇದರಿಂದ ರೋಗವನ್ನು ಗುಣಪಡಿಸುವಶಕ್ತಿಯೂ, ಅಸಾಧಾರಣಗಳಾದ ಸಿದ್ಧಿಗಳೂ ಉಂಟಾಗುವುವು. ಇಷ್ಟೇ ಅಲ್ಲ. ವೇದಾಂತಿಗಳ ಮುಖ್ಯಧ್ಯೇಯವಾದ ಸಾಕ್ಷಾತ್ ಪರಬ್ರಹ್ಮಪ್ರಾಪ್ತಿಗೂ ಈ ಯೋಗವು ಸಾಧನ. ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಅನುಷ್ಠಾನಗಳಿಂದಲೇ ಯೋಗಸಿದ್ಧಿಯಾಗುವುದು. ಮೇಲೆಹೇಳಿದ ಸಿದ್ಧಿಗಳು ಎಂಟು— 'ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ ಮತ್ತು ವಶಿತ್ವ' ವೆಂಬುವು. ಈ ಅಮಾನುಷವಾದ ಸಿದ್ಧಿಗಳ ಸಹಾಯದಿಂದ ಯೋಗಿಯು ತನ್ನ ಇಷ್ಟಾರ್ಥವನ್ನೆಲ್ಲಾ ಪಡೆಯುವನು. ಆ ಯೋಗಿಯ ಅಮಾ

ನುಸವಾದ ಕಾರ್ಯಗಳನ್ನೂ ಶಕ್ತಿಗಳನ್ನೂ ಹೇಳುತ್ತೇನೆ ಕೇಳಿ. ಪರೋಕ್ಷಜ್ಞಾನ, ದೂರಶಬ್ದಶ್ರವಣ, ಸಾರ್ವಜ್ಞತ, ಮೃತರಜೀವಗಳೊಡನೆ ಮಾತು, ತನ್ನನ್ನೂ ಇತರರನ್ನೂ ಕಾಣದಂತೆಮಾಡುವುದು, ಯಾವ ಆಕಾರವನ್ನಾದರೂ ತಾಳುವುದು, ಪ್ರಪಂಚದ ಯಾವ ಭಾಗಕ್ಕಾದರೂ ಯಾವ ಸಹಾಯವೂ ಇಲ್ಲದೆ ಹೋಗುವುದು, ಇತರರ ಮನಸ್ಸಿನಲ್ಲಿರುವುದನ್ನು ಹೇಳುವುದು, ವಾಯು—ಜಲ—ಅಗ್ನಿಸ್ತಂಭನ, ಭೂತಭವಿಷ್ಯದ್‌ಜ್ಞಾನ, ಮನೋದಾರ್ಢ್ಯದಿಂದ ರೋಗವನ್ನು ವಾಸಿಮಾಡುವುದು, ಅದ್ಭುತಕಾರ್ಯಗಳನ್ನು ತೋರಿಸುವುದು. ಇತ್ಯಾದಿಗಳೆಲ್ಲವೂ ಯೋಗಿಯ ಆಶ್ಚರ್ಯಕರವಾದ ಶಕ್ತಿ. ಒಬ್ಬ ಯೋಗಿಯು ಹೀಗೆ ಹೇಳಿರುವನು. '(1)' ಆದಿನಾಥ, ಮಚ್ಛೇನ್ದ್ರ, ಶಬರ, ಆನಂದಾದಿ ಮಹಾಮಹಿಮರನೇಕರು ಈ ಯೋಗಸಿದ್ಧಿಯನ್ನು ಪಡೆದವರು. ಇವರು ಹಠಯೋಗಬಲದಿಂದ ಮೃತ್ಯುವನ್ನು ಜಯಿಸಿ ಈ ಬ್ರಹ್ಮಾಂಡದಲ್ಲಿ ಸಂಚರಿಸುತ್ತಿದಾರೆ.

ಇಂಥ ಮಹಾಮಹಿಮೆಯನ್ನು ಬೀರುವ ಯೋಗವು ಈಗ ಖಿಲವಾಗಿರುವುದು ಅತಿ ಶೋಚನೀಯುವಾದ ವಿಷಯ.

ಆಯುರ್ವೇದದಲ್ಲಿಲ್ಲದ ವಿಷಯುವಿಲ್ಲ. ಇತರ ಚಿಕಿತ್ಸಾ ಪದ್ಧತಿಗಳಲ್ಲಿರುವ ಉತ್ತಮುವಾದ ತತ್ವಗಳೆಲ್ಲವೂ ನಮ್ಮ ಆಯುರ್ವೇದದಲ್ಲಿವೆ ಎಂಬುದು ಈ ಕೆಳಗಿನ ವಿಚಾರದಿಂದ ಗೊತ್ತಾಗುವುದು.

ಯೂನಿಪತಿ.

ಈ ಪದ್ಧತಿಯು 1896 ನೆಯ ಇಸವಿಯಲ್ಲಿ ಕಲ್ಕತ್ತೆಯಲ್ಲಿ ಡಾ|| ಬಿ. ಬಿ. ಬಟಾಬ್‌ಯಾಲ್ ಎಂಬ ವಿದ್ವಾಂಸರಿಂದ ಸ್ಥಾಪಿತವಾಯಿತು. ಈ ಪದ್ಧತಿಯಲ್ಲಿ ವನಸ್ಪತಿಗಳಲ್ಲಿರುವ 'ರಸ' ಗಳನ್ನು ಉಪಯೋಗಿಸಿ ಔಷಧಗಳನ್ನುಮಾಡಿ ಚಿಕಿತ್ಸೆಯನ್ನು ಮಾಡುವರು. ಇದರ ಪ್ರವರ್ತಕರೇ ಇದಕ್ಕೆ ಸೂಕ್ಷ್ಮಾಯುರ್ವೇದವೆಂದು ಹೆಸರಿಟ್ಟು, ಆಯುರ್ವೇದದಲ್ಲಿಯೇ ಇರುವ 16 ವನಸ್ಪತಿಗಳನ್ನು ಉಪಯೋಗಿಸಿರುವುದರಿಂದ ಇದನ್ನು ಆಯುರ್ವೇದವೇ ಎಂದು ಧಾರಾಳವಾಗಿ ಹೇಳಬಹುದು.

ಯುನಾನಿ ಶಾಸ್ತ್ರಕ್ಕೂ ಆಯುರ್ವೇದಕ್ಕೂ ಇರುವ ಅತ್ಯಂತ ಸಂಬಂಧವನ್ನು ಹೆಚ್ಚು ಹೇಳಬೇಕಾಗಿಲ್ಲ.

ಅಲೋಪತಿ.

ಇದರ ತತ್ವವು **"ಹೇತುವ್ಯಾಧಿವಿಪರೀತಾನಾಮೌಷಧಾಹಾರ ವಿಹಾರಾಣಾಮುಪಯೋಗಃ ಸುಖಾನುಬಂಧಃ"** ಎಂಬ ಆಯುರ್ವೇದ ವಚನದಲ್ಲಿ

ಹೇಳಿರುವ ತತ್ವವೇ. ಈ ಎರಡು ಪದ್ಧತಿಗಳಲ್ಲಿಯೂ ಉಪಯೋಗಿಸಲ್ಪಡುವ ಔಷಧಿಗಳು ಬಹುಶಃ ಒಂದೇ. ಇನ್ನೂ ಅನೇಕವೇಳೆ ಆ ಮೂಲಿಕೆಗಳಲ್ಲಿ ಆಯು ರ್ವೇದ ರೀತ್ಯಾ ಹೆಚ್ಚು ಗುಣಗಳು ಕಂಡುಬಂದಿವೆ.

ಹೋಮಿಯೋಪತಿ.

ಅಲೋಪತಿಗೂ ಆಯುರ್ವೇದಕ್ಕೂ ಎಷ್ಟು ಸಂಬಂಧವಿದೆಯೋ ಹೋಮಿ ಯೋಪತಿಗೂ ಆಯುರ್ವೇದಕ್ಕೂ ಅಷ್ಟೇ ಸಂಬಂಧವಿದೆ. ಅನೇಕ ಔಷಧಗಳು ಉಭಯಸಾಧಾರಣವೇ.

Biochemistry.

ಶರೀರದ ರಕ್ತದಲ್ಲಿ ಕೆಲವು ಉಪ್ಪುಗಳು ಕಡಿಮೆಯಾದಾಗ ರೋಗಚಿಹ್ನೆ ಗಳುಂಟಾಗುವುವೆಂದೂ ಆ ಉಪ್ಪುಗಳನ್ನು ಭರ್ತಿಮಾಡಿದರೆ ರೋಗಗಳು ವಾಸಿ ಯಾಗುವುವೆಂದೂ, ಆ ಉಪ್ಪುಗಳು ಸ್ವಾಭಾವಿಕವಾದ ಆಹಾರದ್ರವ್ಯಗಳಲ್ಲಿವೆ ಯೆಂದೂ ಈ ಮತ. ಪ್ರತಿಯೊಂದು ರೋಗಕ್ಕೂ ಪಥ್ಯವಾದ ಕೆಲವು ಆಹಾರ ಗಳನ್ನು ಗೊತ್ತುಮಾಡಿ, ಬೇಕಾದ ಕೆಲವು ಉಪ್ಪುಗಳನ್ನು ಒದಗಿಸಿ ರೋಗವನ್ನು ಪರಿಹಾರ ಮಾಡುವುದೇ ಇದರ ಪದ್ಧತಿ. ಆಯುರ್ವೇದದಲ್ಲಿಯೂ ರೋಗಚಿಹ್ನೆ ಯನ್ನು ಕಂಡು ಚಿಕಿತ್ಸೆಮಾಡುವ ಪದ್ಧತಿಯಿದೆಯೆಂದು ಈ ವಾಕ್ಯದಿಂದ ಗೊತ್ತಾಗುತ್ತದೆ.

ರೋಗಾಣಾಂನಾಮುಜ್ಞಾನಂತು ವ್ಯವಹಾರಮಾತ್ರ ಪ್ರಯೋಜನಾ ರ್ಥಂ । ವಾತಾರಬ್ಧತ್ವಾದಿ ಜ್ಞಾನಮೇವಚಿಕಿತ್ಸಾಯಾಂ ಸ್ವರೂಪೇಣೋಪ ಕಾರಿ ॥ ನಾಸ್ತಿರೋಗೋವಿನಾ ದೋಷೈರ್ಯಸ್ಮಾತ್ತಸ್ಮಾದ್ವಿಚಕ್ಷಣಃ । ಅನು ಕ್ತಮಪಿದೋಷಾಣಾಂಲಿಂಗೈರ್ವ್ಯಾಧಿಮುಪಾಚರೇತ್ ॥

ಜಲಚಿಕಿತ್ಸಾ.

ಶರೀರದಲ್ಲಿ ಕಶ್ಮಲವು ಕ್ರಮವಾಗಿ ಕೂಡಿ ರೋಗವನ್ನುಂಟುಮಾಡುವುದು. ಆ ಕಶ್ಮಲವು ಜೀರ್ಣಶಕ್ತಿಯ ದೋಷದಿಂದ ಉಂಟಾಗುತ್ತದೆ. ಆ ಕಶ್ಮಲವನ್ನು ಹೊರಗೆ ಹೊರಡಿಸಿದ ಹೊರತು ರೋಗವು ಗುಣವಾಗುವುದಿಲ್ಲ. ಆ ಕಶ್ಮಲವನ್ನು ಹೊರಪಡಿಸುವ ಕೆಲಸವು ನೀರಿನಿಂದ ಆಗುತ್ತದೆ. ಆದ್ದರಿಂದ ನೀರನ್ನು ಅನೇಕ ವಿಧದಲ್ಲಿ ಉಪಯೋಗಿಸಬೇಕು. ಆಯುರ್ವೇದದಲ್ಲಿಯೂ ರೋಗ ಕಾರಣವನ್ನು ಹೇಳುವ ಸಂದರ್ಭದಲ್ಲಿ ಇದೇ ಮಾತನ್ನೇ ಹೇಳಿದ್ದಾರೆ. " ರೋಗಾಸ್ಸರ್ವೇಽಪಿ ಮಂದೇಗ್ನೌ ಸುತರಾಮುದರಾಣಿಚ । ಅಜೀರ್ಣಾನ್ಮಲಿನೈಶ್ಚಾನ್ನೈರ್ಜಾ

ಯಂತೆ ಮಲಸಂಚಯೊಾತ್ ॥" ಆ ಕಶ್ಮಲವನ್ನು ಹೊರಡಿಸುವ ಕ್ರಮಕ್ಕೆ ಸಂಶೋಧನ ವಿಧಿ ಎಂದೂ, ಸಂಶೋಧನದಲ್ಲಿ ನೀರು ಅತ್ಯುತ್ತಮ ಸಾಮಗ್ರಿಯೆಂದೂ ಆಯುರ್ವೇದದಲ್ಲಿಯೂ ಹೇಳಿದೆ. ಇತರ ಎಲ್ಲಾ ಔಷಧಿಗಳಲ್ಲಿರುವ ಗುಣಗಳೆಲ್ಲವೂ ನೀರೊಂದರಲ್ಲಿಯೇ ಇದೆ. ಆದ್ದರಿಂದ ರೋಗದಲ್ಲಿಯೂ ಆರೋಗ್ಯದಲ್ಲಿಯೂ ನೀರನ್ನುಪಯೋಗಿಸಬೇಕೆಂದು ಆಯುರ್ವೇದಲ್ಲಿಯೂ ಹೇಳಿದೆ.

ಪಾನೀಯಂಪ್ರಾಣಿನಾಂ ಪ್ರಾಣಾಸ್ತದಾಯತ್ತಂಹಿಜೀವನಂ ।
ತಸ್ಮಾತ್ಸವಾಸ್ವವಸ್ಥಾಸು ಕೈಶ್ಚಿದ್ವಾವಾರಿವಾರ್ಯತೆ ॥

ನೀರಿನಲ್ಲಿರುವ ಅಮೂಲ್ಯವಾದ ಗುಣಗಳನ್ನು ತೋರಿಸಲು ಆಯುರ್ವೇದಗ್ರಂಥಗಳಲ್ಲಿ ಹೇಳಿರುವ ಇತರ ಹೆಸರುಗಳೇ ಸಾಕ್ಷಿ. 'ಜೀವನಂ', 'ಜೀವನೀಯಂ', 'ಅಮೃತಂ', 'ಭೇಷಜಂ', 'ಓಜಂ', 'ಸುಖಂ', 'ಶುಭಂ', 'ಪವಿತ್ರಂ'. ಇತ್ಯಾದಿ.

ಸ್ವಭಾವಚಿಕಿತ್ಸೆ. (Naturopathy).

ಇದು ಆಯುರ್ವೇದದಲ್ಲಿಯೂ ಇದೆ. ಪಥ್ಯೇಸತಿಗದಾರ್ತಸ್ಯ ಕಿಮೌಷಧನಿಷೇವಣಂ । ವಿನಾಪಿಭೇಷಜೈರ್ವ್ಯಾಧಿಃ ಪಥ್ಯಾದೇವನಿವರ್ತತೆ ॥ ನಸುಪಥ್ಯವಿಹೀನಸ್ಯಭೈಷಜ್ಯಾನಾಂಶತೈರಪಿ ॥ ಔಷಧವನ್ನು ಉಪಯೋಗಿಸದೆ ಆರೋಗ್ಯನಿಯಮಗಳಿಂದಲೇ ಎಂದರೆ ಆಹಾರವಿಹಾರಗಳ ಬದಲಾವಣೆಗಳಿಂದಲೇ ರೋಗವನ್ನು ಪರಿಹಾರಮಾಡುವುದೇ ಇದರ ಕ್ರಮವು.

ಬಿಸಿಲಿನ ಚಿಕಿತ್ಸೆ. (Heliotherapy).

ರವಿಮಂಡಲಸೇವಾ । ಸೂರ್ಯನಮಸ್ಕಾರಃ । ಸೂರ್ಯಮಾರುತಕೋವಿದಃ । ಆರೋಗ್ಯಂ ಭಾಸ್ಕರಾದಿಚ್ಛೇತ್ । ಕಫಮೇದೋವೃತೆವಾತೆಕೋಷ್ಣಂಗೇಹಂರವೇಃಕರಾಃ ॥

ಇತ್ಯಾದಿ ವಾಕ್ಯಗಳಿಂದ ರೋಗಪರಿಹಾರಕ್ಕೆ ಸೂರ್ಯನ ತೇಜಸ್ಸು ಅತಿ ಮುಖ್ಯವೆಂದು ಆಯುರ್ವೇದವೂ ಒಪ್ಪಿಕೊಂಡಿದೆಯೆಂಬುದು ವ್ಯಕ್ತವಾಗುತ್ತದೆ.

ಇದರಂತೆ (Aerotherapy) ವಾಯುಚಿಕಿತ್ಸೆ, ಉಪವಾಸ ಚಿಕಿತ್ಸೆ (Fastcure) ವ್ಯಾಯಾಮ ಚಿಕಿತ್ಸೆ (Medical Gymnastics) ವಿದ್ಯುಚ್ಚಿಕಿತ್ಸಾ (Electrotherapy). ಮೆಸ್ಮರಿಸಂ, ಹಿಪ್ನಾಟಿಸಂ, ಮ್ಯಾಗ್‌ನೆಟಿಕ್ ಹೀಲಿಂಗ್ ಇತ್ಯಾದಿ ಇತರ ಒಂದೊಂದು ಚಿಕಿತ್ಸಾಪದ್ಧತಿಯ ಆಧಾರಭೂತವಾದ ಒಂದೊಂದು ತತ್ವವೂ ನಮ್ಮ ಆಯುರ್ವೇದದಲ್ಲಿ ಒಟ್ಟಿಗೆ ಇರುವುದರಿಂದ ಆಯು

ರ್ವೇದವೇ ಎಲ್ಲಾ ಪದ್ಧತಿಗಳಿಗಿಂತಲೂ ಉತ್ತಮವಾದದ್ದು. ಇಷ್ಟೇ ಅಲ್ಲ ಆಯುರ್ವೇದವೇ ಮೂಲಾಧಾರ. ಅದರ ಒಂದೊಂದು ಅಂಗವನ್ನೇ ಮುಖ್ಯವಾಗಿ ಮಾಡಿ ಪ್ರತ್ಯೇಕ ಪದ್ಧತಿಗಳು ಹೊರಟವು. ನವೀನವಾಗಲಿ, ಪ್ರಾಚೀನವಾಗಲಿ, ತತ್ವವೊಂದೆ. ಆದ್ದರಿಂದ ಆಯುರ್ವೇದದಬಹು ಪ್ರಾಚೀನತೆಯಿಂದ ಅದಕ್ಕೆ ಕುಂದು ಏನೂ ಇಲ್ಲ.

ನಮ್ಮ ಪೂರ್ವಿಕರಾದ ಋಷಿಗಳಿಂದಲೂ, ಯೋಗಿಗಳಿಂದಲೂ ಪರಂಪರೆಯಾಗಿ ಬಂದ ಈ ಆಯುರ್ವೇದಶಾಸ್ತ್ರವನ್ನು ಪುನರುಜ್ಜೀವನಮಾಡಬೇಕಾದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಇತ್ಯಾದಿ.

ನಮಃಶಿವಾಯುಗುರುವೇ ನಾದಬಿಂದುಕಲಾತ್ಮನೆ ।
ನಿರಂಜನಪದಂಯಾತಿ ನಿತ್ಯಂಯತ್ರಪರಾಯಣಃ ॥

6 ನೆಯ ನಿಖಿಲಕರ್ನಾಟಕಾಯುರ್ವೇದ ಸಮ್ಮೇಳನದಲ್ಲಿ ತೀರ್ಮಾನವಾದ ಪ್ರಸ್ತಾವಗಳು.

1. ಸ್ವರ್ಗಸ್ಥರಾದ ಶ್ರೀಮಾನ್ ವೈದ್ಯರತ್ನಂ ಗುಂಡ್ಲುಪಂಡಿತ್ ಲಕ್ಷ್ಮಣಾಚಾರ್ಯರ ಅನಿರೀಕ್ಷಣೀಯವಾದ ಮತ್ತು ಹಠಾತ್ತಾದ ಮರಣದಿಂದ ಇಡೀಕರ್ಣಾಟಕದಲ್ಲಿರುವ ಆಯುರ್ವೇದ ವೈದ್ಯರಿಗೆಲ್ಲಾ ಉಂಟಾಗಿರತಕ್ಕ ಅಪರಿಮಿತನಷ್ಟವನ್ನು ಮತ್ತು ಅಗಾಧಸಂತಾಪವನ್ನು ಈ ಸಭೆಯವರು ಈಮೂಲಕ ಶೃತಪಡಿಸುತ್ತಾರೆ.

ಪ್ರ—ಡಾ॥ ಹೆಚ್. ವಿ. ಸವಣೂರ್ L.M. & S., ಬೆಳಗಾಂ, ಮತ್ತು ವೈದ್ಯವರ ಕೆ. ಶೇಷಯ್ಯರ್, ಬೆಂಗಳೂರ್,

ಸರ್ವರೂ ಎದ್ದುನಿಂತು ತಮ್ಮ ವಿಷಾದವನ್ನು ಸೂಚಿಸಿ ಪ್ರಸ್ತಾವವನ್ನು ಅಂಗೀಕರಿಸಿದರು.

2. ಪ್ರಾಂತಿಕಸಮ್ಮೇಳನದ ಅಧಿವೇಶನಗಳನ್ನು ಯಥಾರೀತಿಯಾಗಿ ತಪ್ಪದೆ ವರ್ಷವರ್ಷ ನಡೆಸುತ್ತಾಬರಬೇಕು.

ಪ್ರ—ಶ್ರೀ॥ ಕವಿರಾಜ, ರಾಮಚಂದ್ರವಾಶುದೇವರಾವ್, ಚಿಕ್ಕಮಗಳೂರ್.
ಪು—ಶ್ರೀಮಾನ್ ವೆಂಕಟಕೃಷ್ಣಜೋಯಿಸರು, ತುಂಕೂರು.
ಸರ್ವಮತದಿಂದ ಅಂಗೀಕೃತವಾಯಿತು.

೨೧ ನೆಯ ನಿಖಿಲಭಾರತಾಯುರ್ವೇದ ಸಮ್ಮೇಳನ ಮತ್ತು ಪ್ರದರ್ಶನ, ಮೈಸೂರು.

೧೯೩೦.



ಡಾ|| ಹೆಚ್. ವಿ. ಸವಣೂರ್, L.M.S.

(ಜನರಲ್ ಸೆಕ್ರೆಟರಿ, ನಿಖಿಲಕರ್ನಾಟಕ ಆಯುರ್ವೇದ ಮಂಡಲ, ಬೆಳಗಾಂ).

ಜಾಯಿಂಟ್ ಸೆಕ್ರೆಟರಿಯವರು:

3. ನಿಖಿಲ ಕರ್ನಾಟಕ ಪ್ರಾಂತಿಕ ಆಯುರ್ವೇದ ಸಮ್ಮೇಳನದ ಮೊದಲನೇ ಅಧಿವೇಶನದಲ್ಲಿ ತೀರ್ಮಾನವಾದ ಕಾನ್ಸ್ಟಿಟ್ಯೂಷನ್ ಪ್ರಕಾರ ಈ ಮಂಡಲದ ಸ್ಥಾಯಿ ಸಮಿತಿಗೆ (Standing Committee) ಗೆ ಒಬ್ಬರು ಪ್ರೆಸಿಡೆಂಟರೂ ಅಥವಾ ಅಧ್ಯಕ್ಷರೂ ಮೂರು ಜನ ಉಪಾಧ್ಯಕ್ಷರೂ ಇಬ್ಬರು ಮಂತ್ರಿಗಳೂ ಮತ್ತು ನಲವತ್ತು ಮಂದಿಗೆ ಕಮ್ಮಿ ಇಲ್ಲದೆ ಸದಸ್ಯರುಗಳೂ ಇರತಕ್ಕದ್ದಲ್ಲದೆ ಈ ವರ್ಷ ಇನ್ನೊಬ್ಬ ಮಂತ್ರಿಗಳು ಹೆಚ್ಚಾಗಿ ಒಟ್ಟು 3 ಜನ ಮಂತ್ರಿಗಳೂ ಇರಬೇಕು. ಇವರಲ್ಲಿ ಒಬ್ಬರು ಕೋಶಾಧ್ಯಕ್ಷರಾಗಿಯೂ ಇರಬೇಕು. ಮತ್ತು ಇಡೀ ಕರ್ನಾಟಕ ಪ್ರಾಂತ್ಯವನ್ನೆಲ್ಲಾ ರಾಜಕೀಯ ಡಿಸ್ಟ್ರಿಕ್ಟುಗಳನ್ನನುಸರಿಸಿ ವಿಭಾಗಮಾಡಿ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಇಬ್ಬಿಬ್ಬರು ಡಿಸ್ಟ್ರಿಕ್ಟು ಕಾರ್ಯದರ್ಶಿಗಳನ್ನು ನೇಮಿಸತಕ್ಕದ್ದು. ಈ ಡಿಸ್ಟ್ರಿಕ್ಟು ಕಾರ್ಯದರ್ಶಿಗಳು ತಮ್ಮ ತಮ್ಮ ಡಿಸ್ಟ್ರಿಕ್ಟುಗಳಲ್ಲಿ ವೈದ್ಯಕೀಯ ಉಪಸಂಘಗಳನ್ನು ಏರ್ಪಡಿಸಿಕೊಂಡು ಕೆಲಸಮಾಡತಕ್ಕದ್ದು. ಈ ವರ್ಷಕ್ಕೆ ಮಂಡಲದ ಅಧಿಕಾರವರ್ಗವು ಈ ಕೆಳಗೆ ಕಂಡ ರೀತಿ ಇರತಕ್ಕದ್ದು—

ಅಧ್ಯಕ್ಷರು.

ಶ್ರೀಮಾನ್ ಡಾ|| ಎಸ್. ವೆಂಕೋಬರಾವ್, ಬಿ.ಎ,ಬಿ.ಎಂ.ಡಿ, ಬೆಂಗಳೂರು.

ಉಪಾಧ್ಯಕ್ಷರು.

(1) ಶ್ರೀಮಾನ್ ಡಾ|| ಸಿ ಬಿ. ರಾಮರಾವ್, ಎಂ.ಡಿ., ಬೆಂಗಳೂರು.
(2) ,, ಡಾ|| ಎಚ್. ವಿ. ಸವಣೂರ್, ಎಲ್.ಎಂ.ಎಸ್., ಬೆಳಗಾಂ.
(3) ,, ಆಯುರ್ವೇದಭೂಷಣ ಎಂ. ವಿ. ಶಾಸ್ತ್ರಿ, ಮಂಗಳೂರು.

ಮಂತ್ರಿಗಳು.

(1) ಶ್ರೀಮಾನ್ ವೈದ್ಯವರ ಕೆ. ಶೇಷಯ್ಯರ್, ಬೆಂಗಳೂರು.
(2) ,, ಕವಿರಾಜ ರಾಮಚಂದ್ರ ವಾಸುದೇವರಾವ್, ಚಿಕ್ಕಮಗಳೂರು.
(3) ,, ವಿದ್ವಾನ್ ಕೆ. ಶೇಷಶಾಸ್ತ್ರಿ, ಶೃಂಗೇರಿ.

ಈ ಮಂತ್ರಿಗಳ ಪೈಕಿ ಶ್ರೀಮಾನ್ ವೈದ್ಯವರ ಕೆ ಶೇಷಯ್ಯರೇ ಕೋಶಾಧ್ಯಕ್ಷರಾಗಿಯೂ ಇರತಕ್ಕದ್ದು.

ಪ್ರ—ಶ್ರೀಮಾನ್ ಡಾ|| ಎಚ್.ವಿ. ಸವಣೂರ್, ಎಲ್.ಎಂ.ಎಸ್. ಬೆಳಗಾಂ.

ಪು—ಶ್ರೀಮಾನ್ ಆ|| ವಿದ್ವಾನ್ ಹೆಚ್. ಶ್ರೀನಿವಾಸರವರು.

ಸರ್ವರಿಂದ ಅಂಗೀಕೃತವಾಯಿತು.

4. ಈ ರೀತಿ ಸ್ಥಾಪಿಸಲ್ಪಟ್ಟ ಸ್ಥಾಯೀಸಮಿತಿಯು ಮೂರು ತಿಂಗಳಿಗೆ ಒಂದಾವೃತ್ತಿ ಸಭೆ ಸೇರತಕ್ಕದ್ದು. ಇಂಥಾ ಸಭೆಗೆ ಕೋರಂ ಪ್ರತ್ಯಕ್ಷವಾಗಿ ನಾಲ್ಕುಮಂದಿಯೂ ಮತ್ತು ಬೈಪ್ರಾಕ್ಸ್ ಏಳುಮಂದಿಯೂ ಇರತಕ್ಕದ್ದು.

ಪ್ರ—ಡಾ|| ಎಚ್. ವಿ. ಸವಣೂರ್, ಎಲ್.ಎಂ.ಎಸ್., ಬೆಳಗಾಂ.

ಪು—ಶ್ರೀಮಾನ್ ಆ|| ವಿದ್ವಾನ್ ಬಿ. ವಿ. ಪಂಡಿತರು, ನಂಜನಗೂಡು.

ಸರ್ವರಿಂದ ಅಂಗೀಕೃತವಾಯಿತು.

5. ಇಡೀ ಕರ್ನಾಟಕ ಪ್ರಾಂತ್ಯದಲ್ಲಿ ಆಯುರ್ವೇದ ವಿಷಯಗಳನ್ನು ಜನಗಳಿಗೆ ಬೋಧಿಸುವದಕ್ಕೂ ಮತ್ತು ಈ ಪ್ರಾಂತ್ಯದಲ್ಲಿರತಕ್ಕ ವೈದ್ಯರುಗಳನ್ನು ಐಕಮತ್ಯದಿಂದ ಸಂಯೋಜಿಸಿ ಪ್ರಕೃತ ವಿದ್ಯಮಾನಗಳಿಗೆ ಅವರನ್ನು ಜಾಗ್ರತರನ್ನಾಗಿ ಮಾಡಿಸುವದಕ್ಕೂ ಮಂಡಲದ ಕಾರ್ಯಕಲಾಪಗಳನ್ನೂ ಆಯವ್ಯಯ ವರದಿಯನ್ನೂ ಸದಸ್ಯರಿಗೂ ಮತ್ತು ಆಯುರ್ವೇದಾಭಿಮಾನಿಗಳಿಗೂ ಆಗಾಗ್ಯೆ ತಿಳಿಯಪಡಿಸುವದಕ್ಕೂ ಮಂಡಲದ ಪರವಾಗಿ ಮಾಸಪತ್ರಿಕೆಯನ್ನು ಕರ್ನಾಟಕ ಭಾಷೆಯಲ್ಲಿ ಹೊರಡಿಸಬೇಕು. ಇದರ ವಾರ್ಷಿಕ ವರ್ಗಣಿಯು ಸದ್ಯದಲ್ಲಿ 3-0-0 ಮೂರು ರೂಪಾಯಿಗಳಿಗೆ ಮೀರಕೂಡದು. ಮಂಡಲದ ಸದಸ್ಯರಿಗೆ ಮಾತ್ರ ಇದನ್ನು ಎರಡು ರೂಪಾಯಿಗಳಿಗೆ ಕೊಡತಕ್ಕದ್ದು; ಅಂದರೆ ಸದಸ್ಯರು ತಮ್ಮ ಸದಸ್ಯತ್ವದ ಶುಲ್ಕ 3 ರೂಪಾಯಿಗಳು ಮತ್ತು ಮಾಸಪತ್ರಿಕೆಯ ಶುಲ್ಕ 2 ರೂಪಾಯಿಗಳು ಒಟ್ಟು ಐದುರೂಪಾಯಿ ವಾರ್ಷಿಕಚಂದಾವನ್ನು ಕೊಡಬೇಕು.

ಪ್ರ—ಶ್ರೀಮಾನ್ ಆ|| ವಿದ್ವಾನ್ ಹೆಚ್. ಶ್ರೀನಿವಾಸಯ್ಯಂಗಾರ್ಯರು.

ಪು—ಡಾ|| ಹೆಚ್. ವಿ. ಸವಣೂರು, ಎಲ್.ಎಂ.ಎಸ್., ಬೆಳಗಾಂ.

ಸರ್ವರಿಂದ ಅಂಗೀಕೃತವಾಯಿತು.

6. ಮಂಡಲದ ಕಾರ್ಯನಿರ್ವಾಹಕ ಕಛೇರಿ (Office) ಯೂ ಮತ್ತು ಮಾಸಪತ್ರಿಕೆಯ ಕಛೇರಿಯೂ ಸಹಾ ಬೆಂಗಳೂರು ನಗರದಲ್ಲಿರತಕ್ಕದ್ದು.

ಪ್ರ—ಶ್ರೀಮಾನ್ ವೈದ್ಯ ಎಂ. ಜಿ. ಶಿಂಗರಯ್ಯಂಗಾರ್, ಮೈಸೂರು.

ಪು—ಶ್ರೀಮಾನ್ ರಾಮಚಂದ್ರವಾಸುದೇವರಾವ್, ಚಿಕ್ಕಮಗಳೂರು.

ಸರ್ವರಿಂದ ಅಂಗೀಕೃತವಾಯಿತು.

7. ಮಾಸಪತ್ರಿಕೆಯನ್ನು ಹೊರಡಿಸಲು ಸಮರ್ಥರಾದ ಮೂರು ಮಂದಿ ವೈದ್ಯರನ್ನೂ ವೈದ್ಯಾಭಿಮಾನಿಗಳನ್ನೂ ಒಳಗೊಂಡಿರುವ ಉಪಸಮಿತಿಯೊಂದನ್ನು ಏರ್ಪಾಡುಮಾಡಬೇಕು. ಈ ಉಪಸಮಿತಿಯು ಬೆಂಗಳೂರು ಪಟ್ಟಣದಲ್ಲಿರಬೇಕು. ಮಂತ್ರಿಗಳು ಈ ಉಪಸಮಿತಿಗೆ ತಕ್ಕ ಸಹಾಯವನ್ನು ದೊರಕಿಸಿಕೊಡತಕ್ಕದ್ದು.

ಪ್ರ—ಶ್ರೀಮಾನ್ ವೈದ್ಯರತ್ನ ಕಾಶಿಪಂಡಿತ ಕೃಷ್ಣಶಾಸ್ತ್ರಿಗಳು, ಬೆಂಗಳೂರು.

ಪ್ರ—ಶ್ರೀಮಾನ್ ಪಂಡಿತ ಜೆ. ಎಲ್. ಎನ್. ಅಯ್ಯಂಗಾರ್, ಶಿವಮೊಗ್ಗಾ.

ಸರ್ವರಿಂದ ಅಂಗೀಕೃತವಾಯಿತು.

8. ಮಂಡಲಕ್ಕೆ ಸಂಬಂಧಪಟ್ಟ ಕಾಗದಗಳೂ, ಪುಸ್ತಕಗಳೂ, ಫಾರಂಗಳೂ, ಆಯವ್ಯಯಲೆಖ್ಖಗಳೂ ಇತ್ಯಾದಿ ಸಮಸ್ತ ರಿಕಾರ್ಡುಗಳನ್ನೂ ಮಂತ್ರಿಗಳಾದ ಶ್ರೀಮಾನ್ ವಿದ್ವಾನ್ ಕೆ. ಶೇಷಶಾಸ್ತ್ರಿಗಳಿಂದ ಮಂತ್ರಿಗಳಾದ ವೈದ್ಯವರ ಶ್ರೀಮಾನ್ ಕೆ. ಶೇಷಯ್ಯನವರು ತರಿಸಿಕೊಳ್ಳತಕ್ಕದ್ದು.

ಪ್ರ—ಡಾ|| ಎಚ್. ವಿ. ಸವಣೂರ್ ಎಲ್.ಎಮ್.ಎಸ್. ಬೆಳಗಾಂ.

ಪು—ಶ್ರೀಮಾನ್ ಪಂಡಿತ ಎಂ. ಎಲ್ಲಪ್ಪ, ಬೆಂಗಳೂರ್.

ಸರ್ವರಿಂದ ಅಂಗೀಕೃತವಾಯಿತು.

ನಂತರ ಕಾರ್ಯದರ್ಶಿಗಳಾದ ಶ್ರೀಮಾನ್ ಕೆ. ಶೇಷಯ್ಯರವರು ಈಗಿನ ಅಧ್ಯಕ್ಷಪದವಿಯನ್ನಲಂಕರಿಸಿ ಈ ಕಾರ್ಯಕಲಾಪಗಳನ್ನು ನೆರವೇರಲು ಸಹಾಯಮಾಡಿದ ಶ್ರೀಮಾನ್ ಡಾ|| ಎಸ್. ವೆಂಕೋಬರಾವ್, ಬಿ.ಎ., ಬಿ.ಎಂ.ಡಿ., ಇವರಿಗೂ ಮತ್ತು ಮಾಜೀ ಅಧ್ಯಕ್ಷಪದವಿಯನ್ನಲಂಕರಿಸಿದ್ದ ಶ್ರೀಮಾನ್ ರಾವ್ ಬಹದ್ದೂರ್ ಡಾ|| ಸಿ. ಬಿ. ರಾಮರಾವ್, ಎಂ.ಡಿ., ಇವರಿಗೂ ಸಭೆಯ ಪರವಾಗಿ ಅನಂತ ಅಭಿನಂದನಗಳನ್ನು ಸಮರ್ಪಿಸಿದರು. ನಂತರ ಸಭೆಯು ಮುಕ್ತಾಯವಾಯಿತು.

(Sd.) S. Venkoba Rao,
President.

ಮೈಸೂರು,
29—12—30.

ಸಮ್ಮೇಳನದ ಉಪಸಂಹಾರ.

ತಾ|| 29—12—30 ನೆಯ ರಾತ್ರಿ 8-30—12-30.

ಮಹಾಸಮ್ಮೇಳನವು 29 ನೆಯ ತಾರೀಖಿನ ದಿವಸ ರಾತ್ರಿ 8-30 ಗಂಟೆಗೆ ಸಭಾಮಂಟಪದಲ್ಲಿ ಸೇರಿತು. ಅಧ್ಯಕ್ಷರು ಸಭಿಕರ ಅನುಮೋದನಪೂರ್ವಕವಾಗಿ ಅಗ್ರಾಸನವನ್ನೇರಿದರು. ರಾತ್ರಿ ಅಕಾಲವಾದರೂ ಪ್ರತಿನಿಧಿಗಳೂ, ಸ್ವಾಗತಮಂಡಲದ ಸದಸ್ಯರೂ, ಸ್ವಯಂಸೇವಕರೂ, ಪ್ರೇಕ್ಷಕರೂ ನೆರೆದಿದ್ದರು. ಅಧ್ಯಕ್ಷರು ಕಳೆದ ಮೂರು ದಿನಗಳಲ್ಲಿಯೂ ನಡೆದ ಸಮ್ಮೇಳನಕಾರ್ಯವನ್ನು ಸಂಗ್ರಹಮಾಡಿ, ವಿಷಯವಿವೇಚನಾ ಸಮಿತಿಯವರಿಂದ ನಿರ್ಧರಿಸಲ್ಪಟ್ಟ ತೀರ್ಮಾನಗಳನ್ನು ಸಭಿಕರ ವಿಚಾರಕ್ಕೆ ತರಲು ಪ್ರಧಾನಮಂತ್ರಿಗಳನ್ನು ನೇಮಿಸಿದರು. ಮಹಾಮಂಡಲದ ಕಾರ್ಯಾಲಯವನ್ನು ಕಾನ್‌ಪುರದಿಂದ ಲಾಹೋರಿಗೆ ಬದಲಾಯಿಸಬೇಕೇ, ಪುಣೆಗೆ ಬದಲಾಯಿಸಬೇಕೇ ಎನ್ನುವ ವಿಷಯದಲ್ಲಿಯೂ, ಮಹಾಮಂಡಲದ ನಿಯಮಾವಳಿಯ ಬದಲಾವಣೆಯ ವಿಷಯದಲ್ಲಿಯೂ, ಬಹಳ ಹೊತ್ತು ಚರ್ಚೆ ನಡೆದು ಮುಂದೆ ಹೇಳುವಂತೆ ತೀರ್ಮಾನಗಳು ಅಂಗೀಕರಿಸಲ್ಪಟ್ಟವು.

ಅನಂತರ ಅಧ್ಯಕ್ಷರು ಎದ್ದು, ತಮ್ಮ ಅಭಿಪ್ರಾಯಗಳನ್ನೂ, ಹಿತೋಪದೇಶವನ್ನೂ, ಅನುಮೋದನವನ್ನೂ ಒಳಗೊಂಡ ಅಮೋಘವಾದ ಉಪಸಂಹಾರ ಭಾಷಣವನ್ನು ಮಾಡಿದರು. ಆಮೇಲೆ ಪ್ರಧಾನಮಂತ್ರಿಗಳಾದ ಭಿಷಕ್‌ಚೂಡಾಮಣಿ ಆಯುರ್ವೇದ ವಿದ್ವಾನ್ ಡಾ|| ವೈ. ಲಕ್ಷ್ಮೀನರಸಿಂಹಶಾಸ್ತ್ರಿಗಳು ಸ್ವಾಗತ ಮಂಡಲಿಯವರ ಪರವಾಗಿ, ದೇಹಶ್ರಮವನ್ನೂ, ಪ್ರಯಾಣದ ಆಯಾಸವನ್ನೂ ಲೆಕ್ಕಿಸದೆ ತಮ್ಮ ಕಾರ್ಯಗಳನ್ನೂ ಒತ್ತಟ್ಟಿಗಿಟ್ಟು ಮಹಾಸಮ್ಮೇಳನಕ್ಕೆ ದಯಮಾಡಿಸಿ ಕರ್ಣಾಟಕ ದೇಶಕ್ಕೇ ಗೌರವವನ್ನಿತ್ತ ಪ್ರತಿನಿಧಿಗಳಿಗೂ, ಸ್ವಾಗತಮಂಡಲದವರ ಪ್ರಾರ್ಥನೆಯನ್ನು ಸನ್ಮಾನಿಸಿ ಅಧ್ಯಕ್ಷತೆಯನ್ನು ವಹಿಸಿದ ಶ್ರೀಮನ್ಮಹಾಮಹೋಪಾಧ್ಯಾಯರಿಗೂ, ಇತರ ಪರಿಷತ್ತುಗಳ ಕಾರ್ಯಭಾರವನ್ನು ವಹಿಸಿದ ಪರಿಷದಧ್ಯಕ್ಷರಿಗೂ, ಸ್ವಾಗತಮಂಡಲಿಯವರ ಕೃತಜ್ಞತೆಯನ್ನರ್ಪಿಸಿದರು. ಉದಾರವಾದ ಸಹಾಯವನ್ನು ಮಾಡಿ ಮಹಾನುಗ್ರಹವನ್ನು ನೀಡಿದ ಶ್ರೀಮನ್ಮಹಾರಾಜಾ ಸಾಹೇಬರವರಿಗೂ, ಅವರ ಘನ ಹೊಂದಿದ ಸರ್ಕಾರಕ್ಕೂ, ಶ್ರೀಮಠಾಧಿಪತಿಗಳಿಗೂ, ಉಚಿತ

ವಾದ ಆಶ್ರಯವನ್ನು ಕೊಟ್ಟ ಮ್ಯುನಿಸಿಪಾಲಿಟಿಗಳು, ಡಿ|| ಬೋರ್ಡುಗಳು, ಸಹಕಾರ ಸಂಘಗಳು ಮೊದಲಾದ ಪ್ರಜಾಸಂಸ್ಥೆಗಳಿಗಳಿಗೂ, ಮಹಾಸಮ್ಮೇಳನವನ್ನು ಆಹ್ವಾನಿಸಿ ತಮ್ಮ ಮೇಲೆ ಹೊತ್ತುಕೊಂಡ ಮಹಾ ಭಾರವನ್ನಿಳಿಸಿಕೊಳ್ಳುವುದರಲ್ಲಿ ಒಟ್ಟುಗೂಡಿದ ಕರ್ಣಾಟಕದ ಮಹನೀಯರಿಗೂ ಧನ್ಯವಾದಗಳನ್ನರ್ಪಿಸಿದರು. ಈಗ್ಗೆ ಭರತಖಂಡಕ್ಕೆ ಉಂಟಾದ ಅಭೂತಪೂರ್ವವಾದ ರಾಜಕೀಯ ಮತ್ತು ಆರ್ಥಿಕಕ್ಷೋಭದಿಂದ ಸ್ವಾಗತಮಂಡಲಿಯವರು ಸಂಕಲ್ಪಿಸಿಕೊಂಡಿದ್ದ ಪ್ರಯತ್ನಗಳೆಲ್ಲವೂ ಪೂರ್ಣವಾಗಿ ನೆರವೇರದಿರಬಹುದಾದರೂ ಯಥಾಶಕ್ತಿ ಇಂತಹ ವಿಷಮ ಕಾಲದಲ್ಲೂ ಯಥಾಮತಿ ಆಯುರ್ವೇದಸೇವೆಯನ್ನು ಮಾಡಿ ಪೂರೈಸುವ ಭಾಗ್ಯವು ನಮ್ಮ ಕರ್ನಾಟಕಕ್ಕೆ ಒದಗಿದುದು ಆದರ ಭಾಗ್ಯೋದಯವೇ ಎಂಬುದನ್ನು ಸ್ಪಷ್ಟಪಡಿಸಿದರು.

ತರುವಾಯ ಪ್ರಧಾನಮಂತ್ರಿಗಳು, ಸಮ್ಮೇಳನಾಧ್ಯಕ್ಷರಿಗೂ, ಪರಿಷದಧ್ಯಕ್ಷರುಗಳಿಗೂ, ಮಹಾಮಂಡಲದ ಉಪಾಧ್ಯಕ್ಷಪದವಿಗೆ ಹೊಸದಾಗಿ ಚುನಾಯಿಸಲ್ಪಟ್ಟ ಬೊಂಬಾಯಿನಗರದ ಯಾದವಜಿ ತ್ರಿಯಂಬಕಜೀ ಆಚಾರ್ಯರಿಗೂ, ಮಹಾಮಂಡಲದ ನೂತನಮಂತ್ರಿಗಳಾದ ಪೂನಾಪಟ್ಟಣದ ವೈದ್ಯಪಂಚಾನನ ಕೃಷ್ಣಶಾಸ್ತ್ರಿ ಕವಡೆಯವರಿಗೂ, ಕಳೆದ ವರ್ಷದಲ್ಲಿ ಮಹಾಸಮ್ಮೇಳನಾಧ್ಯಕ್ಷರಾಗಿ ವಿಶ್ರಾಂತಿಹೊಂದಿದ ಶ್ರೀ ವೈದ್ಯರತ್ನ ರಾಮಪ್ರಸಾದ ಶರ್ಮರವರಿಗೂ, ವಿಶ್ರಾಂತ ಮಂತ್ರಿಗಳಾದ ಪಂಡಿತ ಕಿಶೋರದತ್ತಶಾಸ್ತ್ರಿಗಳಿಗೂ, ಪುಷ್ಪಮಾಲೆಗಳನ್ನು ಹಾಕಿದ ಮೇಲೆ ಸಭಿಕರಿಗೆಲ್ಲಾ ತಾಂಬೂಲಾದಿ ವಿನಿಯೋಗವಾಯಿತು.

ಅನಂತರ ಕರ್ಣಾಟಕದ ಹೊರಗಿನಿಂದ ದಯಮಾಡಿಸಿದ್ದ ಪ್ರತಿನಿಧಿಗಳ ಪರವಾಗಿ ನಾಸಿಕದ ಶ್ರೀ ಆಯುರ್ವೇದಾಚಾರ್ಯ ವಾಮನಶಾಸ್ತ್ರಿ ದಾತಾರಿಯವರು, ಪುನೆಯ ಶ್ರೀ ಆಯುರ್ವೇದಾಚಾರ್ಯ ಪಂಡಿತ ನಾನಲ್ ಶಾಸ್ತ್ರಿಯವರು, ಲಾಹೋರಿನ ವಿದ್ವಾನ್ ಶಿವಶರ್ಮರು, ರಾವಲ್‌ಪಿಂಡಿಯ ಶ್ರೀ ಪಂಡಿತ ಮಸ್ತಾರಾಮಶಾಸ್ತ್ರಿಗಳವರು, ಬೊಂಬಾಯಿಯ ಶ್ರೀಮಾನ್ ಯಾದವಜೀ ತ್ರಿಯಂಬಕಜೀ ಆಚಾರ್ಯರವರು, ಕರಾಚಿಯ ರಾಜವೈದ್ಯ ಪಂಡಿತ ಸುಖರಾಮದಾಸ ಟಿ ಓಝುರವರು ಸಮ್ಮೇಳನದ ಕಾರ್ಯವು ಯಶಸ್ವಿಯಾದ ವಿಷಯದಲ್ಲಿ ಬಹಳವಾಗಿ ಶ್ಲಾಘನೆ ಮಾಡಿದುದಲ್ಲದೆ, ಸ್ವಾಗತಮಂಡಲಿಯವರು ಸಮ್ಮೇಳನದ ಕಾರ್ಯವನ್ನು ನಡೆಯಿಸಲು ಮಾಡಿದ ಏರ್ಪಾಟುಗಳಿಗೂ, ಅವರು ಮಾಡಿದ ಆತಿಥ್ಯಕ್ಕೂ ಬಹಳವಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಇದಾದಮೇಲೆ ಮಹಾಮಂಡಲದ ಭಾವಿಮಂತ್ರಿಗಳಾದ ವೈದ್ಯಪಂಚಾನನ ಕನಡೆಶಾಸ್ತ್ರಿಗಳು ಸ್ವಾಗತಮಂಡಲಿಯವರು ಅತಿಥಿಗಳ ವಸತಿಗೂ ಊಟಉಪಚಾರಗಳಿಗೂ ಮಾಡಿದ್ದ ಉತ್ತಮವಾದ ಏರ್ಪಾಡಿನ ವಿಷಯದಲ್ಲಿಯೂ, ದೇಶಭೇದವನ್ನೂ ಜಾತಿಭೇಧವನ್ನೂ ಅನುಸರಿಸಿ ಆಯಾಯಅತಿಥಿಗಳಿಗೆ ತಕ್ಕಂತೆ ಯಾವ ಅತೃಪ್ತಿಗೂ ಅವಕಾಶವಿಲ್ಲದೆ ಸಂತೋಷಪಡಿಸಿದ ಸ್ವಾಗತಮಂಡಲದವರ ಚಾತುರ್ಯವಿಷಯದಲ್ಲಿಯೂ, ಸಭಿಕರಮನಸ್ಸು ಕರಗುವಂತೆ ಹೀಗೆ ಮಾತನಾಡಿದರು.

"ನಾನು ಪ್ರಾಯಃ ಎಲ್ಲಾ ಸಮ್ಮೇಳನಗಳಿಗೂ ಹೋಗಿದ್ದೇನೆ. ಪ್ರತಿಯೊಂದು ಅಂಶದಲ್ಲಿಯೂ ಈ ಮೈಸೂರ್‌ಸಮ್ಮೇಳನವು ಬಹಳ ಉತ್ತಮ ರೀತಿಯಿಂದ ನಡೆಯಿತು. ಈ ಕಾರ್ಯವು ಇಷ್ಟು ಯಶಸ್ವಿಯಾಗಬೇಕಾದರೆ ಭಿಷಕ್‌ಚೂಡಾಮಣಿ ವೈ. ಲಕ್ಷ್ಮೀನೃಸಿಂಹಶಾಸ್ತ್ರಿಗಳ ಅವಿಶ್ರಾಂತ ಪ್ರಯತ್ನವೂ ಅವರ ನಿರ್ವಾಹ ಕೌಶಲ್ಯವೂ ಮುಖ್ಯಕಾರಣ. ಇವರ ಮಹಿಮೆಯನ್ನು ನಾವು ಪೂರ್ವಲ್ಲಿದ ಕೇಳಿದ್ದೆವು. ಇಂದಿಗೆ ನಮಗೆ ಪ್ರತ್ಯಕ್ಷವಾಯಿತು" ಎಂದು ಹೇಳುತ್ತಾ ಶಾಸ್ತ್ರಿಗಳ ವಿಷಯದಲ್ಲಿ ತಮಗಿರುವ ಬಹುಮಾನವನ್ನೂ ಕೃತಜ್ಞತೆಯನ್ನೂ ಸೂಚಿಸುವುದಕ್ಕೋಸ್ಕರ ತಮ್ಮ ಕೊರಳಲ್ಲಿದ್ದ ಪುಷ್ಪಹಾರವನ್ನು ಶಾಸ್ತ್ರಿಗಳ ಕೊರಳಿಗೆ ಹಾಕಿದರು.

ಅನಂತರ ಅಧ್ಯಕ್ಷರಾದ ಮಹಾಮಹೋಪಾಧ್ಯಾಯರು ಎದ್ದು ಸಮ್ಮೇಳನಕ್ಕೆ ಅಂತಿಮ ಮಂಗಳವನ್ನು ಮಾಡಿದರು. ಶ್ರೀ ಧನ್ವಂತರಿಮೂರ್ತಿ, ಶ್ರೀಮನ್ಮಹಾರಾಜರು, ಅಧ್ಯಕ್ಷರು ಮತ್ತು ಪ್ರತಿನಿಧಿಗಳು ಇವರ ವಿಷಯದಲ್ಲಿ ಜಯಘೋಷಾನಂತರ ಸುಮಾರು ರಾತ್ರಿ 12-30 ರ ಹೊತ್ತಿನಲ್ಲಿ ಸಭೆಯು ಚದರಿತು.

ಮುಂದಿನ ಎರಡು ದಿವಸಗಳಲ್ಲಿ ಜನರ ಪ್ರಯಾಣ ಸಂಭ್ರಮ. 31 ನೇ ತಾರೀಖು ಮಧ್ಯಾಹ್ನ ಅಧ್ಯಕ್ಷರು ಪ್ರಯಾಣಬೆಳಸಿದರು.

ಕೆಲವು ಮಹನೀಯರು ಸ್ವಸ್ಥಳಗಳನ್ನು ಸೇರಿದ ತರುವಾಯ ಸ್ವಾಗತಮಂಡಲಿಯವರಿಗೆ ಅಭಿನಂದನ ಪತ್ರಗಳನ್ನು ಬರೆದರು. ಆ ಕಾಗದಗಳಲ್ಲಿ ಕೆಲವನ್ನು ಈ ವರದಿಯ ಕೊನೆಯಲ್ಲಿ ಕೊಟ್ಟಿದೆ. ಸ್ವಾಗತಮಂಡಲಿಯವರು ತಮ್ಮ ಕೃತಜ್ಞತಾಪೂರ್ವಕವಾದ ಪ್ರತ್ಯುತ್ತರಗಳನ್ನು ಯುಕ್ತರೀತಿಯಿಂದ ಕಳುಹಿಸಿಕೊಟ್ಟರು.

21 ನೆಯ ಅಖಿಲಭಾರತಾಯುರ್ವೇದ ಮಹಾಸಮ್ಮೇಳನದಲ್ಲಿ ಅಂಗೀಕರಿಸಲ್ಪಟ್ಟ ತೀರ್ಮಾನಗಳು.

1. ಭರತಖಂಡದ ಈ ಕೆಳಗೆ ಹೇಳಿರುವ ವೈದ್ಯರು ಸ್ವರ್ಗಸ್ಥರಾದ ವಿಷಯದಲ್ಲಿ ಈ ಮಹಾಸಮ್ಮೇಳನವು ಅತ್ಯಂತ ದುಃಖಪಡುವುದಲ್ಲದೆ ಅವರ ಕುಟುಂಬದವರಿಗೆ ತನ್ನ ವಿಷಾದವನ್ನು ತಿಳಿಸುತ್ತದೆ.

1. ವೈದ್ಯ ಪರಮಾನಂದಜೀ, ಬೊಂಬಾಯಿ. 2. ಕವಿರಾಜ ಸೀತಲಚಂದ್ರ ಕವಿರತ್ನ, ಕಲ್ಕತ್ತೆ. 3. ಪಂಡಿತ ರಾಮಶಂಕರ್‌ಜಿ ವೈದ್ಯ, ಲಾಹೋರು. 4. ವೈದ್ಯಶಾಸ್ತ್ರಿ ಪಿ. ದೇವಕೃಷ್ಣಶರ್ಮ, ಹೈದರಾಬಾದ್. 5. ಪಂಡಿತ ಮೋಹನಲಾಲ ವೈದ್ಯಶಾಸ್ತ್ರಿ, ಆಗ್ರ .6. ಪಂಡಿತ ಬೊಡ್ಡುಪತಿವೆಂಕಟಪ್ಪೈಯ್ಯ, ಬೆಜವಾಡ. 7. ವೈದ್ಯ ಕರ್ಮಚಂದ್ರ, ವೈದ್ಯ ಅಶನಾನಂದರ ಮಕ್ಕಳು, ರಾವಲ್‌ಪಿಂಡಿ.

2. ಮೈಸೂರು ಸಂಸ್ಥಾನದ ಆಸ್ಥಾನವಿದ್ವಾಂಸರೂ, ಪ್ರಸಿದ್ಧ ವೈದ್ಯರೂ ಆದ ವೈದ್ಯರತ್ನ ಗುಂಡ್ಲುಪಂಡಿತ ಲಕ್ಷ್ಮಣಾಚಾರ್ಯರ ಮರಣಕ್ಕಾಗಿ ಈ ಸಮ್ಮೇಳನದವರು ಬಹಳ ವ್ಯಸನಪಡುವುದಲ್ಲದೆ ಅವರ ಕುಟುಂಬದವರಿಗೆ ತಮ್ಮ ಅನುತಾಪವನ್ನು ತೋರಿಸಿರುತ್ತಾರೆ.

ಈ 1-2 ನೆಯ ಸೂಚನೆಗಳನ್ನು ಅಧ್ಯಕ್ಷರು ತರಲು ಸಭೆಯವರು ಏಕಮತಿಕರಾಗಿ ನಿಂತುಕೊಂಡು ಅಂಗೀಕರಿಸಿದರು.

3. ಪ್ರಕೃತ ಸ್ವರಾಜ್ಯದ ಚಳುವಳಿಯಲ್ಲಿ ಈ ಕೆಳಗೆ ಹೇಳಿರುವ ವೈದ್ಯರೂ ವೈದ್ಯಾಭಿಮಾನಿಗಳೂ ಮಾಡಿರುವ ದೇಶಸೇವೆಯನ್ನು ಈ ಸಮ್ಮೇಳದವರು ಬಹುಮಾನ ಪೂರ್ವಕವಾಗಿ ಪ್ರಶಂಸೆಮಾಡುತ್ತಾರೆ.

1. ಅಲಹಾಬಾದಿನ ನಿಖಿಲಭಾರತ ಆಯುರ್ವೇದ ಸಮ್ಮೇಳನದ ಮಾಜಿ ಅಧ್ಯಕ್ಷರಾದ ಶ್ರೀಯುತ ಮದನಮೋಹನ ಮಾಲವ್ಯರವರೂ 2. ಆಯುರ್ವೇದ ಪಂಚಾನನ ಪಂಡಿತ ಜಗನ್ನಾಥಪ್ರಸಾದಶುಕ್ಲ, ಅಲಹಾಬಾದ್. 3. ಭಿಷಗ್ರತ್ನ ಪಂಡಿತ ಶಿವನಾರಾಯಣಮಿಶ್ರ, ಕಾನಪುರ. 4. ಹಕೀಂ ಕನಹಿಲಾಲ್, ವೈದ್ಯರತ್ನ, ಕಾನಪುರ. 5. ಆಯುರ್ವೇದಮಾರ್ತಾಂಡ ಪಂ|| ರಘುವರದಯಾಳುಭಟ್ಟ ಕಾನಪುರ. 6. ಶ್ರೀಮತಿ ರುಕ್ಮಿಣಿದೇವಿ (ಡಾ|| ಲಕ್ಷ್ಮೀಪತಿಯವರ ಕುಟುಂಬ), ಮದ್ರಾಸ್. 7. ಶ್ರೀ|| ಯೋಗಿ ರಾಮನಾಥಜಿ, ರಾವಲ್‌ಪಿಂಡಿ. 8. ಪಂಡಿತ

ರಾಮಗೋಪಾಲಶಾಸ್ತ್ರೀ, ಲಾಹೋರ್. 9. ಶ್ರೀ|| ಪಂ|| ಜಗನ್ನಾಥಪ್ರಸಾದ ಶುಕ್ಲವಾಜಪೇಯಿ, ಬನಾರಿಸ್. 10. ಶ್ರೀ|| ಭಗವಾನ್‌ದೀನ್‌ಮಿಶ್ರ, ಬಹ್ರೇಚ್. (ಯು.ಪಿ). 11. ಶ್ರೀ|| ಬಾಬೂರಾಂಮಿಶ್ರ, ಮುರಾದಾಬಾದ್. 12. ಶ್ರೀ|| ಕಲುರಾಂವೈದ್ಯ, ಬಾಂದ. 13. ಶ್ರೀ|| ಮನಮೋಹನ್‌ಶರ್ಮ, ವೈದ್ಯಶಾಸ್ತ್ರೀ, ಆಗ್ರ. 14. ಶ್ರೀ|| ಪಂ|| ಕೃಷ್ಣಶರ್ಮ, ಬನಾರಿಸ್. 15. ಶ್ರೀ|| ವೈದ್ಯಭೂಷಣ ಗಣೇಶಶಾಸ್ತ್ರೀ ಜೋಶಿ, ಪೂನಾ. 16. ಶ್ರೀ|| ಮಾಧವಾಚಾರ್ಯ, ಬಾಗಲ್‌ಕೋಟೆ. 17. ಶ್ರೀ|| ಸುಂದರಲಾಲ್, ಎನ್. ಜೋಶಿ, ನಡಿಯಾದ್. 18. ಶ್ರೀ|| ಪಂ|| ಮಲ್ಲಾಡೀ ರಾಮಮೂರ್ತೀಶಾಸ್ತ್ರೀ, ರಾಜೋಲಿ (ಆಂದ್ರ). 19. ಶ್ರೀ|| ಸುಬ್ರಹ್ಮಣ್ಯಂಶಾಸ್ತ್ರೀ, ರಾಜೋಲೆ, (ಆಂದ್ರ). 20. ಶ್ರೀ|| ವಿಶ್ವನಾಥಸುಬ್ಬಶರ್ಮ. ಕಾವಲಿ. 21. ಶ್ರೀ|| ಬಲ್ಲೂರಿ ಸುಬ್ಬರಾವ್, ಕಾವಲಿ.

ಪ್ರಸ್ತಾವಕರು—ಶ್ರೀ|| ಪಂ|| ಕೃಷ್ಣಶಾಸ್ತ್ರೀ ಕವಡೆ, ಪೂನಾ.

ಅನುಮೋದಕರು—ಡಾ|| ಲಕ್ಷ್ಮೀಪತಿ, ಮದ್ರಾಸ್.

ಸಮರ್ಥಕರು—ಪಂ|| ಮಸ್ತಾರಾಂಶಾಸ್ತ್ರೀ, ರಾವಲ್‌ಪಿಂಡಿ.

ಬಹುಮತದಿಂದ ಅಂಗೀಕರಿಸಲಾಯಿತು.

4. ಬೊಂಬಾಯಿ ಹಾಫ್‌ಕಿನ್‌ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಡಾ|| ಕೆ. ಎಸ್. ಮಸ್ಕರ ಎಂ. ಎ. ಎಂ. ಡಿ. ಮತ್ತು ತಿ. ಫಾದರ್ ಜೆ. ಎಫ್. ಕಯಸು ಇವರಿಬ್ಬರೂ ನಡೆಯಿಸಿರುವ ಆಯುರ್ವೇದ ಶೋಧನಾಕಾರ್ಯವನ್ನು ಈ ಸಭೆಯವರು ಬಹಳ ಪ್ರಶಂಸಮಾಡುತ್ತಾರೆ. ಇಂಥ ಶೋಧನೆಯಕಾರ್ಯದಲ್ಲಿ ಆಯುರ್ವೇದ ವೈದ್ಯರು ಬೊಂಬಾಯಿ ಸರ್ಕಾರದವರಿಗೆ ನ್ಯಾಯವಾದ ಸಹಾನುಭೂತಿಯನ್ನು ತೋರಿಸಲು ಸಿದ್ಧರಾಗಿಧಾರೆ. ಕಳೆದ 14 ವರ್ಷಗಳಿಂದಲೂ ಕೆಲಸಮಾಡುತ್ತಿದ್ದಾಗ್ಯೂ ಸಹಾಯಸಂಪತ್ತು ಏನೂ ದೊರೆಯದಿರುವುದು ಶೋಚನೀಯ. ಬೊಂಬಾಯಿ ಸರ್ಕಾರದವರು ಉಚಿತವಾದ ಸಹಾಯವನ್ನು ಅವರಿಗೆ ಮಾಡಬೇಕೆಂದೂ ಕಲ್ಕತ್ತೆಯಲ್ಲಿ ಇರುವಂತೆ ಶೋಧನಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದೂ, ಸಮ್ಮೇಳನದವರ ಆಶೆಯನ್ನು ಜಾಗ್ರತೆಯಾಗಿ ಬೊಂಬಾಯಿ ಸರ್ಕಾರದವರು ಪೂರ್ಣಮಾಡುವರೆಂದೂ ಈ ಮಹಾಸಮ್ಮೇಳನದವರು ಹಾರೈಸುತ್ತಾರೆ

ಪ್ರಸ್ತಾವ—ಅಧ್ಯಕ್ಷರಿಂದ.

ತೀರ್ಮಾನ—ಸರ್ವಾನುಮತದಿಂದ ಅಂಗೀಕರಿಸಲಾಯಿತು.

5. ಭರತಖಂಡದ ಸಾಮ್ರಾಜ್ಯದವರೂ, ಮದರಾಸು, ಬೊಂಬಾಯಿ, ಸಂಯುಕ್ತಪ್ರಾಂತ್ಯ, ಬಿಹಾರ, ಬಂಗಾಳ, ಸಿಂಹಳದ್ವೀಪಗಳ ಸರ್ಕಾರದವರೂ, ಆಯುರ್ವೇದವ್ಯಾಸಂಗಕ್ಕೆ ಮಾಡಿರುವ ಅನುಕೂಲ್ಯದ ವಿಷಯದಲ್ಲಿ ಈ ಸಭೆಯು ಬಹಳ ಸಂತೋಷಪಡುತ್ತದೆ. ಅದರ ವಿಷಯದಲ್ಲಿ ಎಲ್ಲಾ ಸರ್ಕಾರದವರೂ ಇನ್ನೂ ಹೆಚ್ಚು ಗಮನಕೊಡಬೇಕೆಂತಲೂ, ಆಯುರ್ವೇದಶೋಧನೆಗಳಿಗೆ ಆಸ್ಪತ್ರೆಗಳಲ್ಲಿ ಬೇಕಾದ ಸೌಕರ್ಯವನ್ನು ಕಲ್ಪಿಸಿ ಸಾಕ್ಷಾತ್ ರೋಗಿಗಳ ಪರೀಕ್ಷೆಯಿಂದಲೇ ಶೋಧನಾಕಾರ್ಯವನ್ನು ನಡೆಯಿಸಬೇಕೆಂತಲೂ, ಆಯುರ್ವೇದಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶೋಧಕರಿಗೆ ತಕ್ಕಷ್ಟು ಪ್ರೋತ್ಸಾಹದೊರಕದಿರುವುದು ಶೋಚನೀಯವೆಂದೂ, ಸರ್ಕಾರದ ಪ್ರಯೋಗಶಾಲೆಗಳಲ್ಲಿರುವ ಶೋಧಕರು ಆಯುರ್ವೇದ ಶಾಲೆಗಳ ವೈದ್ಯರ ಕೂಡ ಬೆರೆಯುವಂತೆ ಸರ್ಕಾರದವರು ಏರ್ಪಾಟುಮಾಡಬೇಕೆದೂ, ಆಯುರ್ವೇದಶಾಸ್ತ್ರದ ದೃಷ್ಟಿಯಿಂದ ಶೋಧನೆಯ ಕಾರ್ಯವನ್ನು ನಡೆಯಿಸುವ ಶೋಧಕರಿಗೆ ಸಮ್ಮೇಳನದ ವೈದ್ಯರು ಸಹಾಯಮಾಡಲು ಭರವಸೆಕೊಡುತ್ತಾರೆಂದೂ,

ಅಧ್ಯಕ್ಷರು ತಂದ ಸಲಹೆಯು ಸರ್ವಾನುಮತದಿಂದ ಅಂಗೀಕೃತವಾಯಿತು.

6. ಮೈಸೂರು ಸರ್ಕಾರದವರು ಆಯುರ್ವೇದವನ್ನು ಅಭಿವೃದ್ಧಿಗೆ ತರಲು ಮಾಡುತ್ತಿರುವ ಪ್ರಯತ್ನವನ್ನು ಈ ಸಮ್ಮೇಳನದವರು ಬಹಳ ಪ್ರಶಂಸೆಮಾಡುವುದಲ್ಲದೆ, ಸಂಸ್ಥಾನದ ಎಲ್ಲಾ ಆಯುರ್ವೇದಶಾಲೆಗಳ ಮೇಲೆ ಆಡಳಿತವನ್ನು ನಡೆಯಿಸುವ, ಒಬ್ಬ ಆಯುರ್ವೇದಾಧಿಕಾರಿಯ ಅಧ್ಯಕ್ಷತ್ವಕ್ಕೆ ಒಳಪಟ್ಟ ಆಯುರ್ವೇದದ ಸ್ವತಂತ್ರಶಾಖೆಯೊಂದನ್ನು ನಿಯಮಿಸಬೇಕೆಂದು ಪ್ರಾರ್ಥಿಸುತ್ತಾರೆ.

ಸೂಚಕರು—ಚಿಕ್ಕಮಗಳೂರಿನ ಕವಿರಾಜರಾಮಚಂದ್ರರಾಯರು.

ಅನುಮೋದಕರು—ಜಬ್ಬಲ್‌ಪೂರಿನ ಪಂಡಿತ ಬಿ. ವಿ. ಡಿಗ್ವೇಕರ್, ಎಂ.ಎ., ಎಂ.ಎಸ್‌ಸಿ.,ಎಲ್.ಎಲ್.ಬಿ.

ಸಮರ್ಥಕರು—ಪುಣೆಯ ವೈದ್ಯಪಂಚಾನನ ಕವಡೆಶಾಸ್ತ್ರಿಗಳು, ಬಿ.ಎ.

ಸರ್ವಾನುಮತದಿಂದ ಅಂಗೀಕರಿಸಲಾಯಿತು.

7. ಮೈಸೂರುಸಂಸ್ಥಾನದ ಆಯುರ್ವೇದಶಾಲೆಗಳಲ್ಲಿ ಕೆಲಸಮಾಡುವ ವೈದ್ಯರ ಅಂತಸ್ತನ್ನು ಮೆಡಿಕಲ್‌ಡಿಪಾರ್ಟ್ಮೆಂಟಿನ ಅಧಿಕಾರಿಗಳ ಅಂತಸ್ತಿಗೆ ಸಮಮಾಡಬೇಕೆಂದು ಮೈಸೂರುಸರ್ಕಾರದವರನ್ನು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು—ಡಾ|| ಎ. ಲಕ್ಷ್ಮೀಪತಿಯವರು, ಬಿ.ಎ., ಎಂಬಿ.ಸಿ.ಎಂ.

ಅನುಮೋದಕರು--ಬೊಂಬಾಯಿ ಶ್ರೀ|| ಯಾದವಜಿತ್ರಿಯಂಬಕಜೀಆಚಾರ್ಯ.

ಸಮರ್ಥಕರು—ಲಾಹೋರಿನ ಪಂಡಿತ ಶಿವಶರ್ಮರು ಮತ್ತು ಮದರಾಸಿನ ಪಂಡಿತ ದೊರೆಸಾಮಯ್ಯಂಗಾರ್ಯರು.

ಸರ್ವಾನುಮತದಿಂದ ಅಂಗೀಕೃತವಾಯಿತು.

8. ಬನಾರಿಸ್ ಹಿಂದೂ ಯೂನಿವರ್ಸಿಟಿಯಲ್ಲಿ ಈಗಾಗಲೇ ಜಾರಿಯಲ್ಲಿರುವಂತೆ ಮೈಸೂರು ಯೂನಿವರ್ಸಿಟಿಯಲ್ಲೂ ಒಂದು "ಆಯುರ್ವೇದಿಕ್ ಮೆಡಿಸನ್ ಮತ್ತು ಸರ್ಜರಿ' ಶಾಖೆಯನ್ನು ಷುರುಮಾಡಬೇಕೆಂದು ಯೂನಿವರ್ಸಿಟಿ ಅಧಿಕಾರಿಗಳನ್ನು ಈ ಸಮ್ಮೇಳನವು ಪ್ರಾರ್ಥಿಸುತ್ತದೆ.

ಸೂಚಕರು—ವೈದ್ಯವರ ಶ್ರೀ|| ಕೆ. ಶೇಷಯ್ಯನವರು, ಬೆಂಗಳೂರು.

ಅನುಮೋದಕರು—ಶ್ರೀ|| ಕೃಷ್ಣಶಾಸ್ತ್ರಿ, ಕವಡೆ, ಬಿ.ಎ., ಪೂನಾ.

ಸಮರ್ಥಕರು—ಡಾ|| ಎ. ಲಕ್ಷ್ಮೀಪತಿ, ಬಿ.ಎ., ಮದ್ರಾಸ್.

ಸರ್ವಾನುಮತದಿಂದ ಅಂಗೀಕರಿಸಲಾಯಿತು.

9. ಅಧ್ಯಕ್ಷರ ಚುನಾವಣೆಯ ಬಗ್ಗೆ ನಿಯಮದಲ್ಲಿ ಬದಲಾವಣೆ.

ನಿಖಿಲಭಾರತಾಯುರ್ವೇದ ಸಮ್ಮೇಳನದ ಅಧ್ಯಕ್ಷರ ಚುನಾವಣೆಯ ವಿಷಯದಲ್ಲಿ ಭರತಖಂಡದಲ್ಲಿರುವ ಮಹಾಮಂಡಲದ ಪ್ರಾಂತಿಕ ಶಾಖಾಸಭೆಗಳಿಂದ ಅರ್ಹರಾದವರ ಹೆಸರುಗಳನ್ನು ತರಿಸಿಕೊಂಡು, ಅವುಗಳ ಪೈಕಿ ಯಾವ ಮೂರು ಹೆಸರುಗಳನ್ನಾದರೂ ಸ್ವಾಗತಮಂಡಲಿಯು ಆರಿಸಿ ಸಮ್ಮೇಳನವು ಯಾವ ತಿಂಗಳಲ್ಲಿ ನಡೆಯತಕ್ಕದ್ದೋ ಆ ತಿಂಗಳಿಗೆ 3 ತಿಂಗಳ ಮುಂಚೆ, ಮಹಾಮಂಡಲಕ್ಕೆ ಕಳಿಸಬೇಕು. ಮಹಾಮಂಡಲದವರು ಈ ಮೂರು ಹೆಸರುಗಳನ್ನು ವೃತ್ತಾಂತ ಪತ್ರಿಕೆಗಳಲ್ಲಿ ಪ್ರಸಿದ್ಧಿಪಡಿಸಿ ಮಹಾಮಂಡಲದ ಸದಸ್ಯರ ಬಹುಮತವನ್ನು ಹೊಂದುವ ಮಹನೀಯರನ್ನು ಸಮ್ಮೇಳನದ ಅಧ್ಯಕ್ಷಪದವಿಗೆ ಅಂಗೀಕರಿಸಬೇಕು,

ಸೂಚಕರು—ಮದರಾಸಿನ ಡಾ|| ಲಕ್ಷ್ಮೀಪತಿಯವರು.

ಅನುಮೋದಕರು—ಪೂನಾಪಟ್ಟಣದ ವೈದ್ಯಪಂಚಾನನ ಪಂಡಿತ ಕೃಷ್ಣಶಾಸ್ತ್ರಿಕವಡೆಯವರು.

ಬಹುಮತದಿಂದ ಅಂಗೀಕರಿಸಲಾಯಿತು.

10. ಭರತಖಂಡದ ಅನೇಕ ಭಾಗಗಳಿಂದ ಬರುವ ಪ್ರತಿನಿಧಿಗಳು ಸಮ್ಮೇಳನದಲ್ಲಿ ಚರ್ಚೆಮಾಡುವ ಕಾಲದಲ್ಲಿ ಅವರು ಪರದೇಶಭಾಷೆಗಳನ್ನುಪಯೋಗಿಸುವುದರಿಂದ ಬಹಳ ಅನಾನುಕೂಲ ಸಂಭವಿಸುತ್ತಿರುವುದರಿಂದಲೂ, ಪರದೇಶಭಾಷೆಯ

ನ್ನುಪಯೋಗಿಸುವುದು ನ್ಯಾಯವಲ್ಲದಿರುವುದರಿಂದಲೂ, ಇನ್ನು ಮುಂದಿನ ಸಮ್ಮೇಳನಗಳಲ್ಲಿ ಹಿಂದೀಭಾಷೆಯನ್ನುಪಯೋಗಿಸಬೇಕು. ಹಿಂದೀ ತಿಳಿಯದ ಜನರ ಅನುಕೂಲಕ್ಕಾಗಿ ಸಂಸ್ಕೃತದೊಂದಿಗೆ, ಸಮ್ಮೇಳನವು ನಡೆಯುವ ಸ್ಥಳದ ದೇಶಭಾಷೆಯನ್ನುಪಯೋಗಿಸಬಹುದು. ಹಿಂದೀಪ್ರಚಾರವು ಹೆಚ್ಚಾದ ಹಾಗೆಲ್ಲಾ ಮೇಲೆ ಹೇಳಿದ ಕೊನೆಯ ಅಂಶವು ತೆಗೆಯಲ್ಪಡುವುದು.

ಸೂಚಕರು—ಪಂಡಿತ ಶಿವಶರ್ಮ, ಆಯುರ್ವೇದಾಚಾರ್ಯ, ಲಾಹೋರ್.

ಅನುಮೋದಕರು—ಭಿಷಕ್ಚೂಡಾಮಣಿ ವೈ.ಎಲ್. ಶಾಸ್ತ್ರಿಗಳು ಮೈಸೂರು.

ಸರ್ವಾನುಮತದಿಂದ ಅಂಗೀಕರಿಸಲಾಯಿತು.

11. ಆಯುರ್ವೇದಮಹಾಮಂಡಲ ಮತ್ತು ಸಮ್ಮೇಳನದ ಸಾಮಾನ್ಯ ನಿಯಮ 3, ಅಂಶ 3 ರ ಸ್ಥಾನದಲ್ಲಿ ಈ ಕೆಳಗೆ ಹೇಳಿದ ಬದಲಾವಣೆಯಿರಬೇಕು.

"ಆಯುರ್ವೇದ ಮಹಾಮಂಡಲದ ಕಾರ್ಯನಿರ್ವಾಹಕಸಮಿತಿಯು ಮುಂದಿನ ವರ್ಷದ ಜಮಾಖರ್ಚಿನ ಅಂದಾಜಾಪಟ್ಟಿಯನ್ನು ತಯಾರ್ಮಾಡಿ ಪ್ರತಿ ಸಮ್ಮೇಳನದ ಕಾಲದಲ್ಲಿ ವಿಷಯವಿವೇಚನಾಸಮಿತಿಯ ಮುಂದೆ ಚರ್ಚೆಗೆ ತರಬೇಕು. ಆ ಸಮಿತಿಯ ತಿರ್ಮಾನವನ್ನು ಮಹಾಸಮ್ಮೇಳನದ ಮುಂದಿಡಬೇಕು."

ಸೂಚಕರು—ವೈದ್ಯರತ್ನ ಪಂಡಿತ ರಾಮಪ್ರಸಾದಶರ್ಮ, ಪಾಟಿಯಾಲಾ.

ಅನುಮೋದಕರು—ಪಂಡಿತ ಮಸ್ತಾರಾಂಶಾಸ್ತ್ರಿಗಳು, ರಾವಲ್‌ಪಿಂಡಿ.

ಸರ್ವಾನುಮತದಿಂದ ಅಂಗೀಕರಿಸಲಾಯಿತು.

12. ಮಹಾಮಂಡಲದ ಪ್ರಧಾನಮಂತ್ರಿಗಳು ಅಧ್ಯಕ್ಷರು ಒಪ್ಪಿದ ಚಾರ್ಟರ್ಡ್ ಅಕೌಂಟೆಂಟರೊಬ್ಬರಿಂದ ಆಯಾ ವರ್ಷದ ಜಮಾಖರ್ಚು ಲೆಖ್ಖವನ್ನು ತನಿಖೆಮಾಡಿಸಿ, ಆ ಆಡಿಟರ ಅಭಿಪ್ರಾಯವನ್ನೂ, ಲೆಖ್ಖವನ್ನೂ ಮಹಾಸಮ್ಮೇಳನದ ಮುಂದಿಡಬೇಕು. ಇದಕ್ಕಾಗಿ ಆಡಿಟರ ರುಸುಂ ಅಥವಾ ಖರ್ಚು 50 ರೂ. ಗೆ ಮಿಂಚಬಾರದು.

ಸೂಚಕರು—ವೈದ್ಯರತ್ನ ಪಂಡಿತ ರಾಮಪ್ರಸಾದಶರ್ಮ, ಪಾಟಿಯಾಲಾ.

